ಹಿಂದಿನ ವರ್ಷಕ್ಕೆ (2019–20) ಹೋಲಿಸಿದಂತೆ 2020–21ರ ಅವಧಿಯಲ್ಲಿ ರಾಜ್ಯದ ಹಣಕಾಸಿನ ಒಟ್ಟುಗಳಲ್ಲಿನ ಪ್ರಮುಖ ಬದಲಾವಣೆಗಳ ಪಕ್ಷಿನೋಟವನ್ನು **ಕೋಷ್ಟಕ–2.1** ಪ್ರಸ್ತುತಪಡಿಸುತ್ತದೆ. ವಿವರಗಳನ್ನು **ಅನುಬಂಧ–2.1**ರಲ್ಲಿ ನೀಡಲಾಗಿದೆ. 2020–21ರ ಸ್ವೀಕೃತಿಗಳು ಮತ್ತು ವಿತರಣೆಯ ವಿವರಗಳು ಹಾಗೂ ಹಿಂದಿನ ನಾಲ್ಕು ವರ್ಷಗಳಲ್ಲಿ ಒಟ್ಟಾರೆ ಹಣಕಾಸಿನ ಸ್ಥಿತಿಯನ್ನು **ಅನುಬಂಧ–**2.2ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.1: 2019–20ಕ್ಕೆ ಹೋಲಿಸಿದಂತೆ 2020–21ರಲ್ಲಿ ಪ್ರಮುಖ ಹಣಕಾಸಿನ ಒಟ್ಟುಗಳಲ್ಲಿನ ಬದಲಾವಣೆಗಳು**

| | |
|---|---|
| ರಾಜಸ್ವ ಸ್ವೀಕೃತಿಗಳು | ✓ ರಾಜ್ಯದ ರಾಜಸ್ವ ಸ್ವೀಕೃತಿಗಳು ಶೇಕಡ 10.67ರಷ್ಟು ಕಡಿಮೆಯಾಗಿದೆ.<br>✓ ರಾಜ್ಯದ ಸ್ವಂತ ತೆರಿಗೆ ಸ್ವೀಕೃತಿಗಳು ಶೇಕಡ 5.19ರಷ್ಟು ಕಡಿಮೆಯಾಗಿದೆ.<br>✓ ರಾಜ್ಯದ ಸ್ವಂತ ತೆರಿಗೆಯೇತರ ಸ್ವೀಕೃತಿಗಳು ಶೇಕಡ 2.77ರಷ್ಟು ಹೆಚ್ಚಾಗಿದೆ.<br>✓ ರಾಜ್ಯದ ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿನ ಪಾಲು ಶೇಕಡ 29.84ರಷ್ಟು ಕಡಿಮೆಯಾಗಿದೆ.<br>✓ ಭಾರತ ಸರ್ಕಾರದಿಂದ ಸ್ವೀಕರಿಸಿದ ಅನುದಾನಗಳು ಶೇಕಡ 12.77ರಷ್ಟು ಕಡಿಮೆಯಾಗಿದೆ. |
| ರಾಜಸ್ವ ವೆಚ್ಚ | ✓ ರಾಜಸ್ವ ವೆಚ್ಚವು ಶೇಕಡ 1.03ರಷ್ಟು ಹೆಚ್ಚಾಗಿದೆ.<br>✓ ಸಾಮಾನ್ಯ ಸೇವೆಗಳ ಮೇಲಿನ ರಾಜಸ್ವ ವೆಚ್ಚವು ಶೇಕಡ 12.69ರಷ್ಟು ಹೆಚ್ಚಾಗಿದೆ.<br>✓ ಸಾಮಾಜಿಕ ಸೇವೆಗಳ ಮೇಲಿನ ರಾಜಸ್ವ ವೆಚ್ಚವು ಶೇಕಡ 7.00ರಷ್ಟು ಕಡಿಮೆಯಾಗಿದೆ.<br>✓ ಆರ್ಥಿಕ ಸೇವೆಗಳ ಮೇಲಿನ ರಾಜಸ್ವ ವೆಚ್ಚವು ಶೇಕಡ 1.89ರಷ್ಟು ಹೆಚ್ಚಾಗಿದೆ.<br>✓ ಸಹಾಯಾನುದಾನಗಳ ಮೇಲಿನ ವೆಚ್ಚವು ಶೇಕಡ 11.58ರಷ್ಟು ಕಡಿಮೆಯಾಗಿದೆ. |
| ಬಂಡವಾಳ ವೆಚ್ಚ | ✓ ಬಂಡವಾಳ ವೆಚ್ಚವು ಶೇಕಡ 27.80ರಷ್ಟು ಹೆಚ್ಚಾಗಿದೆ.<br>✓ ಸಾಮಾನ್ಯ ಸೇವೆಗಳ ಮೇಲಿನ ಬಂಡವಾಳ ವೆಚ್ಚವು ಶೇಕಡ 54.81ರಷ್ಟು ಹೆಚ್ಚಾಗಿದೆ.<br>✓ ಸಾಮಾಜಿಕ ಸೇವೆಗಳ ಮೇಲಿನ ಬಂಡವಾಳ ವೆಚ್ಚವು ಶೇಕಡ 25.62ರಷ್ಟು ಹೆಚ್ಚಾಗಿದೆ.<br>✓ ಆರ್ಥಿಕ ಸೇವೆಗಳ ಮೇಲಿನ ಬಂಡವಾಳ ವೆಚ್ಚವು ಶೇಕಡ 27.75ರಷ್ಟು ಹೆಚ್ಚಾಗಿದೆ. |
| ಸಾಲಗಳು ಮತ್ತು ಮುಂಗಡಗಳು | ✓ ಸಾಲಗಳು ಮತ್ತು ಮುಂಗಡಗಳ ವಸೂಲಾತಿಯು ಶೇಕಡ 33.00ರಷ್ಟು ಹೆಚ್ಚಾಗಿದೆ |

| | |
|---|---|
| | ✓ ಸಾಲಗಳು ಮತ್ತು ಮುಂಗಡಗಳ ವಿತರಣೆಯು ಶೇಕಡ 34.41ರಷ್ಟು ಕಡಿಮೆಯಾಗಿದೆ |
| ಸಾರ್ವಜನಿಕ ಋಣ | ✓ ಸಾರ್ವಜನಿಕ ಋಣ ಸ್ವೀಕೃತಿಗಳು ಶೇಕಡ 67.52ರಷ್ಟು ಹೆಚ್ಚಾಗಿದೆ (ಸರಕು ಮತ್ತು ಸೇವಾ ತೆರಿಗೆ ಪರಿಹಾರದ ಬದಲಿಗೆ ಭಾರತ ಸರ್ಕಾರದಿಂದ ಪಡೆದ ಬ್ಯಾಕ್–ಟು–ಬ್ಯಾಕ್ ಸಾಲವನ್ನು ಹೊರತುಪಡಿಸಿದರೆ ನಿವ್ವಳ ಏರಿಕೆಯು ಶೇಕಡ 42.93 ಆಗುತ್ತದೆ).<br>✓ ಸಾರ್ವಜನಿಕ ಋಣ ಮರುಪಾವತಿಗಳು ಶೇಕಡ 8.21ರಷ್ಟು ಹೆಚ್ಚಾಗಿದೆ. |
| ಸಾರ್ವಜನಿಕ ಲೆಕ್ಕ | ✓ ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು ಶೇಕಡ 6.57ರಷ್ಟು ಹೆಚ್ಚಾಗಿದೆ.<br>✓ ಸಾರ್ವಜನಿಕ ಲೆಕ್ಕ ವಿತರಣೆಗಳು ಶೇಕಡ 8.52ರಷ್ಟು ಹೆಚ್ಚಾಗಿದೆ. |
| ನಗದು ಶಿಲ್ಕು | ✓ ನಗದು ಶಿಲ್ಕು (ಮೀಸಲು ನಿಧಿಗಳ ಹೂಡಿಕೆ ಮತ್ತು ರಿಸರ್ವ್ ಬ್ಯಾಂಕಿನಲ್ಲಿನ ಠೇವಣಿಗಳೂ ಸೇರಿ) ₹12,680.05 ಕೋಟಿಗಳಷ್ಟು ಹೆಚ್ಚಾಗಿದೆ (ಶೇಕಡ 36.79). |

ಮೇಲಿನ ಪ್ರತಿಯೊಂದು ಸೂಚಕಗಳನ್ನು ಮುಂದಿನ ಕಂಡಿಕೆಗಳಲ್ಲಿ ವಿಶ್ಲೇಷಿಸಲಾಗಿದೆ.

## 2.3 ನಿಧಿಯ ಆಕರಗಳು ಮತ್ತು ಅನ್ವಯ

2020–21ರಲ್ಲಿ ರಾಜ್ಯದ ನಿಧಿಯ ಆಕರಗಳು ಮತ್ತು ಅನ್ವಯಗಳನ್ನು 2019–20 ರೊಂದಿಗೆ **ಕೋಷ್ಟಕ–2.2** ರಲ್ಲಿ ಹೋಲಿಸಲಾಗಿದ್ದರೆ **ನಕ್ಷೆ–2.1** ಮತ್ತು **ನಕ್ಷೆ–2.2**ರಲ್ಲಿ 2020–21ರಲ್ಲಿ ರಾಜ್ಯ ಸಂಚಿತ ನಿಧಿಯಲ್ಲಿನ ಸ್ವೀಕೃತಿ ಮತ್ತು ವೆಚ್ಚಗಳ ಶೇಕಡಾವಾರು ವಿವರಗಳನ್ನು ನೀಡಲಾಗುತ್ತದೆ.

**ಕೋಷ್ಟಕ–2.2: 2019–20 ಮತ್ತು 2020–21ರಲ್ಲಿ ನಿಧಿಗಳ ಆಕರ ಮತ್ತು ಅನ್ವಯಗಳ ವಿವರಗಳು.**

**(₹ ಕೋಟಿಗಳಲ್ಲಿ)**

| | ವಿವರಗಳು | 2019–20 | 2020–21 | ಹೆಚ್ಚಳ/ಇಳಿಕೆ |
|---|---|---|---|---|
| ಆಕರಗಳು | ಆರಂಭಿಕ ನಗದು ಶಿಲ್ಕು (ಮೀಸಲು ನಿಧಿಗಳ ಹೂಡಿಕೆ ಮತ್ತು ರಿಸರ್ವ್ ಬ್ಯಾಂಕಿನಲ್ಲಿನ ಠೇವಣಿಗಳೂ ಸೇರಿ) | 22,004 | 34,463 | 12,459 |
| | ರಾಜಸ್ವ ಸ್ವೀಕೃತಿಗಳು | 1,75,443 | 1,56,716 | (–)18,727 |
| | ಸಾಲಗಳು ಮತ್ತು ಮುಂಗಡಗಳ ವಸೂಲಾತಿ | 203 | 270 | 67 |
| | ಸಾರ್ವಜನಿಕ ಋಣ ಸ್ವೀಕೃತಿಗಳು (ನಿವ್ವಳ) | 40,279 | 73,512* | 33,233 |
| | ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು (ನಿವ್ವಳ) | 10,346 | 6,264 | (–)4,082 |
| | ಒಟ್ಟು | **2,48,275** | **2,71,225** | 22,950 |
| ಅನ್ವಯಗಳು | ರಾಜಸ್ವ ವೆಚ್ಚಗಳು | 1,74,258 | 1,76,054 | 1,796 |
| | ಬಂಡವಾಳ ವೆಚ್ಚ | 35,530 | 45,406 | 9,876 |
| | ಸಾಲಗಳು ಮತ್ತು ಮುಂಗಡಗಳ ವಿತರಣೆ | 4,069 | 2,669 | (–)1,400 |
| | ಮುಕ್ತಾಯ ನಗದು ಶಿಲ್ಕು (ಮೀಸಲು ನಿಧಿಗಳ ಹೂಡಿಕೆ ಮತ್ತು ರಿಸರ್ವ್ ಬ್ಯಾಂಕಿನಲ್ಲಿನ ಠೇವಣಿಗಳೂ ಸೇರಿ) | 34,463 | 47,143 | 12,680 |
| | ಒಟ್ಟು | **2,48,320** | **2,71,272** | **22,952** |

*ಆಕರ: ಹಣಕಾಸು ಲೆಕ್ಕಗಳು*

** ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ₹12,407 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ ಪರಿಣಾಮಕಾರಿ ಸಾರ್ವಜನಿಕ ಋಣ ಸ್ವೀಕೃತಿಗಳು (ನಿವ್ವಳ) ₹61,105 ಆಗುತ್ತದೆ.*

| ನಕ್ಷೆ–2.1: ಸಂಪನ್ಮೂಲಗಳ ಸಂಯೋಜನೆ (ಶೇಕಡ) | ನಕ್ಷೆ–2.2: ಸಂಪನ್ಮೂಲಗಳ ಅನ್ವಯ (ಶೇಕಡ) |
|---|---|
|  |  |





*ಆಕರ: ಹಣಕಾಸು ಲೆಕ್ಕಗಳು*

## 2.4 ರಾಜ್ಯದ ಸಂಪನ್ಮೂಲಗಳು

ರಾಜ್ಯದ ಸಂಪನ್ಮೂಲಗಳು, ರಾಜಸ್ವ ಸ್ವೀಕೃತಿಗಳು, ಬಂಡವಾಳ ಸ್ವೀಕೃತಿಗಳು ಮತ್ತು ನಿವ್ವಳ ಸಾರ್ವಜನಿಕ ಲೆಕ್ಕದ ಸ್ವೀಕೃತಿಗಳನ್ನು ಒಳಗೊಂಡಿರುತ್ತವೆ. ಇವುಗಳ ಸಂಯೋಜನೆಯನ್ನು ಈಗಾಗಲೇ **ಅಧ್ಯಾಯ–1ರ ಕಂಡಿಕೆ–1.4**ರಲ್ಲಿ ಚರ್ಚಿಸಲಾಗಿದೆ. 2020–21ರಲ್ಲಿನ ರಾಜ್ಯದ ಒಟ್ಟಾರೆ ಸ್ವೀಕೃತಿಗಳ ಘಟಕಗಳು ಮತ್ತು ಉಪಘಟಕಗಳನ್ನು **ನಕ್ಷೆ–2.3**ರಲ್ಲಿ ತೋರಿಸಲಾಗಿದೆ.

### *2.4.1 ರಾಜಸ್ವ ಸ್ವೀಕೃತಿಗಳು*

ಕರ್ನಾಟಕ ರಾಜ್ಯದ ಹಣಕಾಸಿನ ಸ್ಥಿತಿಯು ಹೆಚ್ಚಾಗಿ ಆದಾಯದ ಭಾಗದಿಂದ ಪ್ರಭಾವಿತವಾಗಿರುತ್ತದೆ. 2016–17 ರಿಂದ 2019–20ರ ಅವಧಿಯಲ್ಲಿ ಸರಾಸರಿ ಶೇಕಡ 62ರಷ್ಟು ಆದಾಯವು ರಾಜ್ಯದ ಸ್ವಂತ ಸಂಪನ್ಮೂಲಗಳಿಂದ ಬಂದಿದೆ. 2020–21ರಲ್ಲಿ, ರಾಜ್ಯದ ಸ್ವಂತ ಸಂಪನ್ಮೂಲಗಳು ಒಟ್ಟು ಆದಾಯದ ಶೇಕಡ 67ರಷ್ಟಿತ್ತು. ಉಳಿದದ್ದು ತೆರಿಗೆಗಳು ಮತ್ತು ಸುಂಕಗಳ ರಾಜ್ಯದ ಪಾಲು ಮತ್ತು ಸಹಾಯಧನದ ಕೊಡುಗೆಗಳ ರೂಪದಲ್ಲಿ ಭಾರತ ಸರ್ಕಾರದಿಂದ ವರ್ಗಾವಣೆಯಾಗಿದೆ. 2010–11ರಿಂದ ತೆರಿಗೆ ಆದಾಯವು ಮೌಲ್ಯದ ದೃಷ್ಟಿಯಿಂದ ಬೆಳೆಯುತ್ತಿದೆಯಾದರೂ, 2020–21ರಲ್ಲಿ ಹಿಂದಿನ ವರ್ಷಕ್ಕೆ (2019–20) ಹೋಲಿಸಿದರೆ ಶೇಕಡ 5.19ರಷ್ಟು ಕಡಿಮೆಯಾಗಿದೆ. ಆದಾಗ್ಯೂ, ರಾಜಸ್ವ ಸ್ವೀಕೃತಿಗಳ ಶೇಕಡಾವಾರು ಪಾಲು 2016–17 ರಿಂದ 2019–20ರವರೆಗೆ ಇಳಿಮುಖದ ಪ್ರವೃತ್ತಿಯಲ್ಲಿದೆ. 2020–21ರಲ್ಲಿ, ಸ್ವಲ್ಪ ಹೆಚ್ಚಳ ಕಂಡುಬಂದಿದ್ದು ಇದು ಒಟ್ಟು ರಾಜಸ್ವ ಸ್ವೀಕೃತಿಗಳ ಶೇಕಡ 62ರಷ್ಟು ಇದೆ. ಮತ್ತೊಂದೆಡೆ, ತೆರಿಗೆಯೇತರ ರಂಗದಲ್ಲಿ ರಾಜ್ಯದ ಆದಾಯವು ಸುಧಾರಿಸಿಲ್ಲ. 2016–17ರಿಂದ 2019–20ರ ಅವಧಿಯಲ್ಲಿ ರಾಜಸ್ವ ಸ್ವೀಕೃತಿಗಳ ಶೇಕಡ ನಾಲ್ಕರಷ್ಟಿದ್ದ ತೆರಿಗೆಯೇತರ ಆದಾಯವು 2020–21ರಲ್ಲಿ ಶೇಕಡ ಐದಕ್ಕೆ ಏರಿಕೆಯಾಗಿದೆ.

**ನಕ್ಷೆ–2.3: 2020–21ರಲ್ಲಿ ರಾಜ್ಯದ ಸ್ವೀಕೃತಿಗಳ ಸಂಯೋಜನೆ**




* ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ₹12,407 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ ಪರಿಣಾಮಕಾರಿ ಋಣ ಸ್ವೀಕೃತಿಗಳು ₹72,121 ಕೋಟಿಗಳಾಗುತ್ತದೆ, ಹಾಗಾಗಿ ಪರಿಣಾಮಕಾರಿ ಬಂಡವಾಳ ಸ್ವೀಕೃತಿಗಳು ₹73,436 ಕೋಟಿ ಮತ್ತು ಪರಿಣಾಮಕಾರಿ ಒಟ್ಟು ಸ್ವೀಕೃತಿಗಳು ₹2,35,416 ಕೋಟಿಗಳಾಗುತ್ತದೆ

### *2.4.2 ರಾಜಸ್ವ ಸ್ವೀಕೃತಿಗಳ ವೃದ್ಧಿ ಮತ್ತು ಪ್ರವೃತ್ತಿ*

2016–17 ರಿಂದ 2020–21ರ ಐದು ವರ್ಷಗಳ ಅವಧಿಯಲ್ಲಿ ರಾಒಆಂಉಕ್ಕೆ ಸಂಬಂಧಿಸಿದಂತೆ ರಾಜಸ್ವ ಸ್ವೀಕೃತಿಗಳಲ್ಲಿನ ಪ್ರವೃತ್ತಿಗಳನ್ನು ಮತ್ತು ಆದಾಯದ ಪ್ಲವನತೆಯನ್ನು **ಕೋಷ್ಟಕ–2.3** ಒದಗಿಸುತ್ತದೆ. ಇದಲ್ಲದೆ, ರಾಒಆಂಉಕ್ಕೆ ಸಂಬಂಧಿಸಿ ರಾಜಸ್ವ ಸ್ವೀಕೃತಿಗಳಲ್ಲಿನ ಪ್ರವೃತ್ತಿಗಳು ಮತ್ತು ರಾಜಸ್ವ ಸ್ವೀಕೃತಿಗಳ ಸಂಯೋಜನೆಯನ್ನು ಕ್ರಮವಾಗಿ **ನಕ್ಷೆ–2.4** ಮತ್ತು **ನಕ್ಷೆ–2.5**ರಲ್ಲಿ ನೀಡಲಾಗಿದೆ.

## ಕೋಷ್ಟಕ–2.3: ರಾಜಸ್ವ ಸ್ವೀಕೃತಿಗಳಲ್ಲಿನ ಪ್ರವೃತ್ತಿಗಳು ಮತ್ತು ವೃದ್ಧಿ

| ಪ್ರಮಿತಿಗಳು | 2016–17 | 2017–18 | 2018–19 | 2019–20 | 2020–21 |
|---|---|---|---|---|---|
| ರಾಜಸ್ವ ಸ್ವೀಕೃತಿಗಳು (₹ ಕೋಟಿಗಳಲ್ಲಿ) | 1,33,214 | 1,47,000 | 1,64,979 | 1,75,443 | 1,56,716 |
| ರಾಜಸ್ವ ಸ್ವೀಕೃತಿಗಳ ವೃದ್ಧಿಯ ದರ (ಶೇಕಡ) | 12.12 | 10.35 | 12.23 | 6.34 | (–)10.67 |
| ಸ್ವಂತ ತೆರಿಗೆ ರಾಜಸ್ವ (₹ ಕೋಟಿಗಳಲ್ಲಿ) | 82,956 | 87,130 | 96,830 | 1,02,363 | 97,052 |
| ತೆರಿಗೆಯೇತರ ರಾಜಸ್ವ (₹ ಕೋಟಿಗಳಲ್ಲಿ) | 5,795 | 6,477 | 6,773 | 7,681 | 7,894 |
| ಸ್ವಂತ ರಾಜಸ್ವದ ವೃದ್ಧಿಯ ದರ (ಸ್ವಂತ ತೆರಿಗೆ ಮತ್ತು ತೆರಿಗೆಯೇತರ ರಾಜಸ್ವ) (ಶೇಕಡ) | 9.70 | 5.47 | 10.68 | 6.22 | (–)4.63 |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ರಾಒಆಂಉ) (₹ ಕೋಟಿಗಳಲ್ಲಿ) | 12,07,608 | 13,36,914 | 14,90,624 | 16,28,928 | 18,03,609 |
| ರಾಒಆಂಉದ ವೃದ್ಧಿಯ ದರ (ಶೇಕಡ) | 15.54 | 10.71 | 11.50 | 9.28 | 10.72 |
| ರಾಜಸ್ವ ಸ್ವೀಕೃತಿ/ರಾಒಆಂಉ (ಶೇಕಡ) | 11.03 | 11.00 | 11.07 | 10.77 | 8.69 |
| ಪ್ಲವನತೆ ಅನುಪಾತಗಳು[7] | | | | | |
| ರಾಒಆಂಉಗೆ ರಾಜಸ್ವ ಪ್ಲವನತೆ[8] | 0.78 | 0.97 | 1.06 | 0.68 | (–)0.99 |
| ರಾಒಆಂಉಗೆ ರಾಜ್ಯದ ಸ್ವಂತ ರಾಜಸ್ವ ಪ್ಲವನತೆ[9] | 0.62 | 0.51 | 0.93 | 0.67 | 0.43 |

*ಆಕರ: ಹಣಕಾಸು ಲೆಕ್ಕಗಳು ಮತ್ತು ರಾಜ್ಯ ಸರ್ಕಾರದ ಆರ್ಥಿಕ ಸಮೀಕ್ಷೆ*

## ನಕ್ಷೆ–2.4: ರಾಜಸ್ವ ಸ್ವೀಕೃತಿಗಳ ಪ್ರವೃತ್ತಿಗಳು




*ಆಕರ: ಹಣಕಾಸು ಲೆಕ್ಕಗಳು ಮತ್ತು ರಾಜ್ಯ ಸರ್ಕಾರದ ಆರ್ಥಿಕ ಸಮೀಕ್ಷೆ*

---

7 ಪ್ಲವನತೆಯ ಅನುಪಾತವು ಮೂಲ ವ್ಯತ್ಯಯದ ಬದಲಾವಣೆಗೆ ವಿತ್ತೀಯ ವ್ಯತ್ಯಯದ ಹೊಂದಿಕೊಳ್ಳುವಿಕೆ ಅಥವಾ ಸ್ಪಂದಿಸುವಿಕೆಯ ಮಟ್ಟವನ್ನು ಸೂಚಿಸುತ್ತದೆ. ಉದಾಹರಣೆಗೆ, ರಾಜಸ್ವ ಪ್ಲವನತೆಯು ರಾಒಆಂಉಕ್ಕೆ ಸಂಬಂಧಿಸಿದಂತೆ ಶೇಕಡ 0.63 ಇದೆ ಎಂದರೆ, ರಾಒಆಂಉವು ಶೇಕಡ ಒಂದರಷ್ಟು ಹೆಚ್ಚಾದರೆ, ರಾಜಸ್ವ ಸ್ವೀಕೃತಿಯು ಶೇಕಡ 0.63 ಅಂಕಗಳಿಂದ ಹೆಚ್ಚಾಗುತ್ತವೆ ಎಂದು ಸೂಚಿಸುತ್ತದೆ

8 ರಾಜಸ್ವ ಪ್ಲವನತೆಯು ರಾಒಆಂಉದ ವೃದ್ಧಿಯ ದರಕ್ಕೆ ರಾಜಸ್ವ ಸ್ವೀಕೃತಿಗಳ ವೃದ್ಧಿಯ ದರವನ್ನು ಸೂಚಿಸುತ್ತದೆ.

9 ಸ್ವಂತ ಆದಾಯದ ಪ್ಲವನತೆಯು ರಾಒಆಂಉದ ವೃದ್ಧಿಯ ದರಕ್ಕೆ ತೆರಿಗೆ ಆದಾಯ ಮತ್ತು ತೆರಿಗೆಯೇತರ ಆದಾಯದ ಬೆಳವಣಿಗೆಯ ದರವನ್ನು ಸೂಚಿಸುತ್ತದೆ. ಇದು ಭಾರತ ಸರ್ಕಾರದಿಂದ ಪಡೆದ ಪ್ರಾಪ್ತಗಳನ್ನು ಹೊರತುಪಡಿಸುತ್ತದೆ.

**ನಕ್ಷೆ 2.5 ರಾಜಸ್ವ ಸ್ವೀಕೃತಿಗಳ ಅಂಗಗಳ ಪ್ರವೃತ್ತಿಗಳು**




*ಆಕರ: ಹಣಕಾಸು ಲೆಕ್ಕಗಳು*

**ರಾಜ್ಯದ ರಾಜಸ್ವ ಸ್ವೀಕೃತಿಗಳಿಗೆ ಸಂಬಂಧಿಸಿದ ಸಾಮಾನ್ಯ ಪ್ರವೃತ್ತಿಗಳು ಈ ಕೆಳಗಿನಂತಿವೆ:**

- 2016–17ರಲ್ಲಿ ₹1,33,214 ಕೋಟಿಗಳಿದ್ದ ರಾಜಸ್ವ ಸ್ವೀಕೃತಿಗಳು 2020–21ರಲ್ಲಿ ₹1,56,716 ಕೋಟಿಗಳಿಗೆ ಏರಿ ಶೇಕಡ 17.64ರಷ್ಟು ಹೆಚ್ಚಾಗಿದೆ. 2016–17ರಿಂದ 2019–20ರ ಅವಧಿಯಲ್ಲಿ ಸರಾಸರಿ ಬೆಳವಣಿಗೆ ದರವು ಶೇಕಡ 10.26ರಷ್ಟಿತ್ತು. 2020–21ರಲ್ಲಿ, ಹಿಂದಿನ ವರ್ಷಕ್ಕೆ ಹೋಲಿಸಿದರೆ ಆದಾಯವು ಶೇಕಡ 10.67ರಷ್ಟು ಕಡಿಮೆಯಾಗಿದೆ. ಈ ಇಳಿಕೆಯಿಂದಾಗಿ ಪ್ರಸಕ್ತ ವರ್ಷದಲ್ಲಿ ರಾಜಸ್ವ ಕೊರತೆ ಉಂಟಾಗಿದೆ.
- 2020–21ರಲ್ಲಿ ಸುಮಾರು 67 ಪ್ರತಿಶತದಷ್ಟು ರಾಜಸ್ವ ಸ್ವೀಕೃತಿಗಳು ರಾಜ್ಯದ ಸ್ವಂತ ಸಂಪನ್ಮೂಲಗಳಿಂದ ಬಂದಿದ್ದರೆ ಕೇಂದ್ರ ತೆರಿಗೆ ವರ್ಗಾವಣೆಗಳು ಮತ್ತು ಅನುದಾನಗಳು ಒಟ್ಟಾಗಿ 33 ಪ್ರತಿಶತ ಕೊಡುಗೆ ನೀಡಿವೆ. ಇದು ಕರ್ನಾಟಕದ ಹಣಕಾಸಿನ ಸ್ಥಿತಿಯು ಹೆಚ್ಚಾಗಿ ಸ್ವಂತ ಸಂಪನ್ಮೂಲಗಳಿಂದ ಪ್ರಭಾವಿತವಾಗಿದೆ ಎಂಬುದನ್ನು ಸೂಚಿಸುತ್ತದೆ.
- ಪ್ರಸಕ್ತ ವರ್ಷದಲ್ಲಿ, ರಾಜಸ್ವ ಸ್ವೀಕೃತಿಗಳಲ್ಲಿನ ಶೇಕಡ 10.67ರಷ್ಟರ (₹18,727 ಕೋಟಿ) ಇಳಿಕೆಯು ಮುಖ್ಯವಾಗಿ ಸ್ವಂತ ತೆರಿಗೆ ಆದಾಯ, ಕೇಂದ್ರದ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು ಮತ್ತು ಅನುದಾನಗಳಲ್ಲಿ ಅನುಕ್ರಮವಾಗಿ ಶೇಕಡ 5.19, ಶೇಕಡ 29.84, ಮತ್ತು ಶೇಕಡ 12.77ರಷ್ಟು ಕಡಿಮೆಯಾದ ಕಾರಣದಿಂದಾಗಿದೆ.
- ಅಂತರ ವರ್ಷದ ವ್ಯತ್ಯಾಸವನ್ನು ಹೊಂದಿದ್ದ ರಾಜ್ಯದ ರಾಜಸ್ವ ಪ್ಲವನತೆಯು ಕಳೆದ ದಶಕದಲ್ಲಿ ಮೊದಲ ಬಾರಿಗೆ ಋಣಾತ್ಮಕವಾಗಿದೆ. ರಾಜಸ್ವ ಸ್ವೀಕೃತಿಯಲ್ಲಿನ ಋಣಾತ್ಮಕ ಬೆಳವಣಿಗೆಯ ದರ ಇದಕ್ಕೆ ಕಾರಣವಾಗಿದೆ.

### *2.4.3 ರಾಜ್ಯದ ಸ್ವಂತ ಸಂಪನ್ಮೂಲಗಳು*

ಹೆಚ್ಚುವರಿ ಸಂಪನ್ಮೂಲಗಳ ಕ್ರೋಢೀಕರಣದಲ್ಲಿ ರಾಜ್ಯದ ಕಾರ್ಯಕ್ಷಮತೆಯನ್ನು ಅದರ ಸ್ವಂತ ತೆರಿಗೆ ಮತ್ತು ತೆರಿಗೆಯೇತರ ಮೂಲಗಳ ಆದಾಯವನ್ನು ಒಳಗೊಂಡಿರುವ ಸ್ವಂತ ಸಂಪನ್ಮೂಲಗಳಿಂದ ಅಳೆಯಬೇಕು

2016–17ರಿಂದ 2020–21ರ ಅವಧಿಯಲ್ಲಿ ಪ್ರಮುಖ ತೆರಿಗೆ ಮತ್ತು ತೆರಿಗೆಯೇತರ ಆದಾಯಕ್ಕೆ ಸಂಬಂಧಿಸಿದಂತೆ ಒಟ್ಟು ಸಂಗ್ರಹಣೆಗಳು ಮತ್ತು ರಾಜಿಆಂಉದಲ್ಲಿ ಅವುಗಳ ಸಂಬಂಧಿತ ಪಾಲನ್ನು **ಅನುಬಂಧ–2.2**ರಲ್ಲಿ ನೀಡಲಾಗಿದೆ.

### (ಅ) ಸ್ವಂತ ತೆರಿಗೆ ಆದಾಯ

2016–21ರ ಐದು ವರ್ಷಗಳ ಅವಧಿಯಲ್ಲಿ ರಾಜ್ಯದ ಸ್ವಂತ ತೆರಿಗೆ ಆದಾಯದ ಪ್ರವೃತ್ತಿಗಳನ್ನು **ನಕ್ಷೆ–2.6** ರಲ್ಲಿ ನೀಡಲಾಗಿದೆ.

**ನಕ್ಷೆ–2.6: 2016–17ರಿಂದ 2020–21ರ ಅವಧಿಯಲ್ಲಿ ಸ್ವಂತ ತೆರಿಗೆ ಆದಾಯದ ವೃದ್ಧಿ/ಕುಸಿತ**




*ಆಕರ: ಹಣಕಾಸು ಲೆಕ್ಕಗಳು*

2016–17ರಿಂದ 2020–21ರ ಅವಧಿಯಲ್ಲಿ ಸಂಗ್ರಹಿಸಲಾದ ರಾಜ್ಯದ ಸ್ವಂತ ತೆರಿಗೆ ಆದಾಯದ ಘಟಕವಾರು ವಿವರಗಳನ್ನು **ಕೋಷ್ಟಕ–2.4**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.4: 2016–17ರಿಂದ 2020–21ರ ಅವಧಿಯಲ್ಲಿ ರಾಜ್ಯದ ಸ್ವಂತ ತೆರಿಗೆ ಆದಾಯದ ಅಂಗಗಳು**

(₹ ಕೋಟಿಗಳಲ್ಲಿ)

| ರಾಜಸ್ವ ಶೀರ್ಷಿಕೆ | 2016–17 | 2017–18 | 2018–19 | 2019–20 | 2020–21 | ಸ್ಪಾರ್ಕ್‌ಲೈನ್ |
|---|---|---|---|---|---|---|
| ವ್ಯಾಪಾರ, ಮಾರಾಟ ಮೇಲಿನ ತೆರಿಗೆ. | 46,105 | 25,093 | 14,003 | 16,424 | 16,028 | |
| ರಾಜ್ಯ ಸರಕು ಮತ್ತು ಸೇವಾ ತೆರಿಗೆ | 0 | 24,182 | 41,956 | 42,147 | 37,711 | |
| ರಾಜ್ಯ ಅಬಕಾರಿ | 16,484 | 17,949 | 19,944 | 21,584 | 23,332 | |
| ವಾಹನಗಳ ಮೇಲಿನ ತೆರಿಗೆ | 5,594 | 6,209 | 6,568 | 6,763 | 5,607 | |
| ಮುದ್ರಾಂಕಗಳು ಮತ್ತು ನೋಂದಣಿ | 7,806 | 9,024 | 10,775 | 11,308 | 10,576 | |
| ಭೂ ಕಂದಾಯ | 209 | 195 | 144 | 203 | 184 | |
| ಇತರೆ ತೆರಿಗೆಗಳು | 6,758 | 4,478 | 3,440 | 3,934 | 3,614 | |
| ಒಟ್ಟು | 82,956 | 87,130 | 96,830 | 102,363 | 97,052 | |

*ಆಕರ: ಹಣಕಾಸು ಲೆಕ್ಕಗಳು*

ರಾಜ್ಯದ ಸ್ವಂತ ತೆರಿಗೆ ಆದಾಯವು 2016–17ರಲ್ಲಿನ ₹82,956 ಕೋಟಿಗಳಿಂದ 2020–21ರಲ್ಲಿ ₹97,052 ಕೋಟಿಗೆ ಏರಿ ₹14,096 ಕೋಟಿಗಳಷ್ಟು ಹೆಚ್ಚಾಗಿದೆ. 2016–17ರಿಂದ 2019–20ರ ಅವಧಿಯಲ್ಲಿ ಸ್ವಂತ ತೆರಿಗೆ ಆದಾಯದ ಸರಾಸರಿ ವಾರ್ಷಿಕ ಬೆಳವಣಿಗೆ ದರವು ಶೇಕಡ 7.92ರಷ್ಟಿತ್ತು. ಆದಾಗ್ಯೂ, 2020–21ರ ಅವಧಿಯಲ್ಲಿ, ಸ್ವಂತ ತೆರಿಗೆ ಆದಾಯ ಸಂಗ್ರಹದಲ್ಲಿ ಇಳಿಕೆ ಕಂಡುಬಂದಿದೆ. ಇದು ಋಣಾತ್ಮಕ ಬೆಳವಣಿಗೆಯ ದರಕ್ಕೆ ಕಾರಣವಾಯಿತು. ಪ್ರಸಕ್ತ ವರ್ಷದಲ್ಲಿ ತೆರಿಗೆ ಆದಾಯದ ಪ್ರಮುಖ ಕೊಡುಗೆಗಳೆಂದರೆ ಸರಕು ಮತ್ತು ಸೇವಾ ತೆರಿಗೆ (ಶೇಕಡ. 39), ರಾಜ್ಯ ಅಬಕಾರಿ (ಶೇಕಡ. 24), ಮಾರಾಟ, ವ್ಯಾಪಾರ ಇತ್ಯಾದಿಗಳ ಮೇಲಿನ ತೆರಿಗೆಗಳು (ಶೇಕಡ 17) ಮತ್ತು ಮುದ್ರಾಂಕಗಳು ಮತ್ತು ನೋಂದಣಿ ಶುಲ್ಕಗಳು (ಶೇಕಡ 11).

ರಾಜ್ಯದ ಹಣಕಾಸು ಮತ್ತು ಸಾಲದ ಸ್ಥಿತಿಯನ್ನು ಪರಿಶೀಲಿಸಲು ಮತ್ತು ಸರಿಪಡಿಸುವ ಕ್ರಮಗಳನ್ನು ಸೂಚಿಸಲು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಹಣಕಾಸು ನಿರ್ವಹಣಾ ಪರಿಶೀಲನಾ ಸಮಿತಿ ಫೆಬ್ರವರಿ 2021ರಲ್ಲಿ ಸಭೆ ನಡೆಸಿತು. ಕೋವಿಡ್–19 ಸಾಂಕ್ರಾಮಿಕ ರೋಗದಿಂದಾದ ಲಾಕ್‌ಡೌನ್‌ನಿಂದಾಗಿ ಆದಾಯ ಸ್ವೀಕೃತಿಯಲ್ಲಿ ಭಾರಿ ಕುಸಿತವಾಗಿರುವುದನ್ನು ಸಮಿತಿಯು ಒಪ್ಪಿಕೊಂಡಿದೆ. ಈ ಹಿನ್ನೆಲೆಯಲ್ಲಿ, ಹೆಚ್ಚಿನ ಸಂಪನ್ಮೂಲಗಳನ್ನು ಸಜ್ಜುಗೊಳಿಸುವ ಸಲುವಾಗಿ, ಮುಂದಿನ ದಿನಗಳಲ್ಲಿ ಒಟ್ಟಾರೆ ಆದಾಯ ಸಂಗ್ರಹವನ್ನು ಸುಧಾರಿಸಲು ಮುದ್ರಾಂಕ ಮತ್ತು ನೋಂದಣಿಯನ್ನು ಪರಿಶೀಲಿಸಲು ಸೂಚಿಸಲಾಗಿದೆ.

- **ರಾಜ್ಯ ಸರಕು ಮತ್ತು ಸೇವಾ ತೆರಿಗೆ**

2019–20 ಮತ್ತು 2020–21ರಲ್ಲಿ ರಾಜ್ಯ ಸರಕು ಮತ್ತು ಸೇವಾ ತೆರಿಗೆ ಅಡಿಯಲ್ಲಿ ಆದಾಯದ ವಾಸ್ತವವಾದ ಸಂಗ್ರಹವನ್ನು **ಕೋಷ್ಟಕ–2.5**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.5: ಕರ್ನಾಟಕ ಸರ್ಕಾರದ ಸರಕು ಮತ್ತು ಸೇವಾ ತೆರಿಗೆ ಸ್ವೀಕೃತಿಗಳು**

(₹ ಕೋಟಿಗಳಲ್ಲಿ)

| ರಾಜ್ಯ ಸರಕು ಮತ್ತು ಸೇವಾ ತೆರಿಗೆ | 2019–20 | 2020–21 | ಏರಿಕೆ/ಇಳಿಕೆ |
|---|---|---|---|
| ತೆರಿಗೆ | 24,645 | 19,003 | (–)5,642 |
| ಸಮಗ್ರ ಸರಕು ಮತ್ತು ಸೇವಾ ತೆರಿಗೆಯಿಂದ ತೆರಿಗೆಗಳ ಹಂಚಿಕೆ | 331 | 3,430 | 3,099 |
| ಇತರೆ | 17,171 | 15,278 | (–)1,893 |
| ರಾಜ್ಯ ಸರಕು ಮತ್ತು ಸೇವಾ ತೆರಿಗೆ ಸಂಗ್ರಹಣೆ | **42,147** | **37,711** | **(–)4,436** |

*ಆಕರ:ಹಣಕಾಸು ಲೆಕ್ಕಗಳು*

ಸರಕು ಮತ್ತು ಸೇವಾ ತೆರಿಗೆ (ರಾಜ್ಯಗಳಿಗೆ ಪರಿಹಾರ) ಕಾಯಿದೆ, 2017ರ ಪ್ರಕಾರ, ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದ ಲೆಕ್ಕದಲ್ಲಿ ಉಂಟಾಗುವ ಆದಾಯದಲ್ಲಿನ ಕೊರತೆಯನ್ನು ಮೂಲ ವರ್ಷದಿಂದ ಶೇಕಡ 14ರಷ್ಟು ವಾರ್ಷಿಕ ವೃದ್ಧಿಯನ್ನು ಪರಿಗಣಿಸಿ ಐದು ವರ್ಷಗಳ ಅವಧಿಗೆ ರಾಜ್ಯಗಳಿಗೆ ಪರಿಹಾರ ನೀಡಲಾಗುತ್ತದೆ. 2020–21ರಲ್ಲಿ, ಕೋವಿಡ್ 19 ಸಾಂಕ್ರಾಮಿಕದಿಂದಾಗಿ ಕೇಂದ್ರ ಮಟ್ಟದ ಆದಾಯದಲ್ಲಿ ಕೊರತೆ ಕಂಡು ಬಂದಿದ್ದರಿಂದ ಭಾರತ ಸರ್ಕಾರವು ರಾಜ್ಯಗಳ ಸರಕು ಮತ್ತು ಸೇವಾ ತೆರಿಗೆಯಲ್ಲಿನ ಕೊರತೆಯನ್ನು ಮರಳಿ ಮರಳಿಸುವ ಸಾಲಗಳನ್ನು ಒದಗಿಸುವ ಮೂಲಕ ಸರಿದೂಗಿಸಿತು. ಹೆಚ್ಚುವರಿಯಾಗಿ ಸರಕು ಮತ್ತು ಸೇವೆಗಳ ಅಂತರ ರಾಜ್ಯ ಪೂರೈಕೆಯ ಮೇಲೆ ಕೇಂದ್ರವು ಸಂಯೋಜಿತ ಸರಕು ಮತ್ತು ಸೇವಾ ತೆರಿಗೆಯನ್ನು (ಐಜಿಎಸ್‌ಟಿ) ವಿಧಿಸಿದೆ ಮತ್ತು ಸರಕು ಅಥವಾ ಸೇವೆಗಳನ್ನು ಬಳಸಿಕೊಳ್ಳುವ ರಾಜ್ಯಕ್ಕೆ ರಾಜ್ಯದ ತೆರಿಗೆಯ ಪಾಲನ್ನು ಹಂಚುತ್ತದೆ.

2020–21ರಲ್ಲಿ, ರಾಜ್ಯ ಸರಕು ಮತ್ತು ಸೇವಾ ತೆರಿಗೆ ಸಂಗ್ರಹವು ₹37,711.18 ಕೋಟಿಗಳಾಗಿದ್ದು, 2019–20ಕ್ಕಿಂತ ₹4,436 ಕೋಟಿಗಳಿಗೆ (ಶೇಕಡ 10.53) ಇಳಿಕೆಯಾಗಿದೆ. ಇದರಲ್ಲಿ ಸಮಗ್ರ ಸರಕು ಮತ್ತು ಸೇವಾ ತೆರಿಗೆಯ ಮುಂಗಡ ಹಂಚಿಕೆಯ ₹3,429.51 ಕೋಟಿಗಳು ಸೇರಿಕೊಂಡಿವೆ. ಇದಲ್ಲದೆ ರಾಜ್ಯವು ಹೆಚ್ಚುವರಿಯಾಗಿ, ಕೇಂದ್ರ ಸರಕು ಮತ್ತು ಸೇವಾ ತೆರಿಗೆಯಿಂದ ನಿವ್ವಳ ಆದಾಯದ ಪಾಲು ₹6,236.01 ಕೋಟಿಗಳನ್ನು ಪಡೆದುಕೊಂಡಿದೆ. 2020–21ರಲ್ಲಿ, ಸಮಗ್ರ ಸರಕು ಮತ್ತು ಸೇವಾ ತೆರಿಗೆಯಿಂದ ನಿವ್ವಳ ಆದಾಯವು ಶೂನ್ಯವಾಗಿತ್ತು. 2020–21ರಲ್ಲಿ ಸರಕು ಮತ್ತು ಸೇವಾ ತೆರಿಗೆ ಅಡಿಯಲ್ಲಿ ಒಟ್ಟು ಸ್ವೀಕೃತಿಗಳು

₹43,947.19 ಕೋಟಿಗಳಾಗಿವೆ[10]. 2020–21ರಲ್ಲಿ ಸರಕು ಮತ್ತು ಸೇವಾ ತೆರಿಗೆ ಜಾರಿಯಿಂದ ಉಂಟಾದ ಆದಾಯ ನಷ್ಟದ ಖಾತೆಯಲ್ಲಿ ರಾಜ್ಯವು ಒಟ್ಟು ₹26,196.26 ಕೋಟಿಗಳ ಪರಿಹಾರವನ್ನು ಪಡೆದುಕೊಂಡಿದೆ. ಈ ಪೈಕಿ ರಾಜ್ಯಕ್ಕೆ ರಾಜಸ್ವ ಸ್ವೀಕೃತಿಗಳಡಿಯಲ್ಲಿ ಅನುದಾನವಾಗಿ ₹13,789.26 ಕೋಟಿಗಳು ದೊರೆತಿದೆ. ಆದರೆ, 2020–21ರ ಅವಧಿಯಲ್ಲಿ ಸರಕು ಮತ್ತು ಸೇವಾ ತೆರಿಗೆ ಪರಿಹಾರದ ಅಸಮರ್ಪಕ ಶಿಲ್ಕಿನ ಕಾರಣ ರಾಜ್ಯವು ಸರಕು ಮತ್ತು ಸೇವಾ ತೆರಿಗೆ ಪರಿಹಾರ ನಿಧಿಯಲ್ಲಿ ಸಂಗ್ರಹಿಸಲಾದ ಉಪಕರದಿಂದ ಮರುಪಾವತಿಯ ಬಾಧ್ಯತೆಗಳೊಂದಿಗೆ (ರಾಜ್ಯದ ಯಾವುದೇ ಇತರ ಸಂಪನ್ಮೂಲ ಗಳಿಂದಲ್ಲ) ರಾಜ್ಯ ಸರ್ಕಾರದ ಋಣ ಸ್ವೀಕೃತಿಗಳಡಿಯಲ್ಲಿ ₹12,407 ಕೋಟಿ ಬ್ಯಾಕ್–ಟು–ಬ್ಯಾಕ್ ಸಾಲವನ್ನು ಸಹ ಪಡೆದುಕೊಂಡಿತು. ಈ ವ್ಯವಸ್ಥೆಯಿಂದಾಗಿ, 2020–21ರ ಅವಧಿಯಲ್ಲಿನ ₹19,338 ಕೋಟಿ ರಾಜಸ್ವ ಕೊರತೆ ಮತ್ತು ₹67,098 ಕೋಟಿ ವಿತ್ತೀಯ ಕೊರತೆಯನ್ನು ಸರಕು ಮತ್ತು ಸೇವಾ ತೆರಿಗೆ ಪರಿಹಾರದ ₹12,407 ಕೋಟಿಗಳೊಂದಿಗೆ ಋಣ ಸ್ವೀಕೃತಿಗಳು ಎಂದು ಓದಬಹುದು.

2020–21ರ ಅವಧಿಗೆ ಯೋಜಿತ ಆದಾಯದ ₹69,592.49 ಕೋಟಿಗಳಿಗೆ ಪ್ರತಿಯಾಗಿ ರಾಜ್ಯದಿಂದ ಸಂಗ್ರಹಿಸಲಾದ ನೈಜ ತೆರಿಗೆಗಳು (ಸರಕು ಮತ್ತು ಸೇವಾ ತೆರಿಗೆ ಪೂರ್ವ ತೆರಿಗೆಗಳು ಮತ್ತು ರಾಜ್ಯ ಸರಕು ಮತ್ತು ಸೇವಾ ತೆರಿಗೆ) ಸಮಗ್ರ ಸರಕು ಮತ್ತು ಸೇವಾ ತೆರಿಗೆ ಹಂಚಿಕೆ ಮತ್ತು 2020–21ರ ಸರಕು ಮತ್ತು ಸೇವಾ ತೆರಿಗೆ ನಷ್ಟ ಪರಿಹಾರ ಸೇರಿದಂತೆ ಒಟ್ಟು ₹60,660.32 ಕೋಟಿಗಳನ್ನು ಪಡೆಯಲಾಗಿದೆ. ರಾಜ್ಯವು ₹8,932.17 ಕೋಟಿಗಳಷ್ಟು ಕಡಿಮೆ ಸರಕು ಮತ್ತು ಸೇವಾ ತೆರಿಗೆ ನಷ್ಟ ಪರಿಹಾರವನ್ನು ಪಡೆದಿದೆ.

**(ಆ) ತೆರಿಗೆಯೇತರ ಆದಾಯ**

ತೆರಿಗೆಯೇತರ ಸ್ವೀಕೃತಿಗಳನ್ನು (ಶುಲ್ಕಗಳು, ಬಳಕೆದಾರರ ಶುಲ್ಕಗಳು, ಬಡ್ಡಿ ಸ್ವೀಕೃತಿಗಳು, ಇತ್ಯಾದಿ) ಸಾಮಾನ್ಯವಾಗಿ ಶಾಸನಬದ್ಧವಲ್ಲದ ಆದೇಶಗಳ ಮೂಲಕ ಸಂಗ್ರಹಿಸಲಾಗುತ್ತದೆ. ತೆರಿಗೆಯೇತರ ಸ್ವೀಕೃತಿಗಳ ಆಕರಗಳು ವಿತ್ತೀಯ ಸೇವೆಗಳಿಂದ ಸ್ವೀಕೃತಿಗಳನ್ನು ಒಳಗೊಂಡಿವೆ. ಉದಾಹರಣೆಗೆ ಬಾಕಿ ಇರುವ ಮುಂಗಡಗಳ ಮೇಲಿನ ಬಡ್ಡಿಸ್ವೀಕೃತಿಗಳು, ಲಾಭಾಂಶಗಳು ಮತ್ತು ಈಕ್ವಿಟಿ ಹೂಡಿಕೆಗಳಿಂದ ಲಾಭಗಳು, ಖನಿಜಗಳು, ಅರಣ್ಯಗಳು ಮತ್ತು ವನ್ಯಜೀವಿಗಳಂತಹ ಆಸ್ತಿಗಳ ಅಭಿರಕ್ಷಕರಾಗಿ ಅವುಗಳ ಉಪಯೋಗ ಪಡೆಯಲು ಅನುಮತಿಸುವ ರಾಯಧನ ಶುಲ್ಕಗಳು ಅಥವಾ ಅಂತಹ ಇತರ ಸೇವೆಗಳು ಮತ್ತು ಸರ್ಕಾರದ ಉಪಕರಣದ ಮೂಲಕ ಒದಗಿಸಲಾದ ವಿವಿಧ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳಿಗೆ ಬಳಕೆದಾರರ ಶುಲ್ಕಗಳು ಇತ್ಯಾದಿಗಳು.

2016–17ರಿಂದ 2019–20ರ ಅವಧಿಯಲ್ಲಿ ರಾಜಸ್ವ ಸ್ವೀಕೃತಿಗಳಲ್ಲಿ ತೆರಿಗೆಯೇತರ ಆದಾಯದ ಪಾಲು ಶೇಕಡ ನಾಲ್ಕು ಮತ್ತು 2020–21ರಲ್ಲಿ ಶೇಕಡ ಒಂದರಷ್ಟು ಅಲ್ಪ ಪ್ರಮಾಣದ ಹೆಚ್ಚಳವನ್ನು ಕಂಡಿದೆ. ರಾಒಆಂಉದ ಶೇಕಡಾವಾರು ಪ್ರಮಾಣದಲ್ಲಿ ಇದು 2016–17ರಿಂದ 2019–20ರ ಅವಧಿಯಲ್ಲಿ ಶೇಕಡ ಒಂದಕ್ಕಿಂತ ಕಡಿಮೆಯಿತ್ತು. ನಿಯತಕಾಲಿಕವಾಗಿ ಬಳಕೆದಾರರ ಶುಲ್ಕಗಳನ್ನು ಪರಿಷ್ಕರಣೆ ಮಾಡದಿರುವುದು ನಿಶ್ಚಲತೆಗೆ ಕಾರಣವಾಗಿದೆ. ಇದರ ಹೊರತಾಗಿ, ಆಡಳಿತಾತ್ಮಕ ಇಲಾಖೆಗಳ ನಿಯಮಿತ ಮತ್ತು ಆವರ್ತಕ ಮೇಲ್ವಿಚಾರಣೆಯ ಕೊರತೆಯು ತೆರಿಗೆಯೇತರ ಆದಾಯದಲ್ಲಿನ ನಿಧಾನಗತಿಯ ಬೆಳವಣಿಗೆಗೆ ಪ್ರಮುಖ ಕಾರಣವಾಗಿದೆ ಎಂದು ಹಣಕಾಸು ನಿರ್ವಹಣಾ ಪರಿಶೀಲನಾ ಸಮಿತಿಯು ಗಮನಿಸಿದೆ. 2020–21ರಲ್ಲಿ ತೆರಿಗೆಯೇತರ ಆದಾಯದ ಅಡಿಯಲ್ಲಿ ಲಾಭಾಂಶಗಳು ಮತ್ತು ಲಾಭಗಳ ಭಾಗವಾಗಿರುವ ಹೂಡಿಕೆಯ ಮೇಲಿನ ಲಾಭವು ಅತ್ಯಲ್ಪವಾಗಿದೆ (₹80.70 ಕೋಟಿ), ಇದನ್ನು **ಕಂಡಿಕೆ–2.5.4.1**ರಲ್ಲಿ ವಿವರವಾಗಿ ಚರ್ಚಿಸಲಾಗಿದೆ.

2016–17ರಿಂದ 2019–20ರ ಅವಧಿಯಲ್ಲಿ ಸಂಗ್ರಹಿಸಲಾದ ತೆರಿಗೆಯೇತರ ಆದಾಯದ ಘಟಕವಾರು ವಿವರಗಳನ್ನು **ಕೋಷ್ಟಕ–2.6**ರಲ್ಲಿ ನೀಡಲಾಗಿದೆ.

---

[10] ಪ್ರಧಾನ ಲೆಕ್ಕ ಶೀರ್ಷಿಕೆ 0005–ಸಮಗ್ರ ಸರಕು ಮತ್ತು ಸೇವಾ ತೆರಿಗೆ–₹6236.01 ಕೋಟಿಗಳು. 0006–ರಾಜ್ಯ ಸರಕು ಮತ್ತು ಸೇವಾ ತೆರಿಗೆ–₹37711.18 ಕೋಟಿಗಳು ಮತ್ತು ಸಮಗ್ರ ಸರಕು ಮತ್ತು ಸೇವಾ ತೆರಿಗೆ–ಶೂನ್ಯ).

**ಕೋಷ್ಟಕ–2.6: ರಾಜ್ಯದ ತೆರಿಗೆಯೇತರ ಆದಾಯದ ಅಂಗಗಳು**

(₹ ಕೋಟಿಗಳಲ್ಲಿ)

| ರಾಜಸ್ವ ಶೀರ್ಷಿಕೆ | 2016–17 | 2017–18 | 2018–19 | 2019–20 | 2020–21 | ಸ್ಪಾರ್ಕ್‌ಲೈನ್ |
|---|---|---|---|---|---|---|
| ಬಡ್ಡಿ ಸ್ವೀಕೃತಿಗಳು | 1,200 | 1,178 | 1,112 | 895 | 920 | |
| ಲಾಭಾಂಶ ಮತ್ತು ಲಾಭಗಳು | 83 | 79 | 38 | 54 | 81 | |
| ನಾನ್–ಫೆರಸ್ ಮೈನಿಂಗ್ ಮತ್ತು ಮೆಟಲರ್ಜಿಕಲ್ ಕೈಗಾರಿಕೆಗಳು | 2,419 | 2,747 | 3,027 | 3,629 | 3,893 | |
| ಇತರೆ ತೆರಿಗೆಯೇತರ ಸ್ವೀಕೃತಿಗಳು | 2,093 | 2,473 | 2,596 | 3,103 | 3,000 | |
| (ಎ) ವೈದ್ಯಕೀಯ ಮತ್ತು ಸಾರ್ವಜನಿಕ | 153 | 364 | 330 | 599 | 419 | |
| (ಬಿ) ಇತರೆ ಆಡಳಿತಾತ್ಮಕ ಸೇವೆಗಳು | 131 | 271 | 253 | 305 | 388 | |
| (ಸಿ) ಅರಣ್ಯ ಮತ್ತು ವನ್ಯಜೀವಿ | 292 | 314 | 309 | 267 | 276 | |
| (ಡಿ) ಶಿಕ್ಷಣ, ಕ್ರೀಡೆ ಮತ್ತು ಸಾಹಿತ್ಯ | 193 | 176 | 200 | 183 | 175 | |
| (ಇ) ಪೊಲೀಸ್ | 176 | 253 | 241 | 308 | 367 | |
| (ಎಫ್) ರಸ್ತೆಗಳು ಮತ್ತು ಸೇತುವೆಗಳು | 62 | 103 | 105 | 71 | 50 | |
| (ಜಿ) ಇತರೆ | 1,086 | 992 | 1,158 | 1,370 | 1,325 | |
| ಒಟ್ಟು | 5,795 | 6,477 | 6,773 | 7,681 | 7,894 | |

*ಆಕರ: ಹಣಕಾಸು ಲೆಕ್ಕಗಳು*

ಹದಿನೈದನೇ ಹಣಕಾಸು ಆಯೋಗವು ಬಳಕೆದಾರರ ಶುಲ್ಕಗಳ ಮೇಲೆ ಗಮನ ಹರಿಸಬೇಕು ಮತ್ತು ಈ ಆದಾಯವು ರಾಜ್ಯದ ರಾಒಆಂಉದ ಬೆಳವಣಿಗೆಯೊಂದಿಗೆ ವೇಗವನ್ನು ಹೊಂದಿರಬೇಕು ಎಂದು ತಿಳಿಸಿದೆ.. ಜೊತೆಗೆ 2009–10ರಿಂದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಗಳು ರಾಜ್ಯದ ಹಣಕಾಸನ್ನು ಸುಧಾರಿಸಲು ಬಳಕೆದಾರರ ಶುಲ್ಕಗಳನ್ನು ನಿಯಮಿತವಾಗಿ ಪರಿಷ್ಕರಿಸಬೇಕು ಎಂದು ತಿಳಿಸಿವೆ. ವೆಚ್ಚ ಸುಧಾರಣಾ ಆಯೋಗವು, ತನ್ನ ನಾಲ್ಕನೇ ವರದಿಯಲ್ಲಿ (ಜೂನ್ 2011) ಸರ್ಕಾರವು ಬಳಕೆದಾರರ ಶುಲ್ಕಗಳ ಬಗ್ಗೆ ಸ್ಪಷ್ಟವಾದ ನೀತಿಯನ್ನು ವ್ಯಕ್ತಪಡಿಸಬೇಕು ಎಂದು ಭಾವಿಸಿದೆ. ಈ ನಿಟ್ಟಿನಲ್ಲಿ ಆರ್ಥಿಕ ಇಲಾಖೆಯು ಮಾರ್ಚ್ 2019ಕ್ಕೆ ಕೊನೆಗೊಳ್ಳುವ ವರ್ಷದ ವರದಿಗೆ ನೀಡಿದ ಉತ್ತರದಲ್ಲಿ (ಆಗಸ್ಟ್ 2021) ಬಳಕೆದಾರರ ಶುಲ್ಕವನ್ನು ಪರಿಷ್ಕರಿಸುವ ಮೂಲಕ ತೆರಿಗೆಯೇತರ ಆದಾಯವನ್ನು ಹೆಚ್ಚಿಸಲು ಶಿಕ್ಷಣ, ಆರೋಗ್ಯ, ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳೊಂದಿಗೆ ಚರ್ಚಿಸಲಾಗಿದೆ ಎಂದು ಹೇಳಿದೆ. ಬಳಕೆದಾರರ ಶುಲ್ಕಗಳನ್ನು ಪರಿಶೀಲಿಸಿ ಪರಿಷ್ಕರಿಸಲು ಕ್ರಮವನ್ನು ಪ್ರಾರಂಭಿಸಲು ಇತರ ಇಲಾಖೆಗಳಿಗೆ (ಫೆಬ್ರವರಿ 2020) ಸೂಚನೆ ನೀಡಲಾಗಿದೆ ಎಂದೂ ಕೂಡ ಹೇಳಿದೆ.

ಕಳೆದ ಕೆಲವು ವರ್ಷಗಳಲ್ಲಿ ಇಂತಹ ಶಿಫಾರಸುಗಳ ಕಾರಣದಿಂದಾಗಿ ಮತ್ತು ಕೆಲವು ಇಲಾಖೆಗಳ ಬಳಕೆದಾರರ ಶುಲ್ಕಗಳ ಪರಿಷ್ಕರಣೆಯಿಂದಾಗಿ 2020–21ರಲ್ಲಿ ತೆರಿಗೆಯೇತರ ಆದಾಯವು ಸ್ವಲ್ಪ ಮಟ್ಟಿಗೆ (ಶೇಕಡ ಒಂದರಷ್ಟು) ಹೆಚ್ಚಾಗಿದೆ.

ಆರ್ಥಿಕ ಇಲಾಖೆಯು ಅರಣ್ಯ, ತೋಟಗಾರಿಕೆ, ಆರೋಗ್ಯ, ಗಣಿ ಮತ್ತು ಭೂವಿಜ್ಞಾನ ಮುಂತಾದ ಕೆಲವು ಇಲಾಖೆಗಳಿಂದ ಸಂಗ್ರಹಿಸಲಾದ ತೆರಿಗೆಯೇತರ ಆದಾಯವನ್ನು ಅದರ ಸಂಗ್ರಹಣೆ ಮತ್ತು ಬಳಕೆಗಾಗಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿರುವುದರಿಂದ ಸಂಚಿತ ನಿಧಿಗೆ ಜಮೆ ಮಾಡಿಲ್ಲವಾದ್ದರಿಂದ ಇದು ಕಡಿಮೆ ತೆರಿಗೆಯೇತರ ಆದಾಯ ಸಂಗ್ರಹಕ್ಕೆ ಒಂದು ಕಾರಣವಾಗಿದೆ ಎಂದು ಉತ್ತರಿಸಿದೆ (ಡಿಸೆಂಬರ್ 2021).

ಆದಾಗ್ಯೂ, ಉಳಿದ ಇಲಾಖೆಗಳಲ್ಲಿ ಬಳಕೆದಾರರ ಶುಲ್ಕವನ್ನು ಪರಿಷ್ಕರಿಸುವ ಮೂಲಕ ತೆರಿಗೆಯೇತರ ಆದಾಯವನ್ನು ಹೆಚ್ಚಿಸಲು ಪ್ರಯತ್ನಿಸಬೇಕು.

2020–21ರ ಆರ್ಥಿಕ ಸಮೀಕ್ಷೆಯಲ್ಲಿ ತೆರಿಗೆಯೇತರ ಆದಾಯವು ರಾಜ್ಯವು ಎದುರಿಸುತ್ತಿರುವ ಪ್ರಮುಖ ಹಣಕಾಸಿನ ಸವಾಲಾಗಿದೆ ಎಂದು ಒಪ್ಪಿಕೊಳ್ಳಲಾಗಿದೆ. ರಾಜ್ಯವು ರಾಒಆಂಉದ ಅನುಪಾತಗಳಿಗೆ ದೇಶದಲ್ಲೇ ಅತ್ಯಂತ ಕಡಿಮೆ ತೆರಿಗೆಯೇತರ ಆದಾಯವನ್ನು ಹೊಂದಿದೆ. ಹಲವು ಇಲಾಖೆಗಳಲ್ಲಿ ಬಳಕೆದಾರರ ಶುಲ್ಕಗಳು, ಶುಲ್ಕಗಳು ಮತ್ತು ದಂಡಗಳು ಮತ್ತು ಇತರ ತೆರಿಗೆಯೇತರ ಸ್ವೀಕೃಗಳ ಪರಿಷ್ಕರಣೆ ಹಲವು ವರ್ಷಗಳಿಂದ ನಡೆದಿಲ್ಲ ಎಂದು ಹೇಳಲಾಗಿದೆ. 2020–21ರಲ್ಲಿ ಕಡಿಮೆ ಸ್ವೀಕೃತಿಗಳನ್ನು ದಾಖಲಿಸಿರುವ ಅರಣ್ಯ ಮತ್ತು ವನ್ಯಜೀವಿ, ರಸ್ತೆಗಳು ಮತ್ತು ಸೇತುವೆಗಳು, ಪಶುಸಂಗೋಪನೆ, ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ ಇತ್ಯಾದಿಗಳ ಅಡಿಯಲ್ಲಿ ತೆರಿಗೆಯೇತರ ಸ್ವೀಕೃತಿಗಳನ್ನು ಹೆಚ್ಚಿಸಲು ಪ್ರಯತ್ನಿಸಬೇಕು.

### *2.4.4 ಕೇಂದ್ರದಿಂದ ವರ್ಗಾವಣೆಗಳು*

ಕಾರ್ಪೊರೇಷನ್ ತೆರಿಗೆ, ಆದಾಯ ತೆರಿಗೆ, ಸೇವಾ ತೆರಿಗೆ, ಕೇಂದ್ರ ಅಬಕಾರಿ ಸುಂಕಗಳು ಮುಂತಾದ ಕೇಂದ್ರ ತೆರಿಗೆ ಸುಂಕಗಳಲ್ಲಿ ರಾಜ್ಯ ಸರ್ಕಾರದ ಪಾಲನ್ನು ಕೇಂದ್ರ ಸರ್ಕಾರವು ವರ್ಗಾಯಿಸುತ್ತದೆ. 2016–17ರಿಂದ 2020–21ರವರೆಗಿನ ಈ ತೆರಿಗೆ ವರ್ಗಾವಣೆಗಳಲ್ಲಿನ ಪ್ರವೃತ್ತಿಗಳನ್ನು **ಕೋಷ್ಟಕ–2.7**ರಲ್ಲಿ ತೋರಿಸಲಾಗಿದೆ

**ಕೋಷ್ಟಕ–2.7: ಕೇಂದ್ರ ತೆರಿಗೆ ವರ್ಗಾವಣೆಯ ಪ್ರವೃತ್ತಿಗಳು**

(₹ ಕೋಟಿಗಳಲ್ಲಿ)

| ಶೀರ್ಷಿಕೆ | 2016–17 | 2017–18 | 2018–19 | 2019–20 | 2020–21 |
|---|---|---|---|---|---|
| ಕೇಂದ್ರೀಯ ಸರಕು ಮತ್ತು ಸೇವಾ ತೆರಿಗೆ (ಸಿಜಿಎಸ್‌ಟಿ) | – | 447.56 | 8,858.76 | 8,773.82 | 6,236.01 |
| ಸಮಗ್ರ ಸರಕು ಮತ್ತು ಸೇವಾ ತೆರಿಗೆ (ಐಜಿಎಸ್‌ಟಿ) | – | 3,204.72 | 707.00 | – | – |
| ಕಾರ್ಪೋರೇಶನ್ ತೆರಿಗೆ | 9,211.05 | 9,721.29 | 12,481.94 | 10,542.17 | 6,656.01 |
| ಕಾರ್ಪೋರೇಶನ್ ತೆರಿಗೆ ಹೊರತುಪಡಿಸಿ ಆದಾಯ ತೆರಿಗೆ | 6,401.72 | 8,208.94 | 9,192.40 | 8,260.51 | 6,837.75 |
| ಸೀಮಾ ಸುಂಕ | 3,962.25 | 3,203.80 | 2,544.18 | 1,959.84 | 1,110.05 |
| ಕೇಂದ್ರ ಅಬಕಾರಿ ಸುಂಕಗಳು | 4,524.54 | 3,348.80 | 1,690.77 | 1,362.62 | 714.26 |
| ಸೇವಾ ತೆರಿಗೆ | 4,639.22 | 3,617.15 | 331.65 | – | 119.03 |
| ಸಂಪತ್ತಿನ ಮೇಲೆ ತೆರಿಗೆ | 21.08 | (–) 0.29 | 4.58 | 0.46 | – |
| ಆದಾಯ ಮತ್ತು ವೆಚ್ಚದ ಮೇಲೆ ಇತರೆ ತೆರಿಗೆಗಳು | – | – | 65.01 | – | – |
| ಇತರೆ ತೆರಿಗೆಗಳು ಮತ್ತು ಸುಂಕಗಳು, ಸರಕುಗಳು ಮತ್ತು ಸೇವೆಗಳು | 0.08 | (–) 0.01 | 18.54 | 19.58 | 21.00 |
| ಒಟ್ಟು | **28,759.94** | **31,751.96** | **35,894.83** | **30,919.00** | **21,694.11** |
| ಹಿಂದಿನ ವರ್ಷದ ಮೇಲೆ ವೃದ್ಧಿಯ ಶೇಕಡ | 19.92 | 10.40 | 13.05 | (–) 13.86 | (–)29.84 |
| ರಾಜಸ್ವ ತೆರಿಗೆಗಳಿಗೆ ಕೇಂದ್ರ ತೆರಿಗೆ ವರ್ಗಾವಣೆಗಳ ಶೇಕಡಾವಾರು | 21.59 | 21.60 | 21.76 | 17.62 | 13.84 |

*ಆಕರ: ಹಣಕಾಸು ಲೆಕ್ಕಗಳು*

ಹದಿನೈದನೆಯ ಹಣಕಾಸು ಆಯೋಗವು ಕೇಂದ್ರ ತೆರಿಗೆಗಳ ನಿವ್ವಳ ಆದಾಯದಲ್ಲಿ ರಾಜ್ಯದ ಪಾಲನ್ನು ಶೇಕಡ 3.646ಕ್ಕೆ ನಿಗದಿಪಡಿಸಲು ಶಿಫಾರಸು ಮಾಡಿದೆ. 2020–21ರಲ್ಲಿ, ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯಗಳ ಅವಿಭಜಿತ ಮೊತ್ತದ ಪಾಲಿನ ಒಟ್ಟು ₹5,94,996.76 ಕೋಟಿಗಳಲ್ಲಿ, ರಾಜ್ಯದ

ಪಾಲಿನ ನಿವ್ವಳ ಪಾಲು ₹21,694.11[11] ಕೋಟಿಗಳು ಆಗಿದೆ. ಇದರಲ್ಲಿ ಸೇವಾ ತೆರಿಗೆಯ ₹119.03 ಕೋಟಿಗಳು ಸೇರಿದೆ ಹಾಗೂ ರಾಜ್ಯಕ್ಕೆ ಸರಕು ಮತ್ತು ಸೇವಾ ತೆರಿಗೆಯಲ್ಲಿ ಹಂಚಿಕೆ ಆಗಿರಲಿಲ್ಲ.

### *2.4.5 ಭಾರತ ಸರ್ಕಾರದ ಅನುದಾನಗಳು*

ಭಾರತ ಸರ್ಕಾರದಿಂದ ಸ್ವೀಕೃತವಾದ ಅನುದಾನಗಳು 2016–17ರಲ್ಲಿ ₹15,703 ಕೋಟಿಗಳಿಂದ 2019–20ರಲ್ಲಿ ₹34,480 ಕೋಟಿಗಳಿಗೆ ಹೆಚ್ಚಳವಾಗಿದ್ದು, 2020–21ರಲ್ಲಿ ₹30,076 ಕೋಟಿಗಳಿಗೆ ಇಳಿದಿತ್ತು. ವಿವರಗಳನ್ನು **ಕೋಷ್ಟಕ–2.8**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.8: ಭಾರತ ಸರ್ಕಾರದಿಂದ ಸಹಾಯಾನುದಾನ**

(₹ ಕೋಟಿಗಳಲ್ಲಿ)

| ಶೀರ್ಷಿಕೆ | 2016–17 | 2017–18 | 2018–19 | 2019–20 | 2020–21 |
|---|---|---|---|---|---|
| ಯೋಜನೇತರ ಅನುದಾನಗಳು | 7,045 | – | – | – | – |
| ರಾಜ್ಯ ಯೋಜನೆಗಳಿಗೆ ಅನುದಾನಗಳು* | 8,102 | – | – | – | – |
| ಕೇಂದ್ರ ಯೋಜನೆಗಳಿಗೆ ಅನುದಾನಗಳು* | 116 | – | – | – | – |
| ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಅನುದಾನಗಳು | 440 | 11,617 | 10,393 | 12,214 | 9,852 |
| ಇತರೆ ವರ್ಗಾವಣೆಗಳು/ ರಾಜ್ಯಗಳಿಗೆ ಅನುದಾನಗಳು[12] | – | 7,316 | 11,714 | 17,593 | 14,667 |
| ಹಣಕಾಸು ಆಯೋಗದ ಅನುದಾನಗಳು | – | 2,708 | 3,374 | 4,673 | 5,557 |
| ಒಟ್ಟು | **15,703** | **21,641** | **25,481** | **34,480** | **30,076** |
| ಹಿಂದಿನ ವರ್ಷಕ್ಕೆ ಏರಿಕೆ/ಇಳಿಕೆಯ ಶೇಕಡಾವಾರು | 12.74 | 37.81 | 17.74 | 35.32 | (–)12.77 |
| ರಾಜಸ್ವ ಸ್ವೀಕೃತಿಗಳಿಗೆ ಸಹಾಯಾನುದಾನಗಳ ಶೇಕಡಾವಾರು | 11.79 | 14.72 | 15.44 | 19.65 | 19.19 |

*ಆಕರ: ಹಣಕಾಸು ಲೆಕ್ಕಗಳು*

** ಯೋಜನೆ ಮತ್ತು ಯೋಜನೇತರ ಅನುದಾನ ಎಂಬ ಹೆಸರನ್ನು 2017–18ರಿಂದ ತೆಗೆದುಹಾಕಲಾಗಿದ್ದು ಬದಲಿಗೆ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನಗಳು, ಹಣಕಾಸು ಆಯೋಗ ಅನುದಾನಗಳು ಮತ್ತು ರಾಜ್ಯಗಳಿಗೆ ಇತರೆ ಅನುದಾನಗಳು ಎಂದು ಬದಲಾಯಿಸಿರುವುದರಿಂದ ಅಂಕಿಗಳನ್ನು ತೋರಿಸಿಲ್ಲ.*

ಹಿಂದಿನ ವರ್ಷಕ್ಕೆ ಹೋಲಿಸಿದರೆ, 2020–21ರಲ್ಲಿ ₹4,404 ಕೋಟಿಗಳ ಇಳಿಕೆಯಾಗಿದೆ. ಹಣಕಾಸು ಆಯೋಗದ ಅನುದಾನಗಳನ್ನು ಹೊರತುಪಡಿಸಿ, ರಾಜ್ಯಗಳಿಗೆ ಇತರ ವರ್ಗಾವಣೆ/ಅನುದಾನಗಳು (₹2,926 ಕೋಟಿ) ಮತ್ತು ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಅನುದಾನದ ಅಡಿಯಲ್ಲಿ (₹2,362 ಕೋಟಿ) ಇಳಿಕೆಯಾಗಿದೆ.

**(ಅ) ಹದಿನೈದನೇ ಹಣಕಾಸು ಆಯೋಗದ ಶಿಫಾರಸು**

27 ನವೆಂಬರ್ 2017 ರಂದು ಸಂವಿಧಾನದ 280ನೇ ವಿಧಿಯ ಅಡಿಯಲ್ಲಿ ರಾಷ್ಟ್ರಾಧ್ಯಕ್ಷರು ಸ್ಥಾಪಿಸಿದ ಹದಿನೈದನೆಯ ಹಣಕಾಸು ಆಯೋಗದ ಉಲ್ಲೇಖಿತ ನಿಯಮಗಳ ಪ್ರಕಾರ, ಐದು ವರ್ಷಗಳವರೆಗೆ (2020–2025) ತೆರಿಗೆಗಳ ಆದ್ಯಂತ ಹಂಚಿಕೆಗೆ ಶಿಫಾರಸುಗಳನ್ನು ನೀಡಲು ಆಯೋಗವು ಎರಡು ವರದಿಗಳನ್ನು ಸಲ್ಲಿಸಿದೆ. ಮೊದಲ ವರದಿಯು 2020–21ರ ಹಣಕಾಸು ವರ್ಷಕ್ಕೆ ಶಿಫಾರಸನ್ನು

[11] ಒಟ್ಟು ₹21,694.11 ಕೋಟಿ ವಿಕೇಂದ್ರೀಕರಣದಲ್ಲಿ ಕಾರ್ಪೊರೇಷನ್ ತೆರಿಗೆ ಶೇಕಡ 3.70, ಸೀಮಾ ಸುಂಕ ಶೇಕಡ 3.52, ಕೇಂದ್ರ ಅಬಕಾರಿ ಸುಂಕ ಶೇಕಡ 3.58, ಆದಾಯ ತೆರಿಗೆ ಶೇಕಡ 3.71, ಸೇವಾ ತೆರಿಗೆ ಶೇಕಡ 4.54, ಸಮಗ್ರ ಸರಕು ಮತ್ತು 2016–17ರಲ್ಲಿ ಸೇವಾ ತೆರಿಗೆ ಶೇಕಡ 3.53 ಮತ್ತು ಇತರ ತೆರಿಗೆಗಳು ಮತ್ತು ಸುಂಕಗಳು 4.80 ಶೇಕಡ.

[12] ಇದು ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಗೆ ವಂತಿಗೆ ಮತ್ತು ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದಿಂದ ಆದ ನಷ್ಟ ಪರಿಹಾರವನ್ನು ಒಳಗೊಂಡಿದೆ.

ಹೊಂದಿದ್ದರೆ, ಎರಡನೇ ಮತ್ತು ಅಂತಿಮ ವರದಿಯು 2021–22ರಿಂದ 2024–25ರ ಅವಧಿಗೆ ಶಿಫಾರಸುಗಳನ್ನು ನೀಡಿದೆ. ಮೊದಲ ವರದಿಯು ಈ ಕೆಳಗಿನವುಗಳನ್ನು ರಾಜ್ಯಕ್ಕೆ ಶಿಫಾರಸು ಮಾಡಿದೆ:

- ತೆರಿಗೆಗಳ ನಿವ್ವಳ ಆದಾಯದಲ್ಲಿ ಕರ್ನಾಟಕದ ಪರಸ್ಪರ ಪಾಲುಗಳು (ವಿಭಜಿಸಬಹುದಾದ ಒಟ್ಟು) ಶೇಕಡ 3.646.
- ವಿಶೇಷ ಅನುದಾನ ₹5,495 ಕೋಟಿಗಳು.
- ಪೌಷ್ಠಿಕಾಂಶಕ್ಕೆ ಅನುದಾನ ₹436 ಕೋಟಿಗಳು.
- ಸ್ಥಳೀಯ ಸಂಸ್ಥೆಗಳ ಸಬಲೀಕರಣ–ನಗರ ಸ್ಥಳೀಯ ಸಂಸ್ಥೆಗಳಿಗೆ ₹1,549 ಕೋಟಿಗಳು ಮತ್ತು ಪಂಚಾಯತ್ ರಾಜ್ಯ ಸಂಸ್ಥೆಗಳಿಗೆ ₹3,217 ಕೋಟಿಗಳು.
- ವಿಪತ್ತು ಅಪಾಯ ನಿರ್ವಹಣೆ ₹1,054 ಕೋಟಿಗಳು.

ಭಾರತ ಸರ್ಕಾರದ ಹಣಕಾಸು ಸಚಿವಾಲಯವು ಸಂಸತ್ತಿನ ಮುಂದೆ ಮಂಡಿಸಿದ ತನ್ನ ವಿವರಣಾತ್ಮಕ ಜ್ಞಾಪಕ ಪತ್ರದಲ್ಲಿ ಶಿಫಾರಸನ್ನು ಮರುಪರಿಶೀಲಿಸುವಂತೆ ಆಯೋಗವನ್ನು ವಿನಂತಿಸಿರುವುದರಿಂದ ಮೇಲಿನ ಶಿಫಾರಸುಗಳಲ್ಲಿ, ವಿಶೇಷ ಅನುದಾನಗಳು ಮತ್ತು ಪೌಷ್ಠಿಕಾಂಶಕ್ಕಾಗಿನ ಅನುದಾನವನ್ನು ರಾಜ್ಯಕ್ಕೆ ಬಿಡುಗಡೆ ಮಾಡಲಾಗಿಲ್ಲ. ಸ್ವೀಕರಿಸಿದ ಅನುದಾನಗಳನ್ನು ಕೆಳಗೆ ಚರ್ಚಿಸಲಾಗಿದೆ.

- **ಪಂಚಾಯತ್ ರಾಜ್ಯ ಸಂಸ್ಥೆಗಳಿಗೆ/ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ**

ಹದಿನೈದನೇ ಹಣಕಾಸು ಆಯೋಗವು ಶಿಫಾರಸು ಮಾಡಿದಂತೆ 2020–21ರಲ್ಲಿ ಪಂಚಾಯತ್ ರಾಜ್ಯ ಸಂಸ್ಥೆಗಳಿಗೆ/ನಗರ ಸ್ಥಳೀಯ ಸಂಸ್ಥೆಗಳಿಗೆ ಮಾಡಿದ ಶಿಫಾರಸುಗಳು ಮತ್ತು ವರ್ಗಾವಣೆಯನ್ನು **ಕೋಷ್ಟಕ–2.9**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.9: 2020–21ರಲ್ಲಿ ಶಿಫಾರಸು ಮಾಡಿದ ಅನುದಾನ ಮತ್ತು ವಾಸ್ತವ ಬಿಡುಗಡೆ**

(₹ ಕೋಟಿಗಳಲ್ಲಿ)

| ವರ್ಷ | ಅನುದಾನದ ಸ್ವರೂಪ | ಪಂಚಾಯತ್‌ರಾಜ್ ಸಂಸ್ಥೆಗಳು | | | ನಗರ ಸ್ಥಳೀಯ ಸಂಸ್ಥೆಗಳು | | | ಎಸ್‌ಡಿಆರ್‌ಎಮ್‌ಎಫ್ | | |
|---|---|---|---|---|---|---|---|---|---|---|
| | | ಶಿಫಾರಸು ಮಾಡಿದ್ದು | ವಾಸ್ತವ | ಕೊರತೆ | ಶಿಫಾರಸು ಮಾಡಿದ್ದು | ವಾಸ್ತವ | ಕೊರತೆ | ಶಿಫಾರಸು ಮಾಡಿದ್ದು | ವಾಸ್ತವ | ಕೊರತೆ |
| **2020–21** | ಮೂಲ ಅನುದಾನಗಳು | 1,608.50 | 1,608.50 | – | 1,549.00 | 1,549.00 | – | 1,054.00 | 1,054.00 | – |
| | ಬಂಧಿತ ಅನುದಾನಗಳು | 1,608.50 | 1,608.50 | – | | | | | | |
| ಒಟ್ಟು | ಮೂಲ ಅನುದಾನಗಳು | **1,608.50** | **1,608.50** | – | **1,549.00** | **1,549.00** | – | **1,054.00** | **1,054.00** | – |
| | ಬಂಧಿತ ಅನುದಾನಗಳು | **1,608.50** | **1,608.50** | – | | | | | | |

*ಆಕರ: 15ನೇ ಹಣಕಾಸು ಆಯೋಗದ ವರದಿ ಮತ್ತು ಹಣಕಾಸು ಲೆಕ್ಕಗಳು*

ಪಂಚಾಯತ್ ರಾಜ್ ಸಂಸ್ಥೆಗಳಿಗೆ ಶಿಫಾರಸು ಮಾಡಲಾದ ಒಟ್ಟು ₹3,217 ಕೋಟಿಗಳ ಅನುದಾನದಲ್ಲಿ ಶೇಕಡ 50ರಷ್ಟು ಮೂಲ ಅನುದಾನ ಮತ್ತು ಶೇಕಡ 50ರಷ್ಟು ನೈರ್ಮಲ್ಯ ಮತ್ತು ಒಡಿಎಫ್ ಸೌಲಭ್ಯ ನಿರ್ವಹಣೆ, ಕುಡಿಯುವ ನೀರು ಪೂರೈಕೆ, ಮಳೆ ನೀರು ಕೊಯ್ಲು ಮತ್ತು ನೀರಿನ ಮರು ಬಳಕೆಗಾಗಿ ನೀಡಿದ ಅನುದಾನಗಳಾಗಿವೆ.

ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಿದ (₹1,549 ಕೋಟಿಗಳ) ಅನುದಾನವು ಮಿಲಿಯನ್ ಪ್ಲಸ್ ನಗರಗಳಿಗೆ (₹558 ಕೋಟಿಗಳು) ಮತ್ತು ಮಿಲಿಯನ್ ಪ್ಲಸ್ ಅಲ್ಲದ ನಗರಗಳಿಗೆ (₹991 ಕೋಟಿಗಳು) ಅನುದಾನವನ್ನು ಒಳಗೊಂಡಿದೆ. ಮಿಲಿಯನ್ ಪ್ಲಸ್ ನಗರಗಳಿಗೆ ಅನುದಾನವನ್ನು ವಾತಾವರಣ ಗುಣಮಟ್ಟ ಸುಧಾರಣೆಗಾಗಿ ಎರಡು ಕಂತುಗಳಲ್ಲಿ ನೀಡಲಾಗುತ್ತದೆ. ಮಿಲಿಯನ್ ಪ್ಲಸ್ ನಗರಗಳನ್ನು ಹೊರತು ಪಡಿಸಿ ಇತರ ನಗರಗಳಿಗೆ ಅನುದಾನವನ್ನು ಎರಡು ಸಮಾನ ಕಂತುಗಳಲ್ಲಿ ಮೂಲಭೂತ ಅನುದಾನ ಮತ್ತು ಕುಡಿಯುವ ನೀರು

ಮತ್ತು ಘನ ತ್ಯಾಜ್ಯ ನಿರ್ವಹಣೆಗೆ ನೀಡಲಾಗುತ್ತದೆ. 2020–21ರಲ್ಲಿ ಶಿಫಾರಸುಗಳಂತೆಯೇ ಪಂಚಾಯತ್ ರಾಜ್ ಸಂಸ್ಥೆಗಳಿಗೆ/ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನಗಳ ಸ್ವೀಕೃತಿಯಲ್ಲಿ ಯಾವುದೇ ಕೊರತೆಯಿಲ್ಲ.

- **ವಿಪತ್ತು ಪರಿಹಾರ ಅಡಿಯಲ್ಲಿ ಬಿಡುಗಡೆಗಳು**

ಹದಿನೈದನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ, ವಿಪತ್ತು ಪ್ರತಿಕ್ರಿಯೆಯ ಜೊತೆಗೆ ವಿಪತ್ತು ಉಪಶಮನವು ರಾಜ್ಯ ವಿಪತ್ತು ಅಪಾಯ ನಿರ್ವಹಣಾ ನಿಧಿ ಆಗಿದೆ. 2020–21ರಲ್ಲಿ ರಾಜ್ಯಕ್ಕೆ ₹1,054 ಕೋಟಿಗಳ ಹಂಚಿಕೆಯಾಗಿದ್ದು, ಕೇಂದ್ರದ ಪಾಲು ₹791 ಕೋಟಿಗಳು ಮತ್ತು ರಾಜ್ಯದ ಪಾಲು ₹263 ಕೋಟಿಗಳಾಗಿವೆ. 2020–21ರಲ್ಲಿ ರಾಜ್ಯವು ಸಂಪೂರ್ಣ ಶಿಫಾರಸು ಮೊತ್ತವನ್ನು ಸ್ವೀಕರಿಸಿದೆ. ಕೇಂದ್ರದ ಮತ್ತು ರಾಜ್ಯದ ಕೊಡುಗೆಯನ್ನು ಸಾರ್ವಜನಿಕ ಲೆಕ್ಕದಡಿಯ ನಿಧಿ ಖಾತೆಗೆ ವರ್ಗಾಯಿಸಲಾಗಿದೆ.

### *2.4.6 ಬಂಡವಾಳ ಸ್ವೀಕೃತಿಗಳು*

ರಾಜ್ಯ ಸರ್ಕಾರದ ಬಂಡವಾಳ ಸ್ವೀಕೃತಿಗಳು ಸಾರ್ವಜನಿಕ ಋಣ, ಹೂಡಿಕೆಯ ಹಿಂಪಡೆತದ ಹುಟ್ಟುವಳಿಗಳಿಂದ (ಇತರೆ ಬಂಡವಾಳ ಸ್ವೀಕೃತಿಗಳು ಶೀರ್ಷಿಕೆಯಡಿ) ಬರುವ ಋಣಭಾರವಲ್ಲದ ಆದಾಯಗಳನ್ನು ಮತ್ತು ಸಾಲಗಳು ಮತ್ತು ಮುಂಗಡಗಳ ವಸೂಲಾತಿಗಳನ್ನು ಒಳಗೊಂಡಿರುತ್ತವೆ. ಸಾರ್ವಜನಿಕ ಋಣ ತೀರುವಳಿಯ ನಂತರದ ಸಾರ್ವಜನಿಕ ಋಣ ಮತ್ತು ಇತರ ಬಂಡವಾಳ ಸ್ವೀಕೃತಿಗಳು ಸೇರಿ ನಿವ್ವಳ ಬಂಡವಾಳ ಸ್ವೀಕೃತಿಯಾಗುತ್ತದೆ. 2016–17 ರಿಂದ 2020–21ರ ಅವಧಿಯಲ್ಲಿ ಬಂಡವಾಳ ಸ್ವೀಕೃತಿಗಳ ಸಂಯೋಜನೆ ಮತ್ತು ಬೆಳವಣಿಗೆಯ ಪ್ರವೃತ್ತಿಯನ್ನು **ಕೋಷ್ಟಕ–2.10**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.10: ಬಂಡವಾಳ ಸ್ವೀಕೃತಿಗಳ ವೃದ್ಧಿ ಮತ್ತು ಸಂಯೋಜನೆಯಲ್ಲಿನ ಪ್ರವೃತ್ತಿಗಳು**

(₹ ಕೋಟಿಗಳಲ್ಲಿ)

| ರಾಜ್ಯದ ಆದಾಯದ ಮೂಲಗಳು | 2016–17 | 2017–18 | 2018–19 | 2019–20 | 2020–21 |
|---|---|---|---|---|---|
| ನಿವ್ವಳ ರಾಜಸ್ವ ಋಣ ಸ್ವೀಕೃತಿಗಳು | 23,736 | 16,853 | 30,831 | 40,279 | 73,512 |
| ಸಂಕೀರ್ಣ ಬಂಡವಾಳ ಸ್ವೀಕೃತಿಗಳು | 27 | 4 | (–) 6 | 45 | 45 |
| ಸಾಲಗಳು ಮತ್ತು ಮುಂಗಡಗಳ ವಸೂಲಾತಿ | 100 | 137 | 31 | 203 | 270 |
| ನಿವ್ವಳ ಬಂಡವಾಳ ಸ್ವೀಕೃತಿಗಳು | **23,863** | **16,994** | **30,856** | **40,527** | **73,827** |
| ಬಂಡವಾಳ ಸ್ವೀಕೃತಿಗಳ ವೃದ್ಧಿಯ ದರ (ಶೇಕಡ) | 37.35 | (–) 28.79 | 81.57 | 31.34 | 82.17 |
| ನಿವ್ವಳ ಸಾರ್ವಜನಿಕ ಋಣ ಸ್ವೀಕೃತಿಗಳ ವೃದ್ಧಿಯ ದರ (*ಶೇಕಡ*) | 39.94 | (–) 29.00 | 82.94 | 30.64 | 82.51 |

*ಆಕರ : ಹಣಕಾಸು ಲೆಕ್ಕಗಳು*

ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ₹12,407 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ ಪರಿಣಾಮಕಾರಿ ನಿವ್ವಳ ಸಾರ್ವಜನಿಕ ಋಣ ಸ್ವೀಕೃತಿಗಳು ₹61,105 ಕೋಟಿಗಳಾಗುತ್ತದೆ. ತತ್ಪರಿಣಾಮವಾಗಿ ಪರಿಣಾಮಕಾರಿ ನಿವ್ವಳ ಬಂಡವಾಳ ಸ್ವೀಕೃತಿಗಳು ₹61,420 ಕೋಟಿಗಳಾಗುತ್ತದೆ, ಬಂಡವಾಳ ಸ್ವೀಕೃತಿಗಳ ವೃದ್ಧಿಯ ದರವು ಶೇಕಡ 51.55 ಮತ್ತು ಸಾರ್ವಜನಿಕ ಋಣ ಸ್ವೀಕೃತಿಗಳ ವೃದ್ಧಿಯ ದರವು ಶೇಕಡ 51.70ರಷ್ಟಿತ್ತು.

ನಿವ್ವಳ ಬಂಡವಾಳ ಸ್ವೀಕೃತಿಗಳು 2016–17ರಲ್ಲಿದ್ದ ₹23,863 ಕೋಟಿಗಳಿಂದ 2020–21ರಲ್ಲಿ ₹73,827 ಕೋಟಿಗಳಿಗೆ (ಶೇಕಡ 210) ಏರಿದೆ. ಋಣ ಸ್ವೀಕೃತಿಗಳು ಬಂಡವಾಳ ಸ್ವೀಕೃತಿಗಳಲ್ಲಿ ಪ್ರಧಾನ ಪಾಲನ್ನು ಹೊಂದಿದ್ದವು ಮತ್ತು 2016–17 ರಿಂದ 2020–21ರ ಅವಧಿಯಲ್ಲಿ ಇದು ಸುಮಾರು 99 ಪ್ರತಿಶತದಷ್ಟಿತ್ತು.

ಇವುಗಳಲ್ಲಿ ಸಾಲಗಳು ಮತ್ತು ಮುಂಗಡಗಳ ಮೇಲಿನ ವಸೂಲಾತಿಯು ಈ ಅವಧಿಯಲ್ಲಿ ತೀರಾ ಅಲ್ಪವಾಗಿತ್ತು. 2020-21ರ ಅಂತ್ಯಕ್ಕೆ ಬಾಕಿ ಉಳಿದಿರುವ ಸಾಲಗಳು ಮತ್ತು ಮುಂಗಡಗಳಲ್ಲಿ ವಸೂಲಾತಿ ಶೇಕಡ ಒಂದಕ್ಕಿಂತ ಕಡಿಮೆಯಾಗಿದೆ. ಇದನ್ನು ಹಣಕಾಸು ನಿರ್ವಹಣಾ ಪರಿಶೀಲನಾ ಸಮಿತಿ ಗಮನಿಸಿದಂತೆ, ಎಲ್ಲಾ ಹೊಣೆಗಾರಿಕೆಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ನಿರ್ವಹಿಸಲು ಖಜಾನೆ-2ರ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ನಿರ್ವಹಣಾ ಮಾಡ್ಯೂಲ್ ಅನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಆರ್ಥಿಕ ಇಲಾಖೆಯು ತಿಳಿಸಿತು. ಮಾಡ್ಯೂಲ್ ಅಭಿವೃದ್ಧಿಯ ಹಂತದಲ್ಲಿರುವುದರಿಂದ ನಿಧಾನ ಗತಿಯು ಅದರ ಕಾರ್ಯಾಚರಣೆಯವರೆಗೆ ಮುಂದುವರಿಯುತ್ತದೆ ಎಂದೂ ಕೂಡ ಆರ್ಥಿಕ ಇಲಾಖೆ ತಿಳಿಸಿದೆ.

ಸಾರ್ವಜನಿಕ ಋಣದ ಸ್ವೀಕೃತಿಗಳಲ್ಲಿ ಮಾರುಕಟ್ಟೆ ಸಾಲಗಳು ಶೇಕಡ 82ರಷ್ಟಿದ್ದು ಪ್ರಮುಖ ಪಾಲನ್ನು ಹೊಂದಿದ್ದವು. ನಂತರ ಸ್ಥಾನದಲ್ಲಿ ಸಂಧಾನದ ಸಾಲಗಳು (ಶೇಕಡ ಎರಡು) ಮತ್ತು ಭಾರತ ಸರ್ಕಾರದ ಸಾಲಗಳು (ಶೇಕಡ 16) ಇವೆ. ಭಾರತ ಸರ್ಕಾರದ ಸಾಲಗಳು ಇತರ ಸಾಲಗಳನ್ನು[13] ಮಾತ್ರ ಒಳಗೊಂಡಿವೆ. ಕಳೆದ ನಾಲ್ಕು ವರ್ಷಗಳಲ್ಲಿ ಅಂದರೆ 2016-17 ರಿಂದ 2019-20ರ ಅವಧಿಯಲ್ಲಿ ಹಿಂದಿನ ವರ್ಷಗಳಲ್ಲಿ ತೆಗೆದು ಕೊಂಡ ಸಾರ್ವಜನಿಕ ಸಾಲದ ಮರುಪಾವತಿಗೆ ಶೇಕಡ 24.85ರಷ್ಟು ಸಾರ್ವಜನಿಕ ಸಾಲದ ಸ್ವೀಕೃತಿಗಳನ್ನು ಬಳಸಲಾಗಿದೆ ಮತ್ತು ಉಳಿದ ಶೇಕಡ 75.15ನ್ನು ಇತರ ಉದ್ದೇಶಗಳಿಗಾಗಿ ಬಳಸಲಾಗಿದೆ. ಆದಾಗ್ಯೂ, 2020-21ರಲ್ಲಿ ಸಾರ್ವಜನಿಕ ಋಣದ ಸ್ವೀಕೃತಿಗಳಲ್ಲಿ ಶೇಕಡ 13ರಷ್ಟನ್ನು ಹಿಂದಿನ ವರ್ಷಗಳಲ್ಲಿ ತೆಗೆದುಕೊಂಡ ಸಾರ್ವಜನಿಕ ಸಾಲದ ಮರುಪಾವತಿಗೆ ಬಳಸಲಾಗಿದೆ.

### *2.4.7 ಸಂಪನ್ಮೂಲಗಳ ಕ್ರೋಢೀಕರಣದಲ್ಲಿ ರಾಜ್ಯದ ಕಾರ್ಯಕ್ಷಮತೆ*

ಸಂಪನ್ಮೂಲಗಳ ಕ್ರೋಢೀಕರಣದಲ್ಲಿ ರಾಜ್ಯದ ಕಾರ್ಯಕ್ಷಮತೆಯನ್ನು ಸ್ವಂತ-ತೆರಿಗೆ ಮತ್ತು ತೆರಿಗೆಯೇತರ ಮೂಲಗಳನ್ನು ಒಳಗೊಂಡಿರುವ ತನ್ನದೇ ಆದ ಸಂಪನ್ಮೂಲಗಳ ಪರಿಭಾಷೆಯಲ್ಲಿ ನಿರ್ಣಯಿಸಲಾಗುತ್ತದೆ. ರಾಜ್ಯ ಸರ್ಕಾರವು ಪ್ರಸ್ತುತ ಪಡಿಸುವ ಆಯವ್ಯಯವು ನಿರ್ದಿಷ್ಟ ಆರ್ಥಿಕ ವರ್ಷಕ್ಕೆ ಆದಾಯ ಮತ್ತು ವೆಚ್ಚದ ಪ್ರಕ್ಷೇಪಗಳು/ಅಂದಾಜುಗಳನ್ನು ಸೂಚಿಸುತ್ತದೆ. ಆಯವ್ಯಯ ಅಂದಾಜಿನ ವಿಚಲನಗಳು ವಿವಿಧ ಅಂಶಗಳಿಂದಾಗಿ ಅಪೇಕ್ಷಿತ ಹಣಕಾಸಿನ ಗುರಿಗಳನ್ನು ಸಾಧಿಸದಿರುವುದು/ಉತ್ತಮಗೊಳಿಸದಿರುವಿಕೆಯನ್ನು ಸೂಚಿಸುತ್ತದೆ. ಅವುಗಳಲ್ಲಿ ಕೆಲವು ಸರ್ಕಾರದ ನಿಯಂತ್ರಣದಲ್ಲಿವೆ ಮತ್ತು ಕೆಲವು ಅದರ ನಿಯಂತ್ರಣಕ್ಕೆ ಮೀರಿವೆ. **ಕೋಷ್ಟಕ-2.11** 2020-21ರಲ್ಲಿ ಹದಿನೈದನೇ ಹಣಕಾಸು ಆಯೋಗ ಮತ್ತು ಆಯವ್ಯಯ ಅಂದಾಜುಗಳ ಮೌಲ್ಯಮಾಪನಕ್ಕೆ ಹೋಲಿಸಿದರೆ ತೆರಿಗೆ ಮತ್ತು ತೆರಿಗೆಯೇತರ ಸ್ವೀಕೃತಿಗಳನ್ನು ಪ್ರಸ್ತುತಪಡಿಸುತ್ತದೆ.

**ಕೋಷ್ಟಕ-2.11: 2020-21ರಲ್ಲಿ ಪ್ರಕ್ಷೇಪಗಳಿಗೆ ಮುಖಾಮುಖಿಯಾಗಿ ತೆರಿಗೆ ಮತ್ತು ತೆರಿಗೆಯೇತರ ಸ್ವೀಕೃತಿಗಳು**

| | 15ನೇ ಹಣಕಾಸು ಆಯೋಗದ ನಿರ್ಧರಣೆ | ಆಯವ್ಯಯ ಅಂದಾಜು | ವಾಸ್ತವ | ವಾಸ್ತವದ ಮೇಲಿನ ವ್ಯತ್ಯಾಸ ಶೇಕಡಾವಾರು | |
|---|---|---|---|---|---|
| | (₹ ಕೋಟಿಗಳಲ್ಲಿ) | | | ಆಯವ್ಯಯ ಅಂದಾಜು | 15ನೇ ಹಣಕಾಸು ಆಯೋಗದ ನಿರ್ಧರಣೆ |
| ಸ್ವಂತ ತೆರಿಗೆ ರಾಜಸ್ವ | 1,45,103 | 1,11,991 | 97,052 | (-)13.34 | (-)33.11 |
| ತೆರಿಗೆಯೇತರ ರಾಜಸ್ವ | 8,780 | 7,767 | 7,894 | 1.63 | (-)10.09 |

*ಆಕರ: 15ನೆಯ ಹಣಕಾಸು ಆಯೋಗದ ವರದಿ ಮತ್ತು ಹಣಕಾಸು ಲೆಕ್ಕಗಳು*

ಮೇಲಿನ ಕೋಷ್ಟಕದಿಂದ ನೋಡಿದಂತೆ, ಸ್ವಂತ ತೆರಿಗೆ ಆದಾಯ ಮತ್ತು ತೆರಿಗೆಯೇತರ ಆದಾಯಕ್ಕೆ ಸಂಬಂಧಿಸಿದಂತೆ ಹದಿನೈದನೇ ಹಣಕಾಸು ಆಯೋಗದ ನಿರೀಕ್ಷೆಯು ವಾಸ್ತವಾಂಶಗಳು 10 ರಿಂದ 33 ಪ್ರತಿಶತದಷ್ಟು ವ್ಯತ್ಯಾಸದೊಂದಿಗೆ ಸಾಧಿಸಲಾಗಿಲ್ಲ. ಆದರೂ, ತೆರಿಗೆಯೇತರ ಆದಾಯದ ಆಯವ್ಯಯ

[13] ಇತರೆ ಸಾಲಗಳು ಮರಳಿ ಮರಳಿಸುವ ಹೊರಗಿನ ಸಾಲಗಳನ್ನು ಒಳಗೊಂಡಿದೆ

ಪ್ರಕ್ಷೇಪಗಳ ಮತ್ತು ವಾಸ್ತವಾಂಶಗಳ ವ್ಯತ್ಯಾಸವು ಶೇಕಡ 1.63ರಷ್ಟು ಹೆಚ್ಚಾಗಿದ್ದು, ಇದು ಬಯಸಿದ ಗುರಿಯನ್ನು ಸಾಧಿಸಿರುವುದನ್ನು ಸೂಚಿಸುತ್ತದೆ. ಸ್ವಂತ ತೆರಿಗೆಗೆ ಸಂಬಂಧಿಸಿದಂತೆ ಇದನ್ನು ಸಾಧಿಸಲಾಗಿಲ್ಲ. ಇದು ಮುಖ್ಯವಾಗಿ ಕೋವಿಡ್–19 ಹೇರಿದ ಲಾಕ್‌ಡೌನ್ ನಿಂದಾಗಿದೆ. ರಾಜಸ್ವ ಕೊರತೆಯಿಂದ ರಕ್ಷಿಸಿಕೊಳ್ಳಲು ರಾಜ್ಯವು ಮಾರುಕಟ್ಟೆ ಸಾಲಗಳನ್ನು ಪಡೆದುಕೊಂಡಿದೆ.

ಆರ್ಥಿಕ ಇಲಾಖೆಯು ಕೋವಿಡ್–19 ಸಾಂಕ್ರಾಮಿಕ ಪರಿಸ್ಥಿತಿಯಿಂದಾಗಿ ಆದಾಯದ ಸ್ವೀಕೃತಿಗಳಲ್ಲಿ ಕುಸಿತವಾಗಿದೆ ಎಂದು ಉತ್ತರಿಸಿದೆ. (ಡಿಸೆಂಬರ್ 2021)

## 2.5 ಸಂಪನ್ಮೂಲಗಳ ಅನ್ವಯ

ಪ್ರಮುಖ ಸಾರ್ವಜನಿಕ ವೆಚ್ಚದ ಹೊಣೆಗಾರಿಕೆಯು ಸರಕಾರದ್ದೇ ಆದ್ದರಿಂದ ಸರ್ಕಾರದ ಮಟ್ಟದಲ್ಲಿ ವೆಚ್ಚದ ಹಂಚಿಕೆಯ ವಿಶ್ಲೇಷಣೆಯು ಮಹತ್ವವನ್ನು ಪಡೆದುಕೊಳ್ಳುತ್ತದೆ. ವೆಚ್ಚವು ಹಣಕಾಸಿನ ಹೊಣೆಗಾರಿಕೆಯ ಶಾಸನಗಳ ಚೌಕಟ್ಟಿನೊಳಗಿರಬೇಕಾಗಿದೆ. ಆದ್ದರಿಂದ, ರಾಜ್ಯ ಮಟ್ಟದಲ್ಲಿ ನಡೆಯುವ ಹಣಕಾಸಿನ ತಿದ್ದುಪಡಿ ಮತ್ತು ಬಲವರ್ಧನೆಯ ಪ್ರಕ್ರಿಯೆಯು ವಿಶೇಷವಾಗಿ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳ ಅಭಿವೃದ್ಧಿಗೆ ಉದ್ದೇಶಿಸಲಾದ ವೆಚ್ಚಗಳನ್ನು ಕಡೆಗಣಿಸಲಾಗಿಲ್ಲ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು.

ವಿವೇಚನಾಶೀಲ ಹಣಕಾಸಿನ ನಿರ್ವಹಣೆಯು ರಾಜಸ್ವ ವೆಚ್ಚಕ್ಕಿಂತಲು ಹೆಚ್ಚು ರಾಜಸ್ವ ಸ್ವೀಕೃತಿಗಳನ್ನು ಸಂಗ್ರಹಿಸಿ ಉಳಿಕೆಯನ್ನು ಸಾಧಿಸುವ ಗುರಿಯನ್ನು ಹೊಂದಿರಬೇಕು. ಸಾಲವಾಗಿ ತಂದ ಹಣವನ್ನು ನೇರವಾಗಿ ಆದಾಯವನ್ನು ಹುಟ್ಟುಹಾಕುವ ಅಥವ ಪರೋಕ್ಷವಾಗಿ ಉತ್ಪಾದನೆಗೆ ಕಾರಣವಾಗುವ ಉದ್ದೇಶಗಳಿಗೆ ಬಳಸುವುದರಿಂದ ತೆರಿಗೆ ಅಥವಾ ತೆರಿಗೆಯೇತರ ಆದಾಯಗಳ ಸೃಷ್ಟಿಯಾಗಿ ಅದನ್ನು ಋಣಸೇವೆ ಮತ್ತು ಸಾಲಗಳ ಮರುಪಾವತಿಗಾಗಿ ಬಳಸಬಹುದು.

### *2.5.1 ವೆಚ್ಚದ ಬೆಳವಣಿಗೆ ಮತ್ತು ಸಂಯೋಜನೆ*

2016–17ರಿಂದ 2020–21ರವರೆಗಿನ ಐದು ವರ್ಷಗಳ ಅವಧಿಯಲ್ಲಿ ಒಟ್ಟು ವೆಚ್ಚದ ಮೂಲಭೂತ ಪ್ರಮಿತಿಗಳು, ರಾಜಸ್ವ, ಬಂಡವಾಳ, ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ ಅದರ ಸಂಯೋಜನೆ ಮತ್ತು ರಾಒಆಉದೊಂದಿಗೆ ಅವುಗಳ ಹೋಲಿಕೆಯನ್ನು **ಕೋಷ್ಟಕ–2.12**ರಲ್ಲಿ ಒದಗಿಸಲಾಗಿದೆ.

**ಕೋಷ್ಟಕ–2.12: ಒಟ್ಟುವೆಚ್ಚ – ಪ್ರವೃತ್ತಿಗಳು ಮತ್ತು ಸಂಯೋಜನೆ**

(₹ ಕೋಟಿಗಳಲ್ಲಿ)

| ಪ್ರಮಿತಿಗಳು | 2016–17 | 2017–18 | 2018–19 | 2019–20 | 2020–21 |
|---|---|---|---|---|---|
| ಒಟ್ಟು ವೆಚ್ಚ | 1,62,005 | 1,78,242 | 2,03,446 | 2,13,857 | 2,24,129 |
| ರಾಜಸ್ವ ವೆಚ್ಚ | 1,31,921 | 1,42,482 | 1,64,300 | 1,74,258 | 1,76,054 |
| ಬಂಡವಾಳ ವೆಚ್ಚ | 28,150 | 30,667 | 34,659 | 35,530 | 45,406 |
| ಸಾಲಗಳು ಮತ್ತು ಮುಂಗಡಗಳು | 1,934 | 5,093 | 4,487 | 4,069 | 2,669 |
| ರಾ ಒ ಆಂ ಉ ದ ಶೇಕಡಾವಾರಾಗಿ | | | | | |
| ಒಟ್ಟು ವೆಚ್ಚ/ರಾ ಒ ಆಂ ಉ | 13.42 | 13.33 | 13.65 | 13.13 | 12.43 |
| ರಾಜಸ್ವ ವೆಚ್ಚ/ ರಾ ಒ ಆಂ ಉ | 10.92 | 10.66 | 11.02 | 10.70 | 9.76 |
| ಬಂಡವಾಳ ವೆಚ್ಚ/ ರಾ ಒ ಆಂ ಉ | 2.33 | 2.93 | 2.33 | 2.18 | 2.52 |
| ಸಾಲಗಳು ಮತ್ತು ಮುಂಗಡಗಳು/ ರಾ ಒ ಆಂ ಉ | 0.16 | 0.38 | 0.30 | 0.25 | 0.15 |

*ಆಕರ: ಹಣಕಾಸು ಲೆಕ್ಕಗಳು*

2016–17 ರಿಂದ 2020–21ರ ಅವಧಿಯಲ್ಲಿ ಸರಾಸರಿಯಾಗಿ ಒಟ್ಟು ವೆಚ್ಚದ ಶೇಕಡ 80ರಷ್ಟು ರಾಜಸ್ವ ಲೆಕ್ಕದಲ್ಲಿದೆ. 2020–21ರಲ್ಲಿ ಇದು ಶೇಕಡ 79ರಷ್ಟಿದ್ದು, ಬಂಡವಾಳ ವೆಚ್ಚದ (ಸಾಲಗಳು ಮತ್ತು ಮುಂಗಡಗಳು ಸೇರಿದಂತೆ) ಪಾಲು ಶೇಕಡ 21ರಷ್ಟಿತ್ತು. 2016–17 ರಿಂದ 2020–21ರವರೆಗಿನ ರಾಜಸ್ವ ವೆಚ್ಚ, ಬಂಡವಾಳ ವೆಚ್ಚ ಮತ್ತು ಸಾಲಗಳು ಮತ್ತು ಮುಂಗಡಗಳ ಪಾಲನ್ನು **ನಕ್ಷೆ–2.7**ರಲ್ಲಿ ತೋರಿಸಲಾಗಿದೆ.

**ನಕ್ಷೆ–2.7: ಒಟ್ಟು ಖರ್ಚು–ಅದರ ಘಟಕಗಳ ಪಾಲು ಪ್ರವೃತ್ತಿಗಳು**




*ಆಕರ: ಹಣಕಾಸು ಲೆಕ್ಕಗಳು*

ಸಾಮಾನ್ಯ, ಸಾಮಾಜಿಕ, ಆರ್ಥಿಕ, ಸಾಲಗಳು ಮತ್ತು ಮುಂಗಡಗಳು ಮತ್ತು ಸಹಾಯಧನದ ಅಡಿಯಲ್ಲಿನ ಚಟುವಟಿಕೆಗಳ ಮೂಲಕ ಒಟ್ಟು ವೆಚ್ಚದ ಪ್ರವೃತ್ತಿಗಳನ್ನು **ನಕ್ಷೆ–2.8**ರಲ್ಲಿ ತೋರಿಸಲಾಗಿದೆ.

**ನಕ್ಷೆ–2.8: ಒಟ್ಟು ಖರ್ಚು–ಚಟುವಟಿಕೆಗಳ ವೆಚ್ಚಗಳು**




*ಆಕರ: ಹಣಕಾಸು ಲೆಕ್ಕಗಳು*

2016–17ರಿಂದ 2020–21ರ ಅವಧಿಯಲ್ಲಿ ಈ ಘಟಕಗಳ ಸಾಪೇಕ್ಷ ಪಾಲು ಕನಿಷ್ಠ ಅಂತರ ವರ್ಷದ ವ್ಯತ್ಯಾಸಗಳೊಂದಿಗೆ ಸ್ಥಿರತೆಯನ್ನು ಪ್ರದರ್ಶಿಸಿದೆ.

### *2.5.2 ರಾಜಸ್ವ ವೆಚ್ಚ*

ಪ್ರಸ್ತುತ ಮಟ್ಟದ ಸೇವೆಗಳು ಮತ್ತು ಹಿಂದಿನ ಬಾಧ್ಯತೆಯ ಪಾವತಿಯನ್ನು ನಿರ್ವಹಿಸಲು ರಾಜಸ್ವ ವೆಚ್ಚವನ್ನು ಭರಿಸಲಾಗುವುದು.

ರಾಜಸ್ವ ವೆಚ್ಚವು ವೇತನಗಳು ಮತ್ತು ಸಂಬಳಗಳು, ಬಡ್ಡಿ ಪಾವತಿಗಳು, ಪಿಂಚಣಿಗಳು, ಕಾರ್ಯ ನಿರ್ವಹಣೆ ಮತ್ತು ಬಂಡವಾಳ ಕಾಮಗಾರಿಗಳ ನಿರ್ವಹಣೆಗೆ ಖರ್ಚು, ಸಹಾಯಧನಗಳು ಮತ್ತು ಸ್ಥಳೀಯ ಸಂಸ್ಥೆಗಳು, ಸಹಕಾರಿ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ಇತರರಿಗೆ ವರ್ಗಾವಣೆ ಮಾಡಲಾದ ವೆಚ್ಚವನ್ನು

ಒಳಗೊಂಡಿರುತ್ತದೆ. ರಾಜಸ್ವ ವೆಚ್ಚವನ್ನು ಸಾಮಾನ್ಯ ಸೇವೆಗಳು, ಸಾಮಾಜಿಕ ಸೇವೆಗಳು ಮತ್ತು ಆರ್ಥಿಕ ಸೇವೆಗಳಂತಹ ವಿವಿಧ ಕಾರ್ಯ ಪ್ರಧಾನ ವರ್ಗಗಳಾಗಿ ವಿಂಗಡಿಸಲಾಗಿದೆ. ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಮೇಲಿನ ವೆಚ್ಚವನ್ನು ಭೌತಿಕ ಮೂಲಸೌಕರ್ಯ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಯನ್ನು ಸೃಷ್ಟಿಸಲು ಭರಿಸಲಾಗುತ್ತದೆ ಮತ್ತು ಆದ್ದರಿಂದ ಉತ್ಪಾದಕ ವೆಚ್ಚವೆಂದು ಪರಿಗಣಿಸಲಾಗುತ್ತದೆ, ಆದರೆ ಸಾಮಾನ್ಯ ಸೇವೆಗಳು ಮತ್ತು ಋಣ ಸೇವೆಯ ಮೇಲಿನ ವೆಚ್ಚವನ್ನು ಅನುತ್ಪಾದಕವೆಂದು ಪರಿಗಣಿಸಲಾಗುತ್ತದೆ.

ಒಟ್ಟಾರೆ ರಾಜಸ್ವ ವೆಚ್ಚ, ಅದರ ವೃದ್ಧಿಯ ದರ, ಒಟ್ಟು ವೆಚ್ಚಕ್ಕೆ ಅದರ ಅನುಪಾತ ಮತ್ತು ರಾಒಆಂಉ ಮತ್ತು ರಾಜಸ್ವ ಸ್ವೀಕೃತಿಗಳ ಅನುಪಾತವನ್ನು **ಕೋಷ್ಟಕ–2.13**ರಲ್ಲಿ ಸೂಚಿಸಲಾಗಿದೆ ಮತ್ತು 2020–21ಕ್ಕೆ ಸಂಬಂಧಿಸಿದ ರಾಜಸ್ವ ವೆಚ್ಚದ ವಲಯ ಹಂಚಿಕೆಯನ್ನು **ನಕ್ಷೆ–2.9**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.13: ಆದಾಯವೆಚ್ಚ – ಮೂಲ ಪ್ರಮಿತಿಗಳು**

(₹ ಕೋಟಿಗಳಲ್ಲಿ)

| ಪ್ರಮಿತಿಗಳು | 2016–17 | 2017–18 | 2018–19 | 2019–20 | 2020–21 |
|---|---|---|---|---|---|
| ಒಟ್ಟು ವೆಚ್ಚ | 1,62,005 | 1,78,242 | 2,03,446 | 2,13,857 | 2,24,129 |
| ರಾಜಸ್ವ ವೆಚ್ಚ | 1,31,921 | 1,42,482 | 1,64,300 | 1,74,258 | 1,76,054 |
| ರಾಜಸ್ವ ವೆಚ್ಚದ ವೃದ್ಧಿಯ ದರ (ಶೇಕಡ) | 12.73 | 8.01 | 15.31 | 6.06 | 1.03 |
| ಒಟ್ಟು ವೆಚ್ಚಕ್ಕೆ ಶೇಕಡಾವಾರಾಗಿ ರಾಜಸ್ವ ವೆಚ್ಚ | 81.43 | 79.94 | 80.76 | 81.48 | 78.55 |
| ರಾಜಸ್ವ ವೆಚ್ಚ/ರಾಒಆಂಉ (ಶೇಕಡ) | 10.91 | 10.50 | 10.64 | 10.26 | 9.76 |
| ರಾಜಸ್ವ ಸ್ವೀಕೃತಿಗಳ ಶೇಕಡಾವಾರಾಗಿ ರಾಜಸ್ವ ವೆಚ್ಚ | 99.03 | 96.93 | 99.59 | 99.32 | 112.34 |
| ರಾಜಸ್ವ ವೆಚ್ಚದ ಪ್ಲವನತೆ | | | | | |
| ರಾಒಆಂಉ (ಅನುಪಾತ) | 0.81 | 0.65 | 1.11 | 0.60 | 0.10 |
| ರಾಜಸ್ವ ಸ್ವೀಕೃತಿಗಳು (ಅನುಪಾತ) | 1.05 | 0.77 | 1.25 | 0.96 | 0.10 |

*ಆಕರ: ಸಂಬಂಧಿತ ವರ್ಷಗಳ ಹಣಕಾಸು ಲೆಕ್ಕಗಳು*

ರಾಜಸ್ವ ವೆಚ್ಚವು 2016–17ರಲ್ಲಿದ್ದ ₹1,31,921 ಕೋಟಿಗಳಿಂದ 2020–21ರಲ್ಲಿ ₹1,76,054 ಕೋಟಿಗಳಿಗೆ ಏರಿಕೆಯಾಗಿದ್ದು, ಶೇಕಡ. 33ರಷ್ಟು ಹೆಚ್ಚಳವಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ, ಬಡ್ಡಿಪಾವತಿ (ಶೇಕಡ 17.74), ಸಹಾಯಧನ (ಶೇಕಡ 5.12), ಪಿಂಚಣಿ (ಶೇಕಡ 2.90), ವೇತನ (ಶೇಕಡ 1.62) ಇತ್ಯಾದಿಗಳ ಹೆಚ್ಚಳದಿಂದಾಗಿ ಶೇಕಡ ಒಂದರಷ್ಟು ಅಧಿಕವಾಗಿದೆ.

**ನಕ್ಷೆ–2.9: ರಾಜಸ್ವ ವೆಚ್ಚದ ವಿಭಾಗವಾರು ವಿತರಣೆ**




ಆಕರ: ಹಣಕಾಸು ಲೆಕ್ಕಗಳು

2020–21ರಲ್ಲಿ, ರಾಜಸ್ವ ವೆಚ್ಚದ ವೃದ್ಧಿಯ ದರದಲ್ಲಿನ ಇಳಿಕೆಯಿಂದಾಗಿ ರಾಒಆಂಉದ ಶೇಕಡಾವಾರು ರಾಜಸ್ವ ವೆಚ್ಚವು ಕುಸಿದಿದೆ. ಆದಾಗ್ಯೂ, ಸ್ಪಷ್ಟವಾಗಿ ಹೇಳುವುದಾದರೆ ಹಿಂದಿನ ವರ್ಷಕ್ಕಿಂತ ರಾಜಸ್ವ ವೆಚ್ಚದಲ್ಲಿ ₹1,796 ಕೋಟಿಗಳಷ್ಟು (ಶೇಕಡ 1.03) ಹೆಚ್ಚಳವಾಗಿದೆ. ಮಧ್ಯಮಾವಧಿ ವಿತ್ತೀಯ ಯೋಜನೆಯ (2019–23) ಅಂದಾಜಿಗೆ (₹1,99,240 ಕೋಟಿಗಳು) ಹೋಲಿಸಿದರೆ ರಾಜಸ್ವ ವೆಚ್ಚವು ₹23,186 ಕೋಟಿಗಳಷ್ಟು ಕಡಿಮೆಯಾಗಿದೆ. 2020–21ರಲ್ಲಿ, ರಾಜಸ್ವ ವೆಚ್ಚ/ ರಾಜಸ್ವ ಸ್ವೀಕೃತಿಗಳ ದರವು 112.34ಕ್ಕೆ ಏರಿಕೆಯಾಗಿದೆ ಮತ್ತು ಇದು 2016–17 ರಿಂದ 2019–20ರ ಅವಧಿಗೆ 99ರಷ್ಟಿತ್ತು. ಇದರ ಪರಿಣಾಮವಾಗಿ, ರಾಜ್ಯವು 2004–05ರ ನಂತರ ಮೊದಲ ಬಾರಿಗೆ ರಾಜಸ್ವ ಕೊರತೆಯನ್ನು ಕಂಡಿತು.

### 2.5.2.1 ರಾಜಸ್ವ ವೆಚ್ಚದಲ್ಲಿ ಪ್ರಮುಖ ಬದಲಾವಣೆಗಳು

ಪ್ರಸ್ತುತ ವರ್ಷ ಮತ್ತು ಹಿಂದಿನ ವರ್ಷದಲ್ಲಿ ರಾಜ್ಯದ ಆದಾಯ ವೆಚ್ಚಗಳಿಗೆ ಸಂಬಂಧಿಸಿದಂತೆ ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿನ ಗಮನಾರ್ಹ ವ್ಯತ್ಯಾಸಗಳನ್ನು **ಕೋಷ್ಟಕ–2.14** ವಿವರಿಸುತ್ತದೆ.

**ಕೋಷ್ಟಕ–2.14: 2019–20ಕ್ಕೆ ಹೋಲಿಸಿದರೆ 2020–21ರಲ್ಲಿ ರಾಜಸ್ವ ವೆಚ್ಚದಲ್ಲಿನ ವ್ಯತ್ಯಾಸ**

(₹ ಕೋಟಿಗಳಲ್ಲಿ)

| ಪ್ರಧಾನ ಲೆಕ್ಕ ಶೀರ್ಷಿಕೆ | 2019–20 | 2020–21 | ಏರಿಕೆ (+)/ ಇಳಿಕೆ (–) ಕೋಟಿಗಳಲ್ಲಿ ಮತ್ತು ಶೇಕಡ |
|---|---|---|---|
| 2075–ಇತರೆ ಸಾಮಾನ್ಯ ಸೇವೆಗಳು | 123.07 | 128.18 | 5.11<br>4.15 |
| 2215–ನೀರು ಸರಬರಾಜು ಮತ್ತು ನೈರ್ಮಲ್ಯ | 1,736.33 | 1,495.56 | (–)240.77<br>(–)13.87 |
| 2216–ವಸತಿ | 3,223.01 | 2,076.96 | (–)1,146.05<br>(–)35.56 |
| 2225–ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರು | 7,167.25 | 6,292.79 | (–)874.46<br>(–)12.20 |
| 2236–ಪೌಷ್ಟಿಕಾಂಶ | 1,890.21 | 1,946.98 | 56.77<br>3.00 |
| 2501–ಗ್ರಾಮೀಣಾಭಿವೃದ್ಧಿಗೆ ವಿಶೇಷ ಕಾರ್ಯಕ್ರಮ | 261.18 | 335.45 | 74.27<br>(28.44) |
| 2505–ಗ್ರಾಮೀಣಾಭಿವೃದ್ಧಿ | 1,818.52 | 1,818.21 | (–)0.31<br>(–)0.02 |
| 2515–ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ | 5,179.96 | 6,970.56 | 1,790.60<br>34.57 |
| 2575–ಇತರೆ ವಿಶೇಷ ಪ್ರದೇಶ ಕಾರ್ಯಕ್ರಮ | 225.81 | 159.45 | (–)66.36<br>(–)29.28 |

*ಆಕರ: ಹಣಕಾಸು ಲೆಕ್ಕಗಳು*

ಹಿಂದಿನ ವರ್ಷಕ್ಕೆ ಹೋಲಿಸಿದರೆ ವಸತಿ ಮತ್ತು ಇತರ ವಿಶೇಷ ಪ್ರದೇಶಗಳ ಕಾರ್ಯಕ್ರಮಗಳಡಿಯಲ್ಲಿ ರಾಜಸ್ವ ವೆಚ್ಚದ ಶೇಕಡಾವಾರು ವರ್ಷದಲ್ಲಿ ಇಳಿಮುಖವಾಗಿದ್ದರೂ, ಗ್ರಾಮೀಣಾಭಿವೃದ್ಧಿ ಮತ್ತು ಇತರ ಗ್ರಾಮೀಣಾ ಅಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮದ ಅಡಿಯಲ್ಲಿ ಇದು ಹೆಚ್ಚಾಯಿತು.

### 2.5.2.2 ಉದ್ದೇಶ ಶೀರ್ಷಿಕೆ ಅಡಿಯಲ್ಲಿನ ವೆಚ್ಚ

ಹಣಕಾಸು ಲೆಕ್ಕಗಳು ಒಳಶೀರ್ಷಿಕೆ ಹಂತದವರೆಗಿನ ವಹಿವಾಟುಗಳನ್ನು ಮಾತ್ರ ತೋರಿಸುತ್ತವೆ. ಆದ್ದರಿಂದ, ಪಟ್ಟಿ ಮಾಡಲಾದ 117 ಉದ್ದೇಶ ಶೀರ್ಷಿಕೆಗಳಲ್ಲಿ, 22 ಉದ್ದೇಶ ಶೀರ್ಷಿಕೆಗಳಲ್ಲಿ ವಾಸ್ತವಿಕ ಬಾಬ್ತುಗಳ ಮೇಲೆ ಮಾಡಿದ ವೆಚ್ಚದ (₹100 ಕೋಟಿಗಿಂತ ಹೆಚ್ಚು) ಆಯವ್ಯಯ ಹಂಚಿಕೆ ಮತ್ತು ವೆಚ್ಚದ ವ್ಯಾಪ್ತಿಯನ್ನು **ಕೋಷ್ಟಕ–2.15**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.15: ಉದ್ದೇಶ ಶೀರ್ಷಿಕೆವಾರು ಆಯವ್ಯಯ ಅನುಮೋದನೆಗೆ ಪ್ರತಿಯಾಗಿ ವೆಚ್ಚ**

(₹ ಕೋಟಿಗಳಲ್ಲಿ)

| ಶೀರ್ಷಿಕೆ | ಆಯವ್ಯಯ | ವೆಚ್ಚ | ಬಳಕೆ ಶೇಕಡಾವಾರು |
|---|---|---|---|
| ವೇತನಗಳು* | 16,532.41 | 14,783 | 89.41 |
| ದಿನಗೂಲಿಗಳು | 220.41 | 192.42 | 87.30 |
| ಬಂಡವಾಳ ಆಸ್ತಿಗಳ ರಚನೆಗೆ ಅನುದಾನಗಳು | 1,977.42 | 1,440.98 | 72.87 |
| ಗುತ್ತಿಗೆ/ಹೊರಗುತ್ತಿಗೆ | 1,035.67 | 887.35 | 85.68 |
| ಸಾಮಾನ್ಯ ವೆಚ್ಚಗಳು | 1,490.71 | 1,180.93 | 79.22 |
| ಇತರೆ ವೆಚ್ಚಗಳು | 9,583.63 | 7,877.83 | 82.20 |
| ಕಟ್ಟಡ ವೆಚ್ಚಗಳು | 387.77 | 365.36 | 94.22 |
| ಸಹಾಯಾನುದಾನ ವೇತನಗಳು | 5,384.72 | 4,883.45 | 90.69 |
| ಸಹಾಯಾನುದಾನ ಅನುದಾನ | 3,546.73 | 3,299.23 | 93.02 |
| ಸಹಾಯಧನ | 18,689.23 | 18,431.82 | 98.62 |
| ವಿದ್ಯಾರ್ಥಿವೇತನಗಳು ಮತ್ತು ಪ್ರೋತ್ಸಾಹಕಗಳು | 554.82 | 519.27 | 93.59 |
| ಬಂಡವಾಳ ವೆಚ್ಚಗಳು | 819.65 | 814.31 | 99.35 |
| ಭಾರಿ ಕಾಮಗಾರಿಗಳು | 1,496.54 | 1,608.85 | 107.50 |
| ಸಾರಿಗೆ ವೆಚ್ಚಗಳು | 367.57 | 374.61 | 101.92 |
| ನಿರ್ವಹಣಾ ವೆಚ್ಚಗಳು | 3,545.48 | 3,340.37 | 94.21 |
| ಸರಕುಗಳು ಮತ್ತು ಸರಬರಾಜು | 492.86 | 298.99 | 60.66 |
| ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳು | 19,235.38 | 19,216.38 | 99.90 |

*ಆಕರ : ಹಣಕಾಸು ಲೆಕ್ಕಗಳು*

** ಉದ್ದೇಶ ಶೀರ್ಷಿಕೆ ಕ್ರೋಢೀಕೃತ ಸಂಬಳಗಳು ಅಧಿಕಾರಿಗಳ ವೇತನ, ಸಿಬ್ಬಂದಿ ವೇತನ, ಮಧ್ಯಂತರ ಪರಿಹಾರ, ತುಟ್ಟಿಭತ್ಯೆ, ಇತರ ಭತ್ಯೆಗಳು, ವೈದ್ಯಕೀಯ ಭತ್ಯೆ ಮತ್ತು ವೈದ್ಯಕೀಯ ವೆಚ್ಚಗಳ ಮರುಪಾವತಿಯನ್ನು ಒಳಗೊಂಡಿರುತ್ತದೆ.*

ಒಟ್ಟು ₹2,65,220.73 ಕೋಟಿಗಳ ಆಯವ್ಯಯ ಅವಕಾಶದಲ್ಲಿ 2020–21ರಲ್ಲಿ ವಿವಿಧ ಉದ್ದೇಶ ಶೀರ್ಷಿಕೆಗಳ ಮೇಲಿನ ವಾಸ್ತವಿಕ ವೆಚ್ಚವು ₹2,42,694.49 ಕೋಟಿಗಳಾಗಿವೆ (ಶೇಕಡ 91.52). ಮೇಲೆ ತಿಳಿಸಿದ 22 ಉದ್ದೇಶ ಶೀರ್ಷಿಕೆಗಳಲ್ಲಿ, ಎರಡು ಉದ್ದೇಶ ಶೀರ್ಷಿಕೆಗಳು ತಮ್ಮ ಆಯವ್ಯಯ ಹಂಚಿಕೆಯನ್ನು ಮೀರಿದ್ದರೆ, 12 ಉದ್ದೇಶ ಶೀರ್ಷಿಕೆಗಳು ತಮ್ಮ ಹಂಚಿಕೆಯ 80ರಿಂದ 90 ಪ್ರತಿಶತಕ್ಕಿಂತ ಹೆಚ್ಚಿನದನ್ನು ಬಳಸಿಕೊಂಡಿವೆ. ಉಳಿದ ಮೂರು ಶೀರ್ಷಿಕೆಗಳು–ಸಾಮಗ್ರಿಗಳು ಮತ್ತು ಸರಬರಾಜುಗಳು, ಬಂಡವಾಳ ಆಸ್ತಿಗಳ ರಚನೆಗೆ ಅನುದಾನ ಮತ್ತು ಸಾಮಾನ್ಯ ವೆಚ್ಚಗಳು ಶೇಕಡ 61 ಮತ್ತು ಶೇಕಡ 79ರ ನಡುವೆ ಬಳಸಿಕೊಂಡಿವೆ.

### 2.5.2.3 ಬದ್ಧ ವೆಚ್ಚಗಳು

ಬಹುಪಾಲು ರಾಜಸ್ವ ವೆಚ್ಚಗಳು ಸಂಬಳ, ಬಡ್ಡಿಪಾವತಿ, ಪಿಂಚಣಿ, ಸಹಾಯಧನ ಇತ್ಯಾದಿಗಳ ಮೇಲಿನ ಬದ್ಧ ವೆಚ್ಚಗಳ ಸ್ವರೂಪದಲ್ಲಿದೆ. ಇವುಗಳ ಜೊತೆಗೆ, ಸಾಮಾಜಿಕ ಭದ್ರತಾ ಯೋಜನೆಗಳ ಅಡಿಯಲ್ಲಿ ಪಿಂಚಣಿಗಳು, ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಉಂಟಾಗುವ ಸಹಾಯಧನಗಳು, ಅನುದಾನಗಳಂತಹ ಇತರ ಕೆಲವು ಬಾಬ್ತುಗಳ ವೆಚ್ಚಗಳು ಸಹಾಯ ಮತ್ತು ಹಣಕಾಸಿನ ನೆರವು, ಆಡಳಿತಾತ್ಮಕ ವೆಚ್ಚಗಳು, ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಇತ್ಯಾದಿಗಳನ್ನು ಮಧ್ಯಂತರ ವಿತ್ತೀಯ ಯೋಜನೆ–2020–24ರಂತೆ ಬದ್ಧ ವೆಚ್ಚವೆಂದು ಪರಿಗಣಿಸಲಾಗುತ್ತದೆ. 2016–17ರಿಂದ 2020–21ರವರೆಗಿನ ಅವಧಿಯನ್ನು ಒಳಗೊಂಡಿರುವ ಈ ಘಟಕಗಳ ಮೇಲಿನ ವೆಚ್ಚವನ್ನು **ಕೋಷ್ಟಕ–2.16** ಮತ್ತು **ನಕ್ಷೆ–2.10**ರಲ್ಲಿ ಚಿತ್ರಿಸಲಾಗಿದೆ. ಬದ್ಧ ವೆಚ್ಚದಲ್ಲಿನ ಏರುಮುಖ ಪ್ರವೃತ್ತಿಯು ವೆಚ್ಚಗಳಿಗೆ ಆದ್ಯತೆ ನೀಡುವಲ್ಲಿ ಮತ್ತು ಸಾಮಾಜಿಕ ಮತ್ತು ಆರ್ಥಿಕ ಮೂಲ ಸೌಕರ್ಯಗಳ ಬೆಳೆಯುತ್ತಿರುವ ಅಗತ್ಯಗಳನ್ನು ಪೂರೈಸಲು ಬಂಡವಾಳ ಹೂಡಿಕೆಗಳನ್ನು ಹೆಚ್ಚಿಸುವಲ್ಲಿ ರಾಜ್ಯದ ಕುಶಲತೆಯ ಮೇಲೆ ಪರಿಣಾಮ ಬೀರುತ್ತದೆ.

ಸ್ವೀಕೃತಿಗಳಲ್ಲಿನ ಇಳಿಕೆ ಮತ್ತು ಬದ್ಧ ವೆಚ್ಚಗಳ ಏರಿಕೆಯಿಂದಾಗಿ, ಹಣಕಾಸು ಜವಾಬ್ದಾರಿ ಮತ್ತು ಆಯವ್ಯಯ ನಿರ್ವಹಣಾ ಪ್ರಮಿತಿಗಳನ್ನು ಅನುಸರಿಸಲು ಕಷ್ಟವಾಗುತ್ತದೆ ಎಂದು ಆರ್ಥಿಕ ನಿರ್ವಹಣಾ ಸಮಿತಿಯು ಗಮನಿಸಿದೆ. ಆದ್ದರಿಂದ ಯೋಜನೆಗಳನ್ನು ತರ್ಕಬದ್ಧಗೊಳಿಸಲು, ಪುನರ್ರಚಿಸಲು, ಕೆಲವು ಇಲಾಖೆಗಳನ್ನು ವಿಲೀನಗೊಳಿಸಲು ಮತ್ತು ವಿವಿಧ ಇಲಾಖೆಗಳಾದ್ಯಂತ ಕೆಲವು ಅನಗತ್ಯ ಹುದ್ದೆಗಳನ್ನು ರದ್ದುಗೊಳಿಸಲು ಅದು ಸೂಚಿಸಿತು.

**ಕೋಷ್ಟಕ–2.16: ಬದ್ಧ ವೆಚ್ಚದ ಅಂಗಗಳು**

(₹ ಕೋಟಿಗಳಲ್ಲಿ)

| | 2016–17 | 2017–18 | 2018–19 | 2019–20 | 2020–21 |
|---|---|---|---|---|---|
| ವೇತನಗಳು | 9,790 | 10,546 | 13,315 | 14,561 | 14,783 |
| ಪಿಆರ್ಐಗಳ ವೇತನಗಳು (ಅನುದಾನಗಳು) | 11,918 | 12,412 | 14,709 | 16,960 | 17,250 |
| ಬಡ್ಡಿ ಪಾವತಿಗಳು# | 12,850 | 14,973 | 16,614 | 19,903 | 23,433 |
| ಪಿಂಚಣಿಗಳು | 11,295 | 11,684 | 15,109 | 18,404 | 18,936 |
| ಸಹಾಯಧನಗಳು@ | 14,387 | 14,148 | 15,400 | 17,534 | 18,432 |
| ಸಹಾಯಾನುದಾನ ಮತ್ತು ಹಣಕಾಸು ನೆರವು | 13,163 | 11,812 | 24,888 | 19,023 | 18,312 |
| ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ* | 23,466 | 25,131 | 26,720 | 27,514 | 26,537 |
| ಸಾಮಾಜಿಕ ಭದ್ರತೆ ಪಿಂಚಣಿ | 2,503 | 4,055 | 5,460 | 7,243 | 7,603 |
| ಆಡಳಿತಾತ್ಮಕ ವೆಚ್ಚಗಳು | 1,966 | 2,404 | 2,136 | 2,467 | 2,610 |
| ದಿನಗೂಲಿಗಳು ಮತ್ತು ಗುತ್ತಿಗೆ/ಹೊರಗುತ್ತಿಗೆ | – | 567 | 714 | 923 | 1,080 |
| ಒಟ್ಟು | **1,01,338** | **1,07,732** | **1,35,065** | **1,44,532** | **1,48,978** |
| ರಾಜಸ್ವ ಸ್ವೀಕೃತಿಗಳ ಶೇಕಡಾವಾರಾಗಿ | | | | | |
| ವೇತನಗಳು | 7.35 | 7.17 | 8.07 | 8.30 | 9.43 |
| ಪಿಆರ್ಐಗಳ ವೇತನಗಳು (ಅನುದಾನಗಳು) | 8.95 | 8.44 | 8.92 | 9.67 | 11.01 |
| ಬಡ್ಡಿ ಪಾವತಿಗಳು# | 9.65 | 10.18 | 10.07 | 11.34 | 14.95 |
| ಪಿಂಚಣಿಗಳು | 8.48 | 7.95 | 9.16 | 10.49 | 12.08 |
| ಸಹಾಯಧನಗಳು@ | 10.80 | 9.62 | 9.33 | 9.99 | 11.76 |
| ಸಹಾಯಾನುದಾನ ಮತ್ತು ಹಣಕಾಸು ನೆರವು | 9.88 | 8.04 | 15.08 | 10.84 | 11.68 |
| ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ* | 17.61 | 17.10 | 16.20 | 15.68 | 16.93 |
| ಸಾಮಾಜಿಕ ಭದ್ರತೆ ಪಿಂಚಣಿ | 1.88 | 2.76 | 3.31 | 4.13 | 4.85 |
| ಆಡಳಿತಾತ್ಮಕ ವೆಚ್ಚಗಳು | 1.47 | 1.64 | 1.29 | 1.41 | 1.67 |
| ದಿನಗೂಲಿಗಳು ಮತ್ತು ಗುತ್ತಿಗೆ/ಹೊರಗುತ್ತಿಗೆ | – | 0.39 | 0.43 | 0.53 | 0.69 |
| ಒಟ್ಟು | **76.07** | **73.29** | **81.86** | **82.38** | **95.05** |
| ರಾಜಸ್ವ ವೆಚ್ಚದ ಶೇಕಡಾವಾರಾಗಿ | | | | | |
| ವೇತನಗಳು | 7.42 | 7.40 | 8.10 | 8.36 | 8.40 |
| ಪಿಆರ್ಐಗಳ ವೇತನಗಳು (ಅನುದಾನಗಳು) | 9.03 | 8.71 | 8.96 | 9.73 | 9.80 |
| ಬಡ್ಡಿ ಪಾವತಿಗಳು# | 9.74 | 10.51 | 10.11 | 11.42 | 13.31 |
| ಪಿಂಚಣಗಳು | 8.56 | 8.20 | 9.20 | 10.56 | 10.76 |
| ಸಹಾಯಧನಗಳು@ | 10.91 | 9.93 | 9.37 | 10.06 | 10.47 |
| ಸಹಾಯಾನುದಾನ ಮತ್ತು ಹಣಕಾಸು ನೆರವು | 9.98 | 8.29 | 15.15 | 10.92 | 10.40 |
| ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ* | 17.79 | 17.64 | 16.26 | 15.79 | 15.07 |
| ಸಾಮಾಜಿಕ ಭದ್ರತೆ ಪಿಂಚಣಿ | 1.90 | 2.84 | 3.32 | 4.16 | 4.32 |
| ಆಡಳಿತಾತ್ಮಕ ವೆಚ್ಚಗಳು | 1.49 | 1.69 | 1.30 | 1.41 | 1.48 |
| ದಿನಗೂಲಿಗಳು ಮತ್ತು ಗುತ್ತಿಗೆ/ಹೊರಗುತ್ತಿಗೆ | – | 0.40 | 0.43 | 0.53 | 0.61 |
| ವೇತನಗಳು | **76.82** | **75.61** | **82.20** | **82.94** | **84.62** |

*ಆಕರ: ಹಣಕಾಸು ಲೆಕ್ಕಗಳು*

# ಆಯವ್ಯಯ ಹೊರಗಿನ ಸಾಲಗಳ ಮೇಲಿನ ಬಡ್ಡಿಯನ್ನು ಒಳಗೊಂಡಿರುತ್ತದೆ.

@ ಹಣಕಾಸಿನ ಸಹಾಯದ ರೂಪದಲ್ಲಿ ಸಹಾಯಧನಗಳನ್ನು ಹೊರತುಪಡಿಸುತ್ತದೆ

* ಪಂಚಾಯತ್ ರಾಜ್‌ಗಳ ಸಂಬಳೇತರ ಬಾಬ್ತುಗಳು ಮತ್ತು ಪಂಚಾಯತ್ ರಾಜ್ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಇತರ ವೆಚ್ಚಗಳ ಬಾಬ್ತುಗಳನ್ನು ಒಳಗೊಂಡಿದೆ.

**ನಕ್ಷೆ–2.10: ರಾಜಸ್ವ ವೆಚ್ಚದಲ್ಲಿ ಬದ್ಧ ವೆಚ್ಚದ ಪಾಲು**




*ಆಕರ: ಹಣಕಾಸು ಲೆಕ್ಕಗಳು*

ಮೇಲಿನವುಗಳಿಂದ ನೋಡಬಹುದಾದಂತೆ, 2016–17ರಿಂದ 2020–21ರ ಅವಧಿಯಲ್ಲಿ ಬದ್ಧ ವೆಚ್ಚವು ರಾಜಸ್ವ ವೆಚ್ಚದ ಶೇಕಡ 75ರಿಂದ ಶೇಕಡ 85ರ ನಡುವೆ ಇದ್ದಿತು. 2016–17ರಿಂದ 2020–21ರಲ್ಲಿ ಬದ್ಧವಲ್ಲದ ವೆಚ್ಚವು ಶೇಕಡ 15 ಮತ್ತು 25ರ ನಡುವೆ ಇತ್ತು. 2020–21ರಲ್ಲಿ ಇತರ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳಿಗೆ ಲಭ್ಯವಿರುವ ರಾಜಸ್ವ ವೆಚ್ಚವು ಶೇಕಡ 16 ಮತ್ತು ಒಟ್ಟು ವೆಚ್ಚದ ಶೇಕಡ 13ರಷ್ಟಿತ್ತು.

### 2.5.2.4 ವೇತನಗಳು ಮತ್ತು ಮಜೂರಿಗಳು

ವೇತನದ ಮೇಲಿನ ವೆಚ್ಚವು 2016–17ರಲ್ಲಿದ್ದ ₹21,708 ಕೋಟಿಗಳಿಂದ 2020–21ರಲ್ಲಿ ₹32,033 ಕೋಟಿಗಳಿಗೆ ಏರಿಕೆಯಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡ ಎರಡರಷ್ಟು ಅಧಿಕವಾಗಿದೆ. ಇದು ಪಂಚಾಯತ್ ರಾಜ್‌ಗಳ ಸಂಬಳವನ್ನು ಒಳಗೊಂಡಿರುತ್ತದೆ. ಆದರೆ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಸಂಬಳಗಳನ್ನು ಒಳಗೊಂಡಿಲ್ಲ. ಹೀಗಾಗಿ ಸಂಬಳದ ವೆಚ್ಚವನ್ನು ಕಡಿಮೆ ಹೇಳಿದಂತಾಗಿದೆ. ಇದು 2020–21ರಲ್ಲಿ ರಾಜಸ್ವ ವೆಚ್ಚದ ಶೇಕಡ 18ರಷ್ಟಿದೆ. 2020–21ರಲ್ಲಿ, ದೈನಂದಿನ ವೇತನ ಮತ್ತು ಗುತ್ತಿಗೆ/ಹೊರಗುತ್ತಿಗೆ ನೌಕರರ ಮೇಲಿನ ವೆಚ್ಚವು ₹1,079.77 ಕೋಟಿಯಷ್ಟಿತ್ತು. ಇದು ಹಿಂದಿನ ವರ್ಷಕ್ಕಿಂತ ₹157.14 ಕೋಟಿಯಷ್ಟು ಹೆಚ್ಚಾಗಿದೆ.

ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾದ ನಿಧಿಗಳು ಅನುದಾನದ ರೂಪದಲ್ಲಿರುತ್ತವೆ ಮತ್ತು ಹಣಕಾಸು ಲೆಕ್ಕಗಳು ಒಳಶೀರ್ಷಿಕೆ ವೆಚ್ಚವನ್ನು ಮಾತ್ರ ತೋರಿಸುವುದರಿಂದ ನಗರ ಸ್ಥಳೀಯ ಸಂಸ್ಥೆಗಳ ಸಂಬಳವನ್ನು ಪ್ರತ್ಯೇಕವಾಗಿ ಕಾಣಿಸಲಾಗುವುದಿಲ್ಲ ಎಂದು ಆರ್ಥಿಕ ಇಲಾಖೆ ಉತ್ತರಿಸಿದೆ (ಡಿಸೆಂಬರ್ 2021). ನಿರ್ಗಮನ ಸಮಾಲೋಚನೆಯಲ್ಲಿ (ಡಿಸೆಂಬರ್ 2021), 2022–23ರ ಹಣಕಾಸು ವರ್ಷದಿಂದ ನಗರ ಸ್ಥಳೀಯ ಸಂಸ್ಥೆಗಳ ವೇತನ ವೆಚ್ಚವನ್ನು ತೋರಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದೆ.

### 2.5.2.5 ಪಿಂಚಣಿಗಳು

2020–21ರಲ್ಲಿ ಪಿಂಚಣಿಗಳ ಮೇಲಿನ ವೆಚ್ಚವು ₹18,936 ಕೋಟಿಗಳಷ್ಟಿತ್ತು. ಹಿಂದಿನ ವರ್ಷಕ್ಕಿಂತ ವೆಚ್ಚದಲ್ಲಿ ₹532 ಕೋಟಿಗಳ ಅಲ್ಪ ಹೆಚ್ಚಳವಾಗಿದೆ.

- **ಹೊಸ ಪಿಂಚಣಿ ವ್ಯವಸ್ಥೆ**

01 ಏಪ್ರಿಲ್ 2006ರಂದು ಅಥವಾ ನಂತರ ರಾಜ್ಯ ಸರ್ಕಾರಿ ಸೇವೆಗೆ ಸೇರಿದ ಎಲ್ಲಾ ಉದ್ಯೋಗಿಗಳಿಗೆ ನಿರ್ಧಾರಿತ ವಂತಿಗೆ ಪಿಂಚಣಿ ಯೋಜನೆ (ಎನ್‌ಪಿಎಸ್) ಎಂಬ ಹೆಸರಿನ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗಿದ್ದು 01 ಏಪ್ರಿಲ್ 2010ರಿಂದ ಸಂಪೂರ್ಣವಾಗಿ ಕಾರ್ಯ ನಿರ್ವಹಿಸುತ್ತಿದೆ. ಯೋಜನೆಯನ್ನು ಕಾರ್ಯಗತಗೊಳಿಸಲು ಖಜಾನೆ ನಿರ್ದೇಶನಾಲಯದಲ್ಲಿ ಮೀಸಲಾದ ಎನ್‌ಪಿಎಸ್ ಕೋಶವನ್ನು ರಚಿಸಲಾಗಿದೆ. ರಾಜ್ಯ ಸರ್ಕಾರವು ಪಿಂಚಣಿ ನಿಧಿ ನಿಯಂತ್ರಣ ಅಭಿವೃದ್ಧಿ ಪ್ರಾಧಿಕಾರ (ಪಿಎಫ್‌ಆರ್‌ಡಿಎ) ವಿನ್ಯಾಸಗೊಳಿಸಿದ ಎನ್‌ಪಿಎಸ್ ಶೈಲಿಯನ್ನು ಅಳವಡಿಸಿಕೊಂಡಿದೆ ಮತ್ತು ಎನ್‌ಪಿಎಸ್‌ಗಾಗಿ ರಾಷ್ಟ್ರೀಯ ಭದ್ರತೆಗಳ ನ್ಯಾಸ ನಿಯಮಿತ (ಎನ್‌ಎಸ್‌ಡಿಎಲ್) ಸಂಸ್ಥೆಯನ್ನು ಕೇಂದ್ರ ದಾಖಲೆ ಸಂರಕ್ಷಣಾ ಏಜೆನ್ಸಿಯಾಗಿ ನೇಮಿಸಿದೆ. ಆಕ್ಸಿಸ್ ಬ್ಯಾಂಕ್ ನಿಧಿಗಳ ಕಾರ್ಯಾಚರಣೆಯ ಉಸ್ತುವಾರಿ ಟ್ರಸ್ಟಿ ಬ್ಯಾಂಕ್ ಆಗಿದೆ.

ಖಜಾನೆಗಳ ಆಯುಕ್ತರು ಒದಗಿಸಿದ (ಆಗಸ್ಟ್ 2021) ಯೋಜನೆ ಮತ್ತು ರಾಜ್ಯ ಸರ್ಕಾರ ಮತ್ತು ನೌಕರರು ನೀಡಿದ ವಂತಿಗೆಗಳ ವಿವರಗಳನ್ನು ಕೆಳಗೆ ನೀಡಲಾಗಿದೆ:

- ಸರ್ಕಾರಿ ವಲಯ ಮತ್ತು ಸ್ವಾಯತ್ತ ಸಂಸ್ಥೆಗಳ ವಲಯದ ಅಡಿಯಲ್ಲಿ ಖಾಯಂ ನಿವೃತ್ತಿ ಖಾತೆ ಸಂಖ್ಯೆ (ಪಿಆರ್‌ಎಎನ್) ಪಡೆದಿರುವ ನೌಕರರ ಸಂಖ್ಯೆಯು ಕ್ರಮವಾಗಿ 2,42,819 ಮತ್ತು 30,036 ಆಗಿದೆ.
- 2020–21ರ ಅವಧಿಯಲ್ಲಿ, 'ಹೊಸ ವಂತಿಗೆ ಪಿಂಚಣಿ ಯೋಜನೆಗಳು–ಸೇವೆಯಲ್ಲಿದ್ದಾಗ ನಿವೃತ್ತಿ ಹೊಂದಿದ/ಮರಣ ಹೊಂದಿದ ವ್ಯಕ್ತಿಗಳು/ಕುಟುಂಬಗಳಿಗೆ ಸೌಲಭ್ಯದ ವಿಸ್ತರಣೆ (2071–01–104–2–07)' ಶೀರ್ಷಿಕೆಯಡಿ ಸಂಚಿತ ನಿಧಿಯಿಂದ ₹2.53 ಕೋಟಿ ಪಾವತಿಸಲಾಗಿದೆ ಮತ್ತು ಹೊಸ ನಿಗದಿತ ಪಿಂಚಣಿ ಯೋಜನೆಯಡಿ ಸೇರಿಸಲಾಗಿದೆ.
- 2020–21ರಲ್ಲಿ, ನೌಕರರ ಕೊಡುಗೆ (ನಿಗದಿತ ಮತ್ತು ಹಳೆಯ ಬಾಕಿ[14]) ₹1,036.79 ಕೋಟಿಗಳು ಮತ್ತು ಸರ್ಕಾರದ ಕೊಡುಗೆ ₹1,486.60 ಕೋಟಿಗಳು ಆಗಿದ್ದಿತು. ಸರ್ಕಾರದ ವಂತಿಗೆಯು ಏಪ್ರಿಲ್ 2019 ರಿಂದ ಶೇಕಡ 10 ರಿಂದ ಶೇಕಡ 14ಕ್ಕೆ ಏರಿಸಿದುದರಿಂದ ಪಾವತಿಸಿದ ₹3.08 ಕೋಟಿಗಳನ್ನು ಒಳಗೊಂಡಿದೆ.
- 2020–21ರಲ್ಲಿ, ನಿರ್ಧರಿತ ವಂತಿಗೆ ಪಿಂಚಣಿ ಯೋಜನೆಗೆ ಒಟ್ಟು ವಂತಿಗೆಯು ₹2,474.60 ಕೋಟಿಗಳಾಗಿದ್ದವು. ಸರ್ಕಾರವು ₹2,474.60 ಕೋಟಿಗಳ ವಂತಿಗೆಗೆ ಪ್ರತಿಯಾಗಿ ₹2,442.53 ಕೋಟಿಗಳನ್ನು ಸಾರ್ವಜನಿಕ ಲೆಕ್ಕದ ಪ್ರಧಾನ ಶೀರ್ಷಿಕೆ 8342–117– ನಿರ್ಧರಿತ ವಂತಿಗೆ ಪಿಂಚಣಿ ಯೋಜನೆ ಅಡಿಯಲ್ಲಿ ವರ್ಗಾಯಿಸಿದೆ.

2020–21ರಲ್ಲಿ ಎನ್‌ಪಿಎಸ್ ಕೋಶದಿಂದ ಪಡೆದ ಮಾಹಿತಿಯಂತೆ ಎನ್‌ಎಸ್‌ಡಿಎಲ್ ಗೆ ವರ್ಗಾಯಿಸಲಾದ ಮೊತ್ತವು ₹2,343.12 ಕೋಟಿಗಳು ಆಗಿದ್ದು, ಮಹಾಲೇಖಾಪಾಲರ ದಾಖಲೆಗಳ ಪ್ರಕಾರ ಮೊತ್ತವು ₹2,480.22 ಕೋಟಿಗಳಿದ್ದು, ಸರ್ಕಾರಿ ಆದೇಶದಲ್ಲಿ (ಮೇ 2017) ಒಳಗೊಂಡಿರುವ ಸೂಚನೆಗಳ ಪ್ರಕಾರ ₹137.10 ಕೋಟಿಗಳ ವ್ಯತ್ಯಾಸವನ್ನು ಸಮನ್ವಯ ಗೊಳಿಸಬೇಕಾಗಿದೆ.

ಎನ್‌ಎಸ್‌ಡಿಎಲ್‌ಗೆ ವರ್ಗಾಯಿಸಲಾದ ಮೊತ್ತದಲ್ಲಿನ ವ್ಯತ್ಯಾಸವನ್ನು ಸಮನ್ವಯಗೊಳಿಸಲು ಕ್ರಮ ತೆಗೆದು ಕೊಳ್ಳಲಾಗುವುದು ಎಂದು ಆರ್ಥಿಕ ಇಲಾಖೆಯು (ಡಿಸೆಂಬರ್ 2021) ಉತ್ತರಿಸಿದೆ.

**2.5.2.6 ಬಡ್ಡಿ ಪಾವತಿಗಳು**

ಬಡ್ಡಿ ಪಾವತಿಗಳು 2016–17ರಲ್ಲಿನ ₹12,850 ಕೋಟಿಗಳಿಂದ 2020–21ರಲ್ಲಿ ₹23,433 ಕೋಟಿಗಳಿಗೆ ಏರಿ ₹10,583 ಕೋಟಿಗಳಷ್ಟು (ಶೇಕಡ 82) ಹೆಚ್ಚಾಗಿದೆ. 2019–20ಕ್ಕೆ ಹೋಲಿಸಿದರೆ, ಬಡ್ಡಿ ಪಾವತಿಯು

[14] ಉದ್ಯೋಗಿ ತನ್ನ ಸೇವೆಗೆ ಪ್ರವೇಶಿಸಿದ ದಿನಾಂಕದಿಂದ ಯೋಜನೆಯ ಅನುಷ್ಠಾನದ ದಿನಾಂಕದವರೆಗೆ ನೀಡಬೇಕಾದ ಕೊಡುಗೆಯನ್ನು ಉಲ್ಲೇಖಿಸುತ್ತದೆ.

ಶೇಕಡ 17.74ರಷ್ಟು ಹೆಚ್ಚಾಗಿದೆ. 2020–21ರಲ್ಲಿನ ಬಡ್ಡಿ ಪಾವತಿಗಳು ಆಂತರಿಕ ಸಾಲದ ಮೇಲಿನ ಬಡ್ಡಿ (₹18,627 ಕೋಟಿಗಳು), ಸಣ್ಣ ಉಳಿತಾಯ, ಭವಿಷ್ಯ ನಿಧಿ ಇತ್ಯಾದಿಗಳ ಮೇಲಿನ ಬಡ್ಡಿ, (₹2,714 ಕೋಟಿಗಳು), ಕೇಂದ್ರ ಸರ್ಕಾರದಿಂದ ಸಾಲಗಳ ಮೇಲಿನ ಬಡ್ಡಿ (₹532 ಕೋಟಿಗಳು), ಆಯವ್ಯಯ ಹೊರಗಿನ ಸಾಲಗಳ ಮೇಲಿನ ಬಡ್ಡಿ (₹1,512 ಕೋಟಿಗಳು) ಮತ್ತು ಇತರ ಬಾಧ್ಯತೆಗಳ ಮೇಲಿನ ಬಡ್ಡಿಗಳನ್ನು (₹2 ಕೋಟಿಗಳು) ಒಳಗೊಂಡಿತ್ತು.

ಆಂತರಿಕ ಸಾಲದ ಮೇಲಿನ ಬಡ್ಡಿಯು 2019–20ರಲ್ಲಿನ ₹15,085 ಕೋಟಿಗಳಿಂದ 2020–21ರಲ್ಲಿ ₹18,627 ಕೋಟಿಗಳಿಗೆ ಶೇಕಡ 23ರಷ್ಟು ಏರಿಕೆಯಾಗಿದೆ. ಈ ಏರಿಕೆಯು ಮಾರುಕಟ್ಟೆ ಸಾಲದ ಮೇಲಿನ ಬಡ್ಡಿ ಪಾವತಿಯ ₹3,795 ಕೋಟಿಗಳ (ಶೇಕಡ 29) ಹೆಚ್ಚಳದಿಂದಾಗಿದೆ. ಸಣ್ಣ ಉಳಿತಾಯ, ಭವಿಷ್ಯ ನಿಧಿ ಇತ್ಯಾದಿಗಳ ಮೇಲಿನ ಬಡ್ಡಿಯು 2019–20ರಲ್ಲಿದ್ದ ₹2,747 ಕೋಟಿಗಳಿಂದ 2020–21ರಲ್ಲಿ ₹2,714 ಕೋಟಿಗಳಿಗೆ ಇಳಿದಿದ್ದು ಮುಖ್ಯವಾಗಿ ರಾಜ್ಯ ಭವಿಷ್ಯ ನಿಧಿಗಳ ಮೇಲಿನ ಬಡ್ಡಿ ಕಡಿಮೆಯಾದ (ಶೇಕಡ 6) ಕಾರಣ ₹33 ಕೋಟಿಗಳಷ್ಟು ಕಡಿಮೆಯಾಗಿದೆ.

#### 2.5.2.7 ಸಹಾಯಧನಗಳು

2020–21ರಲ್ಲಿ ಸಹಾಯಧನಗಳ ಮೇಲಿನ ವೆಚ್ಚದಲ್ಲಿ ಹೆಚ್ಚಳವಾಗಿದೆ ಎಂಬುದನ್ನು **ಕೋಷ್ಟಕ–2.17**ರಲ್ಲಿ ನೀಡಲಾದ ವಿವರಗಳಿಂದ ನೋಡಬಹುದಾಗಿದೆ. ರಾಜಸ್ವ ಸ್ವೀಕೃತಿಗಳ ಶತಾಂಶವಾಗಿ ಸಹಾಯ ಧನಗಳು 2019–20ರಲ್ಲಿದ್ದ ಶೇಕಡ 10 ರಿಂದ 2020–21ರಲ್ಲಿ ಶೇಕಡ 12ಕ್ಕೆ ಏರಿದ್ದು, ರಾಜಸ್ವ ವೆಚ್ಚದ ಶತಾಂಶವಾಗಿ ಶೇಕಡ 10ರಲ್ಲಿಯೇ ಉಳಿದಿದೆ.

**ಕೋಷ್ಟಕ–2.17: 2016–17ರಿಂದ 2020–21ರ ಅವಧಿಯಲ್ಲಿ ಸಹಾಯಧನಗಳ ಮೇಲಿನ ವೆಚ್ಚ**

| | 2016–17 | 2017–18 | 2018–19 | 2019–20 | 2020–21 |
|---|---|---|---|---|---|
| ಸಹಾಯಧನಗಳು (₹ ಕೋಟಿಗಳಲ್ಲಿ) | 14,387 | 14,148 | 15,400 | 17,534 | 18,432 |
| ರಾಜಸ್ವ ಸ್ವೀಕೃತಿಗಳ ಶತಾಂಶವಾಗಿ ಸಹಾಯಧನಗಳು | 10.80 | 9.62 | 9.33 | 9.99 | 11.76 |
| ರಾಜಸ್ವ ವೆಚ್ಚಗಳ ಶತಾಂಶವಾಗಿ ಸಹಾಯಧನಗಳು | 10.91 | 9.93 | 9.37 | 10.06 | 10.47 |

*ಆಕರ: ಹಣಕಾಸು ಲೆಕ್ಕಗಳು*

ನಾಲ್ಕು ದೊಡ್ಡ ಸಹಾಯಧನ ಘಟಕಗಳೆಂದರೆ ರೈತರಿಗೆ ಕೃಷಿ ಪಂಪ್ಸೆಟ್‌ಗಳ ಬಳಕೆಗೆ ಉಚಿತ ವಿದ್ಯುತ್ ಪೂರೈಕೆಗಾಗಿ ಒದಗಿಸಲಾದ ವಿದ್ಯುತ್ ಸಹಾಯಧನ, ಆಹಾರ ಸಹಾಯಧನ, ಬೆಳೆಸಾಲ ಮತ್ತು ಸಾರಿಗೆಗೆ ಬಡ್ಡಿ ಸಹಾಯಧನ. ಕಳೆದ ಐದು ವರ್ಷಗಳ ವಿವರಗಳನ್ನು **ಅನುಬಂಧ–2.3**ರಲ್ಲಿ ತೋರಿಸಲಾಗಿದೆ ಮತ್ತು 2020–21ರ ವಿವರಗಳನ್ನು **ನಕ್ಷೆ–2.11**ರಲ್ಲಿ ತೋರಿಸಲಾಗಿದೆ.

**ನಕ್ಷೆ–2.11: 2020–21ರಲ್ಲಿ ಸಹಾಯಧನಗಳು**

**(₹ ಕೋಟಿಗಳಲ್ಲಿ)**




*ಆಕರ: ಹಣಕಾಸು ಲೆಕ್ಕಗಳು*

- **ಹಣಕಾಸಿನ ನೆರವು, ಪ್ರೋತ್ಸಾಹ ಇತ್ಯಾದಿಗಳ ರೂಪದಲ್ಲಿ ಸಹಾಯಧನ.**

ರಾಜ್ಯ ಸರ್ಕಾರವು ಒದಗಿಸುವ ಸಹಾಯಧನಗಳೆಂದರೆ ಎರಡು ವಿಧಗಳಾಗಿರಬಹುದು. ನೇರ[15] ಮತ್ತು ಪರೋಕ್ಷ ಸಹಾಯಧನ. ನೇರ ಸಹಾಯಧನ ಎಂದರೆ ರಾಜ್ಯವು ಸಹಾಯಧನ ಸ್ವರೂಪದಲ್ಲಿ ವೆಚ್ಚವನ್ನು ಸ್ಪಷ್ಟವಾಗಿ ಒದಗಿಸುವುದು ಮತ್ತು ಪರೋಕ್ಷ ಸಹಾಯಧನವು ಸರ್ಕಾರದ ಕೆಲವು ಯೋಜನೆಗಳಿಗೆ ಅನುದಾನವನ್ನು ಒದಗಿಸುವುದು. ಈ ಸಹಾಯ ಧನಗಳು ಅಪ್ರತ್ಯಕ್ಷ ರೀತಿಯ ಅಥವಾ ತೆರಿಗೆ ರಿಯಾಯಿತಿಗಳ ಸ್ವರೂಪವನ್ನು ತೆಗೆದುಕೊಳ್ಳಬಹುದು.

ಹಣಕಾಸಿನ ನೆರವಿನ ರೂಪದ ಈ ಸಹಾಯಧನಗಳು 2016–17ರಲ್ಲಿನ ₹3,714 ಕೋಟಿಗಳಿಂದ 2020–21ರಲ್ಲಿ ₹3,188 ಕೋಟಿಗಳಿಗೆ ಇಳಿದಿದೆ. ಅವು ಮುಖ್ಯವಾಗಿ ಬೀಜಗಳ ಪೂರೈಕೆಗೆ ಹಣಕಾಸಿನ ನೆರವು, ನೇಕಾರರ ಪ್ಯಾಕೇಜ್, ಆಶ್ರಯ ಯೋಜನೆ, ಸೂಕ್ಷ್ಮ/ಹನಿ ನೀರಾವರಿ, ಕನಿಷ್ಠ ನೆಲದ ಬೆಲೆ ಯೋಜನೆ, ದುರ್ಬಲ ವರ್ಗದವರಿಗೆ ವಸತಿ, ಗ್ರಾಮೀಣ ಭೂರಹಿತರಿಗೆ ಮನೆ ನಿವೇಶನ ಇತ್ಯಾದಿಗಳನ್ನು ಒಳಗೊಂಡಿವೆ. 2016–17ರಿಂದ 2020–21ರವರೆಗಿನ ಈ ಸಹಾಯಧನಗಳನ್ನು **ಅನುಬಂಧ–2.4**ರಲ್ಲಿ ವಿವರಿಸಲಾಗಿದೆ. ಆರ್ಥಿಕ ಸಹಾಯದ ರೂಪದಲ್ಲಿರುವ ಸಹಾಯ ಧನಗಳನ್ನು ಗಣನೆಗೆ ತೆಗೆದುಕೊಂಡರೆ, ಅವುಗಳ ವಾಸ್ತವವಾದ ವೆಚ್ಚವು ₹21,620 ಕೋಟಿಗಳಷ್ಟಾಗುತ್ತದೆ. ಇದು ವಾಸ್ತವವಾಗಿ ತೋರಿಸಿರುವುದಕ್ಕಿಂತ ₹3,188 ಕೋಟಿಗಳು ಹೆಚ್ಚಾಗುತ್ತದೆ.

ಆರ್ಥಿಕ ಇಲಾಖೆಯು ಹಣಕಾಸಿನ ನೆರವು ಸಹಾಯ ಧನವಾಗಿ ಪ್ರತಿಫಲಿಸದಿದ್ದರೂ ಅದು ರಾಜಸ್ವ ವೆಚ್ಚದ ಭಾಗವಾಗಿದೆ ಎಂದು ಹೇಳಿದೆ. (ಡಿಸೆಂಬರ್ 2021).

### 2.5.2.8 ಸ್ಥಳೀಯ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ಹಣಕಾಸಿನ ನೆರವು

2016–17ರಿಂದ 2020–21ರ ಅವಧಿಯಲ್ಲಿ ಸ್ಥಳೀಯ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ಅನುದಾನದ ಮೂಲಕ ಒದಗಿಸಲಾದ ಸಹಾಯದ ಪ್ರಮಾಣವನ್ನು **ಕೋಷ್ಟಕ–2.18** ಮತ್ತು **ಕೋಷ್ಟಕ–2.19**ರಲ್ಲಿ ಪ್ರಸ್ತುತಪಡಿಸಲಾಗಿದೆ.

[15] ಸರ್ಕಾರದ ಕೆಲವು ಯೋಜನೆಗಳಿಗೆ ಸಹಾಯಧನ ಅಥವಾ ಬಡ್ಡಿ ರಿಯಾಯಿತಿಯ ರೂಪದಲ್ಲಿ ವೆಚ್ಚವನ್ನು ಒದಗಿಸುವುದು ನೇರ ಸಹಾಯಧನವಾಗಿದೆ. ಈ ಸಹಾಯಧನಗಳು ಹೆಚ್ಚುವರಿ ಬೆಂಬಲದ ಶಾಶ್ವತ ಮೂಲವಾಗುವುದಿಲ್ಲ ಮತ್ತು ಆ ಮೂಲಕ ಸುಧಾರಣೆಗಳನ್ನು ಕೈಗೊಳ್ಳುವುದರಿಂದ ಈ ವಲಯಗಳನ್ನು ತಡೆಯುವಲ್ಲಿ ಸವಾಲು ಇದೆ ಎಂದು ಒತ್ತಿ ಹೇಳಲಾಯಿತು.

**ಕೋಷ್ಟಕ–2.18: ಸ್ಥಳೀಯ ಸಂಸ್ಥೆಗಳಿಗೆ ಹಣಕಾಸಿನ ನೆರವು**

(₹ ಕೋಟಿಗಳಲ್ಲಿ)

| ಸಂಸ್ಥೆಯ ಹೆಸರು | 2016–17 | 2017–18 | 2018–19 | 2019–20 | 2020–21 |
|---|---|---|---|---|---|
| ಪಂಚಾಯತ್ ರಾಜ್ ಸಂಸ್ಥೆಗಳು | 29,697.94 | 31,054.63 | 35,897.61 | 38,049.61 | 38,106.18 |
| ನಗರ ಸ್ಥಳೀಯ ಸಂಸ್ಥೆಗಳು | 5,685.58 | 6,489.76 | 5,425.31 | 6,424.72 | 5,681.04 |
| ಒಟ್ಟು | **35,383.52** | **37,544.39** | **41,322.92** | **44,474.33** | **43,787.22** |

*ಆಕರ : ಹಣಕಾಸು ಲೆಕ್ಕಗಳು*

ಹನ್ನೊಂದನೆಯ ಹಣಕಾಸು ಆಯೋಗದ ಶಿಫಾರಸುಗಳ ಮುಂದುವರಿದ ಭಾಗವಾಗಿ, ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮೂರು ವಿಭಿನ್ನ ಕಾರ್ಯಕ್ರಮ ಒಳ ಶೀರ್ಷಿಕೆಗಳಾದ 196, 197 ಮತ್ತು 198ರ ಅಡಿಯಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಹಾಯವು 2016–17ರಲ್ಲಿ ₹29,697.94 ಕೋಟಿಗಳಿದ್ದು 2020–21ರಲ್ಲಿ ₹38,106.18 ಕೋಟಿಗಳಿಗೆ ಏರಿಕೆಯಾಗಿದೆ. 2016–17ರಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಲಾದ ನೆರವು ₹5,685.58 ಕೋಟಿಗಳಿಂದ 2020–21ರಲ್ಲಿ ₹5,681.04 ಕೋಟಿಗಳಿಗೆ ಇಳಿಕೆಯಾಗಿದೆ.

2020–21ರ ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾವಣೆಯಾದ ಒಟ್ಟು ₹38,106 ಕೋಟಿಗಳ ಪೈಕಿ, ₹17,250 ಕೋಟಿ (ಶೇಕಡ 45) ರಾಜ್ಯ ಸರ್ಕಾರದ ಕಾರ್ಯಗಳಾದ ಶಿಕ್ಷಣ, ನೀರು ಸರಬರಾಜು ಮತ್ತು ನೈರ್ಮಲ್ಯ, ವಸತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇತ್ಯಾದಿಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವಹಿಸಿರುವುದರಿಂದ ಆ ಇಲಾಖೆಗಳ ವೇತನಕ್ಕಾಗಿ ವೆಚ್ಚವಾಗಿತ್ತು. ಇದು ಜಿಲ್ಲಾ ಪಂಚಾಯತ್ (₹160.85 ಕೋಟಿಗಳು), ಗ್ರಾಮ ಪಂಚಾಯತ್ (₹2,734.45 ಕೋಟಿಗಳು) ಮತ್ತು ತಾಲ್ಲೂಕು ಪಂಚಾಯತ್ಗಳಿಗೆ (₹321.70 ಕೋಟಿಗಳು) ಬಿಡುಗಡೆಯಾದ ₹3,217.00 ಕೋಟಿಗಳ ಹದಿನೈದನೆಯ ಹಣಕಾಸು ಆಯೋಗದ ಅನುದಾನವನ್ನೂ ಒಳಗೊಂಡಿದೆ.

ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಲಾದ ನೆರವು ಹಿಂದಿನ ವರ್ಷಕ್ಕಿಂತ ₹743.68 ಕೋಟಿಗಳಷ್ಟು ಕಡಿಮೆಯಾಗಿದ್ದು, ಇದರಲ್ಲಿ ವೇತನದ ಅಂಶವೂ ಸೇರಿದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಿದ ₹5,681.04 ಕೋಟಿಗಳ ನೆರವಿನಲ್ಲಿ, ₹636.04 ಕೋಟಿಗಳು (ಶೇಕಡ 11) ಬಂಡವಾಳ ಆಸ್ತಿಗಳ ಸೃಷ್ಟಿಗೆ ನೀಡಲಾಗಿದೆ. ಇದು ರಾಜ್ಯ ಸರ್ಕಾರಕ್ಕೆ ಬಿಡುಗಡೆಯಾದ ಹದಿನೈದನೆಯ ಹಣಕಾಸು ಆಯೋಗದ ಅನುದಾನವನ್ನು (₹1,409.50 ಕೋಟಿ) ಒಳಗೊಂಡಿದೆ.

**ಕೋಷ್ಟಕ–2.19: ಇತರ ಸಂಸ್ಥೆಗಳಿಗೆ ಹಣಕಾಸಿನ ನೆರವು**

(₹ ಕೋಟಿಗಳಲ್ಲಿ)

| ಸಂಸ್ಥೆಯ ಹೆಸರು | 2016–17 | 2017–18 | 2018–19 | 2019–20 | 2020–21 |
|---|---|---|---|---|---|
| ಶಿಕ್ಷಣ ಸಂಸ್ಥೆಗಳು (ವಿಶ್ವ ವಿದ್ಯಾನಿಲಯಗಳೂ ಸೇರಿ) | 1,449.75 | 1,293.70 | 1,081.29 | 1,405.90 | 1,140.43 |
| ಸಹಕಾರಿ ಸೊಸೈಟಿಗಳು ಮತ್ತು ಸಹಕಾರಿ ಸಂಸ್ಥೆಗಳು | 1,009.47 | 1,191.32 | 1,477.76 | 1,275.78 | 1,186.04 |
| ಇತರ ಸಂಸ್ಥೆಗಳು ಮತ್ತು ಮಂಡಳಿಗಳು (ಪಿಎಸ್‌ಯು, ಎನ್‌ಜಿಒ ಮತ್ತು ಶಾಸನಬದ್ಧ ಸಂಸ್ಥೆಗಳು) | 6,656.29 | 7,067.08 | 6,720.59 | 7,446.88 | 7,656.90 |
| ಒಟ್ಟು | **9,115.51** | **9,552.10** | **9,279.64** | **10,128.56** | **9,983.37** |

*ಆಕರ: ಹಣಕಾಸು ಲೆಕ್ಕಗಳು*

2020–21ರಲ್ಲಿ, ಇತರ ಸಂಸ್ಥೆಗಳಿಗೆ ನೀಡಿದ ಸಹಾಯವು (₹7,657 ಕೋಟಿಗಳು) ಶಾಸನಬದ್ಧ ಸಂಸ್ಥೆಗಳು ಮತ್ತು ಅಭಿವೃದ್ಧಿ ಪ್ರಾಧಿಕಾರಗಳಿಗೆ (₹1,865 ಕೋಟಿಗಳು), ಎನ್‌ಜಿಒಗಳು (₹1,962 ಕೋಟಿಗಳು), ಪಿಎಸ್‌ಯು ಗಳು (₹20 ಕೋಟಿಗಳು) ಮತ್ತು ಇತರರಿಗೆ (₹3,810 ಕೋಟಿಗಳು) ನೀಡಿದ ಸಹಾಯವನ್ನು

ಒಳಗೊಂಡಿದೆ. ಶಿಕ್ಷಣ ಸಂಸ್ಥೆಗಳು ಮತ್ತು ಸಹಕಾರಿ ಸಂಸ್ಥೆಗಳಿಗೆ ಕ್ರಮವಾಗಿ ₹265 ಕೋಟಿಗಳು ಮತ್ತು ₹90 ಕೋಟಿಗಳು ಕಡಿಮೆಯಾಗಿದೆ ಮತ್ತು ಇತರ ಸಂಸ್ಥೆಗಳಿಗೆ ಹಿಂದಿನ ವರ್ಷಕ್ಕೆ ಹೋಲಿಸಿದರೆ ₹210 ಕೋಟಿಗಳು ಹೆಚ್ಚಳವಾಗಿದೆ.

### *2.5.3 ಬಂಡವಾಳ ವೆಚ್ಚ*

ಬಂಡವಾಳ ವೆಚ್ಚವು ಪ್ರಾಥಮಿಕವಾಗಿ ಕಟ್ಟಡಗಳು, ರಸ್ತೆಗಳು, ಸೇತುವೆಗಳು, ಇತ್ಯಾದಿಗಳಂತಹ ಸ್ಥಿರ ಮೂಲ ಸೌಕರ್ಯ ಸ್ವತ್ತುಗಳ ರಚನೆಯ ಮೇಲಿನ ವೆಚ್ಚವನ್ನು ಒಳಗೊಂಡಿರುತ್ತದೆ. ಬಂಡವಾಳ ವೆಚ್ಚವನ್ನು ಆಯವ್ಯಯ ಬೆಂಬಲ ಮತ್ತು ಹೆಚ್ಚುವರಿ ಆಯವ್ಯಯ ಸಂಪನ್ಮೂಲಗಳು/ಆಯವ್ಯಯದ ಹೊರಗಿನ ಸಾಲಗಳಿಂದ ಭರಿಸಲಾಗುತ್ತದೆ. ಇತ್ತೀಚೆಗೆ ಮೂಲಸೌಕರ್ಯ ಅಗತ್ಯತೆಗಳು ಬಹುಪಟ್ಟು ಹೆಚ್ಚಿವೆ ಮತ್ತು ಬಂಡವಾಳ ವೆಚ್ಚದ ಬಹು ಭಾಗವನ್ನು ಕೈಗೊಳ್ಳಲು ವಿಶೇಷ ಉದ್ದೇಶ ಸಾಧನಗಳನ್ನು ಸ್ಥಾಪಿಸಲಾಗಿದೆ.

ರಾಜ್ಯದ ಬಂಡವಾಳ ವೆಚ್ಚವು (ಸಾಲ ಮತ್ತು ಮುಂಗಡಗಳ ವಿತರಣೆಯು ಸೇರಿದಂತೆ) 2016–17ರಲ್ಲಿನ ₹30,084 ಕೋಟಿಗಳಿಂದ 2019–20ರಲ್ಲಿ ₹39,599 ಕೋಟಿಗಳಿಗೆ ಏರಿಕೆಯಾಗಿದೆ. 2020–21ರಲ್ಲಿ ಬಂಡವಾಳ ವೆಚ್ಚವು ಹಿಂದಿನ ವರ್ಷಕ್ಕಿಂತ ₹8,476 ಕೋಟಿಗಳಷ್ಟು ಹೆಚ್ಚಾಗಿ ₹48,075 ಕೋಟಿಗಳಷ್ಟಿತ್ತು.

2020–21 ನೇ ಸಾಲಿನಲ್ಲಿ, ರಾಜಸ್ವ ಶೀರ್ಷಿಕೆಗೆ ಬದಲಿಗೆ ಬಂಡವಾಳದ ಶೀರ್ಷಿಕೆಯ ಅಡಿಯಲ್ಲಿ ₹217.02 ಕೋಟಿಗಳನ್ನು (ಸಹಾಯಾನುದಾನ– ₹100.00 ಕೋಟಿಗಳು ಮತ್ತು ಸಂಬಳ – ₹117.02 ಕೋಟಿಗಳು) ಬಿಡುಗಡೆ ಮಾಡಲಾಗಿದೆ, ಇದು ಬಂಡವಾಳ ವೆಚ್ಚವನ್ನು ಅಧಿಕವಾಗಿ ಹೇಳಲು ಮತ್ತು ಆ ಮಟ್ಟಿಗೆ ರಾಜಸ್ವ ಕೊರತೆಯನ್ನು ಕಡಿಮೆ ಹೇಳಲು ಕಾರಣವಾಯಿತು. (**ಅಧ್ಯಾಯ–3ರ ಕಂಡಿಕೆ–3.7.2.2** ಮತ್ತು **3.7.2.3**ರಲ್ಲಿ ವಿವರಿಸಲಾಗಿದೆ). ಹೀಗಾಗಿ, ವಾಸ್ತವಿಕ ಬಂಡವಾಳ ವೆಚ್ಚವು ₹48,075 ಕೋಟಿಗಳಿಗೆ ಬದಲಾಗಿ ₹47,857.98 ಕೋಟಿಗಳು ಆಗಲಿದೆ. 2016–17ರಿಂದ 2020–21ರ ಐದು ವರ್ಷಗಳ ಅವಧಿಯಲ್ಲಿ ಆಯವ್ಯಯಕ್ಕೆ ಹೋಲಿಸಿದಂತೆ ಬಂಡವಾಳ ವೆಚ್ಚದ ವಿವರಗಳನ್ನು **ನಕ್ಷೆ–2.12**ರಲ್ಲಿ ನೀಡಲಾಗಿದೆ.

**ನಕ್ಷೆ–2.12: 2016–17 ರಿಂದ 2020–21ರವರೆಗಿನ ಐದು ವರ್ಷಗಳ ಅವಧಿಯಲ್ಲಿ ಬಂಡವಾಳ ವೆಚ್ಚದ (ಸಾಲಗಳು ಮತ್ತು ಮುಂಗಡಗಳನ್ನು ಒಳಗೊಂಡಂತೆ) ಪ್ರವೃತ್ತಿ**




*ಆಕರ : ಹಣಕಾಸು ಲೆಕ್ಕಗಳು*

ಮೇಲಿನ ನಕ್ಷೆಯಲ್ಲಿ ನೋಡಿದಂತೆ, ವಾಸ್ತವಿಕ ವೆಚ್ಚವು 2016–17, 2017–18 ಮತ್ತು 2020–21ರಲ್ಲಿ ಅಂದಾಜು ಬಂಡವಾಳ ವೆಚ್ಚಕ್ಕಿಂತ ಹೆಚ್ಚಾಗಿರುತ್ತದೆ. 2018–19 ಮತ್ತು 2019–20ರಲ್ಲಿ, ವಾಸ್ತವಿಕ ಬಂಡವಾಳ ವೆಚ್ಚವು ಅಂದಾಜುಗಿಂತ ಕ್ರಮವಾಗಿ ಶೇಕಡ ಐದು ಮತ್ತು ಶೇಕಡ ಏಳರಷ್ಟು ಕಡಿಮೆಯಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ 2020–21ರಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ಬಂಡವಾಳ ವೆಚ್ಚದ ಪ್ರಮುಖ ಹೆಚ್ಚಳ ಅಥವಾ ಇಳಿಕೆಯ ಪ್ರಕರಣಗಳನ್ನು **ಕೋಷ್ಟಕ–2.20**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.20: 2019–20ಕ್ಕೆ ಹೋಲಿಸಿದಂತೆ 2020–21ರಲ್ಲಿ ಬಂಡವಾಳ ವೆಚ್ಚ**

(₹ ಕೋಟಿಗಳಲ್ಲಿ)

| ಪ್ರಧಾನ ಲೆಕ್ಕಶೀರ್ಷಿಕೆ | 2019–20 | 2020–21 | ಹೆಚ್ಚಳ (+)/ ಇಳಿಕೆ (–) ಮೊತ್ತ | ವ್ಯತ್ಯಾಸ ಶೇಕಡ |
|---|---|---|---|---|
| 4059–ಲೋಕೋಪಯೋಗಿ ಕಾಮಗಾರಿಗಳ ಮೇಲೆ ಬಂಡವಾಳ ವೆಚ್ಚ | 420.86 | 838.53 | 417.67 | 99.24 |
| 4202–ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ ಮೇಲಣ ಬಂಡವಾಳ ವೆಚ್ಚ | 1,203.17 | 1,167.87 | –35.3 | (–)2.93 |
| 4210–ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯದ ಮೇಲಣ ಬಂಡವಾಳ ವೆಚ್ಚ | 821.96 | 2,099.44 | 1,277.48 | 155.42 |
| 4215–ನೀರು ಸರಬರಾಜು ಮತ್ತು ನೈರ್ಮಲ್ಯ ಮೇಲಣ ಬಂಡವಾಳ ವೆಚ್ಚ | 2,255.91 | 3,211.90 | 955.99 | 42.38 |
| 4217–ನಗರಾಭಿವೃದ್ಧಿ ಮೇಲಣ ಬಂಡವಾಳ ವೆಚ್ಚ | 1,764.52 | 3,332.11 | 1,567.59 | 88.84 |
| 4225– ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣದ ಮೇಲಣ ಬಂಡವಾಳ ವೆಚ್ಚ | 2,783.45 | 1,163.80 | (–)1619.65 | (–)58.19 |
| 4701–ಮಧ್ಯಮ ನೀರಾವರಿ ಮೇಲಣ ಬಂಡವಾಳ ವೆಚ್ಚ | 10,862.48 | 14,993.82 | 4131.34 | 38.03 |
| 4702–ಸಣ್ಣ ನೀರಾವರಿ ಮೇಲಣ ಬಂಡವಾಳ ವೆಚ್ಚ | 2,268.59 | 2,585.90 | 317.31 | 13.99 |
| 4711–ನೆರೆ ಪರಿಹಾರ ಯೋಜನೆಗಳ ಮೇಲಣ ಬಂಡವಾಳ ವೆಚ್ಚ | 98.19 | 157.74 | 59.55 | 60.65 |
| 4801–ವಿದ್ಯುತ್ ಯೋಜನೆಗಳ ಮೇಲಣ ಬಂಡವಾಳ ವೆಚ್ಚ | 858.35 | 650.12 | (–)208.23 | (–)24.26 |
| 5054–ರಸ್ತೆಗಳು ಮತ್ತು ಸೇತುವೆಗಳ ಮೇಲಣ ಬಂಡವಾಳ ವೆಚ್ಚ | 8,343.98 | 10,548.97 | 2,204.99 | 26.43 |
| 5055–ರಸ್ತೆ ಸಾರಿಗೆ ಮೇಲಿನ ಬಂಡವಾಳ ವೆಚ್ಚ | 389.17 | 368.59 | (–)20.58 | (–)5.29 |

*ಆಕರ : ಹಣಕಾಸು ಲೆಕ್ಕಗಳು*

ಮೇಲಿನ ಕೋಷ್ಟಕವು ಪ್ರಮುಖವಾಗಿ ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ (155 ಪ್ರತಿಶತ) ಮತ್ತು ಸಾರ್ವಜನಿಕ ಕಾಮಗಾರಿಗಳ (ಶೇಕಡ 99) ಮೇಲೆ ಪ್ರಮುಖ ಬಂಡವಾಳ ವೆಚ್ಚವನ್ನು ಮಾಡಲಾಗಿದೆ ಎಂದು ತಿಳಿಸುತ್ತದೆ.

ಲೆಕ್ಕ ಪರಿಶೋಧನೆಯ ಗಮನಿಕೆಗೆ ಒಪ್ಪಿರುವ ಆರ್ಥಿಕ ಇಲಾಖೆಯು ಕೆಳಗೆ ಹೇಳಲಾದ ನಿರ್ಬಂಧಗಳ ಕಾರಣದಿಂದಾಗಿ, ಬಂಡವಾಳ ವೆಚ್ಚವು ನಿಗದಿತ ಮಟ್ಟವನ್ನು ತಲುಪಲು ಸಾಧ್ಯವಾಗಲಿಲ್ಲ ಎಂದು ಉತ್ತರಿಸಿದೆ (ಡಿಸೆಂಬರ್ 2021).

- 2017–18 ರಿಂದ 2020–21ರ ಅವಧಿಯಲ್ಲಿ ಬದ್ಧ ವೆಚ್ಚವು ರಾಜಸ್ವ ಸ್ವೀಕೃತಿಗಳ 76 ರಿಂದ 94 ಪ್ರತಿಶತದಷ್ಟು ಇದ್ದು ಈ ವರ್ಗದಲ್ಲಿ ವೆಚ್ಚವನ್ನು ಕಡಿತಗೊಳಿಸಲು ಕಡಿಮೆ ಅವಕಾಶವಿತ್ತು.
- ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆಗಳಿಗೆ ಸ್ವತ್ತುಗಳ ಸೃಷ್ಟಿಗೆ ಬಿಡುಗಡೆಯಾದ ಅನುದಾನವನ್ನು ಸಹ ರಾಜಸ್ವ ವೆಚ್ಚವೆಂದು ಪರಿಗಣಿಸಲಾಗಿತ್ತು.

ರಾಜ್ಯ ಸರ್ಕಾರದ ವೆಚ್ಚ ಸುಧಾರಣಾ ಆಯೋಗ (ಇಆರ್‌ಸಿ) ತನ್ನ ಮೊದಲ ವರದಿಯಲ್ಲಿ (ಫೆಬ್ರವರಿ 2010) ಬಂಡವಾಳ ಹೂಡಿಕೆಗಳನ್ನು ಹೆಚ್ಚಿಸಲು ಮತ್ತು ವಿವೇಚನಾಯುಕ್ತ ಹಂಚಿಕೆಗಳ ಮೂಲಕ ಹಣಕಾಸಿನ ಅನಿಶ್ಚಿತತೆಗಳಿಂದ ರಕ್ಷಿಸಲು ಶಿಫಾರಸು ಮಾಡಿದೆ. ರಾಒಆಉ ದ ಶೇಕಡ ಐದರಲ್ಲಿ ಬಂಡವಾಳ ವೆಚ್ಚವನ್ನು (ಸಾಲಸೇವೆಯನ್ನು ಹೊರತುಪಡಿಸಿ) ನಿರ್ವಹಿಸುವಂತೆ ಶಿಫಾರಸು ಮಾಡಿತ್ತು. ಆದಾಗ್ಯೂ, ರಾಒಆಉ ಕ್ಕೆ ಬಂಡವಾಳ ವೆಚ್ಚದ ಅನುಪಾತವು 2016–17 ರಿಂದ 2020–21ರ ಅವಧಿಯಲ್ಲಿ ಕೇವಲ ಎರಡರಿಂದ ಮೂರು ಆಗಿತ್ತು.

### *2.5.4 ಬಂಡವಾಳ ವೆಚ್ಚದ ಗುಣಮಟ್ಟ*

ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆಯ ಚೌಕಟ್ಟಿನ ನಂತರದಲ್ಲಿ, ಸರ್ಕಾರವು ತನ್ನ ವಿತ್ತೀಯ ಕೊರತೆಯನ್ನು (ಸಾಲಗಳು) ಕಡಿಮೆ ಮಟ್ಟದಲ್ಲಿ ಇಟ್ಟುಕೊಳ್ಳುತ್ತದೆ ಹಾಗೂ ತನ್ನ ಬಂಡವಾಳ ವೆಚ್ಚ/

ಹೂಡಿಕೆಯ (ಸಾಲಗಳು ಮತ್ತು ಮುಂಗಡಗಳು ಸೇರಿದಂತೆ) ಅವಶ್ಯಕತೆಗಳನ್ನು ಪೂರೈಸುತ್ತದೆ ಎಂದು ನಿರೀಕ್ಷಿಸಲಾಗಿದೆ. ಇದಲ್ಲದೆ, ರಾಜ್ಯ ಸರ್ಕಾರವು ಸಾಲದ ರೂಪದಲ್ಲಿ ಪಡೆದ ಮೊತ್ತಗಳನ್ನು ಸಹಾಯ ಧನಗಳಿಗೆ ಅನ್ವಯಿಸುವ ಬದಲು ತನ್ನ ಹೂಡಿಕೆಯ ಮೇಲೆ ಸಾಕಷ್ಟು ಲಾಭವನ್ನು ಗಳಿಸುವ ಕ್ರಮಗಳನ್ನು ಪ್ರಾರಂಭಿಸುವ ಮತ್ತು ಹಣಕಾಸಿನ ಕಾರ್ಯಾಚರಣೆಗಳಲ್ಲಿ ಪಾರದರ್ಶಕತೆಯನ್ನು ತುಂಬಲು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ. ಈ ವಿಭಾಗವು ಹಿಂದಿನ ವರ್ಷಗಳಿಗೆ ಹೋಲಿಸಿದರೆ 2020–21ರಲ್ಲಿ ಸರ್ಕಾರವು ಕೈಗೊಂಡ ಹೂಡಿಕೆಗಳು ಮತ್ತು ಇತರ ಬಂಡವಾಳ ವೆಚ್ಚಗಳ ಸ್ಥೂಲ ಹಣಕಾಸು ವಿಶ್ಲೇಷಣೆಯನ್ನು ಪ್ರಸ್ತುತಪಡಿಸುತ್ತದೆ.

### 2.5.4.1 ಕಂಪನಿಗಳು, ನಿಗಮಗಳು ಮತ್ತು ಇತರ ಸಂಸ್ಥೆಗಳಲ್ಲಿ ಹೂಡಿಕೆಗಳು

31 ಮಾರ್ಚ್ 2021ರಲ್ಲಿದ್ದಂತೆ ಸರ್ಕಾರವು ₹68,256.68 ಕೋಟಿಗಳನ್ನು 89 ಸರ್ಕಾರಿ ಕಂಪನಿಗಳು[16] (₹60,731 ಕೋಟಿಗಳು), ಒಂಬತ್ತು ಶಾಸನಬದ್ಧ ನಿಗಮಗಳು (₹2,934 ಕೋಟಿಗಳು), 44 ಕೂಡು ಬಂಡವಾಳ ಕಂಪನಿಗಳು (₹4,137 ಕೋಟಿಗಳು) ಮತ್ತು ಸಹಕಾರ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಲ್ಲಿ (₹455 ಕೋಟಿ) ಹೂಡಿಕೆಮಾಡಿದೆ. 2020–21ರಲ್ಲಿ, ಸರ್ಕಾರವು ಸಕ್ರಿಯ ಸರ್ಕಾರಿ ಕಂಪನಿಗಳಲ್ಲಿ (₹272.99 ಕೋಟಿಗಳು) ಮತ್ತು ಶಾಸನ ಬದ್ಧ ನಿಗಮಗಳಲ್ಲಿ (₹170.23 ಕೋಟಿಗಳು) ಈಕ್ವಿಟಿಯಾಗಿ ₹443.22 ಕೋಟಿಗಳನ್ನು ಹೂಡಿಕೆ ಮಾಡಿದೆ. ಶಾಸನ ಬದ್ಧ ನಿಗಮಗಳು ಮತ್ತು ಸರ್ಕಾರಿ ಕಂಪನಿಗಳ ಅಡಿಯಲ್ಲಿ ಹೂಡಿಕೆಯು ವಿವಿಧ ವಿಭಾಗಗಳ[17] ಅಡಿಯಲ್ಲಿ ಹರಡಿತ್ತು.

2020–21ರಲ್ಲಿ, ಸಂಸ್ಥೆಗಳಲ್ಲಿ ಸರ್ಕಾರದ ಷೇರು ಬಂಡವಾಳದ ಹೂಡಿಕೆಯ ಹಿಂಪಡೆತದಿಂದ ಸಹಕಾರ ಸಂಸ್ಥೆಗಳಲ್ಲಿನ ಹೂಡಿಕೆ ಲೆಕ್ಕವನ್ನು ₹325.00 ಕೋಟಿಗಳಷ್ಟು ಕಡಿಮೆಗೊಳಿಸಲಾಯಿತು. ಅದರ ಹುಟ್ಟುವಳಿಯನ್ನು ವಿವಿಧ ಬಂಡವಾಳ ಸ್ವೀಕೃತಿಗಳು' ಶೀರ್ಷಿಕೆಯಡಿ ಪರಿಗಣಿಸಲಾಗುತ್ತದೆ.

- **ಹೂಡಿಕೆಯ ಮೇಲಿನ ಪ್ರತಿಫಲ**

ಕಳೆದ ಐದು ವರ್ಷಗಳಲ್ಲಿ ಹೂಡಿಕೆಯ ವಿವರಗಳು ಮತ್ತು ಅದರ ಪ್ರತಿಫಲವನ್ನು **ಕೋಷ್ಟಕ–2.21**ರಲ್ಲಿ ಸೂಚಿಸಲಾಗಿದೆ. ಹೂಡಿಕೆಯ ಮೇಲಿನ ಪ್ರತಿಫಲವು ಅತ್ಯಲ್ಪವಾಗಿದೆ ಎಂಬುದು ಕೋಷ್ಟಕದಿಂದ ಸ್ಪಷ್ಟವಾಗಿದೆ.

**ಕೋಷ್ಟಕ–2.21: ಹೂಡಿಕೆಯ ಮೇಲಿನ ಪ್ರತಿಫಲ**

| | 2016–17 | 2017–18 | 2018–19 | 2019–20 | 2020–21 |
|---|---|---|---|---|---|
| ವರ್ಷದ ಕೊನೆಯಲ್ಲಿದ್ದಂತೆ ಹೂಡಿಕೆಗಳು (₹ ಕೋಟಿಗಳಲ್ಲಿ) | 63,115.06 | 65,145.88 | 66,518.28 | 67,816.71 | 68,256.68 |
| ಪ್ರತಿಫಲ (₹ ಕೋಟಿಗಳಲ್ಲಿ) | 82.50 | 78.83 | 38.30 | 53.64 | 80.70 |
| ಪ್ರತಿಫಲ (ಶೇಕಡ) | 0.13 | 0.12 | 0.10 | 0.10 | 0.12 |
| ಸರ್ಕಾರದ ಸಾಲಗಳ ಮೇಲಿನ ಸರಾಸರಿ ಬಡ್ಡಿಯ ದರ (ಶೇಕಡ) | 6.35 | 6.40 | 6.25 | 6.39 | 6.22 |
| ಬಡ್ಡಿಯದರ ಮತ್ತು ಹೂಡಿಕೆಯ ಮೇಲಿನ ಪ್ರತಿಫಲಗಳ ನಡುವಿನ ವ್ಯತ್ಯಾಸ | 6.25 | 6.30 | 6.15 | 6.29 | 6.10 |

*ಆಕರ : ಹಣಕಾಸು ಲೆಕ್ಕಗಳು*

16 ನಿಷ್ಕ್ರಿಯ ಸರ್ಕಾರಿ ಕಂಪನಿಗಳಲ್ಲಿ ಹೂಡಿದ ರೂ. 68 ಕೋಟಿಗಳನ್ನು ಒಳಗೊಂಡಿದೆ.

17 ನೀರಾವರಿ (₹3,707.31 ಕೋಟಿಗಳು), ಇಂಧನ (₹11,879.68 ಕೋಟಿಗಳು), ಮೂಲಸೌಲಭ್ಯ (₹8,839.21 ಕೋಟಿಗಳು), ಹಣಕಾಸು (₹36,40.60 ಕೋಟಿಗಳು) ಸಾರಿಗೆ (₹1,587.71 ಕೋಟಿಗಳು), ವಸತಿ (₹1,450.97 ಕೋಟಿಗಳು), ಕೈಗಾರಿಕೆಗಳು (₹908.09 ಕೋಟಿಗಳು) ಮತ್ತು ಇತರ ವಿಭಾಗಗಳು (₹2,883.11 ಕೋಟಿಗಳು)

ರಾಜ್ಯ ಸರ್ಕಾರವು ಹೂಡಿಕೆಗಳ ಮೇಲಿನ ಪ್ರತಿಫಲವು ಅತ್ಯಲ್ಪವಾಗಿದೆ ಎಂಬುದನ್ನು ಒಪ್ಪಿಕೊಂಡರೂ, ದೀರ್ಘಕಾಲಾವಧಿಯಲ್ಲಿ ಫಲ ದೊರೆಯುವ ಸಾಮಾಜಿಕ ಮೂಲ ಸೌಲಭ್ಯಗಳಲ್ಲಿ ಹೂಡಿಕೆ ಮಾಡಲು ಹಿಂಜರಿಯುವುದಿಲ್ಲ ಎಂದು ಹೇಳಿದೆ (ಜುಲೈ 2011). ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಇಲಾಖೆಯ ನಿಲುವನ್ನು ಸಮರ್ಥಿಸಿದರೂ ಆರ್ಥಿಕ ಇಲಾಖೆಯು ಹೂಡಿಕೆಗಳ ಮೇಲೆ ಆರ್ಥಿಕ ರೂಪದ ನಿರೀಕ್ಷಿತ ಫಲಗಳ ಮೌಲ್ಯನಿರ್ಣಯಕ್ಕೆ ಯಾವುದೇ ವಿಧಾನವನ್ನು ರೂಪಿಸಿಲ್ಲ ಎಂದು ಹೇಳಿದೆ (ಡಿಸೆಂಬರ್ 2011). ಇದಕ್ಕಾಗಿ ಮಾರ್ಗಸೂಚಿಗಳನ್ನು ತಯಾರಿಸಲು ಶಿಫಾರಸು ಮಾಡಿದೆ. ಸರ್ಕಾರವು ಸರಿಯಾದ ಪ್ರತಿಫಲಗಳನ್ನು ಪಡೆಯಲು ಶ್ರಮ ವಹಿಸುವುದಾಗಿ ಹೇಳಿದೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸಿನ ಹೊರತಾಗಿಯೂ ಮತ್ತು ಕಳೆದ ಹತ್ತು ವರ್ಷಗಳಿಂದ ನಮ್ಮ ವರದಿಗಳಲ್ಲಿ ಸತತವಾಗಿ ಟೀಕೆ ಮಾಡುತ್ತಿದ್ದರೂ ಮಾರ್ಗಸೂಚಿಗಳನ್ನು ತಯಾರಿಸಿಲ್ಲ. ಶಾಸಕಾಂಗದ ಮುಂದೆ ಮಂಡಿಸಿದ ಮಧ್ಯಮಾವಧಿ ವಿತ್ತೀಯ ಸುಧಾರಣಾ ಯೋಜನೆಯೂ ಹೂಡಿಕೆಗಳ ಮೇಲೆ ಸೂಕ್ತ ಪ್ರತಿಫಲವನ್ನು ಪಡೆಯುವ ಯಾವುದೇ ಮಾರ್ಗದರ್ಶನವನ್ನು ಹೊಂದಿಲ್ಲ.

ನಿರ್ಗಮನ ಸಮಾಲೋಚನೆಯಲ್ಲಿ (ಡಿಸೆಂಬರ್ 2021) ಲಾಭ ಗಳಿಸುತ್ತಿರುವ ಸಾರ್ವಜನಿಕ ಉದ್ಯಮಗಳಿಂದ ಲಾಭಾಂಶವನ್ನು ಸಂಗ್ರಹಿಸಲು ಕೇಂದ್ರ ಸರ್ಕಾರ ಅನುಸರಿಸುತ್ತಿರುವ ವಿಧಾನವನ್ನು ಅನುಸರಿಸಲಾಗುವುದು ಎಂದು ಆರ್ಥಿಕ ಇಲಾಖೆಯು ಹೇಳಿದೆ. ಮೊದಲನೆಯದಾಗಿ ಪಿಎಸ್‌ಯುಗಳು ಗಳಿಸಿದ ಲಾಭಗಳ ಶೇಕಡ 30ಕ್ಕಿಂತ ಕಡಿಮೆಯಿಲ್ಲದಂತೆ ಲಾಭಾಂಶಗಳ ಪಾವತಿಗೆ ಸಾರ್ವಜನಿಕ ಉದ್ದಿಮೆಗಳ ಇಲಾಖೆಯು ಮಾರ್ಗಸೂಚಿಗಳನ್ನು ಜಾರಿ ಮಾಡಿದೆಯೆಂದು ಹೇಳಿತು. ಆರ್ಥಿಕ ಇಲಾಖೆಯು, ಲಾಭ ಗಳಿಸುತ್ತಿರುವ ಪಿಎಸ್‌ಯುಗಳ ಮಂಡಳಿಗಳ ಭಾಗವಾಗಿರುವ ತನ್ನ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಲಾಭಾಂಶಗಳ ಪಾವತಿ ಹಾಗೂ ಸಾಲಗಳ ಮರುಪಾವತಿಗಳನ್ನು ಮೇಲ್ವಿಚಾರಣೆ ಮಾಡಲು ನಿರ್ದೇಶನಗಳನ್ನು ನೀಡಲಾಗಿದೆಯೆಂದೂ ಹೇಳಿತು.

- **ನಷ್ಟದ ಕಂಪನಿಗಳಲ್ಲಿ ಹೂಡಿಕೆ**

ಮೇಲೆ ಹೇಳಿದ ಸರ್ಕಾರದ ಹೂಡಿಕೆಯು ಗಣನಾರ್ಹ ನಷ್ಟವನ್ನು ಅನುಭವಿಸುತ್ತಿರುವ, ಸಾಕಷ್ಟು ಪ್ರಮಾಣದ ಮೊತ್ತವನ್ನು ಹೂಡಿರುವ ಈ ಕೆಳಗಿನ ಕಂಪನಿಗಳು/ನಿಗಮಗಳಲ್ಲಿ ಹೂಡಿರುವ ₹42,119.95 ಕೋಟಿಗಳನ್ನು (ಶೇಕಡ 62) ಒಳಗೊಂಡಿತ್ತು (**ಕೋಷ್ಟಕ–2.22**)

**ಕೋಷ್ಟಕ–2.22: ನಷ್ಟದಲ್ಲಿರುವ ಕಂಪನಿಗಳಲ್ಲಿ ಮಾಡಿರುವ ಹೂಡಿಕೆಗಳು**

(₹ ಕೋಟಿಗಳಲ್ಲಿ)

| ಕಂಪನಿ/ಕಾರ್ಪೋರೇಶನ್ | 2017–18ರ ಅಂತ್ಯದಲ್ಲಿದ್ದಂತೆ ಸಂಚಿತ ನಷ್ಟ | 2018–19ರ ಅಂತ್ಯದಲ್ಲಿದ್ದಂತೆ ಸಂಚಿತ ನಷ್ಟ | 2019–20ರ ಅಂತ್ಯದಲ್ಲಿದ್ದಂತೆ ಸಂಚಿತ ನಷ್ಟ | 2020–21ರವರೆಗೆ ಮಾಡಿದ ಹೂಡಿಕೆಗಳು |
|---|---|---|---|---|
| ಶಾಸನಬದ್ಧ ನಿಗಮಗಳು | | | | |
| ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ | 792.48 | 881.55 | 1,068.00 | 266.85 |
| ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ | 542.42 | 610.65 | 699.92 | 183.43 |
| ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ | 391.20 | 386.17 | 361.35 | 1,278.41 |
| ಸರ್ಕಾರಿ ಕಂಪನಿಗಳು | | | | |
| ಕೃಷ್ಣ ಭಾಗ್ಯ ಜಲನಿಗಮ ನಿಯಮಿತ | 2,587.22 | 2,811.73 | 2,946.51 | 23,745.34 |
| ಕರ್ನಾಟಕ ನೀರಾವರಿ ನಿಗಮ ನಿಯಮಿತ | 3,492.46 | 4,469.21 | 5,149.92 | 13,034.03 |
| ಮೈಸೂರು ಸಕ್ಕರೆ ಕಂಪನಿ ನಿಯಮಿತ | 289.42 | 460.89 | 460.89 | 335.78 |
| ಮೈಸೂರು ಪೇಪರ್ ಮಿಲ್ಸ್ ನಿಯಮಿತ | 425.95 | 425.95 | 425.95 | 237.37 |
| ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 2,645.76 | 1,955.76 | 2,637.98 | 1,261.50 |
| ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 1,349.58 | 1,002.44 | 1,995.03 | 969.67 |
| ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 611.06 | 875.74 | 1,242.37 | 807.57 |
| ಒಟ್ಟು | **13,127.55** | **13,880.09** | **16,987.92** | **42,119.95** |

*ಆಕರ : ಹಣಕಾಸು ಲೆಕ್ಕಗಳು*

2020–21ರವರೆಗೆ, ಸರ್ಕಾರವು ಈ ಕಂಪನಿಗಳಲ್ಲಿ ₹42,119.95 ಕೋಟಿಗಳ ಹೂಡಿಕೆ ಮಾಡಿದೆ ಮತ್ತು ಸಂಚಿತ ನಷ್ಟವು ₹16,987.92 ಕೋಟಿ ಆಗಿದೆ. ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ ಕೆಲವು ಕಂಪನಿಗಳು (ನೀರಾವರಿ ಮತ್ತು ಇಂಧನ ವಿಭಾಗ) ನಷ್ಟವನ್ನು ಅನುಭವಿಸುತ್ತಿದ್ದರೂ ಅದು ಮೂಲಸೌಕರ್ಯ ಮತ್ತು ಉದ್ಯೋಗದ ಸೃಷ್ಟಿಗೆ ಕಾರಣವಾಗಿರುವುದರಿಂದ ಹೂಡಿಕೆಯು ಅನಿವಾರ್ಯವಾಗಿದೆ ಎಂದು ಹೇಳಿದೆ (ಫೆಬ್ರವರಿ 2021). 2020–21ರಲ್ಲಿ, ಹಿಂದಿನ ವರ್ಷಕ್ಕೆ ಹೋಲಿಸಿದರೆ ಸರ್ಕಾರವು ಹೆಸ್ಕಾಮ್ (₹20.94 ಕೋಟಿ), ಗೆಸ್ಕಾಮ್ (₹5.98 ಕೋಟಿ) ಮತ್ತು ಸೆಸ್ಕಾಮ್‌ಗಳಲ್ಲಿ (₹3.68 ಕೋಟಿ) ಬಹಳ ಕಡಿಮೆ ಮೊತ್ತವನ್ನು ಹೂಡಿಕೆ ಮಾಡಿದೆ.

ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ತನ್ನ 5ನೇ ವರದಿಯಲ್ಲಿ (ಜುಲೈ 2015) ನಷ್ಟದಲ್ಲಿರುವ ಕಂಪನಿಗಳು/ನಿಗಮಗಳ ಕಾರ್ಯ ಸಾಧನೆಯನ್ನು ನಿರ್ಣಯಿಸಲು ಮತ್ತು ಹದಿಮೂರನೆಯ ಹಣಕಾಸು ಆಯೋಗವು ಶಿಫಾರಸು ಮಾಡಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸದ ಕಂಪನಿಗಳು/ನಿಗಮಗಳನ್ನು ಗುರುತಿಸಿ ಮುಚ್ಚಲು ಶಿಫಾರಸು ಮಾಡಿದೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಹಣಕಾಸು ಲೆಕ್ಕ ಪರಿಶೋಧನಾ ವರದಿಗಳಲ್ಲಿ ಭಾರೀ ನಷ್ಟವನ್ನು ಅನುಭವಿಸುತ್ತಿರುವ ರಾಜ್ಯ ಸಾರ್ವಜನಿಕ ವಲಯದ ಉದ್ಯಮಗಳ ಕೆಲಸವನ್ನು ಪರಿಶೀಲಿಸಲು ಮತ್ತು ಹೂಡಿಕೆ/ಪುನಶ್ಚೇತನ/ಮುಚ್ಚುವಿಕೆಗೆ ಸೂಕ್ತ ಕ್ರಮ ಕೈಗೊಳ್ಳಲು ಶಿಫಾರಸು ಮಾಡಿದೆ. 2019–20ರ ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಗೆ ನೀಡಿದ ಉತ್ತರದಲ್ಲಿ ಆರ್ಥಿಕ ಇಲಾಖೆಯು ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಿಸಿದ ಇಲಾಖೆಗಳಿಗೆ ಮನವಿ ಮಾಡಲಾಗುವುದು ಎಂದು ಹೇಳಿದೆ (ಆಗಸ್ಟ್ 2021). ಈ ನಿಟ್ಟಿನಲ್ಲಿ ಇನ್ನೂ ಕ್ರಮ ಕೈಗೊಳ್ಳಬೇಕಿದೆ.

### 2.5.4.2 ರಾಜ್ಯ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು

ಕಂಪನಿಗಳು, ನಿಗಮಗಳು ಮತ್ತು ಸಹಕಾರ ಸಂಸ್ಥೆಗಳಲ್ಲಿ ಹೂಡಿಕೆಯ ಜೊತೆಗೆ, ಸರ್ಕಾರವು ಅನೇಕ ಸಂಸ್ಥೆಗಳಿಗೆ ಸಾಲ ಮತ್ತು ಮುಂಗಡಗಳನ್ನು ಸಹ ನೀಡುತ್ತದೆ. 31 ಮಾರ್ಚ್ 2021ರಲ್ಲಿದ್ದಂತೆ ಬಾಕಿ ಉಳಿದಿರುವ ಸಾಲಗಳು ಮತ್ತು ಮುಂಗಡಗಳ ಸ್ಥಿತಿಯನ್ನು ಮತ್ತು ಕಳೆದ ಐದು ವರ್ಷಗಳಲ್ಲಿ ಬಡ್ಡಿ ಪಾವತಿಗಳಿಗೆ ಹೋಲಿಸಿದರೆ ಬಡ್ಡಿ ಸ್ವೀಕೃತಿಗಳನ್ನು **ಕೋಷ್ಟಕ–2.23** ಪ್ರಸ್ತುತ ಪಡಿಸುತ್ತದೆ.

**ಕೋಷ್ಟಕ–2.23: ಕಳೆದ ಐದು ವರ್ಷಗಳಲ್ಲಿ ವಿತರಿಸಲಾದ ಮತ್ತು ವಸೂಲಿಯಾದ ಸಾಲಗಳ ಪ್ರಮಾಣ**

(₹ ಕೋಟಿಗಳಲ್ಲಿ)

| | 2016–17 | 2017–18 | 2018–19 | 2019–20 | 2020–21 |
|---|---|---|---|---|---|
| ಬಾಕಿ ಇರುವ ಸಾಲಗಳ ಆರಂಭಿಕ ಶಿಲ್ಕು | 13,813 | 15,578 | 20,525 | 24,981 | 28,847 |
| ವರ್ಷದಲ್ಲಿ ನೀಡಿದ ಮೊತ್ತ | 1,935 | 5,092 | 4,487 | 4,069 | 2,669 |
| ವರ್ಷದಲ್ಲಿ ವಸೂಲಾದ ಮೊತ್ತ | 100 | 137 | 31 | 203 | 270 |
| ಬಾಕಿ ಇರುವ ಸಾಲಗಳ ಅಂತಿಮ ಶಿಲ್ಕು | 15,648 | 20,533 | 24,981 | 28,847 | 31,246 |
| ನಿವ್ವಳ ಸೇರ್ಪಡೆ | 1,835 | 4,955 | 4,456 | 3,866 | 2,399 |
| ಪಡೆದ ಬಡ್ಡಿ | 145 | 99 | 108 | 357 | 278 |

*ಆಕರ : ಹಣಕಾಸು ಲೆಕ್ಕಗಳು*

- 31 ಮಾರ್ಚ್ 2021ರಂತೆ ಬಾಕಿ ಉಳಿದಿರುವ ಸಾಲಗಳ ಮೊತ್ತವು ₹31,246 ಕೋಟಿಗಳಾಗಿವೆ. ಮಹಾಲೇಖಾಪಾಲರು (ಲೆ ಮತ್ತು ಹ) ನಿರ್ವಹಿಸಿದ ಸಾಲಗಳಿಗೆ ಸಂಬಂಧಿಸಿದಂತೆ ಮಾರ್ಚ್ 2020ರ ಅಂತ್ಯದ ವೇಳೆಗೆ ಇದ್ದ ಬಾಕಿಯ ಮೇಲಿನ ಬಡ್ಡಿಯು ₹4,374.90 ಕೋಟಿಗಳಷ್ಟಿದೆ. 2020–21ರಲ್ಲಿ, ಸ್ವೀಕರಿಸಿದ ಬಡ್ಡಿಯು ₹278 ಕೋಟಿಗಳಾಗಿದ್ದು ಇದು ಪ್ರಧಾನ ಮಹಾಲೇಖಾಪಾಲರು (ಲೆ ಮತ್ತು ಹ) ನಿರ್ವಹಿಸಿದ ಸಾಲಗಳ ಮೇಲಿನ ಬಾಕಿಯಿರುವ ಬಡ್ಡಿಯ ಶೇಕಡ 6.35ರಷ್ಟಿದೆ. ಪ್ರಧಾನ ಮಹಾಲೇಖಾಪಾಲರು (ಲೆ ಮತ್ತು ಹ) ನಿರ್ವಹಿಸಿದ ಸಾಲಗಳಿಗೆ ಸಂಬಂಧಿಸಿದಂತೆ ಮಾರ್ಚ್

2021ರಲ್ಲಿಂತೆ ಬಾಕಿ ಬಡ್ಡಿಯು ₹4,904.26 ಕೋಟಿಗಳು ಆಗಿತ್ತು. ಆದರೆ, ರಾಜ್ಯ ಸರ್ಕಾರವು ನಿರ್ವಹಿಸುತ್ತಿರುವ ಸಾಲಗಳಿಗೆ ಸಂಬಂಧಿಸಿದಂತೆ ಬಾಕಿ ಇರುವ ಬಡ್ಡಿಯ ವಿವರಗಳು ಲಭ್ಯವಿಲ್ಲ.

- 2020–21ರಲ್ಲಿ ಮುಂಗಡ ನೀಡಿದ ಒಟ್ಟು ಸಾಲಗಳಲ್ಲಿ (₹2,669 ಕೋಟಿ), ಸಾಮಾಜಿಕ ಸೇವೆಗಳು ₹1,393 ಕೋಟಿಗಳು (ಶೇಕಡ 52), ಆರ್ಥಿಕ ಸೇವೆಗಳು ₹1,271 ಕೋಟಿಗಳು (ಶೇಕಡ 47) ಮತ್ತು ಉಳಿದ ₹5 ಕೋಟಿಗಳು ಸರ್ಕಾರಿ ನೌಕರರಿಗೆ ಸಂಬಂಧಿಸಿವೆ. ಸಾಮಾಜಿಕ ಸೇವೆಗಳಲ್ಲಿ ನೀರು ಸರಬರಾಜು, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿಗಳು ಪ್ರಮುಖ ಪಾಲನ್ನು (₹1,367.75 ಕೋಟಿಗಳು) ಪಡೆದಿವೆ ಮತ್ತು ಆರ್ಥಿಕ ಸೇವೆಗಳಲ್ಲಿ ಕೈಗಾರಿಕೆ ಮತ್ತು ಖನಿಜಗಳು ₹1,166.11 ಕೋಟಿಗಳನ್ನು ಪಡೆದಿದೆ.
- 21 ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸಾಲಗಳ ವಸೂಲಾತಿಯ ವಿವರವಾದ ಲೆಕ್ಕಗಳನ್ನು ಪ್ರಧಾನ ಮಹಾಲೇಖಾಪಾಲರು (ಲೆ ಮತ್ತು ಹ) ಅವರ ಕಛೇರಿಯಲ್ಲಿ ನಿರ್ವಹಿಸಲಾಗುತ್ತದೆ ಮತ್ತು 842 ಸಂಸ್ಥೆಗಳಿಗೆ ಸಂಬಂಧಿಸಿದಂತೆ ಇದನ್ನು ಇಲಾಖೆಗಳ ಮುಖ್ಯಸ್ಥರು/ಸರ್ಕಾರದ ಮುಖ್ಯ ನಿಯಂತ್ರಣ ಅಧಿಕಾರಿಗಳು ನಿರ್ವಹಿಸುತ್ತಾರೆ.
- ಪ್ರಧಾನ ಮಹಾಲೇಖಾಪಾಲರು (ಲೆ ಮತ್ತು ಹ) ನಿರ್ವಹಿಸುವ ಸಾಲದ ಲೆಕ್ಕಗಳಿಗೆ ಸಂಬಂಧಿಸಿದಂತೆ, 31 ಮಾರ್ಚ್ 2021ರ ಅಂತ್ಯಕ್ಕೆ ವಸೂಲು ಮಾಡಬೇಕಿರುವ ಒಟ್ಟು ₹9,911.80 ಕೋಟಿಗಳ ಸಾಲಗಳು ಮತ್ತು ಮುಂಗಡಗಳ (ಅಸಲು: ₹5,007.54 ಕೋಟಿಗಳು ಮತ್ತು ಬಡ್ಡಿ: ₹4,904.26 ಕೋಟಿಗಳು) ವಸೂಲಾತಿಯ ಅವಧಿ ಮೀರಿದೆ (**ಅನುಬಂಧ–2.5**).
- ಇಲಾಖೆಗಳ ಮುಖ್ಯಸ್ಥರು/ಮುಖ್ಯ ನಿಯಂತ್ರಣ ಅಧಿಕಾರಿಗಳು ನಿರ್ವಹಿಸುವ ಸಾಲಗಳ ಅವಧಿ ಮೀರಿದ ಅಸಲು ಮತ್ತು ಬಡ್ಡಿಗೆ ಸಂಬಂಧಿಸಿದಂತೆ 842 ಸಂಸ್ಥೆಗಳಲ್ಲಿ ಎಂಟು[18] ಸಂಸ್ಥೆಗಳು ಮಾತ್ರ ಅಗತ್ಯ ಮಾಹಿತಿಯನ್ನು ಒದಗಿಸಿರುವುದರಿಂದ 2020–21ರ ಹಣಕಾಸು ಲೆಕ್ಕಗಳ ವಿವರಣ ಪಟ್ಟಿ ಸಂಖ್ಯೆ–7ರಲ್ಲಿ ತೋರಿಸಿರುವ ಮಾಹಿತಿಯು ಅಪೂರ್ಣವಾಗಿದೆ.
- ಭಾರತ ಸರ್ಕಾರದ ಲೆಕ್ಕಪತ್ರ ಮಾನದಂಡಗಳು (ಐಜಿಎಎಸ್–3) ನಿಗದಿಸಿದಂತೆ ಆಯಾ ಸಾಲಗಳಿಗೆ ಸಂಬಂಧಿಸಿದ ನಿರ್ದಿಷ್ಟ ನಿಯಮಗಳು ಮತ್ತು ಷರತ್ತುಗಳಿಲ್ಲದೆ ಮಂಜೂರಾದ ಸಾಲಗಳನ್ನು ಪ್ರಕಟಪಡಿಸುವ ಅಗತ್ಯವಿದೆ. 2020–21ರಲ್ಲಿ ರಾಜ್ಯ ಸರ್ಕಾರವು ಮಂಜೂರು ಮಾಡಿದ ₹4,063.95 ಕೋಟಿಗಳ ಮೊತ್ತದ 66 ಸಾಲಗಳಲ್ಲಿ, ₹2,817.89 ಕೋಟಿಗಳ ಮೊತ್ತದ 50 ಸಾಲಗಳನ್ನು ಯಾವುದೇ ನಿಯಮಗಳು ಮತ್ತು ಷರತ್ತುಗಳನ್ನು ನಿರ್ದಿಷ್ಟಪಡಿಸದೆ ಮಂಜೂರು ಮಾಡಲಾಗಿದೆ. ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ ಸಂಖ್ಯೆ–18ರಲ್ಲಿ ವಿವರಗಳು ಹೆಚ್ಚುವರಿ ಪ್ರಕಟಗಳಾಗಿ ಲಭ್ಯವಿದೆ.

ಸರ್ಕಾರವು ನವೆಂಬರ್ 2013ರ ಆದೇಶದಲ್ಲಿ ಸಾಲ ಮಂಜೂರಾತಿಗೆ ಸಂಬಂಧಿಸಿದಂತೆ ನವೆಂಬರ್ 2013ರಲ್ಲಿ ನಿಯಮಗಳು, ಷರತ್ತುಗಳು ಮತ್ತು ಇತರ ಕಾರ್ಯವಿಧಾನದ ಅಂಶಗಳನ್ನು ಪರಿಷ್ಕರಿಸಿದೆ ಮತ್ತು ಅದನ್ನು ಇಲಾಖೆಗಳು ಅನುಸರಿಸಬೇಕು ಎಂದು ಆರ್ಥಿಕ ಇಲಾಖೆಯು ತನ್ನ ಸುತ್ತೋಲೆಯಲ್ಲಿ (ಆಗಸ್ಟ್ 2018) ಹೇಳಿದೆ. 2020–21ರಲ್ಲಿ ಮಂಜೂರಾದ ಸಾಲಗಳಲ್ಲಿ ನಿಯಮಗಳು ಮತ್ತು ಷರತ್ತುಗಳನ್ನು ನಿರ್ದಿಷ್ಟ ಪಡಿಸದ ಕಾರಣ, ಇಲಾಖೆಗಳು ಸರ್ಕಾರದ ಆದೇಶಗಳಿಗೆ ಬದ್ಧವಾಗಿಲ್ಲ ಎಂಬುದನ್ನು ಸೂಚಿಸಿದೆ. ಇದು ಅಸಮರ್ಪಕ ಉಸ್ತುವಾರಿ ಮತ್ತು ಕಡಿಮೆ ಸಾಲ ವಸೂಲಾತಿಗೆ ಕಾರಣವಾಗುತ್ತದೆ.

2006–07ರಿಂದ ಸಾಲಗಳ ಅಲ್ಪ ವಸೂಲಾತಿ ಹಾಗೂ ನಿಯಮಗಳು ಮತ್ತು ಷರತ್ತುಗಳನ್ನು ವಿಧಿಸದೆ ಸಾಲ ಮಂಜೂರು ಮಾಡುತ್ತಿರುವುದನ್ನು ವರದಿಗಳ ಮೂಲಕ ಗಮನಕ್ಕೆ ತರಲಾಗುತ್ತಿದೆ. ನಿಯಮಗಳು ಮತ್ತು ಷರತ್ತುಗಳ ಪರಿಷ್ಕರಣೆ ಕುರಿತು ರಾಜ್ಯ ಸರ್ಕಾರವು ಪದೇ ಪದೇ ಸುತ್ತೋಲೆಗಳನ್ನು ಹೊರಡಿಸಿದೆ. ಆದಾಗ್ಯೂ, ಇದು ಸಾಲ/ಬಡ್ಡಿ ವಸೂಲಾತಿಗಾಗಿ ಯಾವುದೇ ಪರಿಣಾಮಕಾರಿ ಮಾರ್ಗಸೂಚಿಯನ್ನು

[18] 2019–20ರಲ್ಲಿ 842 ಸಂಸ್ಥೆಗಳಲ್ಲಿ 16 ಸಂಸ್ಥೆಗಳು ಮಾಹಿತಿಯನ್ನು ಒದಗಿಸಿವೆ.

ಸಿದ್ಧಪಡಿಸಲಿಲ್ಲ ಅಥವಾ ವಿವಿಧ ಇಲಾಖೆಗಳು ಸರ್ಕಾರದ ಸುತ್ತೋಲೆಗಳ ಸೂಚನೆಗಳನ್ನು ಅನುಸರಿಸದಿರುವ ಬಗ್ಗೆ ಯಾವುದೇ ಕ್ರಮಗಳನ್ನು ಜಾರಿಗೊಳಿಸಿಲ್ಲ.

ವಿತ್ತೀಯ ನಿರ್ವಹಣಾ ಸುಧಾರಣಾ ಸಮಿತಿಯು ಫೆಬ್ರವರಿ 2021ರಲ್ಲಿ ಸರ್ಕಾರವು ವಿತರಿಸಿದ ಸಾಲಗಳು ಮತ್ತು ಮುಂಗಡಗಳ ವಸೂಲಿಯು ನಿಧಾನಗತಿಯಲ್ಲಿದೆ ಎಂದು ಮತ್ತೊಮ್ಮೆ ಗಮನಿಸಿದೆ. ಆರ್ಥಿಕ ಇಲಾಖೆಯು ಸಾಲಗಳನ್ನು ವಸೂಲಿ ಮಾಡಲು ತೆಗೆದುಕೊಳ್ಳುತ್ತಿರುವ ಕ್ರಮಗಳು ಮತ್ತು ಎಲ್ಲಾ ಹೊಣೆಗಾರಿಕೆಗಳ ಮೇಲ್ವಿಚಾರಣೆ ಮಾಡಲು ಮತ್ತು ನಿರ್ವಹಿಸಲು ಅಭಿವೃದ್ಧಿ ಪಡಿಸಲಾಗುತ್ತಿರುವ ಖಜಾನೆ–2ರ ಆಸ್ತಿಗಳು ಮತ್ತು ಹೊಣೆಗಾರಿಕೆ ನಿರ್ವಹಣಾ ಮಾಡ್ಯೂಲ್ ಬಗ್ಗೆ ಸಮಿತಿಯ ಗಮನಕ್ಕೆ ತಂದಿದೆ. ಈ ಮಾಡ್ಯೂಲ್ ಇನ್ನೂ ಅಭಿವೃದ್ಧಿ ಹಂತದಲ್ಲಿರುವುದರಿಂದ, ವಸೂಲಿಯಲ್ಲಿನ ನಿಧಾನಗತಿಯು 2021–22ರಲ್ಲೂ ಮುಂದುವರಿಯುತ್ತದೆ.

### 2.5.4.3 ಸರ್ಕಾರಿ ಕಂಪನಿಗಳು/ನಿಗಮಗಳಲ್ಲಿನ ಹೂಡಿಕೆಗಳು ಮತ್ತು ಆಯವ್ಯಯ ಬೆಂಬಲ

ಕರ್ನಾಟಕದಲ್ಲಿ ರಾಜ್ಯ ಸರ್ಕಾರಿ ಕಂಪನಿಗಳು ಮತ್ತು ಶಾಸನ ಬದ್ಧ ನಿಗಮಗಳನ್ನು ಒಳಗೊಂಡಿರುವ ರಾಜ್ಯ ಸಾರ್ವಜನಿಕ ವಲಯದ ಉದ್ಯಮಗಳು ಜನರ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು ವಾಣಿಜ್ಯ ಸ್ವರೂಪದ ಚಟುವಟಿಕೆಗಳನ್ನು ಕೈಗೊಳ್ಳಲು ಸ್ಥಾಪಿಸಲಾಗಿದೆ. ಈ ಕಂಪನಿಗಳಲ್ಲಿ ರಾಜ್ಯ ಸರ್ಕಾರವು ಹಣಕಾಸಿನ ಪಾಲನ್ನು ಹೊಂದಿದೆ ಮತ್ತು ಅದು ಪ್ರಮುಖವಾಗಿ ಕೆಳಗಿನ ರೂಪದಲ್ಲಿ ಇರುತ್ತವೆ.

- ಷೇರು ಬಂಡವಾಳ ಮತ್ತು ಸಾಲಗಳು : ಷೇರು ಬಂಡವಾಳ ವಂತಿಗೆ ಮತ್ತು ಸಾಲಗಳ ರೂಪದಲ್ಲಿ ಆರ್ಥಿಕ ಸಹಾಯ
- ವಿಶೇಷ ಆರ್ಥಿಕ ಬೆಂಬಲ : ಅನುದಾನ ಮತ್ತು ಸಹಾಯಧನಗಳ ಮೂಲಕ ಆಯವ್ಯಯ ಬೆಂಬಲ
- ಖಾತರಿಗಳು : ಹಣಕಾಸು ಸಂಸ್ಥೆಗಳಿಂದ ರಾಜ್ಯ ಸಾರ್ವಜನಿಕ ವಲಯದ ಉದ್ಯಮಗಳು ಪಡೆದ ಸಾಲಗಳ ಮರುಪಾವತಿ ಬಡ್ಡಿ ಸಮೇತ

ಈ ರಾಜ್ಯ ಸಾರ್ವಜನಿಕ ವಲಯದ ಉದ್ಯಮಗಳ ವಹಿವಾಟು (₹77,607.61 ಕೋಟಿಗಳು[19]) 2020–21ರ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಸುಮಾರು ಶೇಕಡ 4.30ರಷ್ಟು ಇರುವುದರಿಂದ ಇದು ರಾಜ್ಯದ ಆರ್ಥಿಕತೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ.

ಈ ಉದ್ಯಮಗಳ ದಾಖಲೆಗಳ ಪ್ರಕಾರ ಈಕ್ವಿಟಿ, ಬಾಕಿ ಉಳಿದಿರುವ ಸಾಲಗಳು ಮತ್ತು ಖಾತರಿಗಳ ಅಂಕಿಗಳು ರಾಜ್ಯದ ಹಣಕಾಸು ಲೆಕ್ಕಗಳಲ್ಲಿ ಕಾಣಿಸಿರುವ ಅಂಕಿಗಳೊಂದಿಗೆ ತಾಳೆ ಆಗಬೇಕು. ಅಂಕಿಗಳು ತಾಳೆಯಾಗದಿದ್ದಲ್ಲಿ ಸಂಬಂಧಿತ ರಾಜ್ಯ ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಆರ್ಥಿಕ ಇಲಾಖೆಯು ವ್ಯತ್ಯಾಸಗಳ ಸಮನ್ವಯವನ್ನು ಕೈಗೊಳ್ಳಬೇಕು. ಈ ಸಂಬಂಧ 31 ಮಾರ್ಚ್ 2021ರಲ್ಲಿದ್ದ ಸ್ಥಿತಿಯನ್ನು **ಕೋಷ್ಟಕ–2.24**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.24: ಹಣಕಾಸು ಲೆಕ್ಕಗಳ ಪ್ರಕಾರ ಇರುವ ಇಕ್ವಿಟಿ, ಸಾಲಗಳು ಮತ್ತು ಖಾತರಿಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಇವುಗಳ ಸಂಬಂಧವಾಗಿ ಬಾಕಿ ಇರುವವು | ಮೊತ್ತ | | ವ್ಯತ್ಯಾಸ |
|---|---|---|---|---|
| | | ಹಣಕಾಸು ಲೆಕ್ಕಗಳು | ಎಸ್‌ಪಿಎಸ್‌ಯುಗಳು | |
| 1 | ಷೇರುಗಳು | 62,179.71 | 86,380.69 | (–)24,200.98 |
| 2 | ಸಾಲಗಳು | 7,105.25 | 12,476.15 | (–)5,370.90 |
| 3 | ಖಾತರಿಗಳು | 28,112.41 | 26,812.70 | 1,299.71 |

[19] ನವೆಂಬರ್ 2021ರಲ್ಲಿದ್ದಂತೆ ಇತ್ತೀಚಿನ ಅಂತಿಮಗೊಳಿಸಿದ ಲೆಕ್ಕಗಳು.

11 ವಿದ್ಯುತ್ ವಲಯದ ಸಾರ್ವಜನಿಕ ವಲಯದ ಉದ್ಯಮಗಳು ಮತ್ತು 98 ಇತರ ಸಾರ್ವಜನಿಕ ವಲಯದ ಉದ್ಯಮಗಳಿಗೆ ಸಂಬಂಧಿಸಿದಂತೆ ವ್ಯತ್ಯಾಸಗಳಿವೆ. ಒಂಬತ್ತು[20] ಕಂಪನಿಗಳಲ್ಲಿ ಪ್ರಧಾನವಾಗಿ ವ್ಯತ್ಯಾಸಗಳನ್ನು ಗಮನಿಸಲಾಗಿದೆ. ಈ ವ್ಯತ್ಯಾಸಗಳನ್ನು ಸಮನ್ವಯಗೊಳಿಸಲು ಸರ್ಕಾರ ಮತ್ತು ಸಂಬಂಧಪಟ್ಟ ಉದ್ಯಮಗಳು ದೃಢವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ರಾಜ್ಯ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ರಾಜ್ಯ ಸರ್ಕಾರದ ಪಾಲು ವಿವರಗಳನ್ನು ಮುಂದಿನ ಕಂಡಿಕೆಗಳಲ್ಲಿ ಹೊರತರಲಾಗಿದೆ.

**(i) ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳಲ್ಲಿ ಷೇರು ಬಂಡವಾಳ**

ಮಾರ್ಚ್ 2021ರ ಅಂತ್ಯದ ವೇಳೆಗೆ ರಾಜ್ಯದಲ್ಲಿ 124[21] ಸಾರ್ವಜನಿಕ ವಲಯ ಉದ್ಯಮಗಳು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವ್ಯಾಪ್ತಿಗೆ ಒಳಪಟ್ಟಿವೆ. ಮಾರ್ಚ್ 2021ರ ಅಂತ್ಯದ ವೇಳೆಗೆ ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳು ಒದಗಿಸಿದಂತೆ ರಾಜ್ಯ ಸರ್ಕಾರವು ಈ ಉದ್ಯಮಗಳಲ್ಲಿ ₹86,380.69 ಕೋಟಿಗಳ ಹೂಡಿಕೆ ಮಾಡಿದೆ.

2020–21ರಲ್ಲಿನ ಹೂಡಿಕೆಗಳ ಜೊತೆಗೆ ಈ 124 ಉದ್ಯಮಗಳಿಗೆ ಕೇಂದ್ರ ಸರ್ಕಾರವು ₹379.05 ಕೋಟಿಗಳ ಮೊತ್ತದ ಅನುದಾನ/ಸಹಾಯಧನಗಳನ್ನು ನೀಡಿದ್ದರೆ, ರಾಜ್ಯ ಸರ್ಕಾರವು ₹17,466.44 ಕೋಟಿಗಳನ್ನು ನೀಡಿದೆ.

**(ii) ಹೂಡಿಕೆಗಳ ಹಿಂಪಡೆತ/ಉದ್ಯಮಗಳ ಮುಚ್ಚುವಿಕೆ**

ರಾಜ್ಯ ಸರ್ಕಾರವು ರಾಜ್ಯದಲ್ಲಿ ಸಾರ್ವಜನಿಕ ವಲಯದ ಸುಧಾರಣೆಗಳು ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಖಾಸಗೀಕರಣದ ಸಮಗ್ರ ನೀತಿಯನ್ನು ಅಂಗೀಕರಿಸಿತು ಮತ್ತು ಅಳವಡಿಸಿಕೊಂಡಿತು (ಫೆಬ್ರವರಿ 2001). ಇದಲ್ಲದೆ, 113 ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳಲ್ಲಿ (ವಿದ್ಯುತ್ ವಲಯವನ್ನು ಹೊರತುಪಡಿಸಿ) 13 ಉದ್ಯಮಗಳು ನಿಷ್ಕ್ರಿಯವಾಗಿದ್ದವು. ಇವುಗಳಲ್ಲಿ ನಾಲ್ಕು ಸಾರ್ವಜನಿಕ ವಲಯ ಉದ್ಯಮಗಳು ದಿವಾಳಿಯ ಹಂತದಲ್ಲಿವೆ ಮತ್ತು ಎಂಟು ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳನ್ನು ಮುಚ್ಚುವ ಆದೇಶಗಳನ್ನು ನೀಡಲಾಗಿದ್ದು ದಿವಾಳಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿಲ್ಲ. ಒಂದು ಉದ್ಯಮಕ್ಕೆ ಸಂಬಂಧಿಸಿದಂತೆ, ಸರ್ಕಾರವು ಜೂನ್ 2017ರಲ್ಲಿ ದಿವಾಳಿ ಆದೇಶವನ್ನು ಹಿಂತೆಗೆದುಕೊಂಡಿತು.

**(iii) ಸರ್ಕಾರಿ ಕಂಪನಿಗಳು/ನಿಗಮಗಳಿಂದ ಪ್ರತಿಫಲ[22]**

2016–17ರಿಂದ 2020–21ರ ಅವಧಿಯಲ್ಲಿ, ಲಾಭಗಳಿಸಿದ ಸಾರ್ವಜನಿಕ ವಲಯ ಉದ್ಯಮಗಳ ಸಂಖ್ಯೆಯು 47 ಮತ್ತು 57ರ ನಡುವೆ ಇತ್ತು. ಅದರಲ್ಲಿ 10 ರಿಂದ 16 ಉದ್ಯಮಗಳು ಮಾತ್ರ ಲಾಭಾಂಶವನ್ನು ಘೋಷಿಸಿವೆ. 2020–21ರಲ್ಲಿ, ಈ ಉದ್ಯಮಗಳು ಗಳಿಸಿದ ₹2,987 ಕೋಟಿಗಳ ಲಾಭದಲ್ಲಿ ₹59.01 ಕೋಟಿಗಳನ್ನು ಮಾತ್ರ ಡಿವಿಡೆಂಡ್‌ಆಗಿ ಪಾವತಿಸಿದ್ದಾರೆ. ಡಿವಿಡೆಂಡ್ ಪಾವತಿಯು ಕೇವಲ ನಾಮಮಾತ್ರವಾಗಿದ್ದು 2020–21ರಲ್ಲಿ ಇದು ಸಂದಾಯಿತ ಬಂಡವಾಳದ ಶೇಕಡ 1.98 ಆಗಿತ್ತು.

[20] **ಈಕ್ವಿಟಿ:** ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾವೇರಿ ನೀರಾವರಿ ನಿಗಮ ನಿಯಮಿತ, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ರೈಲು ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕರ್ನಾಟಕ) ನಿಯಮಿತ, ಕರ್ನಾಟಕ ರಾಜ್ಯ ವಿದ್ಯುತ್ ಪ್ರಸರಣಾ ಕಂಪನಿ ನಿಯಮಿತ, ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ

**ಸಾಲಗಳು:** ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಕಾವೇರಿ ನೀರಾವರಿ ನಿಗಮ ನಿಯಮಿತ ಮತ್ತು ಕೆಪಿಸಿ ಗ್ಯಾಸ್ ವಿದ್ಯುತ್ ನಿಗಮ ನಿಯಮಿತ.

**ಖಾತರಿಗಳು:** ರಾಯಚೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಮತ್ತು ಕೆಪಿಸಿ ಗ್ಯಾಸ್ ವಿದ್ಯುತ್ ನಿಗಮ ನಿಯಮಿತ.

[21] ಶಾಸನಬದ್ಧ ನಿಗಮಗಳು–6, ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಕಂಪನಿಗಳು–105, ಕಾರ್ಯ ನಿರ್ವಹಿಸದಿರುವ ಸರ್ಕಾರಿ ಕಂಪನಿಗಳು–13

[22] ಪ್ಯಾರಾ (iii), (v) ಮತ್ತು (vi) ಉದ್ದೇಶಕ್ಕಾಗಿ, 2019–20 ಮತ್ತು 2020–21ರಲ್ಲಿ ಅಂಗಸಂಸ್ಥೆ ಕಂಪನಿಗಳನ್ನು ಸಹ ಪರಿಗಣಿಸಲಾಗಿದೆ

ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳ ಲಾಭದಾಯಕತೆಯನ್ನು ಸಾಂಪ್ರದಾಯಿಕವಾಗಿ ಹೂಡಿಕೆಯ ಮೇಲಿನ ಲಾಭ[23], ಇಕ್ವಿಟಿ ಮೇಲಿನ ಪ್ರತಿಫಲ[24] ಮತ್ತು ಬಳಕೆಯ ಬಂಡವಾಳದ ಮೇಲಿನ ಆದಾಯದ[25] ಮೂಲಕ ಮೌಲ್ಯಮಾಪನ ಮಾಡಲಾಗುತ್ತದೆ.

- ರಾಜ್ಯದ ಹನ್ನೊಂದು ವಿದ್ಯುತ್ ವಲಯದ ಉದ್ಯಮಗಳಲ್ಲಿ ತುಂಬಿದ ರಾಜ್ಯ ಸರ್ಕಾರದ ನಿಧಿಗಳ (ಪಿವಿನಲ್ಲಿ) ಮೇಲಿನ ಪ್ರತಿಫಲವು ಹಿಂದಿನ ವೆಚ್ಚದ ಆಧಾರದ ಮೇಲಿನ ಪ್ರತಿಫಲಕ್ಕಿಂತ ಕಡಿಮೆಯಾಗಿದೆ. ಪ್ರತಿಫಲವು ಇಳಿಮುಖ ಪ್ರವೃತ್ತಿಯಲ್ಲಿದ್ದು, 2016–17ರಲ್ಲಿ ಅತ್ಯಂತ ಕಡಿಮೆಯದ್ದಾಗಿದೆ.
- ರಾಜ್ಯದ ಹನ್ನೊಂದು ವಿದ್ಯುತ್ ವಲಯದ ಉದ್ಯಮಗಳಲ್ಲಿನ ಇಕ್ವಿಟಿ ಮೇಲಿನ ಪ್ರತಿಫಲವು 2017–18ರಿಂದ 2020–21ರವರೆಗೆ ಶೂನ್ಯವಾಗಿದ್ದರೆ, 2020–21ರಲ್ಲಿ ಬಳಕೆ ಬಂಡವಾಳದ ಮೇಲಿನ ಆದಾಯವು ಶೇಕಡ 6.13ರಷ್ಟಿತ್ತು.
- ವಿದ್ಯುತ್ ವಲಯ ಹೊರತುಪಡಿಸಿ ಎಲ್ಲಾ ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳು 2016–17 ರಿಂದ 2020–21ರ ಅವಧಿಯಲ್ಲಿ ಹೂಡಿಕೆಯ ಮೇಲೆ ಋಣಾತ್ಮಕ ಪ್ರತಿಫಲವನ್ನು ಹೊಂದಿವೆ.
- ಅದೇರೀತಿ, ಎಲ್ಲಾ ಐದು ವರ್ಷಗಳಲ್ಲಿ (2016–17 ರಿಂದ 2020–21) ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳು ನಷ್ಟವನ್ನು ಅನುಭವಿಸಿದ ಕಾರಣ ವಿದ್ಯುತ್ ವಲಯವನ್ನು ಹೊರತುಪಡಿಸಿ ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳಲ್ಲಿನ ಇಕ್ವಿಟಿ ಮೇಲಿನ ಆದಾಯವು ಋಣಾತ್ಮಕವಾಗಿದೆ.
- ವಿದ್ಯುತ್ ವಲಯ ಹೊರತು ಪಡಿಸಿ ಸಾರ್ವಜನಿಕ ವಲಯ ಉದ್ಯಮಗಳ ಬಂಡವಾಳದ ಮೇಲಿನ ಆದಾಯವು ಇಳಿಮುಖ ಪ್ರವೃತ್ತಿಯಲ್ಲಿದ್ದಿತು. 2020–21ರಲ್ಲಿ ಹೊರತುಪಡಿಸಿ (ಶೇಕಡ 3.51) ಲಾಭದಾಯಕತೆಯು ಬಳಕೆ ಬಂಡವಾಳಕ್ಕೆ ಅನುಗುಣವಾಗಿಲ್ಲ ಎಂದು ಸೂಚಿಸುತ್ತದೆ.

**(iv) ಸರ್ಕಾರಿ ಕಂಪನಿಗಳು/ನಿಗಮಗಳ ನಷ್ಟಗಳು**

2020–21ರಲ್ಲಿ 50 ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳು ₹8,246.47 ಕೋಟಿಗಳ ನಷ್ಟವನ್ನು ಅನುಭವಿಸಿವೆ. ಈ ಪೈಕಿ ವಿದ್ಯುತ್ ವಲಯದ ಉದ್ಯಮಗಳು ₹5,701.96 ಕೋಟಿಗಳ ನಷ್ಟ ಅನುಭವಿಸಿವೆ. ಈ ನಷ್ಟದಲ್ಲಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (₹2,490.26 ಕೋಟಿಗಳು) ಪ್ರಮುಖ ಕೊಡುಗೆ ನೀಡಿದೆ.

**(v) ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳಲ್ಲಿ ಬಂಡವಾಳದ ನಾಶ**

ಯಾವುದೇ ಸಂಸ್ಥೆಯ ನಿವ್ವಳ ಮೌಲ್ಯವು ಅದರ ಸ್ವಾಮ್ಯಕ್ಕೆ ಒಂದು ಮಾಪನವಾಗಿದೆ. ಋಣಾತ್ಮಕ ನಿವ್ವಳ ಮೌಲ್ಯವು ಸ್ವಾಮ್ಯದ ಸಂಪೂರ್ಣ ಹೂಡಿಕೆಯು ಸಂಚಿತ ನಷ್ಟಗಳಿಂದ ಕ್ಷಯವಾಗಿದೆ ಎಂಬುದನ್ನು ಸೂಚಿಸುತ್ತದೆ. 2020–21ರ ಅಂತ್ಯದ ವೇಳೆಗೆ, 33 ಉದ್ಯಮಗಳಲ್ಲಿ ₹14,903.62 ಕೋಟಿಗಳ ನಿವ್ವಳ ಬಂಡವಾಳವು ಕ್ಷಯವಾಗಿದೆ.

2020–21ಕ್ಕೆ ಕೊನೆಗೊಂಡ ಹಿಂದಿನ ಐದು ವರ್ಷಗಳಲ್ಲಿ ಆರು ವಿದ್ಯುತ್ ವಲಯ ಉದ್ಯಮಗಳ ಒಟ್ಟಾರೆ ನಿವ್ವಳ ಮೌಲ್ಯವು ಧನಾತ್ಮಕವಾಗಿದ್ದರೆ, ಐದು ಉದ್ಯಮಗಳ ಒಟ್ಟಾರೆ ನಿವ್ವಳ ಮೌಲ್ಯವು (₹9,441.97 ಕೋಟಿ) ಕ್ಷಯವಾಗಿದೆ.

---

[23] ಇಕ್ವಿಟಿ ಮತ್ತು ದೀರ್ಘಾವಧಿ ಸಾಲಗಳ ರೂಪದಲ್ಲಿ ಮಾಡಿದ ಹೂಡಿಕೆಗಳ ಮೇಲೆ ನಿರ್ದಿಷ್ಟ ವರ್ಷದಲ್ಲಿ ಗಳಿಸಿದ ಲಾಭ ಅಥವ ನಷ್ಟವನ್ನು ಅಳೆಯುತ್ತದೆ ಮತ್ತು ಇದು ಒಟ್ಟು ಹೂಡಿಕೆಯ ಲಾಭದ ಶತಾಂಶವಾಗಿ ಹೇಳಲಾಗುತ್ತದೆ

[24] ನಿವ್ವಳ ಲಾಭವನ್ನು ಷೇರುದಾರರ ನಿಧಿಗಳಿಂದ ಭಾಗಿಸಿ ಸಾಧನೆಯನ್ನು ಅಳೆಯಲಾಗುತ್ತದೆ

[25] ಕಂಪನಿಯು ಬಳಸಿದ ಬಂಡವಾಳದೊಂದಿಗೆ ಅದರ ಲಾಭದಾಯಕತೆ ಮತ್ತು ದಕ್ಷತೆಯ ಹಣಕಾಸಿನ ಅನುಪಾತವನ್ನು ಅಳೆಯುತ್ತದೆ ಮತ್ತು ಇದನ್ನು ಬಡ್ಡಿ ಮತ್ತು ತೆರಿಗೆ ಪಾವತಿಗೆ ಮುಂಚಿನ ಗಳಿಕೆಯನ್ನು ಬಳಕೆ ಬಂಡವಾಳದಿಂದ ಭಾಗಿಸಿ ಲೆಕ್ಕ ಹಾಕಲಾಗುತ್ತದೆ.

ಅದೇ ರೀತಿ, ಕಳೆದ ಐದು ವರ್ಷಗಳಲ್ಲಿ ವಿದ್ಯುತ್ ವಲಯ ಹೊರತುಪಡಿಸಿ 113 ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳ ಒಟ್ಟಾರೆ ನಿವ್ವಳ ಮೌಲ್ಯವು ಧನಾತ್ಮಕವಾಗಿತ್ತು. ಆದಾಗ್ಯೂ, 31 ಮಾರ್ಚ್ 2021ರಂತೆ 28 ಉದ್ಯಮಗಳ ನಿವ್ವಳ ಮೌಲ್ಯವು (₹5,461.65 ಕೋಟಿಗಳು) ಕ್ಷಯವಾಗಿದೆ.

**(vi) ದೀರ್ಘಾವಧಿ ಸಾಲಗಳ ವಿಶ್ಲೇಷಣೆ**

ಬಡ್ಡಿವ್ಯಾಪ್ತಿ ಅನುಪಾತ ಮತ್ತು ಸಾಲ ವಹಿವಾಟು ಅನುಪಾತದ ಮೂಲಕ ಸರ್ಕಾರ, ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳನ್ನು ಪೂರೈಸಲು ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳ ಸಮರ್ಥತೆಯ ಮಾಪನವು ಈ ಕೆಳಗಿನ ಅಂಶಗಳನ್ನು ಹೊರಗೆಡಹಿದೆ.

- 31 ಮಾರ್ಚ್ 2021ರಲ್ಲಿದ್ದ ಸ್ಥಿತಿಯಂತೆ 11 ವಿದ್ಯುತ್ ವಲಯದ ಉದ್ಯಮಗಳಲ್ಲಿ ಎಂಟು ಉದ್ಯಮಗಳು ಬಡ್ಡಿಯ ಹೊರೆಯನ್ನು ಹೊಂದಿದ್ದವು. ಇವುಗಳಲ್ಲಿ ಐದು ಉದ್ಯಮಗಳ ಬಡ್ಡಿವ್ಯಾಪ್ತಿಯ ಅನುಪಾತವು ಒಂದಕ್ಕಿಂತ ಕಡಿಮೆಯಿದೆ.
- ಹನ್ನೊಂದು ವಿದ್ಯುತ್ ವಲಯದ ಉದ್ಯಮಗಳ 2016–17 ರಿಂದ 2020–21ರವರೆಗಿನ ವಹಿವಾಟಿನ ಸಂಯೋಜಿತ ವಾರ್ಷಿಕ ಬೆಳವಣಿಗೆಯ ದರವು ಅವುಗಳ ಋಣ ವೃದ್ಧಿಯ ದರಕ್ಕಿಂತ ಕಡಿಮೆಯಾಗಿದೆ. ಇದರ ಪರಿಣಾಮವಾಗಿ ಸಾಲ–ವಹಿವಾಟುಗಳ ಅನುಪಾತವು ಸುಧಾರಿಸಲಿಲ್ಲ,
- 31 ಮಾರ್ಚ್ 2021 ರಂದು ಇದ್ದಂತೆ 42 ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳಲ್ಲಿ (ವಿದ್ಯುತ್ ವಲಯದ ಉದ್ಯಮಗಳನ್ನು ಹೊರತುಪಡಿಸಿ) 20 ಉದ್ಯಮಗಳ ಬಡ್ಡಿ ಅನುಪಾತವು ಒಂದಕ್ಕಿಂತ ಕಡಿಮೆ ಇದ್ದು, ಈ ಉದ್ಯಮಗಳು ಬಡ್ಡಿಯ ವೆಚ್ಚಗಳನ್ನು ಪೂರೈಸಲು ಸಾಕಷ್ಟು ಆದಾಯವನ್ನು ಗಳಿಸಲು ಸಾಧ್ಯವಾಗಲಿಲ್ಲ ಎಂದು ಸೂಚಿಸುತ್ತದೆ.
- 2016–17ರಿಂದ 2020–21ರ ಅವಧಿಯಲ್ಲಿನ ವಹಿವಾಟಿನ ಸಂಯೋಜಿತ ವಾರ್ಷಿಕ ಬೆಳವಣಿಗೆಯ ದರವು ಸಾಲಕ್ಕಿಂತ ಕಡಿಮೆಯಿರುವುದರಿಂದ ವಿದ್ಯುತ್ ವಲಯದ ಉದ್ಯಮಗಳನ್ನು ಹೊರತುಪಡಿಸಿ ಕಾರ್ಯ ನಿರ್ವಹಿಸುತ್ತಿರುವ ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳ ಸಾಲ–ವಹಿವಾಟು ಅನುಪಾತವು ಸುಧಾರಿಸಿಲ್ಲ.

**(vii) ಹೊಣೆಗಾರಿಕೆಯ ಚೌಕಟ್ಟು ಮತ್ತು ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳಿಂದ ಲೆಕ್ಕಗಳ ಸಲ್ಲಿಕೆ ಮತ್ತು ಲೆಕ್ಕಪರಿಶೋಧನೆ**

ಸರ್ಕಾರಿ ಕಂಪನಿಗಳ ಲೆಕ್ಕಪರಿಶೋಧನೆಯ ಪ್ರಕ್ರಿಯೆಯು ಕಂಪನಿಗಳ ಕಾಯಿದೆ, 1956ರ ಸೆಕ್ಷನ್ 619 ಮತ್ತು ಕಂಪನಿಗಳ ಕಾಯಿದೆ 2013ರ (ವಿಧೇಯಕ) ಸೆಕ್ಷನ್ 139 ಮತ್ತು 143ರಲ್ಲಿನ ವಿಧಿಗಳನ್ನು ಅನುಸರಿಸುತ್ತದೆ. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಸರ್ಕಾರಿ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಿಸುತ್ತಾರೆ. ಮುಂದೆ, ಕಾಯಿದೆಯ ವರ್ಗ 143ರ ಉಪ–ವಿಭಾಗ 7ರ ಪ್ರಕಾರ ಯಾವುದೇ ಕಂಪನಿಯು ವರ್ಗ 139ರ ಉಪ–ವಿಭಾಗ (5) ಅಥವಾ ಉಪ–ವಿಭಾಗ (7) ಅಡಿಯಲ್ಲಿ ಬರುವಂತಿದ್ದರೆ ಅಂತಹ ಸಂದರ್ಭದಲ್ಲಿ, ಅಗತ್ಯವಿದ್ದರೆ, ಭಾರತ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಆದೇಶದ ಮೂಲಕ ಅಂತಹ ಕಂಪನಿಯ ಲೆಕ್ಕಪತ್ರಗಳ ಪರೀಕ್ಷಾ ಲೆಕ್ಕಪರಿಶೋಧನೆಯನ್ನು ನಡೆಸಬಹುದಾಗಿದೆ.

ಸರ್ಕಾರಿ ಕಂಪನಿಗಳ ಹಣಕಾಸು ಲೆಕ್ಕಪಟ್ಟಿಗಳನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೇಮಿಸಿದ ಶಾಸನಬದ್ಧ ಲೆಕ್ಕಪರಿಶೋಧಕರು ತಪಾಸಣೆ ಮಾಡುತ್ತಾರೆ. ಈ ಹಣಕಾಸು ಲೆಕ್ಕಪಟ್ಟಿಗಳನ್ನು ಅವು ಸ್ವೀಕೃತಿಯಾದ ದಿನಾಂಕದಿಂದ 60 ದಿನಗಳಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಪೂರಕ ಪರಿಶೋಧನೆಯನ್ನು ನಡೆಸಬೇಕಾಗುತ್ತದೆ. ಅಲ್ಲದೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನಾಲ್ಕು ಶಾಸನಬದ್ಧ ನಿಗಮಗಳಿಗೆ ಸಂಬಂಧಿಸಿದಂತೆ ಏಕೈಕ ಲೆಕ್ಕಪರಿಶೋಧಕರು ಮತ್ತು ಎರಡು ಶಾಸನಬದ್ಧ ನಿಗಮಗಳಿಗೆ ಸಂಬಂಧಿಸಿದಂತೆ ಪೂರಕ ಲೆಕ್ಕಪರಿಶೋಧಕರು ಆಗಿದ್ದಾರೆ.

2020–21ರ ಅವಧಿಯಲ್ಲಿ, ವಿದ್ಯುತ್ ವಲಯದ ಅಡಿಯಲ್ಲಿ 11 ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳಲ್ಲಿ, ನಾಲ್ಕು ಉದ್ಯಮಗಳಿಂದ ಲೆಕ್ಕಗಳ ಸಲ್ಲಿಕೆ ಬಾಕಿ ಉಳಿದಿವೆ. ವಿದ್ಯುತ್ ವಲಯ ಹೊರತುಪಡಿಸಿ ಕಾರ್ಯ ನಿರ್ವಹಿಸುತ್ತಿರುವ 100 ಉದ್ಯಮಗಳಲ್ಲಿ 66 ಉದ್ಯಮಗಳಿಂದ 103 ಲೆಕ್ಕಗಳು ಬಾಕಿ ಉಳಿದಿವೆ. ಲೆಕ್ಕ ಸಲ್ಲಿಕೆಯ ಬಾಕಿಯು ಒಂದರಿಂದ ಏಳು ವರ್ಷಗಳವರೆಗೆ ಇದೆ. ರಾಜ್ಯ ಸರ್ಕಾರವು 73 ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳಲ್ಲಿ (ವಿದ್ಯುತ್ ವಲಯ ಮತ್ತು ಇತರ ವಲಯ) 36[26] ಉದ್ಯಮಗಳಲ್ಲಿ ಲೆಕ್ಕಗಳನ್ನು ಅಂತಿಮಗೊಳಿಸದ ವರ್ಷಗಳಲ್ಲಿ ₹18,319.38 ಕೋಟಿಗಳ ನಿವ್ವಳ ಹೂಡಿಕೆ ಮಾಡಿದೆ. ಆದ್ದರಿಂದ, ಲೆಕ್ಕಪರಿಶೋಧನೆಯು ಅವುಗಳ ಲೆಕ್ಕಪತ್ರ ನಿರ್ವಹಣೆ ಮತ್ತು ಬಳಕೆಯನ್ನು ಖಚಿತ ಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ.

### 2.5.4.4 ಅಪೂರ್ಣ ಯೋಜನೆಗಳಲ್ಲಿ ಬಂಡವಾಳದ ಬಂಧನ

ನ್ಯಾಯಾಲಯದಲ್ಲಿ ದಾವೆ ಹಾಗೂ ಇನ್ನಿತರ ಕಾರಣಗಳಿಂದ ಸ್ಥಗಿತಗೊಂಡ ಕಾಮಗಾರಿಗಳನ್ನು ಒಳಗೊಂಡಿರುವ ಅಪೂರ್ಣ ಕಾಮಗಾರಿಗಳಲ್ಲಿ ಹಣ ಬಂಧಿತವಾಗಿರುವುದು ವೆಚ್ಚದ ಗುಣಮಟ್ಟದ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತದೆ. 31 ಮಾರ್ಚ್ 2021ರಂದು ಇದ್ದಂತೆ ಅಪೂರ್ಣ ಯೋಜನೆಗಳ ವರ್ಷವಾರು ವಿವರವನ್ನು **ಕೋಷ್ಟಕ–2.25**ರಲ್ಲಿ ತೋರಿಸಲಾಗಿದೆ ಮತ್ತು ಇಲಾಖಾವಾರು ಮಾಹಿತಿಯನ್ನು **ಕೋಷ್ಟಕ–2.26**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.25: 31 ಮಾರ್ಚ್ 2021ರಲ್ಲಿದ್ದಂತೆ ಒಂದು ಕೋಟಿಗಿಂತ ಹೆಚ್ಚಿನ ಅಪೂರ್ಣ ಯೋಜನೆಗಳ ವರ್ಷಾವಾರು ವಿವರ (₹ ಕೋಟಿಗಳಲ್ಲಿ)**

| ವರ್ಷದ ಕೊನೆಗೆ | ಅಪೂರ್ಣ ಯೋಜನೆಗಳ ಸಂಖ್ಯೆ | ಅಂದಾಜು ವೆಚ್ಚ | ವೆಚ್ಚ |
|---|---|---|---|
| 2012–13 | 3 | 5.60 | 5.21 |
| 2013–14 | 7 | 42.80 | 41.68 |
| 2014–15 | 15 | 51.80 | 50.58 |
| 2015–16 | 30 | 326.89 | 251.34 |
| 2016–17 | 58 | 340.03 | 275.99 |
| 2017–18 | 54 | 358.49 | 245.76 |
| 2018–19 | 321 | 2,067.96 | 1,053.97 |
| 2019–20 | 296 | 1,747.93 | 968.37 |
| 2020–21 | 349 | 1,527.87 | 735.25 |
| **ಒಟ್ಟು** | **1133** | **6,469.37** | **3,628.15** |

**ಕೋಷ್ಟಕ–2.26: 31 ಮಾರ್ಚ್ 2021ರಲ್ಲಿದ್ದಂತೆ ಒಂದು ಕೋಟಿಗಿಂತ ಹೆಚ್ಚಿನ ಅಪೂರ್ಣ ಯೋಜನೆಗಳ ಇಲಾಖಾವಾರು ವಿವರ (₹ ಕೋಟಿಗಳಲ್ಲಿ)**

| ಕಾಮಗಾರಿಗಳ ವಿವರ | ಅಪೂರ್ಣ ಯೋಜನೆಗಳ ಸಂಖ್ಯೆ | ಅಂದಾಜು ವೆಚ್ಚ | ವೆಚ್ಚ |
|---|---|---|---|
| ರಸ್ತೆಗಳು ಮತ್ತು ಸೇತುವೆಗಳು | 871 | 4,951.94 | 2,463.21 |
| ನೀರಾವರಿ | 210 | 1,187.55 | 942.19 |
| ಕಟ್ಟಡಗಳು | 42 | 275.80 | 184.96 |
| ಇತರೆ | 10 | 54.08 | 373.79 |
| ಒಟ್ಟು | **1133** | **6,469.37** | **3,628.15** |

*ಆಕರ: ಹಣಕಾಸು ಲೆಕ್ಕಗಳು*

31.03.2021ರ ಅಥವಾ ಅದಕ್ಕೂ ಮೊದಲು ಪೂರ್ಣವಾಗಬೇಕಾಗಿದ್ದ 1,133 ಯೋಜನೆಗಳ ಆರಂಭಿಕ ಅಂದಾಜು ₹6,469.37 ಕೋಟಿಗಳಲ್ಲಿ ₹3,628.15 ಕೋಟಿಗಳು ವೆಚ್ಚವಾಗಿದೆ. ಯೋಜನೆಗಳ ವಿಳಂಬವು ಐದು ವರ್ಷಗಳಿಗಿಂತ ಹೆಚ್ಚು (55), ಐದು ವರ್ಷಗಳಿಗಿಂತ ಕಡಿಮೆ ಆದರೆ ಒಂದು ವರ್ಷಕ್ಕಿಂತ ಹೆಚ್ಚು (729) ಮತ್ತು ಒಂದು ವರ್ಷಕ್ಕಿಂತ ಕಡಿಮೆ (349) ವ್ಯಾಪ್ತಿಯಲ್ಲಿದೆ. ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಮತ್ತು ನೀರಾವರಿ ಇಲಾಖೆಗಳು ಕಾಮಗಾರಿಗಳ ವಿಳಂಬಕ್ಕೆ ಯಾವುದೇ ಕಾರಣಗಳನ್ನು ನೀಡಿಲ್ಲ.

[26] ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳ ಲೆಕ್ಕಗಳನ್ನು ಅಂತಿಮಗೊಳಿಲು ಕಾರ್ಪೊರೇಟ್ ಅಫೈರ್ಸ್ ಸಚಿವಾಲಯವು ನವಂಬರ್ 2021ರವರೆಗೆ ಸರ್ವಾನ್ವಯ ಕಾಲಾವಧಿ ವಿಸ್ತರಣೆಯನ್ನು ನೀಡಿದೆ

31 ಮಾರ್ಚ 2013ಕ್ಕೆ ಅಪೂರ್ಣವಾಗಿದ್ದ 1,133 ಯೋಜನೆಗಳಲ್ಲಿ ಶೇಕಡ 43 ಯೋಜನೆಗಳು ಮೂರು ವರ್ಷಗಳಿಗೂ ಹೆಚ್ಚು ಕಾಲದಿಂದ ಅಪೂರ್ಣವಾಗಿಯೇ ಉಳಿದಿವೆ. ವಿತ್ತೀಯ ನಿರ್ವಹಣೆ ಸುಧಾರಣಾ ಸಮಿತಿಯು ಸಮಯ ಮತ್ತು ವೆಚ್ಚದ ಹೆಚ್ಚಳವನ್ನು ಕಡಿಮೆ ಮಾಡಲು, ಪೂರ್ಣಗೊಳ್ಳುತ್ತಿರುವ ಯೋಜನೆಗಳಿಗೆ ಆದ್ಯತೆಯ ಮೇಲೆ ಹಣವನ್ನು ಒದಗಿಸಬೇಕು ಎಂದು ಸಲಹೆ ನೀಡಿದೆ (ಜುಲೈ 2018). ಆದಾಗ್ಯೂ, 31 ಮಾರ್ಚ್ 2020ರಂತೆ 978 ಇದ್ದ ಅಪೂರ್ಣ ಯೋಜನೆಗಳ ಸಂಖ್ಯೆಯು 31 ಮಾರ್ಚ್ 2021ಕ್ಕೆ 1,133ಕ್ಕೆ ಏರಿರುವುದನ್ನು ಲೆಕ್ಕ ಪರಿಶೋಧನೆಯು ಗಮನಿಸಿದೆ. ಇದು ಮುಖ್ಯವಾಗಿ ರಸ್ತೆಗಳು ಮತ್ತು ಸೇತುವೆಗಳು ಮತ್ತು ನೀರಾವರಿ ಅಡಿಯಲ್ಲಿನ ಯೋಜನೆಗಳ ಸಂಖ್ಯೆಯಲ್ಲಿನ ಹೆಚ್ಚಳದಿಂದಾಗಿದೆ.

ಇದಲ್ಲದೆ, ಆಯಾ ವರ್ಷಗಳಲ್ಲಿ ಯೋಜನೆಗಳ ಅನುಷ್ಠಾನಕ್ಕಾಗಿ ಎರವಲು ಪಡೆದ ನಿಧಿಗಳು ನಿರರ್ಥಕವೆಂದು ಸಾಬೀತಾಯಿತು ಮತ್ತು ಸಾಲ ಮತ್ತು ಬಡ್ಡಿ ಹೊಣೆಗಾರಿಕೆಗಳ ಸೇವೆಯ ವಿಷಯದಲ್ಲಿ ರಾಜ್ಯವು ಹೆಚ್ಚುವರಿ ಹೊರೆಯನ್ನು ಹಂಚಿಕೊಳ್ಳಬೇಕಾಯಿತು. ಈ ಮೇಲಿನ ಎಲ್ಲಾ ಯೋಜನೆಗಳನ್ನು ಹೆಚ್ಚಿನ ವಿಳಂಬವಿಲ್ಲದೆ ಪೂರ್ಣಗೊಳಿಸಲು ಮತ್ತು ಸಮಯ ಮಿತಿ ಮೀರಿದ ಕಾರಣ ವೆಚ್ಚವನ್ನು ತಪ್ಪಿಸಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಆರ್ಥಿಕ ಇಲಾಖೆಯು ಕಾಮಗಾರಿಗಳು ಮತ್ತು ಯೋಜನೆಗಳನ್ನು ಪೂರ್ಣಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಇಲಾಖೆಗಳಿಗೆ ಮನವಿ ಮಾಡಲಾಗುವುದು ಎಂದು ಉತ್ತರಿಸಿದೆ. (ಡಿಸೆಂಬರ್ 2021).

### *2.5.5 ವೆಚ್ಚದ ಆದ್ಯತೆಗಳು*

ಸಾಮಾಜಿಕ ವಲಯ ಮತ್ತು ಆರ್ಥಿಕ ಮೂಲಸೌಕರ್ಯಕ್ಕೆ ಸಂಬಂಧಿಸಿದ ವೆಚ್ಚದ ಜವಾಬ್ದಾರಿಗಳು ಹೆಚ್ಚಾಗಿ ರಾಜ್ಯದ ವಿಷಯಗಳಾಗಿವೆ. ಮಾನವ ಅಭಿವೃದ್ಧಿಯ ಮಟ್ಟವನ್ನು ಹೆಚ್ಚಿಸಲು ರಾಜ್ಯಗಳು ಶಿಕ್ಷಣ, ಆರೋಗ್ಯ, ಇತ್ಯಾದಿ ಪ್ರಮುಖ ಸಾಮಾಜಿಕ ಸೇವೆಗಳ ಮೇಲಿನ ವೆಚ್ಚವನ್ನು ಹೆಚ್ಚಿಸುವ ಅಗತ್ಯವಿದೆ. ನಿರ್ದಿಷ್ಟ ವೆಚ್ಚ ಶೀರ್ಷಿಕೆಗೆ ನೀಡಿದ ಹಂಚಿಕೆಯು ಸಾಮಾನ್ಯ ವರ್ಗಗಳ ರಾಜ್ಯದ/ರಾಷ್ಟ್ರೀಯ ಸರಾಸರಿಗಿಂತಲು ಕಡಿಮೆಯಿದ್ದರೆ ಕಡಿಮೆ ಹಣಕಾಸಿನ ಆದ್ಯತೆಯನ್ನು (ಒಟ್ಟಾರೆ ವೆಚ್ಚಕ್ಕೆ ವೆಚ್ಚದ ವಿಭಾಗದ ಅನುಪಾತ) ನಿರ್ದಿಷ್ಟ ವಿಭಾಗಕ್ಕೆ ನೀಡಲಾಗಿದೆ ಎನಿಸುತ್ತದೆ. ಈ ಅಂಗಗಳ ಅನುಪಾತವು ಹೆಚ್ಚಾಗಿದ್ದರೆ ವೆಚ್ಚದ ಗುಣಮಟ್ಟವನ್ನು ಉತ್ತಮವೆಂದು ಪರಿಗಣಿಸಲಾಗುತ್ತದೆ. ಪ್ರಸ್ತುತ 2020–21ರಲ್ಲಿ ಸಾಮಾನ್ಯ ವರ್ಗಗಳ ರಾಜ್ಯಗಳ ಮತ್ತು ನೆರೆಯ ರಾಜ್ಯಗಳಿಗೆ ಸಾಪೇಕ್ಷವಾಗಿ ಅಭಿವೃದ್ಧಿ ವೆಚ್ಚ, ಸಾಮಾಜಿಕ ವೆಚ್ಚ ಮತ್ತು ಬಂಡವಾಳ ವೆಚ್ಚಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಹಣಕಾಸಿನ ಆದ್ಯತೆಯನ್ನು **ಕೋಷ್ಟಕ–2.27** ವಿಶ್ಲೇಷಿಸುತ್ತದೆ.

**ಕೋಷ್ಟಕ–2.27: 2020–21ರಲ್ಲಿ ರಾಜ್ಯಗಳ ಹಣಕಾಸಿನ ಆದ್ಯತೆ**

(ಶೇಕಡಾವಾರು)

| | ಒವೆ/ರಾಒಆಉ | ಬವೆ/ಒವೆ | ಅವೆ/ಒವೆ | ಶಿಕ್ಷಣ/ಒವೆ | ಆರೋಗ್ಯ/ಒವೆ |
|---|---|---|---|---|---|
| ಸಾಮಾನ್ಯ ವರ್ಗಗಳ ರಾಜ್ಯಗಳು | 16.18 | 13.03 | 66.29 | 15.00 | 6.74 |
| ಕೇರಳ | 18.30 | 11.12 | 56.71 | 11.87 | 6.41 |
| ತಮಿಳುನಾಡು | 14.36 | 13.50 | 64.90 | 13.97 | 6.36 |
| ಆಂಧ್ರಪ್ರದೇಶ | 17.57 | 11.93 | 67.39 | 13.83 | 5.49 |
| ತೆಲಂಗಾಣ | 15.30 | 17.86 | 73.08 | 8.36 | 4.24 |
| ಮಹಾರಾಷ್ಟ್ರ | 12.87 | 9.35 | 63.23 | 17.98 | 4.99 |
| ಮಧ್ಯಪ್ರದೇಶ | 21.40 | 16.09 | 72.09 | 14.54 | 4.93 |
| ಕರ್ನಾಟಕ | 12.43 | 21.45 | 72.38 | 11.37 | 5.29 |

*ಆಕರ: ಹಣಕಾಸು ಲೆಕ್ಕಗಳು*

*ಒವೆ: ಒಟ್ಟು ವೆಚ್ಚ, ಬಂವೆ: ಬಂಡವಾಳ ವೆಚ್ಚ, ಅವೆ: ಅಭಿವೃದ್ಧಿ ವೆಚ್ಚ (ಸಾಮಾಜಿಕ ಮತ್ತು ಆರ್ಥಿಕ ವಲಯಗಳ ಅಡಿಯಲ್ಲಿ ಒಟ್ಟು ವೆಚ್ಚವನ್ನು ಒಳಗೊಂಡಿದೆ).*

2020–21ರ ಹೋಲಿಕೆ ವಿಶ್ಲೇಷಣೆಯು ಕೆಳಗಿನವುಗಳನ್ನು ತಿಳಿಯಪಡಿಸಿತು:

- ರಾಜ್ಯದ ಬಂಡವಾಳ ವೆಚ್ಚ ಮತ್ತು ಅಭಿವೃದ್ಧಿ ವೆಚ್ಚಕ್ಕೆ ಒಟ್ಟಾರೆ ಅಭಿವೃದ್ಧಿ ವೆಚ್ಚದ ಅನುಪಾತವು ಸಾಮಾನ್ಯ ವರ್ಗಗಳ ರಾಜ್ಯಗಳ ಅನುಪಾತಕ್ಕಿಂತ ಹೆಚ್ಚಾಗಿದೆ. ಇದು ವೆಚ್ಚದ ಗುಣಮಟ್ಟ ಸಾಮಾನ್ಯ ವರ್ಗಗಳ ರಾಜ್ಯಗಳಿಗೆ ಹೋಲಿಸಿದಾಗ ಉತ್ತಮವಾಗಿದೆ ಎಂದು ಸೂಚಿಸುತ್ತದೆ.
- ರಾಜ್ಯದ ಅಭಿವೃದ್ಧಿ ವೆಚ್ಚಕ್ಕೆ ಬಂಡವಾಳ ವೆಚ್ಚದ ಅನುಪಾತವು ಎಲ್ಲಾ ನೆರೆ ರಾಜ್ಯಗಳಿಗಿಂತ ಹೆಚ್ಚಾಗಿದೆ, ಇದು ರಾಒಆಂಉ ಕ್ಕಿಂತಲು ಅವು ಕಡಿಮೆಯಿರುವುದು ಕಾರಣವಾಗಿದೆ. (ಶೇಕಡ. 12.43).
- ನೆರೆಯ ರಾಜ್ಯಗಳಿಗೆ (ತೆಲಂಗಾಣ ಹೊರತು ಪಡಿಸಿ) ಹೋಲಿಸಿದರೆ ರಾಜ್ಯದ ಅಭಿವೃದ್ಧಿ ವೆಚ್ಚ/ ಒಟ್ಟು ವೆಚ್ಚದ ಅನುಪಾತವು ಹೆಚ್ಚಿತ್ತು. ಇದು ಮುಖ್ಯವಾಗಿ ರಾಜ್ಯದ ಆರ್ಥಿಕ ಸೇವಾ ವಿಭಾಗ/ಒಟ್ಟು ವೆಚ್ಚದ ಅನುಪಾತವು ಹೆಚ್ಚಾಗಿರುವುದಕ್ಕೆ ಕಾರಣವಾಗಿದೆ.
- ಶಿಕ್ಷಣ ಕ್ಷೇತ್ರದಡಿಯ ವೆಚ್ಚ/ಒಟ್ಟು ವೆಚ್ಚದ ಅನುಪಾತವು ತೆಲಂಗಾಣ ಹೊರತುಪಡಿಸಿ ಎಲ್ಲಾ ನೆರೆಯ ರಾಜ್ಯಗಳಿಗಿಂತ ಮತ್ತು ಸಾಮಾನ್ಯ ವರ್ಗದ ರಾಜ್ಯಗಳಿಗಿಂತ ಕಡಿಮೆಯಾಗಿದೆ. ಇದರಿಂದ ಶಿಕ್ಷಣ ಕ್ಷೇತ್ರಕ್ಕೆ ಸಾಕಷ್ಟು ಆದ್ಯತೆಯನ್ನು ನೀಡಬೇಕಾಗಿದೆ,
- ಹಿಂದಿನ ವರ್ಷಗಳಿಗೆ ಹೋಲಿಸಿದರೆ 2020–21ರಲ್ಲಿ ಆರೋಗ್ಯ/ಒಟ್ಟು ವೆಚ್ಚ ಅನುಪಾತವು ಹೆಚ್ಚಿದ್ದರೂ, ಸಾಮಾನ್ಯ ವರ್ಗದ ರಾಜ್ಯಗಳ ಮತ್ತು ನೆರೆಯ ರಾಜ್ಯಗಳಾದ ತಮಿಳುನಾಡು ಆಂಧ್ರಪ್ರದೇಶ ಮತ್ತು ಕೇರಳದ ಅನುಪಾತಕ್ಕೆ ಹೋಲಿಸಿದರೆ ರಾಜ್ಯದ ಅನುಪಾತವು ಕಡಿಮೆ ಇರುವುದರಿಂದ ಆರೋಗ್ಯ ಕ್ಷೇತ್ರಕ್ಕೆ ಆದ್ಯತೆಯನ್ನು ನೀಡಬೇಕಾಗಿದೆ.

## 2.6 ಸಾರ್ವಜನಿಕ ಲೆಕ್ಕ

ಸಂಚಿತ ನಿಧಿಯ ಭಾಗವಾಗವಲ್ಲದ ಸಣ್ಣ ಉಳಿತಾಯ, ಭವಿಷ್ಯ ನಿಧಿ, ಮೀಸಲು ನಿಧಿಗಳು, ಠೇವಣಿಗಳು, ಅಮಾನತ್ತು, ಇರಸಾಲು ಇತ್ಯಾದಿ ಕೆಲವು ವಹಿವಾಟುಗಳಿಗೆ ಸಂಬಂಧಿಸಿದಂತೆ ಸ್ವೀಕೃತಿಗಳು ಮತ್ತು ವಿತರಣೆಗಳನ್ನು ಸಂವಿಧಾನದ ಅನುಚ್ಛೇದ 266(2) ಅಡಿಯಲ್ಲಿ ಸ್ಥಾಪಿಸಲಾದ ಸಾರ್ವಜನಿಕ ಲೆಕ್ಕದಲ್ಲಿ ಇರಿಸಲಾಗುತ್ತದೆ ಮತ್ತು ರಾಜ್ಯ ಶಾಸಕಾಂಗದಿಂದ ಮತಕ್ಕೆ ಒಳಪಡುವುದಿಲ್ಲ. ಈ ವಹಿವಾಟುಗಳು ಕೇವಲ ವಹಿವಾಟುಗಳಾಗಿ ಸಾಗುವುದರಿಂದ ಸಾರ್ವಜನಿಕ ಹಣದ ಪಾಲನೆಗಾಗಿ ಸರ್ಕಾರವು ಬ್ಯಾಂಕರ್/ಟ್ರಸ್ಟಿಯಾಗಿ ಕಾರ್ಯ ನಿರ್ವಹಿಸುತ್ತದೆ.

### *2.6.1 ನಿವ್ವಳ ಸಾರ್ವಜನಿಕ ಲೆಕ್ಕದ ಶಿಲ್ಕುಗಳು*

2016–17ರಿಂದ 2020–21ರವರೆಗಿನ ಅವಧಿಯಲ್ಲಿ ಸಾರ್ವಜನಿಕ ಲೆಕ್ಕದ ನಿವ್ವಳ ವಹಿವಾಟುಗಳನ್ನು **ಕೋಷ್ಟಕ–2.28**ರಲ್ಲಿ ಸೂಚಿಸಲಾಗಿದೆ ಮತ್ತು ಸಾರ್ವಜನಿಕ ಲೆಕ್ಕದ ಶಿಲ್ಕುಗಳ ಸಂಯೋಜನೆಯಲ್ಲಿನ ವಾರ್ಷಿಕ ಬದಲಾವಣೆಗಳನ್ನು **ನಕ್ಷೆ–2.13**ರಲ್ಲಿ ಚಿತ್ರಿಸಲಾಗಿದೆ.

**ಕೋಷ್ಟಕ–2.28: ವರ್ಷದ ಮಾರ್ಚ್ 31ರಂತೆ ಸಾರ್ವಜನಿಕ ಲೆಕ್ಕದಲ್ಲಿ ಆಂಗವಾರು ನಿವ್ವಳ ಬಾಕಿಗಳು**

(₹ ಕೋಟಿಗಳಲ್ಲಿ)

| ವಲಯ | ಉಪವಲಯ | 2016–17 | 2017–18 | 2018–19 | 2019–20 | 2020–21 |
|---|---|---|---|---|---|---|
| ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ ಮುಂತಾದವುಗಳು | ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ ಮುಂತಾದವುಗಳು | **2,657** | **2,811** | **3,292** | **4,156** | **3,632** |
| ಜೆ. ಮೀಸಲು ನಿಧಿಗಳು | (ಎ) ಬಡ್ಡಿ ಇರುವ ಮೀಸಲು ನಿಧಿಗಳು | 1,236 | (–) 1,194 | 393 | 839 | (–)99 |
| | (ಬಿ) ಬಡ್ಡಿ ಇಲ್ಲದಿರುವ ಮೀಸಲು ನಿಧಿಗಳು | 4,777 | 4,212 | 2,804 | 3,889 | 6,374 |
| ಕೆ. ಠೇವಣಿಗಳು ಮತ್ತು ಮುಂಗಡಗಳು | (ಎ) ಬಡ್ಡಿ ಇರುವ ಠೇವಣಿಗಳು | 48 | (–) 3 | 62 | 99 | 16 |

| ವಲಯ | ಉಪವಲಯ | 2016–17 | 2017–18 | 2018–19 | 2019–20 | 2020–21 |
|---|---|---|---|---|---|---|
| | (ಬಿ) ಬಡ್ಡಿ ಇಲ್ಲದಿರುವ ಠೇವಣಿಗಳು | 2,994 | 1,837 | 3,006 | 3,074 | (–)702 |
| | (ಸಿ) ಮುಂಗಡಗಳು | – | – | – | – | – |
| ಎಲ್.ಅಮಾನತ್ತು ಮತ್ತು ಇತರೆ | (ಎ) ಅಮಾನತ್ತುಗಳು | 87 | 17 | (–) 15 | 178 | (–)242 |
| | (ಬಿ) ಇತರೆ ಲೆಕ್ಕಗಳು | 404 | (–) 1,526 | (–) 6,072 | (–) 1,542 | (–)2,679 |
| | (ಸಿ) ಹೊರದೇಶಗಳ ಸರ್ಕಾರಗಳೊಂದಿಗಿನ ಲೆಕ್ಕಗಳು | – | – | – | – | – |
| | (ಡಿ) ಇತರೆ | – | – | – | – | – |
| ಎಮ್.ಇರಸಾಲುಗಳು | (ಎ) ಮನಿಆರ್ಡರ್‌ಗಳು ಮತ್ತು ಇತರೆ ಇರಸಾಲುಗಳು | (–) 20 | (–) 51 | (–) 81 | (–) 263 | (–)53 |
| | (ಬಿ) ಅಂತರ ಸರ್ಕಾರೀ ಹೊಂದಾಣಿಕೆ ಲೆಕ್ಕಗಳು | (–) 18 | (–) 25 | 42 | (–) 84 | 17 |
| ಒಟ್ಟು | | **12,165** | **6,078** | **3,431** | **10,346** | **6,266** |

*ಆಕರ: ಹಣಕಾಸು ಲೆಕ್ಕಗಳು*

*ಟಿಪ್ಪಣಿ : + ಎನ್ನುವುದು ಖರ್ಚು ಶಿಲ್ಕನ್ನು ಮತ್ತು – ಎನ್ನುವುದು ಜಮೆ ಶಿಲ್ಕನ್ನು ಸೂಚಿಸುತ್ತದೆ*

**ನಕ್ಷೆ–2.13: ಸಾರ್ವಜನಿಕ ಲೆಕ್ಕದ ಶಿಲ್ಕುಗಳ ಸಂಯೋಜನೆಯಲ್ಲಿ ವಾರ್ಷಿಕ ಬದಲಾವಣೆಗಳು**

**(₹ ಕೋಟಿಗಳಲ್ಲಿ)**




*ಆಕರ: ಹಣಕಾಸು ಲೆಕ್ಕಗಳು*

ಸಾರ್ವಜನಿಕ ಲೆಕ್ಕದಲ್ಲಿ ನಿವ್ವಳ ಸ್ವೀಕೃತಿಗಳು 2016–17ರಲ್ಲಿ ₹12,165 ಕೋಟಿಗಳಷ್ಟಿದ್ದು 2020–21ರಲ್ಲಿ ₹6,264 ಕೋಟಿಗಳಿಗೆ ಇಳಿದಿದೆ. ಹಿಂದಿನ ವರ್ಷಕ್ಕಿಂತ 2020–21ರಲ್ಲಿ ನಿವ್ವಳ ಶಿಲ್ಕಿನಲ್ಲಿ (₹4,080 ಕೋಟಿ) ಇಳಿಕೆಯು ಠೇವಣಿ ಮತ್ತು ಮುಂಗಡಗಳು (ಬಡ್ಡಿರಹಿತ ಠೇವಣಿಗಳು) ಮತ್ತು ಸಣ್ಣ ಉಳಿತಾಯ, ಭವಿಷ್ಯ ನಿಧಿ ಇತ್ಯಾದಿಗಳ ಅಡಿಯಲ್ಲಿ ಕಡಿಮೆಯಾದ ಕಾರಣ ಉಂಟಾಗಿದೆ. ಮೀಸಲು ನಿಧಿಗಳು, ಸಣ್ಣ ಉಳಿತಾಯ, ಭವಿಷ್ಯ ನಿಧಿಗಳ ಅಡಿಯಲ್ಲಿನ ನಿವ್ವಳ ಲಭ್ಯತೆಯು ವಿತ್ತೀಯ ಕೊರತೆಗೆ ಹಣಕಾಸು ಒದಗಿಸುವಲ್ಲಿ ಪ್ರಮುಖ ಪಾಲನ್ನು ಹೊಂದಿವೆ. ಅಮಾನತ್ತು ಮತ್ತು ಇತರ ವಿಭಾಗಗಳಡಿಯಲ್ಲಿ, ನಗದೀಕರಣವಾಗದ ಚೆಕ್ಕುಗಳ ವಹಿವಾಟುಗಳಲ್ಲಿ ಹೆಚ್ಚಳ ಕಂಡುಬಂದಿದೆ. ಇದು 2019–20ರಲ್ಲಿ ₹1,542 ಕೋಟಿಗಳಿದ್ದು 2020–21ರಲ್ಲಿ ₹2,679 ಕೋಟಿಗಳಿಗೆ ಏರಿತ್ತು.

### 2.6.2 ಮೀಸಲು ನಿಧಿಗಳು

ರಾಜ್ಯ ಸರ್ಕಾರದ ಲೆಕ್ಕಗಳಲ್ಲಿ (ಸಾರ್ವಜನಿಕ ಲೆಕ್ಕ) ಸೆಕ್ಟರ್ 'ಜೆ' ಅಡಿಯಲ್ಲಿ ನಿರ್ದಿಷ್ಟ ಮತ್ತು ಸ್ಪಷ್ಟವಾಗಿ ನಿರೂಪಿಸಲಾದ ಉದ್ದೇಶಗಳಿಗಾಗಿ ಮೀಸಲು ನಿಧಿಗಳನ್ನು ರಚಿಸಲಾಗಿದೆ. ಈ ನಿಧಿಯನ್ನು ಭಾರತದ ಸಂಚಿತ ನಿಧಿ ಅಥವಾ ರಾಜ್ಯ ಸಂಚಿತ ನಿಧಿಯಿಂದ ಅಥವಾ ಹೊರಗಿನ ಏಜೆನ್ಸಿಗಳ ಕೊಡುಗೆಗಳು ಅಥವಾ ಅನುದಾನಗಳಿಂದ ತುಂಬಲಾಗುತ್ತದೆ. ಈ ನಿಧಿಗಳಿಗೆ ನೀಡಿದ ಕೊಡುಗೆಗಳನ್ನು ಸಂಚಿತ ನಿಧಿಯಡಿಯಲ್ಲಿ ಖರ್ಚು ಎಂದು ಪರಿಗಣಿಸಲಾಗುತ್ತದೆ. ನಿಧಿಗೆ ಸಂಬಂಧಿಸಿದ ವೆಚ್ಚವನ್ನು ಆರಂಭದಲ್ಲಿ ಸಂಚಿತ ನಿಧಿಯಡಿಯಲ್ಲಿ ಲೆಕ್ಕ ಹಾಕಲಾಗುತ್ತದೆ ಮತ್ತು ಇದಕ್ಕಾಗಿ ಶಾಸಕಾಂಗದ ಅನುಮೋದನೆಯನ್ನು ಪಡೆಯಲಾಗುತ್ತದೆ. ವರ್ಷದ ಕೊನೆಯಲ್ಲಿ ಲೆಕ್ಕಗಳನ್ನು ಅಂತಿಮಗೊಳಿಸುವ ಸಮಯದಲ್ಲಿ, ನಿಧಿಗೆ ಸಂಬಂಧಿಸಿದ ವೆಚ್ಚವನ್ನು ಸಾರ್ವಜನಿಕ ಲೆಕ್ಕಕ್ಕೆ ವರ್ಗಾಯಿಸಲಾಗುತ್ತದೆ. ನಿಧಿಗಳನ್ನು ಮುಂದೆ 'ಬಡ್ಡಿಸಹಿತ ನಿಧಿಗಳು' ಮತ್ತು 'ಬಡ್ಡಿರಹಿತ ನಿಧಿಗಳು' ಎಂದು ವರ್ಗೀಕರಿಸಬಹುದು.

ಸರ್ಕಾರದ ಹೊಣೆಗಾರಿಕೆಯ ಸ್ಥಿತಿಯ ಮೇಲೆ ಪರಿಣಾಮ ಬೀರುವ ಕೆಲವು ಪ್ರಮುಖ ಮೀಸಲು ನಿಧಿಗಳ ವಿಶ್ಲೇಷಣೆ, ನಿಧಿಗಳ ಸ್ವೀಕೃತಿ ಮತ್ತು ವೆಚ್ಚವನ್ನು ಕೆಳಗೆ ವಿವರಿಸಲಾಗಿದೆ.

**(ಎ) ಸಂಚಿತ ಋಣ ಪರಿಹಾರ ನಿಧಿ**

ಹನ್ನೆರಡನೆ ಹಣಕಾಸು ಆಯೋಗ ಶಿಫಾರಸಿನಂತೆ ಸರ್ಕಾರವು, ಎಲ್ಲಾ ಸಾಲಗಳ ಕಾಲಕಾಲದ ತೀರುವಳಿಗಾಗಿ 2012–13ರಲ್ಲಿ ಸಂಚಿತ ಋಣ ಪರಿಹಾರ ನಿಧಿಯನ್ನು ಸ್ಥಾಪಿಸಿ ನಿಧಿಗೆ ಮೂಲಧನವಾಗಿ ₹1,000 ಕೋಟಿಗಳನ್ನು ವರ್ಗಾಯಿಸಿತು. ಈ ನಿಧಿಯನ್ನು ಭಾರತೀಯ ರಿಸರ್ವ್ ಬ್ಯಾಂಕು ನಿರ್ವಹಿಸುತ್ತಿದ್ದು ಮೂಲಧನವನ್ನು ಭಾರತ ಸರ್ಕಾರದ ಭದ್ರತೆಗಳಲ್ಲಿ ಹೂಡಿಕೆ ಮಾಡಿದೆ. ಸರ್ಕಾರದ ಅಧಿಸೂಚನೆಯ ಪ್ರಕಾರ (ಫೆಬ್ರವರಿ 2013) ರಾಜ್ಯ ಸರ್ಕಾರವು ಹಿಂದಿನ ಹಣಕಾಸು ವರ್ಷದ ಕೊನೆಯಲ್ಲಿ ಬಾಕಿ ಉಳಿದಿರುವ ಹೊಣೆಗಾರಿಕೆಗಳ (ಆಯವ್ಯಯದ ಹೊರಗಿನ ಸಾಲಗಳನ್ನು ಹೊರತುಪಡಿಸಿ) ಶೇಕಡ 0.50ರಷ್ಟು ಮೊತ್ತವನ್ನು ನಿಧಿಗೆ ಕನಿಷ್ಠ ವಾರ್ಷಿಕ ವಂತಿಗೆಯನ್ನು ನೀಡಬಹುದು. 2020–21ರ ಅವಧಿಯಲ್ಲಿ, ಕನಿಷ್ಠ ಅಗತ್ಯವಾದ ₹1,597.02 ಕೋಟಿಗಳಿಗೆ ಪ್ರತಿಯಾಗಿ ರಾಜ್ಯ ಸರ್ಕಾರವು ಪ್ರಧಾನ ಲೆಕ್ಕ ಶೀರ್ಷಿಕೆ–2048 ಅಡಿಯಲ್ಲಿ ಸಂಚಿತ ಋಣ ಪರಿಹಾರ ನಿಧಿಗೆ ₹1,700 ಕೋಟಿಗಳ ವಂತಿಗೆ ನೀಡಿದೆ.

ಲೆಕ್ಕ ಪುಸ್ತಕಗಳ ಪ್ರಕಾರ ವರ್ಷದ ಕೊನೆಯಲ್ಲಿ ನಿಧಿಯ ಅಡಿಯಲ್ಲಿನ ಶಿಲ್ಕು ₹4,820 ಕೋಟಿಗಳಷ್ಟಿತ್ತು. ಆದರೆ, ರಾಜ್ಯ ಸರ್ಕಾರವು ತಿಳಿಸಿರುವಂತೆ, ಭಾರತೀಯ ರಿಸರ್ವ್ ಬ್ಯಾಂಕು ವರದಿ ಮಾಡಿರುವಂತೆ ಸಂಚಿತ ಋಣ ಪರಿಹಾರ ನಿಧಿಯಡಿ ಒಟ್ಟು ಮೊತ್ತವು ₹6,044.64 ಕೋಟಿಗಳಾಗಿದ್ದು, ಇದರಲ್ಲಿ ನಿಧಿಯ ಸ್ಥಾಪನೆಯ ದಿನಾಂಕದಿಂದ ಮಾರ್ಚ್ 2021ರ ಅಂತ್ಯದವರೆಗಿನ ₹1,224.64 ಕೋಟಿಗಳ ಸಂಚಿತ ಬಡ್ಡಿ ಸೇರಿದೆ. ಆದರೆ ಈ ಬಡ್ಡಿಯ ಮೊತ್ತವು ಸರ್ಕಾರದ ಲೆಕ್ಕಪುಸ್ತಕಗಳಲ್ಲಿ ನಮೂದಾಗಿರುವುದಿಲ್ಲ ಮತ್ತು ನಿಧಿಯಡಿ ಮರುಹೂಡಿಕೆ ಮಾಡಿದಂತಾಗಿದೆ.

ಸಂಚಿತ ಋಣ ಪರಿಹಾರ ನಿಧಿಯ ಹೂಡಿಕೆಯ ಮೇಲೆ ಗಳಿಸಿದ ಬಡ್ಡಿಯನ್ನು ಲೆಕ್ಕ ಪುಸ್ತಕದಲ್ಲಿ ಲೆಕ್ಕ ಹಾಕಲು ಮಹಾಲೇಖಪಾಲ (ಲೆ ಮತ್ತು ಹ)ರನ್ನು ಈಗಾಗಲೇ ವಿನಂತಿಸಲಾಗಿದೆ ಎಂದು ಆರ್ಥಿಕ ಇಲಾಖೆಯು ಉತ್ತರ ನೀಡಿದೆ (ಡಿಸೆಂಬರ್ 2021).

**(ಬಿ) ಹಸಿರು ತೆರಿಗೆ**

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ಕಾಯಿದೆ, 2002ರ ಪ್ರಕಾರ ಸರ್ಕಾರವು ವಾಯು ಮಾಲಿನ್ಯವನ್ನು ನಿಯಂತ್ರಿಸಲು ಹಸಿರು ತೆರಿಗೆ[27] ಎಂಬ ಉಪಕರದ ಸಂಗ್ರಹವನ್ನು ಜಾರಿಗೆ ತಂದಿದೆ.

---

[27] ವಾಹನಗಳ ನೋಂದಣಿಯ ನವೀಕರಣ ಸಮಯದಲ್ಲಿ ಹದಿನೈದು ವರ್ಷಗಳನ್ನು ಪೂರ್ತಿ ಮಾಡಿರುವ ದ್ವಿಚಕ್ರ ವಾಹನಗಳ ಮತ್ತು ಸಾರಿಗೆಯೇತರ ವಾಹನಗಳ ಮೇಲೆ ಮತ್ತು ಏಳು ವರ್ಷಗಳನ್ನು ಪೂರೈಸಿರುವ ಸಾರಿಗೆ ವಾಹನಗಳ ಮೇಲೆ ನಿಗದಿತ

ಮಾರ್ಚ್ 31, 2016ಕ್ಕೆ ಕೊನೆಗೊಂಡ ರಾಜ್ಯ ಹಣಕಾಸುಗಳ ಕುರಿತು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯ **ಕಂಡಿಕೆ–1.3.1.1**–ಅಸಮರ್ಪಕ ಲೆಕ್ಕಪತ್ರ ನಿರ್ವಹಣೆ ಮತ್ತು ಹಸಿರು ತೆರಿಗೆ ಉಪಕರ ಸಂಗ್ರಹಗಳ ಬಳಕೆಯಾಗದಿರುವುದು' ಅಡಿಯಲ್ಲಿ ಹಸಿರು ತೆರಿಗೆ ಉಪಕರ ಶೀರ್ಷಿಕೆಯಡಿ ಸಂಗ್ರಹಿಸಿದ ಮೊತ್ತವನ್ನು ರಾಜಸ್ವ ಸ್ವೀಕೃತಿಗಳ ಶೀರ್ಷಿಕೆ '0041–00–102–0–11 – ಹಸಿರು ತೆರಿಗೆ' ಮತ್ತು ವೆಚ್ಚವನ್ನು '2041–00–001–0–07–ವಾಯು ಮಾಲಿನ್ಯ ಮತ್ತು ಇತರ ಚಟುವಟಿಕೆಗಳನ್ನು ನಿಯಂತ್ರಿಸುವ ಕ್ರಮಗಳ ಅನುಷ್ಠಾನ' ಅಡಿಯಲ್ಲಿ ಲೆಕ್ಕ ಹಾಕಬೇಕು ಎಂದು ಹೇಳಲಾಗಿದೆ. ಹಸಿರು ತೆರಿಗೆ ಉಪಕರ ಸಂಗ್ರಹವನ್ನು ವರ್ಗಾಯಿಸಲು ಮೀಸಲು ನಿಧಿ ಅಭಿವೃದ್ಧಿ ಮತ್ತು ಕಲ್ಯಾಣ ನಿಧಿಗಳ ಅಡಿಯಲ್ಲಿ '8229–00–200–0–63–ಹಸಿರು ತೆರಿಗೆ' ಲೆಕ್ಕ ಶೀರ್ಷಿಕೆಯನ್ನು ತೆರೆಯಲಾಗಿದೆ .

ಪ್ರಸಕ್ತ ವರ್ಷದಲ್ಲಿ, ₹50.47 ಕೋಟಿಗಳ ಮೊತ್ತವನ್ನು ನಿಧಿಗೆ ವರ್ಗಾಯಿಸಲಾಗಿದೆ ಮತ್ತು ₹0.30 ಕೋಟಿಗಳ ವೆಚ್ಚವನ್ನು ನಿಧಿಗೆ ಖರ್ಚು ಹಾಕಲಾಗಿದೆ. ಆದರೆ, 2020–21ನೇ ಸಾಲಿನಲ್ಲಿ ಲೆಕ್ಕ ಹಾಕಲಾದ ₹10.86 ಕೋಟಿಗಳ ಮೊತ್ತದ ಸ್ವೀಕೃತಿಗಳನ್ನು ನಿಧಿಗೆ ವರ್ಗಾಯಿಸಲಾಗಿಲ್ಲ. 31 ಮಾರ್ಚ್ 2021ರಂತೆ ನಿಧಿಯ ಲೆಕ್ಕದಲ್ಲಿ ಅಂತಿಮ ಶಿಲ್ಕು ₹50.17 ಕೋಟಿ ಆಗಿತ್ತು.

(ಸಿ) **ರಸ್ತೆ ಸುರಕ್ಷತೆ ಉಪಕರ**

ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಕಾಯಿದೆ, 2017ರ ಪ್ರಕಾರ ರಸ್ತೆ ಸುರಕ್ಷತಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ರಸ್ತೆ ಸುರಕ್ಷತಾ ಪ್ರಾಧಿಕಾರ ಮತ್ತು ರಸ್ತೆ ಸುರಕ್ಷತಾ ನಿಧಿಯನ್ನು ಸ್ಥಾಪಿಸಲು ಅವಕಾಶವನ್ನು ಒದಗಿಸಿದೆ. ರಸ್ತೆ ಸುರಕ್ಷತಾ ಉಪಕರವನ್ನು ವಿವಿಧ ವರ್ಗದ ಮೋಟಾರು ವಾಹನಗಳಿಗೆ ವಿವಿಧ ದರಗಳಲ್ಲಿ ವಾಹನ ನೋಂದಣಿ ಸಮಯದಲ್ಲಿ ಒಮ್ಮೆ ವಿಧಿಸಲಾಗುತ್ತದೆ ಮತ್ತು ಸಂಗ್ರಹಿಸಲಾಗುತ್ತದೆ.

ಆರಂಭದಲ್ಲಿ ರಾಜಸ್ವ ಸ್ವೀಕೃತಿಯಾಗಿ ಪರಿಗಣಿಸಲಾದ ರಸ್ತೆ ಸುರಕ್ಷತಾ ಉಪಕರವನ್ನು ಮೊದಲು ಲೆಕ್ಕ ಶೀರ್ಷಿಕೆ "0041–00–102–0–12–ರಸ್ತೆ ಸುರಕ್ಷತಾ ಉಪಕರದ" ಅಡಿಯಲ್ಲಿ ಲೆಕ್ಕ ಹಾಕಿದ ತರುವಾಯ ಈ ಉದ್ದೇಶಕ್ಕಾಗಿ ವಿಶೇಷವಾಗಿ ರಚಿಸಲಾದ ಮೀಸಲು ನಿಧಿಗೆ ಹೊಂದಾಣಿಕೆ ನಮೂದುಗಳ ಮೂಲಕ ಲೆಕ್ಕಶೀರ್ಷಿಕೆ 8229–00–200–0–64–ರಸ್ತೆ ಸುರಕ್ಷತೆ ನಿಧಿಗೆ ವರ್ಗಾಯಿಸಬೇಕಾಗುತ್ತದೆ. 2017–18, 2018–19 ಮತ್ತು 2019–20 ವರ್ಷಗಳಲ್ಲಿ ಈ ಸಂಬಂಧ ಯಾವುದೇ ವಹಿವಾಟು ನಡೆದಿಲ್ಲ. 2020–21ನೇ ಸಾಲಿನಲ್ಲಿ, 2017–18ರಿಂದ 2019–20ರವರೆಗಿನ ರಸ್ತೆ ಸುರಕ್ಷತಾ ಉಪಕರದ ಒಟ್ಟು ಮೊತ್ತ ₹480.50 ಕೋಟಿಗಳನ್ನು ನಿಧಿಗೆ ವರ್ಗಾಯಿಸಲಾಗಿದೆ ಮತ್ತು ₹10.92 ಕೋಟಿಗಳ ವೆಚ್ಚವನ್ನು ನಿಧಿಗೆ ಲೆಕ್ಕ ಹಾಕಲಾಗಿದೆ. ಆದರೆ, 2020–21ನೇ ಸಾಲಿನಲ್ಲಿ ಸಂಗ್ರಹಿಸಲಾದ ₹87.65 ಕೋಟಿಗಳ ಮೊತ್ತದ ಸ್ವೀಕೃತಿಗಳನ್ನು ನಿಧಿಗೆ ವರ್ಗಾಯಿಸಲಾಗಿಲ್ಲ. 31 ಮಾರ್ಚ್ 2021ರಲ್ಲಿದ್ದಂತೆ ನಿಧಿಯ ಲೆಕ್ಕದಲ್ಲಿರುವ ಮುಕ್ತಾಯ ಶಿಲ್ಕು ₹469.58 ಕೋಟಿಗಳು ಆಗಿತ್ತು.

ಸಾರ್ವಜನಿಕ ಲೆಕ್ಕದಲ್ಲಿನ ಹಸಿರು ತೆರಿಗೆ ಮತ್ತು ರಸ್ತೆ ಸುರಕ್ಷತಾ ಉಪಕರಗಳ ನಿಧಿಗೆ ಸ್ವೀಕೃತಿಗಳ ಭಾಗವನ್ನು ವರ್ಗಾಯಿಸದಿರುವುದು ರಾಜಸ್ವ ಸ್ವೀಕೃತಿಗಳನ್ನು ಅಧಿಕವಾಗಿ ತೋರಿಸಲು ಮತ್ತು ರಾಜಸ್ವ ಕೊರತೆಯನ್ನು ಕಡಿಮೆ ಮಾಡಲು ಕಾರಣವಾಗಿದೆ.

ಇದಕ್ಕೆ ಉತ್ತರವಾಗಿ, ಆರ್ಥಿಕ ಇಲಾಖೆಯು ಈ ರೀತಿಯ ವರ್ಗಾವಣೆಗಳು ಹಣಕಾಸಿನ ವರ್ಷದ ಅಂತ್ಯದ ಹಣಕಾಸಿನ ಸ್ಥಿತಿಯನ್ನು ಅವಲಂಬಿಸಿರುತ್ತವೆ, ಹಸಿರು ತೆರಿಗೆ ಮತ್ತು ರಸ್ತೆ ಸುರಕ್ಷತಾ ಉಪಕರಗಳನ್ನು ಆಯಾ ಮೀಸಲು ನಿಧಿಗಳಿಗೆ ವರ್ಗಾಯಿಸಲು ಸಂಬಂಧಪಟ್ಟ ಆಡಳಿತಾತ್ಮಕ ಇಲಾಖೆಗಳ ಮೂಲಕ ಕ್ರಮವನ್ನು ಪ್ರಾರಂಭಿಸಲಾಗುತ್ತದೆ ಎಂದು ಹೇಳಿದೆ (ಡಿಸೆಂಬರ್ 2021).

---

ದರಗಳಲ್ಲಿ ವಾಯು ಮಾಲಿನ್ಯವನ್ನು ತಡೆಗಟ್ಟಲು ಸಂಗ್ರಹಿಸುವ ತೆರಿಗೆಯೊಂದಿಗೆ ಹಸಿರು ತೆರಿಗೆ ಉಪಕರವನ್ನು ವಿಧಿಸಲಾಗುತ್ತದೆ.

**(ಡಿ) ರಾಜ್ಯ ವಿಪತ್ತು ನಿರ್ವಹಣಾ ನಿಧಿ**

ವಿಪತ್ತು ನಿರ್ವಹಣಾ ಕಾಯಿದೆ 2005ರ ಅಡಿಯಲ್ಲಿ ಸ್ಥಾಪಿಸಲಾದ ರಾಜ್ಯ ವಿಪತ್ತು ನಿರ್ವಹಣಾ ನಿಧಿಯು 2010–11ರಿಂದ ಬಡ್ಡಿ ಸಹಿತದ ಮೀಸಲು ನಿಧಿ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಮಾರ್ಗಸೂಚಿಗಳ ಪ್ರಕಾರ ರಾಜ್ಯ ವಿಪತ್ತು ನಿರ್ವಹಣಾ ನಿಧಿಯ ಸಂಚಯನಗಳು ಮತ್ತು ನಿಧಿಯ ಹೂಡಿಕೆಯ ಮೇಲೆ ಗಳಿಸಿದ ಆದಾಯವನ್ನು ಕೇಂದ್ರ ಸರ್ಕಾರದ ದಿನಾಂಕ ಭದ್ರತೆಗಳು, ಹರಾಜು ಮಾಡಿದ ಖಜಾನೆ ಬಿಲ್‌ಗಳು ಮತ್ತು ಬಡ್ಡಿ ಗಳಿಸುವ ಠೇವಣಿಗಳು ಮತ್ತು ಅನುಸೂಚಿತ ವಾಣಿಜ್ಯ ಬ್ಯಾಂಕುಗಳ ಠೇವಣಿಗಳ ಪ್ರಮಾಣ ಪತ್ರಗಳು ಇಂತಹ ಒಂದು ಅಥವಾ ಹೆಚ್ಚಿನ ಸಾಧನಗಳಲ್ಲಿ ಹೂಡಿಕೆ ಮಾಡಬೇಕು, ನೈಸರ್ಗಿಕ ವಿಕೋಪಗಳಾದ ಬರ, ಪ್ರವಾಹ, ಚಂಡಮಾರುತ, ಭೂಕಂಪ, ಬೆಂಕಿ ಮುಂತಾದವುಗಳು ಈ ಯೋಜನೆಯಡಿಯಲ್ಲಿ ಪರಿಹಾರಕ್ಕೆ ಅರ್ಹವಾಗಿವೆ.

ಹದಿನಾಲ್ಕನೇ ಹಣಕಾಸು ಆಯೋಗದ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಡುವಿನ 75:25 ಹಂಚಿಕೆ ಮಾದರಿಯು ಹದಿನೈದನೆಯ ಹಣಕಾಸು ಆಯೋಗದ ಅವಧಿಯಲ್ಲೂ ಮುಂದುವರಿದಿದೆ. 2020–21ರಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಕ್ರಮವಾಗಿ ₹632.40 ಕೋಟಿಗಳು (ಶೇಕಡ 75) ಮತ್ತು ₹210.80 ಕೋಟಿಗಳು (ಶೇಕಡ 25) ಒಟ್ಟು ₹843.20 ಕೋಟಿಗಳ ಮೊತ್ತವನ್ನು ನಿಧಿ ಲೆಕ್ಕಕ್ಕೆ ವರ್ಗಾಯಿಸಬೇಕಾಗಿತ್ತು, ಕೇಂದ್ರ ಸರ್ಕಾರವು ತನ್ನ ಪಾಲಿನ ₹632.40 ಕೋಟಿಗಳ ಅಗತ್ಯಕ್ಕೆ ಪ್ರತಿಯಾಗಿ, ₹632.80 ಕೋಟಿಗಳನ್ನು ಅಂದರೆ ಹೆಚ್ಚುವರಿಯಾಗಿ ₹0.40 ಕೋಟಿಗಳನ್ನು ವರ್ಗಾಯಿಸಿದೆ. ಇದರಿಂದಾಗಿ, ರಾಜ್ಯವು ನಿಧಿಗೆ ತನ್ನ ವಂತಿಗೆಯಲ್ಲಿ ₹0.40 ಕೋಟಿಗಳನ್ನು ಕಡಿಮೆ ಮಾಡಿದೆ ಮತ್ತು ₹210.40 ಕೋಟಿಯನ್ನು ವರ್ಗಾಯಿಸಿದೆ.

2020–21ರಲ್ಲಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಿಂದ (ಎನ್‌ಡಿಆರ್‌ಎಫ್) ಭಾರತ ಸರ್ಕಾರದ ಹೆಚ್ಚುವರಿ ಕೊಡುಗೆಯಾಗಿ ರಾಜ್ಯವು ₹689.27 ಕೋಟಿಗಳ ಮೊತ್ತವನ್ನು ಸ್ವೀಕರಿಸಿದೆ. ಸ್ವೀಕೃತಿ ಮತ್ತು ವೆಚ್ಚಗಳ ವರ್ಗಾವಣೆಗೆ ಆಯವ್ಯಯ ಅಂದಾಜಿನಲ್ಲಿ ಯಾವುದೇ ಅವಕಾಶವನ್ನು ಮಾಡದಿದ್ದರೂ ಹಣವನ್ನು ನಿಧಿ ಲೆಕ್ಕಕ್ಕೆ ವರ್ಗಾಯಿಸಲಾಗಿದೆ.

2245–ನೈಸರ್ಗಿಕ ವಿಕೋಪಗಳಿಗೆ ಪರಿಹಾರ – ಪ್ರಧಾನ ಲೆಕ್ಕ ಶೀರ್ಷಿಕೆಯಡಿ ₹1,532.47 ಕೋಟಿಗಳ ಒಟ್ಟು ಮೊತ್ತವನ್ನು (₹843.20 ಕೋಟಿ ಮತ್ತು ₹689.27 ಕೋಟಿ) ಸಂಪೂರ್ಣವಾಗಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಈ ನಿಧಿಯಡಿ ಉಳಿದ ಶಿಲ್ಕು ₹2.42 ಕೋಟಿಗಳ ಮೊತ್ತವು 2017–18ರಲ್ಲಿ ನಿಧಿ ಲೆಕ್ಕದಲ್ಲಿ ಬಳಕೆಯಾಗದ ₹41.98 ಕೋಟಿಗಳ ಮೊತ್ತಕ್ಕೆ 2020–21ರಲ್ಲಿ ಪಡೆದ ಶೇಕಡ 8ರ ದರದಲ್ಲಿ ಗಳಿಸಿದ ಬಡ್ಡಿಯಾಗಿದೆ.

**(ಇ) ರಾಜ್ಯ ವಿಪತ್ತು ಉಪಶಮನ ನಿಧಿ (ಎಸ್‌ಡಿಎಮ್‌ಎಫ್)**

ಸೆಕ್ಷನ್ 48(ಸಿ) ಅಡಿಯಲ್ಲಿ ವಿಪತ್ತು ಉಪಶಮನ ಕಾಯಿದೆ/ವಿಧೇಯಕ 2005, ನಿಧಿಯನ್ನು ರಾಜ್ಯ ಸರ್ಕಾರವು ನವೆಂಬರ್ 2013ರಲ್ಲಿ ಮೀಸಲು ನಿಧಿಯಡಿ ಸಾರ್ವಜನಿಕ ಲೆಕ್ಕದಡಿ ನಿಧಿಗಳು (ಬಡ್ಡಿ ಸಹಿತ) ವಿಭಾಗದಲ್ಲಿ ಪ್ರಧಾನ ಲೆಕ್ಕ ಶೀರ್ಷಿಕೆ 8121 – ಸಾಮಾನ್ಯ ಮತ್ತು ಇತರ ಮೀಸಲು ನಿಧಿಗಳು ಅಡಿಯಲ್ಲಿ ಈ ನಿಧಿಯನ್ನು ಸ್ಥಾಪಿಸಲಾಗಿದೆ. ರಾಜ್ಯ ವಿಪತ್ತು ಉಪಶಮನ ನಿಧಿಯು ಸ್ವತ್ತುಗಳ ಸಂರಕ್ಷಣೆ, ಪರಿಸರ ವ್ಯವಸ್ಥೆ ಮತ್ತು ಪುನರ್ವಸತಿ, ವಿಪತ್ತುಗಳ ಶಮನಕ್ಕೆ ಸ್ಥಳೀಯ ಮಾರ್ಗಗಳ ಉತ್ತೇಜನ ಇತ್ಯಾದಿಗಳಿಗೆ ಹಣವನ್ನು ಒದಗಿಸುತ್ತದೆ.

ಮೀಸಲು ನಿಧಿಗಳ ವಿಭಾಗದಲ್ಲಿ ಸ್ಥಾಪಿಸಲಾಗಿರುವ ರಾಜ್ಯ ವಿಪತ್ತು ಉಪಶಮನ ನಿಧಿಯು ಬಡ್ಡಿಯನ್ನು ಹೊಂದಿರುವ ಮೀಸಲು ನಿಧಿ ಆಗಿದೆ. ರಾಜ್ಯ ಸರ್ಕಾರವು ಮಾನ್ಯತೆ ಪಡೆದ ಬಡ್ಡಿ ಸಹಿತದ ಸಾಧನಗಳಲ್ಲಿ ತೊಡಗಿಸದ ಈ ನಿಧಿಗಳ ಮೊತ್ತಕ್ಕೆ ರಿಸರ್ವ್ ಬ್ಯಾಂಕಿನ ಓವರ್ ಡ್ರಾಫ್ಟ್ ನಿಯಮದ ಮಾರ್ಗಸೂಚಿಗಳಂತೆ ಅನ್ವಯವಾಗುವ ದರದಲ್ಲಿ ರಾಜ್ಯ ವಿಪತ್ತು ಉಪಶಮನ ನಿಧಿಗೆ ಬಡ್ಡಿಯನ್ನು ನೀಡಬೇಕಾಗಿರುತ್ತದೆ. 2020–

21ರ ಆರ್ಥಿಕ ವರ್ಷದ ಕೊನೆಯಲ್ಲಿ ಈ ಖಾತೆಯಲ್ಲಿ ಖರ್ಚು ಮಾಡದ ಶಿಲ್ಕು 2021-22ರ ಹಣಕಾಸು ವರ್ಷದ ಖಾತೆಯ ಆರಂಭಿಕ ಶಿಲ್ಕು ಮತ್ತು 2025-26ರವರೆಗೆ. ಹಣಕಾಸು ವರ್ಷ 2020-21 ರಿಂದ ಪ್ರಾರಂಭವಾಗುವ ಪ್ರತಿ ಹಣಕಾಸು ವರ್ಷದಲ್ಲಿ ರಾಜ್ಯ ವಿಪತ್ತು ಉಪಶಮನ ನಿಧಿಯ ಒಟ್ಟು ಗಾತ್ರವನ್ನು ಹದಿನೈದನೇ ಹಣಕಾಸು ಆಯೋಗವು ಶಿಫಾರಸು ಮಾಡಿದೆ. ನಿಧಿಗೆ ಕೇಂದ್ರ ಮತ್ತು ರಾಜ್ಯಗಳ ವಂತಿಗೆಯು 75:25ರ ಅನುಪಾತದಲ್ಲಿದೆ.

2020-21ನೇ ಸಾಲಿನಲ್ಲಿ, ರಾಜ್ಯ ವಿಪತ್ತು ಉಪಶಮನ ನಿಧಿಗೆ ಒಟ್ಟು ವಂತಿಗೆಯು ₹210.80 ಕೋಟಿಗಳಾಗಿದ್ದು, ₹158.10 ಕೋಟಿಗಳು ಕೇಂದ್ರದ ಮತ್ತು ₹52.70 ಕೋಟಿಗಳು ರಾಜ್ಯದ ಪಾಲು ಆಗಿದೆ. ಇದರಲ್ಲಿ ರಾಜ್ಯವು ಕೇಂದ್ರದಿಂದ ₹158.20 ಕೋಟಿಗಳನ್ನು ಪಡೆದಿದೆ. ಇದರಿಂದ ರಾಜ್ಯವು ತನ್ನ ವಂತಿಗೆಯಲ್ಲಿ ₹0.10 ಕೋಟಿಯನ್ನು ಕಡಿತಗೊಳಿಸಿದೆ. ಒಟ್ಟು ₹210.80 ಕೋಟಿಗಳ ಸಂಪೂರ್ಣ ಮೊತ್ತವನ್ನು ನಿಧಿ ಲೆಕ್ಕಕ್ಕೆ ವರ್ಗಾಯಿಸಲಾಗಿದೆ ಮತ್ತು 2245-ನೈಸರ್ಗಿಕ ವಿಕೋಪಗಳ ಮೇಲಿನ ಪರಿಹಾರ' ಪ್ರಧಾನ ಶೀರ್ಷಿಕೆಯ ಅಡಿಯಲ್ಲಿ ₹184.50 ಕೋಟಿಗಳ ವೆಚ್ಚವನ್ನು ನಿಧಿಯಿಂದ ಪೂರೈಸಿದಂತೆ ತೋರಿಸಲಾಗಿದೆ.

ರಾಜ್ಯ ವಿಪತ್ತು ಪರಿಹಾರ ನಿಧಿ/ರಾಜ್ಯ ವಿಪತ್ತು ಉಪಶಮನ ನಿಧಿಗಳಡಿ 2020-21ರಲ್ಲಿನ ವೆಚ್ಚ/ಸ್ವೀಕೃತಿಗಳ ವಿವರಗಳನ್ನು **ಕೋಷ್ಟಕ-2.29**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ-2.29: ರಾಜ್ಯ ವಿಪತ್ತು ಪರಿಹಾರ ನಿಧಿ/ರಾಜ್ಯ ವಿಪತ್ತು ಉಪಶಮನ ನಿಧಿಗಳಡಿಯ ವಿವರಗಳು**

(₹ ಕೋಟಿಗಳಲ್ಲಿ)

| | ಕಿರು ಲೆಕ್ಕಶೀರ್ಷಿಕೆ | 2020-21ರಲ್ಲಿ ವೆಚ್ಚ |
|---|---|---|
| **05-ರಾಜ್ಯ ವಿಪತ್ತು ಪ್ರತಿಕ್ರಿಯೆ ನಿಧಿ** | ಮೀಸಲು ನಿಧಿಗಳಿಗೆ ಮತ್ತು ಠೇವಣಿ ಲೆಕ್ಕಗಳಿಗೆ ವರ್ಗಾವಣೆಗಳು-ರಾಜ್ಯ ವಿಪತ್ತು ನಿರ್ವಹಣಾ ನಿಧಿ | 843.20 |
| | ಮೀಸಲು ನಿಧಿಗಳಿಗೆ ಮತ್ತು ಠೇವಣಿ ಲೆಕ್ಕಗಳಿಗೆ ವರ್ಗಾವಣೆಗಳು-ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ | 689.27 |
| | ಕಳೆಯಿರಿ- ರಾಜ್ಯ ವಿಪತ್ತು ನಿರ್ವಹಣಾ ನಿಧಿಯಿಂದ ಭರಿಸಿದ ಮೊತ್ತ | (-)843.20 |
| | ಕಳೆಯಿರಿ-ಎ ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಿಂದ ಭರಿಸಿದ ಮೊತ್ತ | (-)689.27 |
| | 2017-18ರ ಅವಧಿಯಲ್ಲಿ ರಾಜ್ಯ ವಿಪತ್ತು ನಿರ್ವಹಣಾ ನಿಧಿ ಅಡಿಯಲ್ಲಿ ಬಳಕೆ ಮಾಡದ ಮೊತ್ತದ ಸಂಬಂಧವಾಗಿನ ಬಡ್ಡಿಯ ವರ್ಗಾವಣೆಗಳು | 2.42 |
| | **ಬಾಕಿ** | **2.42** |
| **10-ರಾಜ್ಯ ವಿಪತ್ತು ನಿವಾರಣಾ ನಿಧಿ** | ಮೀಸಲು ನಿಧಿಗಳಿಗೆ ಮತ್ತು ಠೇವಣಿ ಲೆಕ್ಕಗಳಿಗೆ ವರ್ಗಾವಣೆಗಳು-ರಾಜ್ಯ ವಿಪತ್ತು ಉಪಶಮನ ನಿಧಿ | 210.80 |
| | ಕಳೆಯಿರಿ- ರಾಜ್ಯ ವಿಪತ್ತು ಉಪಶಮನ ನಿಧಿಯಿಂದ ಭರಿಸಿದ ಮೊತ್ತ | (-)184.50 |
| | **ಬಾಕಿ** | **26.30** |

*ಆಕರ : 15ನೇ ಹಣಕಾಸು ಆಯೋಗ ಮತ್ತು ಎನ್‌ಟಿಎ-2020-21*

31 ಮಾರ್ಚ್ 2021ರಂತೆ ರಾಜ್ಯ ವಿಪತ್ತು ಪರಿಹಾರ ನಿಧಿ/ರಾಜ್ಯ ವಿಪತ್ತು ಉಪಶಮನ ನಿಧಿಗಳಲ್ಲಿನ ಶಿಲ್ಕು ಕ್ರಮವಾಗಿ ₹2.42 ಕೋಟಿಗಳು ಮತ್ತು ₹26.30 ಕೋಟಿಗಳಷ್ಟಿದ್ದವು (ಕ್ರೆಡಿಟ್).

### *2.6.3 ನಿಷ್ಕ್ರಿಯ ಮೀಸಲು ನಿಧಿಗಳು*

31 ಮಾರ್ಚ್ 2021ರ ಅಂತ್ಯದ ವೇಳೆಗೆ, 52 ಮೀಸಲು ನಿಧಿಗಳಲ್ಲಿ (ರಾಜ್ಯ ವಿಪತ್ತು ಉಪಶಮನ ನಿಧಿ ಸೇರಿದಂತೆ ಐದು ನಿಧಿ ಖಾತೆಗಳನ್ನು ತೆರೆಯಲಾಗಿದೆ), 21 ನಿಧಿ ಲೆಕ್ಕಗಳು ನಿಷ್ಕ್ರಿಯವಾಗಿ ಉಳಿದಿವೆ. ಈ 21 ನಿಷ್ಕ್ರಿಯ ಮೀಸಲು ನಿಧಿಗಳಲ್ಲಿ, 31 ಮಾರ್ಚ್ 2021ರಂತೆ ಮೂರು ಮೀಸಲು ನಿಧಿಗಳು ಸೊನ್ನೆ ಶಿಲ್ಕನ್ನು ಹೊಂದಿದ್ದವು, 13 ಮೀಸಲು ನಿಧಿಗಳಲ್ಲಿ ₹733.10 ಕೋಟಿಗಳ ಕ್ರೆಡಿಟ್ ಶಿಲ್ಕು ಮತ್ತು ಎಂಟು ಮೀಸಲು ನಿಧಿಗಳಲ್ಲಿ ₹33.08 ಕೋಟಿಗಳ ಡೆಬಿಟ್ ಶಿಲ್ಕನ್ನು ಹೊಂದಿದ್ದವು.

ಆರ್ಥಿಕ ಇಲಾಖೆಯು ಮೂರು ವರ್ಷಗಳಿಗಿಂತಲೂ ಹೆಚ್ಚು ಕಾಲ ಬಾಕಿ ಉಳಿದಿರುವ ಹಣವನ್ನು ಪರಿಶೀಲಿಸಲು ಮತ್ತು ಅಂತಹ ಲೆಕ್ಕಗಳನ್ನು ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳಲು ಸಂಬಂಧಿಸಿದ ನಿರ್ವಾಹಕರು ಮತ್ತು ಇಲಾಖೆಗಳ ಮುಖ್ಯಸ್ಥರಿಗೆ (ಫೆಬ್ರವರಿ 2021) ಸೂಚಿಸಲಾಗಿದೆ ಎಂದು ಉತ್ತರಿಸಿದೆ (ಡಿಸೆಂಬರ್ 2021).

ಇಂತಹ ನಿಷ್ಕ್ರಿಯ ಮೀಸಲು ನಿಧಿ ಲೆಕ್ಕಗಳನ್ನು ಸಮನ್ವಯದ ನಂತರ ಮುಕ್ತಾಯ ಮಾಡಲು ಮತ್ತು ಉಳಿದ ಹಣವನ್ನು ಸಂಚಿತ ನಿಧಿಗೆ ಜಮಾ ಮಾಡಲು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

### *2.6.4 ಕರ್ನಾಟಕ ಸ್ಥಿರಾಸ್ತಿ ನಿಯಂತ್ರಣ ಪ್ರಾಧಿಕಾರ ನಿಧಿ*

ಸ್ಥಿರಾಸ್ತಿ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯಿದೆ 2016ರ ಪ್ರಕಾರ ಸ್ಥಿರಾಸ್ತಿ ನಿಯಂತ್ರಣ ಪ್ರಾಧಿಕಾರವು (ರೆರಾ) ಅಸ್ತಿತ್ವಕ್ಕೆ ಬಂದಿದೆ. ಇದು ವಸತಿ ವಹಿವಾಟುಗಳು ಮತ್ತು ಸ್ಥಿರಾಸ್ತಿಗೆ ಸಂಬಂಧಿಸಿದಂತೆ ಹೊಣೆಗಾರಿಕೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಕರ್ನಾಟಕದಲ್ಲಿ, ಕರ್ನಾಟಕ ಸ್ಥಿರಾಸ್ತಿ ನಿಯಂತ್ರಣ ಮತ್ತು ಅಭಿವೃದ್ಧಿ ನಿಯಮಗಳು, 2017ನ್ನು 10 ಜುಲೈ 2017ರಂದು ಅನುಮೋದಿಸಿ ಅಧಿಸೂಚಿಸಲಾಗಿದೆ.

14 ಜುಲೈ 2017ರ ಸರ್ಕಾರಿ ಆದೇಶದ ಪ್ರಕಾರ, ಬಡ್ಡಿಸಹಿತ ಠೇವಣಿ ಶೀರ್ಷಿಕೆ 8343–00–120–0–02 –ಸ್ಥಿರಾಸ್ತಿ (ನಿಯಂತ್ರಣ ಮತ್ತು ಅಭಿವೃದ್ಧಿ) ಅಡಿಯಲ್ಲಿನ ವಹಿವಾಟುಗಳನ್ನು ಲೆಕ್ಕ ಹಾಕಲು ಸ್ಥಿರಾಸ್ತಿ ನಿಯಂತ್ರಣ ನಿಧಿಯನ್ನು ತೆರೆಯಲಾಗಿದೆ. ಪ್ರಾಧಿಕಾರ ಮತ್ತು ಮೇಲ್ಮನವಿ ನ್ಯಾಯಾಧಿಕರಣಕ್ಕೆ ಸಂಬಂಧಿಸಿದಂತೆ ವೇತನಗಳು, ಭತ್ಯೆಗಳು, ಆಡಳಿತಾತ್ಮಕ ವೆಚ್ಚಗಳು ಮತ್ತು ಅದರ ಕಾರ್ಯಗಳ ನಿರ್ವಹಣೆಗೆ ಸಂಬಂಧಿಸಿದಂತೆ ಪ್ರಾಧಿಕಾರದ ಯಾವುದೇ ಇತರ ವೆಚ್ಚಗಳಿಗೆ ಸಂಬಂಧಿಸಿದ ವೆಚ್ಚವನ್ನು ಪೂರೈಸಲು ನಿಧಿಯಲ್ಲಿನ ಸಂಗ್ರಹವನ್ನು ರಾಜ್ಯ ಸರ್ಕಾರವು ಬಳಸಿಕೊಳ್ಳುತ್ತದೆ.

ಈ ಕಾಯಿದೆಯ ಉದ್ದೇಶಗಳಿಗಾಗಿ 2020–21ನೇ ಸಾಲಿನಲ್ಲಿ ನಿಧಿಗೆ ₹18.43 ಕೋಟಿಗಳ ಮೊತ್ತವನ್ನು ವರ್ಗಾಯಿಸಲಾಗಿದೆ (ಲೆಕ್ಕ ಶೀರ್ಷಿಕೆ 0216–02–800–0–01–ಸ್ಥಿರಾಸ್ತಿ ನಿಯಂತ್ರಣ ಪ್ರಾಧಿಕಾರ ನಿಧಿ ಅಡಿಯಲ್ಲಿ ಸಂಗ್ರಹಿಸಲಾದ ಶುಲ್ಕದಲ್ಲಿ ಸಂಚಿತ ನಿಧಿಯಿಂದ) ಮತ್ತು ₹10.25 ಕೋಟಿ ವೆಚ್ಚವಾಗಿದೆ. ಆದರೆ, 2017–18 ಮತ್ತು 2018–19ರ ಅವಧಿಯಲ್ಲಿ ಸಂಗ್ರಹಿಸಿದ ಮತ್ತು ಮಾಡಿದ ವೆಚ್ಚವನ್ನು ನಿಧಿಗೆ ವರ್ಗಾಯಿಸಲಾಗಿಲ್ಲ ರಾಜ್ಯ ಹಣಕಾಸುಗಳ ಮೇಲಿನ ಹಿಂದಿನ ಲೆಕ್ಕಪರಿಶೋಧನೆಯ ವರದಿಯ ಮೂಲಕ ಗಮನ ಸೆಳೆದಿದ್ದರೂ, ಸರ್ಕಾರವು ಸ್ವೀಕೃತಿಗಳನ್ನು ಮತ್ತು ವೆಚ್ಚವನ್ನು ನಿಧಿಗೆ ವರ್ಗಾಯಿಸಲು ಯಾವುದೇ ಕ್ರಮವನ್ನು ಪ್ರಾರಂಭಿಸಲಾಗಿಲ್ಲ. 31 ಮಾರ್ಚ್ 2021ರಂತೆ ನಿಧಿಯಲ್ಲಿ ಅಂತಿಮ ಶಿಲ್ಕು ₹13.53 ಕೋಟಿಗಳು ಆಗಿತ್ತು.

ಆರ್ಥಿಕ ಇಲಾಖೆಯು 2017–18 ಮತ್ತು 2018–19 ವರ್ಷಗಳಿಗೆ ಸಂಬಂಧಿಸಿದ ಸಂದಾಯಗಳು ಮತ್ತು ವೆಚ್ಚಗಳನ್ನು ಸಮನ್ವಯದ ನಂತರ ನಿಧಿಗೆ ವರ್ಗಾಯಿಸಲಾಗುವುದು ಎಂದು ಉತ್ತರಿಸಿದೆ (ಡಿಸೆಂಬರ್ 2021).

ಹಿಂದಿನ ವರ್ಷದಲ್ಲಿ ಆರ್ಥಿಕ ಇಲಾಖೆಯು ಅದೇ ರೀತಿಯಲ್ಲಿ ಉತ್ತರಿಸಿದ್ದರೂ ಸಂದಾಯಗಳು ಮತ್ತು ವೆಚ್ಚವನ್ನು ನಿಧಿ ಖಾತೆಗೆ ವರ್ಗಾಯಿಸಿಲ್ಲ. ಸ್ವೀಕೃತಿ/ಖರ್ಚುಗಳ ವರ್ಗಾವಣೆಯಾಗದಿರುವುದು ನಿಧಿ ಖಾತೆಯ ಪಾರದರ್ಶಕತೆಯ ಮೇಲೆ ಪರಿಣಾಮ ಬೀರುವುದರಿಂದ, ಆದಷ್ಟು ಬೇಗ ಅದರ ವರ್ಗಾವಣೆಯನ್ನು ಖಾತ್ರಿಪಡಿಸಿಕೊಳ್ಳಬೇಕು.

## 2.7 ಸಾಲ ನಿರ್ವಹಣೆ

ಋಣಭಾರ ನಿರ್ವಹಣೆಯು ಸರ್ಕಾರದ ಸಾಲವನ್ನು ನಿರ್ವಹಿಸುವ ಕಾರ್ಯತಂತ್ರವನ್ನು ಸ್ಥಾಪಿಸುವ ಮತ್ತು ಕಾರ್ಯಗತಗೊಳಿಸುವ ಅಗತ್ಯವಿರುವ ಪ್ರಮಾಣದ ಹಣವನ್ನು ಸಂಗ್ರಹಿಸಲು, ಅದರ ಹಾನಿ ಸಂಭವ ಮತ್ತು

ವೆಚ್ಚದ ಉದ್ದೇಶಗಳನ್ನು ಸಾಧಿಸಲು ಮತ್ತು ಸರ್ಕಾರವು ಕಾಯಿದೆಯ ಅಥವಾ ಆಯವ್ಯಯ ಘೋಷಣೆಗಳ ಮೂಲಕ ಜಾರಿಗೆ ತಂದಿರುವ ಯಾವುದೇ ಇತರ ಉನ್ನತ ಮಟ್ಟದ ಸಾಲ ನಿರ್ವಹಣಾ ಗುರಿಗಳನ್ನು ಪೂರೈಸುವ ಪ್ರಕ್ರಿಯೆಯಾಗಿದೆ. 2016–17ರಿಂದ 2020–21ರ ಅವಧಿಯಲ್ಲಿ ಒಟ್ಟು ಬಾಕಿ ಇರುವ ಸಾಲ ಮತ್ತು ರಾಒಆಂಉಕ್ಕೆ ಅದರ ಶತಾಂಶವನ್ನು **ನಕ್ಷೆ–2.14**ರಲ್ಲಿ ಚಿತ್ರಿಸಲಾಗಿದೆ.

**ನಕ್ಷೆ–2.14: 2016–17ರಿಂದ 2020–21ರ ಅವಧಿಯಲ್ಲಿ ಒಟ್ಟು ಬಾಕಿ ಇರುವ ಸಾಲ ಮತ್ತು ರಾಒಆಂಉಕ್ಕೆ ಅದರ ಶತಾಂಶ**




*ಆಕರ: ಹಣಕಾಸು ಲೆಕ್ಕಗಳು*

ಸಾಲ–ರಾಒಆಂಉದ ಅನುಪಾತವನ್ನು ಲೆಕ್ಕ ಮಾಡಲು ಸರಕು ಮತ್ತು ಸೇವಾ ತೆರಿಗೆ ಪರಿಹಾರದ ಬದಲಿಗೆ ಪಡೆದ ಬ್ಯಾಕ್–ಟು–ಬ್ಯಾಕ್ ಸಾಲವನ್ನು (₹12,407 ಕೋಟಿ) ಪರಿಗಣಿಸಲಾಗಿಲ್ಲ.

ಮೇಲಿನ ನಕ್ಷೆಯಿಂದ ನೋಡಿದಂತೆ, 2016–17 ರಿಂದ 2020–21ರ ಅವಧಿಯಲ್ಲಿ ಬಾಕಿ ಉಳಿದಿರುವ ಸಾಲ ಮತ್ತು ರಾಒಆಂಉಕ್ಕೆ ಅದರ ಶತಾಂಶವು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದ್ದರೂ ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆಯ ಅಡಿಯಲ್ಲಿ ಸೂಚಿಸಲಾದ (ಶೇಕಡ 25) ಗುರಿಯೊಳಗೆ ಇವೆ.

### *2.7.1 ಸಾಲ ಚಿತ್ರಣದ ಅಂಗಗಳು*

ರಾಜ್ಯ ಸರ್ಕಾರದ ಒಟ್ಟು ಸಾಲವು ಸಾಮಾನ್ಯವಾಗಿ ರಾಜ್ಯದ ಆಂತರಿಕ ಋಣ (ಮಾರುಕಟ್ಟೆ ಸಾಲಗಳು, ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗೋಪಾಯಗಳು, ರಾಷ್ಟ್ರೀಯ ಸಣ್ಣ ಉಳಿತಾಯ ನಿಧಿಗೆ ನೀಡಲಾದ ವಿಶೇಷ ಭದ್ರತೆಗಳು ಮತ್ತು ಹಣಕಾಸು ಸಂಸ್ಥೆಗಳಿಂದ ಸಾಲಗಳು ಇತ್ಯಾದಿ), ಭಾರತ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು, ಸಾರ್ವಜನಿಕ ಲೆಕ್ಕದ ಹೊಣೆಗಳು ಮತ್ತು ಆಯವ್ಯಯದ ಹೊರಗಿನ ಸಾಲಗಳನ್ನು ಒಳಗೊಂಡಿರುತ್ತದೆ.

ಸಾಲದ ಘಟಕವಾರು ವಿವರಗಳು, ಅವುಗಳ ಬೆಳವಣಿಗೆಯ ದರ, ರಾಒಆಂಉಕ್ಕೆ ಈ ಹೊಣೆಗಾರಿಕೆಗಳ ಅನುಪಾತವನ್ನು **ಕೋಷ್ಟಕ–2.30**ರಲ್ಲಿ ತೋರಿಸಲಾಗಿದೆ ಮತ್ತು ರಾಜಸ್ವ ಸ್ವೀಕೃತಿಗಳು ಮತ್ತು ಸ್ವಂತ ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ಹಣಕಾಸಿನ ಹೊಣೆಗಾರಿಕೆಗಳ ಪ್ಲವನತೆಯನ್ನು **ಅನುಬಂಧ–2.2**ರಲ್ಲಿ ವಿವರಿಸಲಾಗಿದೆ. ರಾಜ್ಯದ ಹಣಕಾಸಿನ ಹೊಣೆಗಾರಿಕೆಗಳು 2016–17ರಲ್ಲಿನ ₹2,21,319 ಕೋಟಿಗಳಿಂದ 2020–21ರಲ್ಲಿ ₹4,15,926 ಕೋಟಿಗಳಿಗೆ ಏರಿ ಶೇಕಡ 88ರಷ್ಟು ಏರಿಕೆಯಾಗಿದೆ. 2020–21ರ ಅವಧಿಯಲ್ಲಿ ಒಟ್ಟಾರೆ ಸಾಲದ ಸಂಯೋಜನೆಯನ್ನು **ನಕ್ಷೆ–2.15**ರಲ್ಲಿ ಪ್ರಸ್ತುತಪಡಿಸಲಾಗಿದೆ ಮತ್ತು 2016–17ರಿಂದ 2020–21ರ ಅವಧಿಯಲ್ಲಿ ಮಾಡಿದ ಆಂತರಿಕ ಋಣ ಮತ್ತು ಮರುಪಾವತಿಯ ವಿವರಗಳನ್ನು **ನಕ್ಷೆ–2.16**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.30: ಘಟಕವಾರು ಸಾಲದ ಪ್ರವೃತ್ತಿಗಳು**

(₹ ಕೋಟಿಗಳಲ್ಲಿ)

| | | 2016–17 | 2017–18 | 2018–19 | 2019–20 | 2020–21 |
|---|---|---|---|---|---|---|
| ಬಾಕಿ ಇರುವ ಒಟ್ಟಾರೆ ಋಣ | | 2,21,319 | 2,46,231 | 2,85,238 | 3,37,520 | 4,15,926 |
| ಸಾರ್ವಜನಿಕ ಋಣ | ಆಂತರಿಕ ಋಣ | 1,32,489 | 1,48,581 | 1,79,309 | 2,20,337 | 2,81,140 |
| | ಭಾರತ ಸರ್ಕಾರದ ಸಾಲಗಳು | 13,794 | 14,555 | 14,657 | 13,908 | 26,617 |
| ಸಾರ್ವಜನಿಕ ಲೆಕ್ಕದ ಹೊಣೆಗಾರಿಕೆಗಳು | | 64,788 | 69,922 | 76,410 | 85,172 | 89,748 |
| ಆಯವ್ಯಯೇತರ ಸಾಲಗಳು | | 10,248 | 13,173 | 14,862 | 18,103 | 18,421 |
| ಬಾಕಿ ಇರುವ ಋಣದ ವೃದ್ಧಿಯ ದರ (ಶೇಕಡ) | | 20.73 | 11.26 | 15.84 | 18.33 | 23.23 |
| ರಾಒಆಂಉ | | 12,07,608 | 13,36,914 | 14,90,624 | 16,28,928 | 18,03,609 |
| ಋಣ/ರಾಒಆಂಉ (ಶೇಕಡ) | | 18.32 | 18.42 | 19.14 | 20.72 | 22.37* |
| ಒಟ್ಟು ಋಣ ಸ್ವೀಕೃತಿಗಳು | | 31,156 | 25,122 | 41,914 | 50,459 | 84,528 |
| ಒಟ್ಟು ಋಣ ಮರುಪಾವತಿಗಳು | | 7,420 | 8,269 | 11,083 | 10,180 | 11,016 |
| ಲಭ್ಯವಿರುವ ಒಟ್ಟು ಋಣ | | 23,736 | 16,853 | 30,831 | 40,279 | 73,512 |
| ಋಣ ವಿಮೋಚನೆಯ ಅನುಪಾತ | | 56.58 | 79.97 | 57.54 | 51.17 | 35.63 |

*ಆಕರ: ಹಣಕಾಸು ಲೆಕ್ಕಗಳು*

** ಸರಕು ಮತ್ತು ಸೇವಾ ತೆರಿಗೆಯ ಪರಿಹಾರದ ಬದಲಾಗಿ ಭಾರತ ಸರ್ಕಾರದಿಂದ ಪಡೆದ ಬ್ಯಾಕ್–ಟು–ಬ್ಯಾಕ್ ಸಾಲವನ್ನು (₹12,407 ಕೋಟಿ) ಸೂಚಕವನ್ನು ಲೆಕ್ಕ ಹಾಕಲು ಪರಿಗಣಿಸಲಾಗಿಲ್ಲ.*

ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ₹12,407 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ ಪರಿಣಾಮಕಾರಿ ಬಾಕಿ ಇರುವ ಸಾರ್ವಜನಿಕ ಋಣವು ₹4,03,519 ಕೋಟಿಗಳಾಗಿದೆ.

- ಸಾಲ ವಿಮೋಚನೆಯ ಅನುಪಾತವು 2018–19 ರಿಂದ 2020–21ರವರೆಗೆ ಕಡಿಮೆ ಆಗುತ್ತಿರುವ ಪ್ರವೃತ್ತಿಯಲ್ಲಿದೆ; ಮತ್ತು
- ರಾಜ್ಯಕ್ಕೆ ಲಭ್ಯವಿರುವ ಒಟ್ಟು ಸಾಲದ ಹೆಚ್ಚಳವು ಮುಖ್ಯವಾಗಿ 2019–20ರಲ್ಲಿ ₹50,459 ಕೋಟಿಗಳಿದ್ದು 2020–21ರಲ್ಲಿ ₹72,121 ಕೋಟಿಗಳಿಗೆ ಏರಿದೆ ಸಾರ್ವಜನಿಕ ಋಣದ ಸ್ವೀಕೃತಿಗಳ ಹೆಚ್ಚಳದಿಂದಾಗಿದೆ.

**ನಕ್ಷೆ–2.15: 2020–21ರ ಆರ್ಥಿಕ ವರ್ಷದ ಕೊನೆಯಲ್ಲಿ ಒಟ್ಟಾರೆ ಸಾಲದ ವಿಭಜನೆ**

(₹ ಕೋಟಿಗಳಲ್ಲಿ)




ಆಕರ: ಹಣಕಾಸು ಲೆಕ್ಕಗಳು

*ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ₹12,407 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ, ಪರಿಣಾಮಕಾರಿ ಸಾಲಗಳು ಮತ್ತು ಮುಂಗಡಗಳು ₹14,210.37 ಕೋಟಿಗಳಾಗುವುದರಿಂದ ಒಟ್ಟು ಋಣಗಳು ₹4,03,519 ಕೋಟಿಗಳಾಗುವಲ್ಲಿ ಪರಿಣಮಿಸುತ್ತದೆ.*

**ನಕ್ಷೆ–2.16 ಆಂತರಿಕ ಋಣ ಮತ್ತು ಮರುಪಾವತಿ**




*ಆಕರ: ಹಣಕಾಸು ಲೆಕ್ಕಗಳು*

ಒಟ್ಟು ಬಾಕಿಯಿರುವ ಸಾಲದಲ್ಲಿ, ಮಾರುಕಟ್ಟೆ ಸಾಲಗಳು, ನಬಾರ್ಡ್, ಎಲ್ಐಸಿ, ಜಿಐಸಿ ಮತ್ತು ಕೇಂದ್ರ ಸರ್ಕಾರದ ಎನ್ಎಸ್ಎಸ್ಎಫ್‌ಗೆ ನೀಡಲಾದ ವಿಶೇಷ ಭದ್ರತೆಗಳ ಸಾಲಗಳನ್ನು ಒಳಗೊಂಡಿರುವ ಆಂತರಿಕ ಋಣವು ಶೇಕಡ 67.59ರಷ್ಟಿದೆ (₹2,81,140 ಕೋಟಿ). ಸಾರ್ವಜನಿಕ ಲೆಕ್ಕದ ಹೊಣೆಗಾರಿಕೆಗಳು ಶೇಕಡ 21.58ರಷ್ಟಿದೆ. ಭಾರತ ಸರ್ಕಾರದಿಂದ ಪಡೆದ ಸಾಲಗಳು ಶೇಕಡ 6.40 ಮತ್ತು ಆಯವ್ಯಯದ ಹೊರಗೆ ಪಡೆದ ಸಾಲಗಳು ಶೇಕಡ 4.43ರಷ್ಟಿದೆ.

ರಾಜ್ಯ ಸಂಚಿತ ನಿಧಿಯ ಭಾಧ್ಯತೆಗಳ ಭಾಗವಾಗಿರುವ ಆಂತರಿಕ ಋಣವು 2016–17ರಲ್ಲಿದ್ದ ₹1,32,489 ಕೋಟಿಗಳಿಂದ 2020–21ರಲ್ಲಿ ₹2,81,140 ಕೋಟಿಗಳಿಗೆ ಏರಿಯಾಗಿದೆ. ಏರಿಕೆಯು ಶೇಕಡ 112ರಷ್ಟಾಗಿದೆ. ಭಾರತ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು 2016–17ರಲ್ಲಿ ₹13,794 ಕೋಟಿಗಳಿದ್ದು 2020–21ರಲ್ಲಿ ₹26,617 ಕೋಟಿಗಳಿಗೆ ಅಂತರ–ವರ್ಷದ ವ್ಯತ್ಯಾಸಗಳೊಂದಿಗೆ ಶೇಕಡ 93ರ ಹೆಚ್ಚಳವನ್ನು ತೋರಿಸಿದೆ.

### 2.7.1.1 ಆಯವ್ಯಯದ ಹೊರಗಿನ ಸಾಲಗಳು

ರಾಜ್ಯ ಸರ್ಕಾರದ ಸಾಲಗಳನ್ನು ಭಾರತ ಸಂವಿಧಾನದ 293(1)ನೇ ವಿಧಿಯ ಮೂಲಕ ನಿಯಂತ್ರಿಸಲಾಗುತ್ತದೆ. ಸರ್ಕಾರಿ ಕಂಪನಿಗಳು/ನಿಗಮಗಳು/ಮಂಡಳಿಗಳು ಪಡೆದ ಸಾಲಗಳಿಗೆ ರಾಜ್ಯ ಸರ್ಕಾರವು ಖಾತರಿಯನ್ನು ನೀಡುತ್ತದೆ. ಈ ಕಂಪನಿಗಳು/ನಿಗಮಗಳು/ಮಂಡಳಿಗಳು ರಾಜ್ಯ ಆಯವ್ಯಯದ ಹೊರಗೆ ಯೋಜಿಸಲಾದ ವಿವಿಧ ರಾಜ್ಯ ಯೋಜನೆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಮಾರುಕಟ್ಟೆ/ ಹಣಕಾಸು ಸಂಸ್ಥೆಗಳಿಂದ ಹಣವನ್ನು ಎರವಲು ಪಡೆದಿವೆ. ಈ ಸಂಸ್ಥೆಗಳು ಪಡೆದ ಸಾಲಗಳು 'ಆಯವ್ಯಯದ ಹೊರಗಿನ ಸಾಲಗಳು' ಎಂದಾಗಿ ಅಂತಿಮವಾಗಿ ರಾಜ್ಯ ಸರ್ಕಾರದ ಹೊಣೆಗಾರಿಕೆಗಳಾಗಿ ಬದಲಾಗುತ್ತವೆ. ಸರ್ಕಾರವು ಈ ಕಂಪನಿಗಳು/ನಿಗಮಗಳು/ಸೊಸೈಟಿಗಳು ಪಡೆದ ಸಾಲಗಳನ್ನು ಬಂಡವಾಳ ಲೆಕ್ಕ ನಿಯತ ಆಯವ್ಯಯ ಅವಕಾಶಗಳೊಂದಿಗೆ ಬಡ್ಡಿಯನ್ನೂ ಒಳಗೊಂಡಂತೆ ಮರುಪಾವತಿ ಮಾಡುತ್ತಿದೆ.

2020–21ರ ಅವಧಿಯಲ್ಲಿನ, ₹48,075 ಕೋಟಿಗಳ ಬಂಡವಾಳ ವೆಚ್ಚದಲ್ಲಿ ಆಯವ್ಯಯ ಹೊರಗಿನ ಸಾಲಗಳ ಅಸಲು ಮರುಪಾವತಿಯ ₹2,726.55 ಕೋಟಿಗಳು ಸೇರಿವೆ. **ಕೋಷ್ಟಕ–2.31**ರಲ್ಲಿ 2020–21ರ ಅಂತ್ಯದ ವೇಳೆಗೆ ಸಾಲಗಳ ಘಟಕವಾರು ಸ್ಥಿತಿಯನ್ನು ನೀಡಲಾಗಿದೆ.

**ಕೋಷ್ಟಕ–2.31: ಆಯವ್ಯಯ ಹೊರಗಿನ ಸಾಲಗಳ ಘಟಕವಾರು ಸ್ಥಿತಿ**

(₹ ಕೋಟಿಗಳಲ್ಲಿ)

| ಕಂಪನಿ/ನಿಗಮ/ಮಂಡಳಿ | ಬಾಕಿ ಇರುವ ಆಯವ್ಯಯೇತರ ಸಾಲಗಳು | 2020–21ರ ಅವಧಿಯಲ್ಲಿ ಸಾಲಗಳು | 2020–21ರಲ್ಲಿ ಮರುಪಾವತಿಗಳು | | ಅಂತಿಮ ಶಿಲ್ಕು |
|---|---|---|---|---|---|
| | | | ಅಸಲು | ಬಡ್ಡಿ | |
| ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ | 8,399.40 | 500.00 | 1,297.54 | 694.15 | 7,601.86 |
| ಕರ್ನಾಟಕ ನೀರಾವರಿ ನಿಗಮ ನಿಯಮಿತ | 3,732.91 | 650.00 | 659.36 | 292.69 | 3,723.55 |
| ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ | 100.64 | 127.60 | 16.50 | 11.85 | 211.74 |
| ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ | 1,133.06 | 600.00 | 242.27 | 133.29 | 1,490.79 |
| ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ | 2.31 | – | 2.31 | 0.11 | – |
| ಕಾವೇರಿ ನೀರಾವರಿ ನಿಗಮ ನಿಯಮಿತ | 2,685.00 | 250.00 | 150.00 | 217.12 | 2,785.00 |
| ವಿಶ್ವೇಶ್ವರಾಯ ಜಲ ನಿಗಮ ನಿಯಮಿತ | 2,049.50 | 260.50 | 358.57 | 161.98 | 1,951.43 |
| ಕೌಶಲಾಭಿವೃದ್ಧಿ | – | 657.00 | – | 1.12 | 657.00 |
| **ಒಟ್ಟು** | **18,102.82** | **3,045.10** | **2,726.55** | **1,512.31** | **18,421.37** |

*ಆಕರ: ಹಣಕಾಸು ಲೆಕ್ಕಗಳು*

2019–20ರವರೆಗೆ ಆಯವ್ಯಯದ ಹೊರಗಿನ ಸಾಲಗಳು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದ್ದವು ಮತ್ತು 2020–21ರಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ₹1,390.39 ಕೋಟಿಗಳಷ್ಟು ಕಡಿಮೆಯಾಗಿದೆ. ಹದಿನೈದನೆಯ ಹಣಕಾಸು ಆಯೋಗವು ಇವು ಖಾತರಿಗಳ ಪ್ರಮಾಣಿತ ಚೌಕಟ್ಟಿನ ಆಚೆಯ ಪರೋಕ್ಷ ಸಾಂದರ್ಭಿಕ ಹೊಣೆಗಾರಿಕೆಗಳಾಗಿದ್ದು ಅಂತಿಮವಾಗಿ ರಾಜ್ಯ ಸರ್ಕಾರದ ಮೇಲೆ ಹೆಚ್ಚುವರಿ ಅನಿಶ್ಚಿತ ಹೊರೆಗಳಾಗುತ್ತವೆ ಎಂದು ಅಭಿಪ್ರಾಯಪಟ್ಟಿದೆ. ಆದ್ದರಿಂದ, ಆಯವ್ಯಯದ ಹೊರಗಿನ ಸಾಲಗಳು ವಿತ್ತೀಯ ಪಾದರ್ಶಕತೆಯ ಸೂತ್ರಗಳಿಗೆ ಪ್ರತಿಕೂಲವಾಗಿದ್ದು, ವಿತ್ತೀಯ ಸುಸ್ಥಿರತೆಗೆ ಹಾನಿಕಾರಕವಾಗಿರುವುದರಿಂದ ಆಯವ್ಯಯದ ಹೊಣೆಗಳಿಗೆ ಮತ್ತಷ್ಟು ಹೊರೆಯನ್ನು ತಪ್ಪಿಸಲು ಕಟ್ಟುನಿಟ್ಟಾದ ಶಿಸ್ತನ್ನು ಪಾಲಿಸಲು ಶಿಫಾರಸು ಮಾಡಿದೆ.

ರಾಜ್ಯದ ಆಯವ್ಯಯದ ಹೊರಗಿನ ಸಾಲಗಳನ್ನು ಗಣನೆಗೆ ತೆಗೆದುಕೊಂಡರೆ, ಮಾರ್ಚ್ 2021ರ ಅಂತ್ಯದ ವೇಳೆಗೆ ಒಟ್ಟು ಹೊಣೆಗಾರಿಕೆಗಳು ₹4,15,926 ಕೋಟಿಗಳಾಗುತ್ತವೆ. ವರ್ಷದ ಕೊನೆಯಲ್ಲಿ ರಾಒಆಂಉಕ್ಕೆ ಬಾಕಿ ಉಳಿದಿರುವ ಹೊಣೆಗಾರಿಕೆಗಳ (ಆಯವ್ಯಯದ ಹೊರಗಿನ ಸಾಲಗಳನ್ನು ಒಳಗೊಂಡಂತೆ) ದರವು ಶೇಕಡ 22.37ರಷ್ಟಾಗುತ್ತದೆ ಮತ್ತು ಭಾರತ ಸರ್ಕಾರದಿಂದ ಪಡೆದ ಸರಕು ಮತ್ತು ಸೇವಾ ತೆರಿಗೆಯ ಬದಲಾಗಿ ಬ್ಯಾಕ್–ಟು–ಬ್ಯಾಕ್ ಸಾಲವಾಗಿದೆ.

2020–21ರಲ್ಲಿನ ಒಟ್ಟು ₹3,045.10 ಕೋಟಿಗಳ ಆಯವ್ಯಯದ ಹೊರಗಿನ ಸಾಲಗಳಲ್ಲಿ, ₹2,445.10 ಕೋಟಿಗಳು ವಿವಿಧ ನೀರಾವರಿ ನಿಗಮಗಳಿಗೆ ಸಂಬಂಧಿಸಿದೆ. ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳು /ಕಾಮಗಾರಿಗಳು/ಹೊಸ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಣವನ್ನು ಒದಗಿಸಲು, ಈ ನಿಗಮಗಳಿಂದ ಆಯವ್ಯಯದ ಹೊರಗೆ ಸಾಲಗಳನ್ನು ಪಡೆಯುವುದು ಅಗತ್ಯವಾಗಿತ್ತು ಎಂದು ಆರ್ಥಿಕ ಇಲಾಖೆಯು ಉತ್ತರಿಸಿದೆ (ಡಿಸೆಂಬರ್ 2021). ನಿರ್ಗಮನ ಸಮಾಲೋಚನೆಯಲ್ಲಿ (ಡಿಸೆಂಬರ್ 2021), ಆಯವ್ಯಯದ ಹೊರಗಿನ ಸಾಲಗಳು ಆಯವ್ಯಯದ ದಾಖಲೆಗಳ ಭಾಗವಾಗಿರುವುದರಿಂದ, ಅದು ಪಾರದರ್ಶಕತೆಯನ್ನು ಕಾಯ್ದುಕೊಂಡಿದೆ ಎಂದು ಹೇಳಿದೆ.

### *2.7.2 ವಿತ್ತೀಯ ಕೊರತೆಯ ಸಂಯೋಜನೆ ಮತ್ತು ಅದನ್ನು ಭರಿಸಲು ವ್ಯವಸ್ಥೆ*

ವಿತ್ತೀಯ ಕೊರತೆಯನ್ನು ಭರಿಸಲು ಹಣಕಾಸು ವ್ಯವಸ್ಥೆಯ ಮಾದರಿಯು **ಕೋಷ್ಟಕ–2.32**ರಲ್ಲಿ ತೋರಿಸಿದಂತೆ ಸಂಯೋಜಿತ ಬದಲಾವಣೆಗೆ ಒಳಗಾಗಿದೆ ಮತ್ತು 2020–21ನೇ ಸಾಲಿನ ವಿತ್ತೀಯ ಕೊರತೆಯನ್ನು ಭರಿಸುವ ಹಣಕಾಸು ಮಾದರಿಯನ್ನು **ಕೋಷ್ಟಕ–2.33**ರಲ್ಲಿ ತೋರಿಸಲಾಗಿದೆ.

ವಿತ್ತೀಯ ಕೊರತೆಯ ವಿಘಟನೆಯು ಆದಾಯ ಮತ್ತು ಸಾಲವಲ್ಲದ ಸ್ವೀಕೃತಿಗಳನ್ನು ಮೀರಿ ಹೆಚ್ಚಿನ ನಿಧಿಯ ಅಗತ್ಯವನ್ನು ಪೂರೈಸಲು ರಾಜ್ಯವು ಆಶ್ರಯಿಸಿದ ವಿವಿಧ ಸಾಲಗಳ ಪ್ರಮಾಣವನ್ನು ತೋರಿಸುತ್ತದೆ. ಸಾಲದ ಘಟಕವಾರು ಪ್ರವೃತ್ತಿಗಳನ್ನು **ನಕ್ಷೆ–2.17**ರಲ್ಲಿ ಚಿತ್ರಿಸಲಾಗಿದೆ.

**ಕೋಷ್ಟಕ–2.32: ವಿತ್ತೀಯ ಕೊರತೆಯ ಅಂಶಗಳು ಮತ್ತು ಅದರ ಹಣಕಾಸು ವ್ಯವಸ್ಥೆ**

(₹ ಕೋಟಿಗಳಲ್ಲಿ)

| ವಿವರಗಳು | | 2016–17 | 2017–18 | 2018–19 | 2019–20 | 2020–21 |
|---|---|---|---|---|---|---|
| ಆರ್ಥಿಕ ಕೊರತೆಯ ಸಂಯೋಜನೆ | | **(–)28,664** | **(–)31,101** | **(–)38,442** | **(–)38,166** | **(–)67,098** |
| 1 | ರಾಜಸ್ವ ಅಧಿಕ | 1,293 | 4,518 | 679 | 1,185 | (–)19,338 |
| 2 | ನಿವ್ವಳ ಬಂಡವಾಳ ವೆಚ್ಚ | 28,123 | 30,663 | 34,665 | 35,485 | 45,361 |
| 3 | ನಿವ್ವಳ ಸಾಲಗಳು ಮತ್ತು ಮುಂಗಡಗಳು | 1,834 | 4,956 | 4,456 | 3,866 | 2,399 |
| ಆರ್ಥಿಕ ಕೊರತೆಯನ್ನು ಸರಿತೂಗಿಸಲು ಹಣಕಾಸು* | | | | | | |
| 1 | ಮಾರುಕಟ್ಟೆ ಸಾಲಗಳು | 24,026 | 17,348 | 32,183 | 42,499 | 61,900 |
| 2 | ಭಾರತ ಸರ್ಕಾರದ ಸಾಲಗಳು | 791 | 761 | 103 | (–)749 | 12,709 |
| 3 | ಎನ್‌ಎಸ್‌ಎಫ್‌ಎಫ್‌ಗೆ ಜಾರಿ ಮಾಡಿದ ವಿಶೇಷ ಭದ್ರತೆಗಳು | (–)1,573 | (–)1,573 | (–)1,595 | (–)1,628 | (–)1,628 |
| 4 | ಹಣಕಾಸು ಸಂಸ್ಥೆಗಳಿಂದ ಸಾಲಗಳು | 491 | 316 | 141 | 156 | 531 |
| 5 | ಸಣ್ಣ ಉಳಿತಾಯಗಳು, ಭವಿಷ್ಯನಿಧಿ, ಮುಂತಾದವು | 2,657 | 2,812 | 3,292 | 4,156 | 3,632 |
| 6 | ಠೇವಣಿಗಳು ಮತ್ತು ಮುಂಗಡಗಳು | 3,041 | 1,833 | 3,068 | 3,174 | (–)685 |
| 7 | ಅಮಾನತ್ತು ಮತ್ತು ಸಂಕೀರ್ಣ | 491 | (–)1,509 | (–)6,087 | (–)1,364 | (–)2,921 |
| 8 | ಇರಸಾಲುಗಳು | (–)38 | (–)76 | (–)40 | (–)347 | (–)35 |
| 9 | ಮೀಸಲು ನಿಧಿಗಳು | 6,013 | 3,019 | 3,197 | 4,728 | 6,275 |
| 10 | **ಒಟ್ಟಾರೆ ಕೊರತೆ** | **35,899** | **22,931** | **34,262** | **50,625** | **79,778** |
| 11 | ನಗದು ಶಿಲ್ಕಿನಲ್ಲಿ ಏರಿಕೆ/ಇಳಿಕೆ | (–)7,235 | 8,170 | 4,180 | (–)12,459 | (–)12,680 |
| 12 | **ಒಟ್ಟು ಆರ್ಥಿಕ ಕೊರತೆ** | **28,664** | **31,101** | **38,442** | **38,166** | **67,098** |

*ಆಕರ : ಹಣಕಾಸು ಲೆಕ್ಕಗಳು*

** ಈ ಅಂಕೆಗಳು ವರ್ಷದ ನಿವ್ವಳ ವಿತರಣೆಗಳು/ಹೊರಹರಿವು (ವೆಚ್ಚಗಳು)*

**ಕೋಷ್ಟಕ–2.33: 2020–21ರಲ್ಲಿ ವಿತ್ತೀಯ ಕೊರತೆಗೆ ಹಣಕಾಸು ಒದಗಿಸುವ ಘಟಕಗಳ ಅಡಿಯಲ್ಲಿ ಸ್ವೀಕೃತಿಗಳು ಮತ್ತು ವಿತರಣೆಗಳು**

(₹ ಕೋಟಿಗಳಲ್ಲಿ)

| ವಿವರಗಳು | | ಸ್ವೀಕೃತಿ | ವಿತರಣೆ | ನಿವ್ವಳ |
|---|---|---|---|---|
| 1 | ಮಾರುಕಟ್ಟೆ ಸಾಲಗಳು | 69,000 | 7,100 | 61,900 |
| 2 | ಭಾರತ ಸರ್ಕಾರದ ಸಾಲಗಳು | 14,114 | 1,405 | 12,709 |
| 3 | ಎನ್‌ಎಸ್‌ಎಫ್‌ಎಫ್‌ಗೆ ಒದಗಿಸಿದ ವಿಶೇಷ ಭದ್ರತೆಗಳು | – | 1,628 | (–)1,628 |
| 4 | ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಮಾರ್ಗೋಪಾಯ ಮುಂಗಡಗಳು | – | – | – |
| 5 | ಹಣಕಾಸು ಸಂಸ್ಥೆಗಳಿಂದ ಸಾಲಗಳು | 1,414 | 883 | 531 |
| 6 | ಸಣ್ಣ ಉಳಿತಾಯಗಳು, ಭವಿಷ್ಯನಿಧಿ, ಮುಂತಾದವುಗಳು | 8,473 | 4,841 | 3,632 |
| 7 | ಠೇವಣಿಗಳು ಮತ್ತು ಮುಂಗಡಗಳು | 63,575 | 64,260 | (–)685 |

| ವಿವರಗಳು | | ಸ್ವೀಕೃತಿ | ವಿತರಣೆ | ನಿವ್ವಳ |
|---|---|---|---|---|
| 8 | ಅಮಾನತ್ತು ಮತ್ತು ಸಂಕೀರ್ಣ | 1,92,098 | 1,95,018 | (–)2,921 |
| 9 | ಇರಸಾಲುಗಳು | (–)2 | 33 | (–)35 |
| 10 | ಮೀಸಲು ನಿಧಿ | 8,314 | 2,040 | 6,275 |
| 11 | **ಒಟ್ಟಾರೆ ಕೊರತೆ** | **3,56,986** | **2,77,208** | **79,778** |
| 12 | ನಗದು ಶಿಲ್ಕಿನಲ್ಲಿ ಏರಿಕೆ/ಇಳಿಕೆ | 34,463 | 47,143 | (–)12,680 |
| 13 | **ಒಟ್ಟು ಆರ್ಥಿಕ ಕೊರತೆ** | **3,91,449** | **3,24,285** | **67,098** |

*ಆಕರ : ಹಣಕಾಸು ಲೆಕ್ಕಗಳು*

ರಾಜ್ಯವು 2004–05ರಿಂದ ರಾಜಸ್ವ ಹೆಚ್ಚಳವನ್ನು ಸಾಧಿಸಿದೆ ಮತ್ತು ಮಾರುಕಟ್ಟೆಯ ಸಾಲಗಳು, ಕೇಂದ್ರದಿಂದ ಪಡೆದ ಸಾಲಗಳು ಇತ್ಯಾದಿಗಳೊಂದಿಗೆ ರಾಜಸ್ವ ಲೆಕ್ಕದ ಮೇಲಿನ ಹೆಚ್ಚುವರಿಯನ್ನು ಬಂಡವಾಳ ವೆಚ್ಚಗಳಿಗೆ ಹಣಕಾಸು ಒದಗಿಸಲು ಬಳಸಿಕೊಳ್ಳಲಾಯಿತು. ಆದರೂ, 2020–21ರಲ್ಲಿ, ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ರಾಜ್ಯವು ರಾಜಸ್ವ ಕೊರತೆಯನ್ನು ಕಂಡಿತು, ಇದು ರಾಜಸ್ವ ವೆಚ್ಚಕ್ಕೆ ಸಾಲವನ್ನು ಬಳಸಿಕೊಳ್ಳುವಲ್ಲಿ ಕಾರಣವಾಯಿತು. ಕೇಂದ್ರ ಮತ್ತು ಮೀಸಲು ನಿಧಿಗಳಿಂದ ಪಡೆದ ಸಾಲಗಳಲ್ಲಿ ಹೆಚ್ಚಳ ಕಂಡು ಬಂದಿದೆ ಮತ್ತು ಸಣ್ಣ ಉಳಿತಾಯ, ಭವಿಷ್ಯನಿಧಿ ಇತ್ಯಾದಿಗಳು, ಠೇವಣಿಗಳು ಮತ್ತು ಮುಂಗಡಗಳು, ಪ್ರಮುಖವಾಗಿ ಚೆಕ್ಕುಗಳು ಮತ್ತು ಬಿಲ್ಲುಗಳಿಗೆ ಸಂಬಂಧಿಸಿದ ಅಮಾನತ್ತು ಮತ್ತು ಇತರ ಶಿಲ್ಕುಗಳು ಹಿಂದಿನ ವರ್ಷಕ್ಕಿಂತಲು ಕಡಿಮೆಯಾಗಿವೆ.

### *2.7.3 ಋಣ ಚಿತ್ರಣ: ಸಾಲಗಳ ಅವಧಿ ಮುಕ್ತಾಯ ಮತ್ತು ಮರುಪಾವತಿ*

ಸಾಲದ ಗಡುವು ಮುಕ್ತಾಯ ಮತ್ತು ಮರುಪಾವತಿ ವಿವರವು ಸಾಲ ಮರುಪಾವತಿ ಅಥವಾ ಋಣ ಸೇವೆಗಾಗಿ ಸರ್ಕಾರದ ಕಡೆಯಿಂದ ಬದ್ಧತೆಯನ್ನು ಸೂಚಿಸುತ್ತದೆ. ಸಾರ್ವಜನಿಕ ಋಣದ ಅವಧಿ ಪೂರ್ಣತೆಯ ಚಿತ್ರಣವನ್ನು **ಕೋಷ್ಟಕ–2.34**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.34: ಸಾರ್ವಜನಿಕ ಋಣದ ಅವಧಿ ಪೂರ್ಣತೆಯ ಚಿತ್ರಣ**

(₹ ಕೋಟಿಗಳಲ್ಲಿ)

| ಅವಧಿ ಮುಕ್ತಾಯ ವರ್ಷ | ಅವಧಿ | ಮೊತ್ತ | | | ಒಟ್ಟು ಸಾರ್ವಜನಿಕ ಋಣದ ಶೇಕಡ |
|---|---|---|---|---|---|
| | | ಆಂತರಿಕ ಋಣ | ಭಾರತ ಸರ್ಕಾರದಿಂದ ಸಾಲಗಳು | ಒಟ್ಟು | |
| 2021–22 ರೊಳಗೆ | 0–1 ವರ್ಷ | 12,330.41 | 694.86 | 13,025.27 | 4.23 |
| 2022–23 ಮತ್ತು 2023–24 ನಡುವೆ | 2–3 ವರ್ಷ | 30,355.84 | 1,391.99 | 31,747.83 | 10.32 |
| 2024–25 ಮತ್ತು 2025–26 ನಡುವೆ | 4–5 ವರ್ಷ | 44,405.33 | 607.50 | 45,012.83 | 14.63 |
| 2026–27 ಮತ್ತು 2027–28 ನಡುವೆ | 5–6 ವರ್ಷ | 61,622.23 | 381.43 | 62,003.66 | 20.15 |
| 2028–29 ಮತ್ತು 2029–30 ನಡುವೆ | 6–7 ವರ್ಷ | 61,783.88 | 267.31 | 62,051.19 | 20.16 |
| 2030–31 ನಂತರ | 7 ವರ್ಷದ ಮೇಲೆ | 70,642.50 | 23,274.28 | 93,916.78 | 30.51 |
| ಒಟ್ಟು | | 2,81,140.19 | 26,617.37 | 3,07,757.56 | – |

*ಆಕರ : ಹಣಕಾಸು ಲೆಕ್ಕಗಳು*

31 ಮಾರ್ಚ್ 2021ರಲ್ಲಿದ್ದಂತೆ ಸಾರ್ವಜನಿಕ ಋಣದ ಅವಧಿ ಪೂರ್ಣತೆಯ ವಿವರವು ₹3,07,757.56 ಕೋಟಿಗಳ ಸಾರ್ವಜನಿಕ ಸಾಲದ ಪೈಕಿ, 40.31 ಪ್ರತಿಶತವು (₹1,24,054.85 ಕೋಟಿ) 5 ರಿಂದ 7 ವರ್ಷಗಳ ಮತ್ತು 30.51 ಪ್ರತಿಶತವು (₹93,916.78 ಕೋಟಿ) ಏಳು ವರ್ಷಗಳಿಗಿಂತ ಹೆಚ್ಚಿನ ಶೀರಿಕೆಯ ಅವಧಿಯನ್ನು ಹೊಂದಿರುವುದರಿಂದ ವಿಮೋಚನೆಗೆ ಅಲ್ಪಾವಧಿಯ ಒತ್ತಡವಿಲ್ಲ ಎಂಬುದನ್ನು ಸೂಚಿಸುತ್ತದೆ. ರಾಜ್ಯವು ತನ್ನ ವೆಚ್ಚದ ಹೊಣೆಯನ್ನು ಪೂರೈಸಲು ಹೆಚ್ಚುವರಿ ಸಾಲವನ್ನು ಪಡೆಯುವುದು ಅಗತ್ಯವಾಗಿದ್ದರೂ, ಇದು ಮುಂದಿನ ದಿನಗಳಲ್ಲಿ ಸಾಲ ಮರುಪಾವತಿಯು ರಾಜ್ಯಕ್ಕೆ ಹೊರೆಯಾಗುತ್ತದೆ ಎಂದು ಸರ್ಕಾರವು ಒಪ್ಪಿಕೊಂಡಿದೆ.

## 2.8 ಋಣ ಸಹಿಷ್ಣುತೆ ವಿಶ್ಲೇಷಣೆ

ರಾಜ್ಯವು ತನ್ನ ಸಾಲವನ್ನು ಈಗ ಮತ್ತು ಭವಿಷ್ಯದಲ್ಲಿ ಪೂರೈಸುವ ಸ್ಥಿತಿಯಲ್ಲಿದ್ದರೆ ಸಾಲವನ್ನು ಸಹಿಷ್ಣುವೆಂದು ಪರಿಗಣಿಸಲಾಗುತ್ತದೆ. ರಾಜ್ಯ ಸರ್ಕಾರದ ಸಾಲದ ಪ್ರಮಾಣವನ್ನು ಹೊರತುಪಡಿಸಿ, ರಾಜ್ಯದ ಸಾಲದ ಸಹಿಷ್ಣುತೆಯನ್ನು ನಿರ್ಧರಿಸುವ ವಿವಿಧ ಸೂಚಕಗಳನ್ನು ವಿಶ್ಲೇಷಿಸುವುದು ಮುಖ್ಯವಾಗಿದೆ. ಋಣ ಸಹಿಷ್ಣುತೆಯ ಸೂಚಕಗಳು, ಪ್ರಸ್ತುತ ಮತ್ತು ನಿಯತ ಆದಾಯದ ಮೂಲಗಳಿಂದ ಸಕಾಲಿಕ ಬಡ್ಡಿ ಪಾವತಿಗಳ ಮತ್ತು ಸಾಲವನ್ನು ಮರುಪಾವತಿ ಮಾಡುವ ಸಾಮರ್ಥ್ಯವನ್ನು ಪರಿಶೀಲಿಸುವ ಮೂಲಕ ರಾಜ್ಯದ ಸಾಲಾರ್ಹತೆ ಮತ್ತು ಹಣ ಲಭ್ಯತೆಯ ಸ್ಥಿತಿಯನ್ನು ನಿರ್ಣಯಿಸಲು ಪ್ರಯತ್ನಿಸುತ್ತವೆ,

ಪ್ರಸ್ತುತ ವಿಭಾಗವು ಸಾಲ/ರಾಒಆಂಉದ ಅನುಪಾತ, ವಿತ್ತೀಯ ಕೊರತೆ, ಬಡ್ಡಿಪಾವತಿಗಳ ಹೊರೆ (ರಾಜಸ್ವ ಸ್ವೀಕೃತಿಗಳಿಗೆ ಬಡ್ಡಿ ಪಾವತಿಗಳ ಅನುಪಾತದಿಂದ ಅಳೆಯಲಾಗುತ್ತದೆ) ಮತ್ತು ರಾಜ್ಯ ಸರ್ಕಾರದ ಸಾಲದ ಮೆಚ್ಯೂರಿಟಿ ವಿವರದಲ್ಲಿ ಸಾಲದ ಸಹಿಷ್ಣುತೆಯನ್ನು ನಿರ್ಣಯಿಸುತ್ತದೆ.

2016–17ರಿಂದ ಪ್ರಾರಂಭವಾಗುವ ಐದು ವರ್ಷಗಳ ಅವಧಿಗೆ ಈ ಸೂಚಕಗಳ ಪ್ರಕಾರ ರಾಜ್ಯದ ಸಾಲದ ಸಹಿಷ್ಣುತೆಯನ್ನು **ಕೋಷ್ಟಕ–2.35** ತೋರಿಸುತ್ತದೆ.

**ಕೋಷ್ಟಕ–2.35 : ಸಾಲದ ಸಹಿಷ್ಣುತೆಯ ಸೂಚಕಗಳಲ್ಲಿನ ಪ್ರವೃತ್ತಿಗಳು**

| ಋಣ ಸಹಿಷ್ಣುತೆ ಸೂಚಕಗಳು | 2016–17 | 2017–18 | 2018–19 | 2019–20 | 2020–21 |
|---|---|---|---|---|---|
| ಬಾಕಿ ಇರುವ ಸಾರ್ವಜನಿಕ ಋಣ* (₹ ಕೋಟಿಗಳಲ್ಲಿ) | 1,46,283 | 1,63,136 | 1,93,966 | 2,34,245 | 3,07,758 |
| ಬಾಕಿ ಇರುವ ಸಾರ್ವಜನಿಕ ಋಣದ ವೃದ್ಧಿಯ ದರ (ಶೇಕಡ) | 19.37 | 11.52 | 18.90 | 20.77 | 31.38 |
| ರಾಒಆಂಉ (₹ ಕೋಟಿಗಳಲ್ಲಿ) | 12,07,608 | 13,36,914 | 14,90,624 | 16,28,928 | 18,03,609 |
| ರಾಒಆಂಉ ವೃದ್ಧಿಯ ದರ (ಶೇಕಡ) | 15.54 | 10.71 | 11.50 | 9.28 | 10.72 |
| ಋಣ/ರಾಒಆಂಉ (ಶೇಕಡ) | 12.11 | 12.20 | 13.01 | 14.38 | 16.38^ |
| ವಿತ್ತೀಯ ಕೊರತೆ/ ರಾಒಆಂಉ (ಶೇಕಡ) | 2.37 | 2.33 | 2.58 | 2.34 | 3.72 |
| ಬಡ್ಡಿ ಪಾವತಿ (₹ ಕೋಟಿಗಳಲ್ಲಿ) | 12,850 | 14,973 | 16,614 | 19,903 | 23,433 |
| ಬಾಕಿ ಇರುವ ಸಾರ್ವಜನಿಕ ಋಣದ ಮೇಲೆ ಸರಾಸರಿ ಬಡ್ಡಿ (ಶೇಕಡ) | 7.59 | 7.64 | 7.30 | 7.30 | 7.05 |
| ಬಡ್ಡಿ ಪಾವತಿ/ರಾಜಸ್ವ ಸ್ವೀಕೃತಿ ಅನುಪಾತ | 9.65 | 10.18 | 10.07 | 11.34 | 14.95 |
| ಋಣ ಸ್ವೀಕೃತಿಗೆ ಋಣ ಮರುಪಾವತಿ ಶತಾಂಶ | 23.82 | 32.92 | 26.44 | 20.17 | 13.03 |
| ರಾಜ್ಯಕ್ಕೆ ನಿವ್ವಳ ಸಾಲ ಲಭ್ಯತೆ (₹ ಕೋಟಿಗಳಲ್ಲಿ) | 23,736 | 16,853 | 30,831 | 40,279 | 41,946# |
| ಸಾಲ ಸ್ವೀಕೃತಿಗಳಿಗೆ ಶೇಕಡಾವಾರಾಗಿ ನಿವ್ವಳ ಸಾಲ ಲಭ್ಯತೆ (ಶೇಕಡ) | 76.18 | 67.08 | 73.56 | 79.82 | 58.16 |
| ಋಣ ಸ್ಥಿರೀಕರಣ (ಪ್ರಮಾಣ ಹರವು[28] +ಪ್ರಾಥಮಿಕ ಕೊರತೆ) | (–)4,189.91 | (–)11,121.33 | (–)13,680.96 | (–)13,635.33 | (–)32,368.09 |

*ಆಕರ : ಹಣಕಾಸು ಲೆಕ್ಕಗಳು*

** ಬಾಕಿಯಿರುವ ಸಾರ್ವಜನಿಕ ಋಣವು 6003–ಆಂತರಿಕ ಋಣ ಮತ್ತು 6004–ಭಾರತ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ ಉಳಿದಿರುವ ಮೊತ್ತವಾಗಿದೆ.*

*# ರಾಜ್ಯ ಸರ್ಕಾರಕ್ಕೆ ಲಭ್ಯವಿರುವ ನಿವ್ವಳ ಸಾಲವನ್ನು, ಸಾರ್ವಜನಿಕ ಸಾಲ ಮರುಪಾವತಿ ಮತ್ತು ಸಾರ್ವಜನಿಕ ಸಾಲದ ಮೇಲಿನ ಬಡ್ಡಿ ಪಾವತಿಗಳ ಮೇಲಿನ ಸಾರ್ವಜನಿಕ ಸಾಲ ಸ್ವೀಕೃತಿಗಳ ಹೆಚ್ಚುವರಿ ಎಂದು ಲೆಕ್ಕಹಾಕಲಾಗುತ್ತದೆ ಮತ್ತು ಸರಕು ಮತ್ತು ಸೇವಾ ತೆರಿಗೆ ಪರಿಹಾರವಾಗಿ ಭಾರತ ಸರ್ಕಾರದಿಂದ ಪಡೆದ ಬ್ಯಾಕ್–ಟು–ಬ್ಯಾಕ್ ಸಾಲಗಳನ್ನು ಒಳಗೊಂಡಿರುವುದಿಲ್ಲ.*

*^ ಸರಕು ಮತ್ತು ಸೇವಾ ತೆರಿಗೆ ಪರಿಹಾರದ ಬದಲಾಗಿ ಭಾರತ ಸರ್ಕಾರದಿಂದ ಪಡೆದ ಬ್ಯಾಕ್–ಟು–ಬ್ಯಾಕ್ ಸಾಲವನ್ನು (₹12,407 ಕೋಟಿ) ಸೂಚಕವನ್ನು ಲೆಕ್ಕ ಹಾಕಲು ಪರಿಗಣಿಸಲಾಗಿಲ್ಲ.*

[28] ಪ್ರಮಾಣ ಹರವು ಋಣ ಪ್ರಮಾಣದ ಶತಾಂಶವಾಗಿ ಬಡ್ಡಿ ಹರವು ಆಗಿದೆ. ಬಡ್ಡಿ ಹರವು ರಾಒಆಂಉದ ವೃದ್ಧಿಯ ದರ ಮತ್ತು ಬಾಕಿ ಇರುವ ಸಾರ್ವಜನಿಕ ಋಣದ ಮೇಲಿನ ಬಡ್ಡಿಯ ದರದ ವ್ಯತ್ಯಾಸ ಆಗಿದೆ.

ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ₹12,407 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ ಪರಿಣಾಮಕಾರಿ ಬಾಕಿ ಇರುವ ಸಾರ್ವಜನಿಕ ಋಣವು ₹2,95,351 ಕೋಟಿಗಳಾಗಿದೆ.

2020–21ನೇ ಸಾಲಿಗೆ ಋಣ ಸಹಿಷ್ಣುತೆಗೆ ಸಂಬಂಧಿಸಿದಂತೆ ಹದಿನಾಲ್ಕು ಮತ್ತು ಹದಿನೈದನೆಯ ಹಣಕಾಸು ಆಯೋಗಗಳು ಶಿಫಾರಸು ಮಾಡಿದ ಹಣಕಾಸಿನ ಬಲವರ್ಧನೆಯ ಮಾರ್ಗಸೂಚಿಯು ಈ ಕೆಳಗಿನ ಗುರಿಗಳನ್ನು ನಿಗದಿಪಡಿಸಿದೆ:

- ಸಾಲ/ರಾಒಆಂಉದ ಅನುಪಾತವು ಕ್ರಮವಾಗಿ 26.22 ಮತ್ತು 33.10 ಶತಾಂಶಕ್ಕಿಂತ ಕಡಿಮೆಯಿರಬೇಕು
- ರಾಒಆಂಉಕ್ಕೆ ವಿತ್ತೀಯ ಕೊರತೆಯು ಕ್ರಮವಾಗಿ ಶೇಕಡ 3.25 ಮತ್ತು 4 ಕ್ಕಿಂತ ಕಡಿಮೆಯಿರಬೇಕು; ಮತ್ತು
- ರಾಜಸ್ವ ಸ್ವೀಕೃತಿಗಳಿಗೆ ಬಡ್ಡಿ ಪಾವತಿಗಳು ಶೇಕಡ 9.15 ಕ್ಕಿಂತ ಕಡಿಮೆ ಇರಬೇಕು.

**ಕೋಷ್ಟಕ–2.36**ರಲ್ಲಿ 2016–17ರಿಂದ 2020–21ರವರೆಗಿನ ಐದು ವರ್ಷಗಳ ಅವಧಿಯ ವಿಶ್ಲೇಷಣೆಯು ಈ ಕೆಳಗಿನ ಅಂಶಗಳನ್ನು ಪ್ರಕಟಪಡಿಸಿದೆ.

- ರಾಒಆಂಉಕ್ಕೆ ಸಾಲದ ಅನುಪಾತವು ಸ್ಥಿರವಾಗಿದೆ ಮತ್ತು ಹದಿನಾಲ್ಕು ಮತ್ತು ಹದಿನೈದನೆ ಹಣಕಾಸು ಆಯೋಗಗಳು ಶಿಫಾರಸು ಮಾಡಿದ ಶೇಕಡ 26.22 ಮತ್ತು 33.10ಕ್ಕಿಂತಲೂ ಕಡಿಮೆಯಾಗಿದೆ ಮತ್ತು ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆಯು ನಿಗದಿಸಿದ ಶೇಕಡ 25.00ರ ಮಿತಿಯ ಗುರಿಗಿಂತ ಕಡಿಮೆಯಿದೆ
- ರಾಒಆಂಉಕ್ಕೆ ವಿತ್ತೀಯ ಕೊರತೆಯ ಅನುಪಾತವು ಸ್ಥಿರವಾಗಿದೆ ಮತ್ತು 2016–17ರಿಂದ 2020–21ರ ಅವಧಿಯಲ್ಲಿ ಹದಿನಾಲ್ಕು ಮತ್ತು ಹದಿನೈದನೆ ಹಣಕಾಸು ಆಯೋಗಗಳ ಶಿಫಾರಸುಗಳಿಗಿಂತ ಕಡಿಮೆಯಾಗಿದೆ;
- 2016–17ರಿಂದ 2020–21ರವರೆಗಿನ ಅವಧಿಯಲ್ಲಿ ರಾಜಸ್ವ ಸ್ವೀಕೃತಿಗಳಿಗೆ ಬಡ್ಡಿ ಪಾವತಿಯ ಅನುಪಾತವು ಶೇಕಡ 9.65 ಮತ್ತು 14.95 ನಡುವೆ ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದ್ದು . ಅನುಪಾತದಲ್ಲಿನ ಹೆಚ್ಚಳವು ರಾಜಸ್ವ ಸ್ವೀಕೃತಿಗಳ ಮೇಲಿನ ಬಡ್ಡಿಯ ಹೊರೆಯನ್ನು ಸೂಚಿಸುತ್ತದೆ.
- ಬಾಕಿ ಉಳಿದಿರುವ ಸಾರ್ವಜನಿಕ ಋಣದ ವೃದ್ಧಿಯ ದರವು ರಾಒಆಂಉದ ವೃದ್ಧಿಗಿಂತಲೂ ಹೆಚ್ಚಾಗಿದ್ದು ರಾಒಆಂಉಕ್ಕೆ ಋಣದ ಅನುಪಾತವು ಹೆಚ್ಚಾಗಿರುವುದನ್ನು ಸೂಚಿಸುತ್ತದೆ;
- 2016–17ರಿಂದ 2020–21ರ ಅವಧಿಯಲ್ಲಿ ಸಾರ್ವಜನಿಕ ಋಣದ ಸ್ವೀಕೃತಿಗಳಿಗೆ ಸಾರ್ವಜನಿಕ ಋಣ ಮರುಪಾವತಿಯ ಶತಾಂಶವು 13.03 ಮತ್ತು 32.92ರ ನಡುವೆ ಇದೆ. ಅನುಪಾತದಲ್ಲಿನ ಇಳಿಕೆಯು ಮುಖ್ಯವಾಗಿ ಸಾರ್ವಜನಿಕ ಋಣ ಸ್ವೀಕೃತಿಗಳಲ್ಲಿನ ಹೆಚ್ಚಳದಿಂದಾಗಿ ಉಂಟಾಗಿದೆ;
- ರಾಜ್ಯಕ್ಕೆ ಲಭ್ಯವಿರುವ ನಿವ್ವಳ ಸಾಲದ ಹೆಚ್ಚಳವು ಮುಖ್ಯವಾಗಿ ಆಂತರಿಕ ಋಣದ ಅಡಿಯಲ್ಲಿ ಸ್ವೀಕೃತಿಗಳ ಹೆಚ್ಚಳದಿಂದಾಗಿದೆ. ಆಂತರಿಕ ಋಣವು 2018–19ರಲ್ಲಿ ₹40,470 ಕೋಟಿಗಳಿದ್ದು 2019–20ರಲ್ಲಿ ₹49,784 ಕೋಟಿಗಳಿಗೆ ಮತ್ತು 2020–21ರಲ್ಲಿ ₹70,414 ಕೋಟಿಗಳಿಗೆ (₹12,407 ಕೋಟಿಗಳ ಬ್ಯಾಕ್–ಟು–ಬ್ಯಾಕ್ ಸಾಲಗಳನ್ನು ಹೊರತುಪಡಿಸಿ) ಏರಿಕೆಯಾಗಿದೆ; ಮತ್ತು
- ಪ್ರಮಾಣ ಹರವು ಮತ್ತು ಪ್ರಾಥಮಿಕ ಕೊರತೆಯ ಋಣಾತ್ಮಕ ಮೊತ್ತವು ಅಸ್ಥಿರ ಸಾಲದ ಕಡೆಗೆ ಪ್ರವೃತ್ತಿಯನ್ನು ಸೂಚಿಸುತ್ತದೆ.

### *2.8.1 ಸಾಲ ಪಡೆದ ನಿಧಿಯ ಬಳಕೆ*

ಸಾಲದ ರೂಪದಲ್ಲಿ ಪಡೆದ ಹಣವನ್ನು ಬಂಡವಾಳ ಸೃಷ್ಟಿ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಬಳಸಬೇಕು. ಪ್ರಸಕ್ತ ವೆಚ್ಚಗಳಿಗೆ ಮತ್ತು ಬಾಕಿ ಇರುವ ಸಾಲಗಳ ಮೇಲಿನ ಬಡ್ಡಿಯ ಮರು ಪಾವತಿಗೆ ಸಾಲದ ಹಣವನ್ನು ಬಳಸುವುದು ಸಮರ್ಥನೀಯವಲ್ಲ. ಆದರೆ, 2020–21ರಲ್ಲಿ ಕೋವಿಡ್ 19 ಸಾಂಕ್ರಾಮಿಕ ರೋಗದಿಂದಾಗಿ ರಾಜಸ್ವ ಸ್ವೀಕೃತಿಗಳಲ್ಲಿ ಋಣಾತ್ಮಕ ಬೆಳವಣಿಗೆ ಕಂಡುಬಂದಿದ್ದರ ಪರಿಣಾಮವಾಗಿ, ಎರವಲು ಪಡೆದ ಹಣವನ್ನು ರಾಜಸ್ವ ವೆಚ್ಚಕ್ಕೆ ಬಳಸಲಾಯಿತು. 2016–17ರಿಂದ 2020–21ರ ಅವಧಿಯಲ್ಲಿ ಸಾಲ ಪಡೆದ ನಿಧಿಯ ಬಳಕೆಯ ವಿವರಗಳನ್ನು **ಕೋಷ್ಟಕ–2.36**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.36: ಸಾಲ ಪಡೆದ ನಿಧಿಯ ಬಳಕೆ**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ವರ್ಷ/ವಿವರ | 2016–17 | 2017–18 | 2018–19 | 2019–20 | 2020–21 |
|---|---|---|---|---|---|---|
| 1 | ಒಟ್ಟು ಸಾಲ | 31,156 | 25,122 | 41,914 | 50,459 | 84,528 |
| 2 | ಹಿಂದಿನ ಸಾಲಗಳ ಮರು ಪಾವತಿ (ಅಸಲು) | 7,440 | 8,269 | 11,083 | 10,180 | 11,016 |
| 3 | ನಿವ್ವಳ ಬಂಡವಾಳ ವೆಚ್ಚ | 28,123 | 30,663 | 34,665 | 35,485 | 45,361 |
| 4 | ನಿವ್ವಳ ಸಾಲಗಳು ಮತ್ತು ಮುಂಗಡಗಳು | 1,834 | 4,956 | 4,456 | 3,866 | 2,399 |
| 5 | ಸಾಲ ಪಡೆದ ಮೊತ್ತಗಳಲ್ಲಿ ನಿವ್ವಳ ಲಭ್ಯತೆ (5=1–2–3–4) | (–)6,221 | (–)18,766 | (–)8,290 | 928 | 25,752 |

*ಆಕರ : ಹಣಕಾಸು ಲೆಕ್ಕಗಳು*

ಮೇಲಿನ ಕೋಷ್ಟಕದಿಂದ, 2016–17 ರಿಂದ 2018–19ರ ಅವಧಿಗೆ ಸಾಲ ಪಡೆದ ನಿಧಿಗಳು ಬಂಡವಾಳ ವೆಚ್ಚವನ್ನು (ಸಾಲಗಳು ಮತ್ತು ಮುಂಗಡಗಳನ್ನು ಒಳಗೊಂಡಂತೆ) ಪೂರೈಸಲು ಸಾಕಾಗುವುದಿಲ್ಲ ಎಂದು ಗಮನಿಸಲಾಗಿದೆ. 2019–20 ಮತ್ತು 2020–21ರ ಅವಧಿಯಲ್ಲಿ, ಸಾಲ ಪಡೆದ ಹಣವು ಬಂಡವಾಳ ವೆಚ್ಚಕ್ಕೆ ಸಾಕಾಗಿತ್ತು. ಸರ್ಕಾರ ಅಗತ್ಯಕ್ಕಿಂತ ಹೆಚ್ಚು ಸಾಲ ಪಡೆದಿರುವುದು ಇದರಿಂದ ತಿಳಿಯುತ್ತದೆ.

2020–21ರ ಅವಧಿಯಲ್ಲಿ ಆಯವ್ಯಯದಲ್ಲಿ ಅಂದಾಜಿಸಲಾಗಿದ್ದ ₹1,79,920 ಕೋಟಿಗಳ ರಾಜಸ್ವ ಸ್ವೀಕೃತಿಗಳಿಗೆ ಪ್ರತಿಯಾಗಿ ಕೋವಿಡ್ 19 ಸಾಂಕ್ರಾಮಿಕ ಪರಿಸ್ಥಿತಿಯಿಂದಾಗಿ ಆರ್ಥಿಕ ಚಟುವಟಿಕೆಗಳು ಜಡವಾಗಿ ಮತ್ತು ಭಾರತ ಸರ್ಕಾರದಿಂದ ಅಂದಾಜಿಸಲಾಗಿದ್ದ ಮಟ್ಟಿಗೆ ಹಣದ ವರ್ಗಾವಣೆ ಆಗದಿದ್ದುದರಿಂದ ವಾಸ್ತವ ಸಂಗ್ರಹವು ₹1,56,716 ಕೋಟಿಗಳಾಗಿದೆ. ರಾಜಸ್ವ ಸ್ವೀಕೃತಿಯಲ್ಲಿನ ₹23,204 ಕೋಟಿಗಳ ಅಲ್ಪ ಕುಸಿತವನ್ನು ಲಭ್ಯವಿರುವ ಎರವಲು ಪಡೆದ ನಿಧಿಯಿಂದ ಸರಿದೂಗಿಸಲಾಗಿದೆ. ಎಂದು ಆರ್ಥಿಕ ಇಲಾಖೆಯು ಉತ್ತರಿಸಿದೆ (ಡಿಸೆಂಬರ್ 2021).

### 2.8.2 ಖಾತರಿಗಳ ಸ್ಥಿತಿ – ಸಾಂದರ್ಭಿಕ ಹೊಣೆಗಾರಿಕೆಗಳು

ಸರ್ಕಾರವು ಖಾತರಿ ನೀಡಿದ ಸಾಲಗಾರರಯ ಸುಸ್ತಿದಾರರು ಆದಲ್ಲಿ ಖಾತರಿಗಳು ರಾಜ್ಯ ಸಂಚಿತ ನಿಧಿಯ ಮೇಲಿನ ಸಾಂದರ್ಭಿಕ ಜವಾಬ್ದಾರಿಗಳಾಗುತ್ತವೆ. ಕರ್ನಾಟಕ ಖಾತರಿಗಳ ಮೇಲಿನ ಮಿತಿ ಕಾಯಿದೆ 1999ರ ಅನ್ವಯ ಸರ್ಕಾರವು ನೀಡಿದ ಖಾತರಿಗಳ ಬಾಕಿಯ ಮೊತ್ತವು ಯಾವುದೇ ವರ್ಷದ ಏಪ್ರಿಲ್ ತಿಂಗಳ ಒಂದರಂದು ಹಿಂದಿನ ಎರಡನೇ ವರ್ಷದ ರಾಜ್ಯ ರಾಜಸ್ವ ಸ್ವೀಕೃತಿಗಳ ಶೇಕಡ 80ರಷ್ಟನ್ನು ಮೀರಬಾರದು. ಕಳೆದ ಐದು ವರ್ಷಗಳ ವಿವರಗಳನ್ನು **ಕೋಷ್ಟಕ–2.37**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.37: ರಾಜ್ಯ ಸರ್ಕಾರವು ನೀಡಿದ ಖಾತರಿಗಳು**

(₹ ಕೋಟಿಗಳಲ್ಲಿ)

| ಖಾತರಿಗಳು | 2016–17 | 2017–18 | 2018–19 | 2019–20 | 2020–21 |
|---|---|---|---|---|---|
| ವರ್ಷದ 31 ಮಾರ್ಚ್ ರಂದು ಇದ್ದಂತೆ ಖಾತರಿ ನೀಡಿದ ಗರಿಷ್ಠ ಮೊತ್ತ | 21,115 | 24,025 | 30,719 | 35,694 | 45,104 |
| ವರ್ಷದ ಕೊನೆಯಲ್ಲಿ ಬಡ್ಡಿಯೂ ಸೇರಿದಂತೆ ಬಾಕಿ ಇರುವ ಖಾತರಿ ಮೊತ್ತ | 15,392 | 18,416 | 24,091 | 26,830 | 32,733 |

*ಆಕರ : ಹಣಕಾಸು ಲೆಕ್ಕಗಳು*

ಪ್ರತಿ ವರ್ಷ ಏಪ್ರಿಲ್ 1ರಂದು ಬಾಕಿ ಇರುವ ಖಾತರಿಗಳು ನಿಗದಿತ ಮಿತಿಯೊಳಗಿದ್ದವು. 2020–21ರ ಅಂತ್ಯದ ವೇಳೆಗೆ ₹32,733 ಕೋಟಿ ಮೊತ್ತದ ಬಾಕಿ ಇರುವ ಖಾತರಿಗಳು (ಅಸಲು+ಬಡ್ಡಿ) ವಿವಿಧ ವಲಯಗಳ[29] ಅಡಿಯಲ್ಲಿ 172 ಸಂಸ್ಥೆಗಳು/ಕಂಪನಿಗಳಿಗೆ ವಿಸ್ತರಿಸಲಾದ ಖಾತರಿಗಳನ್ನು ಒಳಗೊಂಡಿದ್ದವು.

ರಾಜ್ಯ ಸರ್ಕಾರವು ವರದಿ ಮಾಡಿದಂತೆ 2020–21ರಲ್ಲಿ ಒಟ್ಟು ₹550.61 ಕೋಟಿಗಳ ಖಾತರಿ ಶುಲ್ಕ ಸ್ವೀಕೃತಿಯ ಅಂದಾಜು ಮಾಡಿದ್ದು, ಕೇವಲ ₹281.01 ಕೋಟಿಗಳು ಮಾತ್ರ ಸ್ವೀಕೃತವಾಗಿದೆ. ವಿವಿಧ ಘಟಕಗಳಿಂದ ಪಾವತಿಸಬೇಕಾಗಿದ್ದ ಖಾತರಿ ಶುಲ್ಕದ ಈ ಮೊತ್ತವು ಸಹಾಯಧನ/ ಸಹಾಯಾನುದಾನ/ ಆರ್ಥಿಕ ಸಹಾಯದ ರೂಪದಲ್ಲಿ ಸರ್ಕಾರವು ಮಾಡಿದ ಪುಸ್ತಕ ಹೊಂದಾಣಿಕೆಯನ್ನು ಒಳಗೊಂಡಿರುತ್ತದೆ.

ಶಾಸಕಾಂಗದ ಮುಂದೆ ಮಂಡಿಸಲಾದ ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ (2016–20), ಖಾತರಿಗಳು ಸಾಂದರ್ಭಿಕ ಹೊಣೆಯನ್ನು ಹೆಚ್ಚಿಸುತ್ತಿರುವ ಕಾರಣದಿಂದ, ಅವುಗಳನ್ನು ಇತರ ಸಾಲಗಳ ಪ್ರಸ್ತಾಪದ ರೀತಿಯಲ್ಲಿಯೇ ಪರಿಶೀಲಿಸಬೇಕು. ಸಾಲಗಾರನ ಸಾಲಾರ್ಹತೆ, ಖಾತರಿಯ ಮೂಲಕ ಭರಿಸಬೇಕಾದ ಮೊತ್ತ ಮತ್ತು ಸಂಭವಿಸಬಹುದಾದ ಹಾನಿ, ಸಾಲದ ನಿಬಂಧನೆಗಳು ಸಾಲಕ್ಕೆ ಸಮರ್ಥನೆ ಮತ್ತು ಪೂರೈಸಬೇಕಾದ ಸಾರ್ವಜನಿಕ ಉದ್ದೇಶ, ಉಂಟಾಗಬಹುದಾದ ವಿವಿಧ ಬದ್ಧತೆಗಳು ಮತ್ತು ಆ ಬದ್ಧತೆಗಳ ಬೆಲೆ ಇತ್ಯಾದಿಗಳನ್ನು ಪರಿಗಣಿಸುವ ಅಗತ್ಯವಿದೆ ಎಂದು ಹೇಳಿದೆ. ಒಂದು ಸಕ್ರಿಯ ಖಾತರಿ ಮೀಸಲು ನಿಧಿಯನ್ನು ಹೊಂದುವ ಮತ್ತು ಖಾತರಿ ಕಾರ್ಯನೀತಿಯನ್ನು ರೂಪಿಸುವ ಉಪಯುಕ್ತತೆಯನ್ನು ಪರಿಗಣಿಸಲಾಗುತ್ತಿದೆ ಎಂದು ಸರ್ಕಾರವು ಹೇಳಿದೆ.

ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಸಹ ಖಾತರಿ ವಿಮೋಚನ ನಿಧಿಯನ್ನು ಪುನಶ್ಚೇತನಗೊಳಿಸಿ ಮುಂದುವರೆಸಲು ಶಿಫಾರಸು ಮಾಡಿದೆ (ಜುಲೈ 2015).

ಖಾತರಿ ವಿಮೋಚನ ನಿಧಿಯ ಕಾರ್ಯಾಚರಣೆಗಾಗಿ ಸರ್ಕಾರವು 2020–21ರ ಆಯವ್ಯಯದಲ್ಲಿ ₹50 ಕೋಟಿಗಳನ್ನು ಒದಗಿಸಿದೆ. ಆದರೆ ನಿಧಿಯಿಂದ ಯಾವುದೇ ವೆಚ್ಚ ಆಗಿಲ್ಲ. ಆದ್ದರಿಂದ ನಿಧಿಯು ನಿಷ್ಕ್ರಿಯವಾಗಿ ಉಳಿಯಿತು.

ಆರ್ಥಿಕ ಇಲಾಖೆಯು ಖಾತರಿ ಶುಲ್ಕದ ವಸೂಲಾತಿಗೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಇಲಾಖೆಗಳಿಗೆ ಮನವಿ ಮಾಡಲಾಗುವುದು ಎಂದು ಉತ್ತರಿಸಿದೆ (ಡಿಸೆಂಬರ್ 2021).

### *2.8.3 ನಗದು ಶಿಲ್ಕುಗಳ ನಿರ್ವಹಣೆ*

ಭಾರತೀಯ ರಿಸರ್ವ್ ಬ್ಯಾಂಕ್‌ನೊಂದಿಗಿನ ಒಪ್ಪಂದದ ಪ್ರಕಾರ, ರಾಜ್ಯ ಸರ್ಕಾರವು ಬ್ಯಾಂಕ್‌ನೊಂದಿಗೆ ಕನಿಷ್ಠ ದೈನಂದಿನ ನಗದು ಶಿಲ್ಕು ₹2.63 ಕೋಟಿಯನ್ನು ನಿರ್ವಹಿಸಬೇಕು. ಯಾವುದೇ ದಿನದಲ್ಲಿ ಶಿಲ್ಕು ಒಪ್ಪಿದ ಕನಿಷ್ಠಕ್ಕಿಂತ ಕಡಿಮೆಯಾದರೆ, ಸಾಮಾನ್ಯ ಮಾರ್ಗೋಪಾಯ ಮುಂಗಡಗಳು/ವಿಶೇಷ ಮಾರ್ಗೋಪಾಯ ಮುಂಗಡಗಳು/ಓವರ್‌ಡ್ರಾಫ್ಟ್‌ಗಳನ್ನು ತೆಗೆದುಕೊಳ್ಳುವ ಮೂಲಕ ಕೊರತೆಯನ್ನು

[29] ನೀರಾವರಿ (₹16,061 ಕೋಟಿ), ಸಹಕಾರ (₹1,175 ಕೋಟಿ), ಆರ್ಥಿಕ (₹1,251 ಕೋಟಿ), ವಿದ್ಯುತ್ (₹10,855 ಕೋಟಿ), ವಸತಿ (₹2,439 ಕೋಟಿ), ಸಾರಿಗೆ (₹426 ಕೋಟಿ) ಮತ್ತು ಇತರೆ ವಲಯಗಳು (₹198 ಕೋಟಿ).

ತುಂಬಲಾಗುತ್ತದೆ. ರಾಜ್ಯ ಸರ್ಕಾರಕ್ಕೆ ಸಾಮಾನ್ಯ ಮಾರ್ಗೋಪಾಯ ಮುಂಗಡಗಳ ಮಿತಿಯನ್ನು ಕಾಲಕಾಲಕ್ಕೆ ಭಾರತೀಯ ರಿಸರ್ವ್ ಬ್ಯಾಂಕು ಪರಿಷ್ಕರಿಸುತ್ತದೆ.

- ಭಾರತೀಯ ರಿಸರ್ವ್ ಬ್ಯಾಂಕು ಸಾಮಾನ್ಯ ಮತ್ತು ವಿಶೇಷ ಮಾರ್ಗೋಪಾಯ ಮುಂಗಡಗಳನ್ನು ನೀಡುತ್ತದೆ. ರಾಜ್ಯಕ್ಕೆ ಸಾಮಾನ್ಯ ಮಾರ್ಗೋಪಾಯ ಮುಂಗಡಗಳ ಮಿತಿಯನ್ನು 01 ಫೆಬ್ರವರಿ 2016ರಿಂದ ಜಾರಿಯಲ್ಲಿದ್ದ ₹1,985 ಕೋಟಿಗಳನ್ನು ಏಪ್ರಿಲ್ 2020ರಲ್ಲಿ ₹3,176 ಕೋಟಿಗಳಿಗೆ ಹೆಚ್ಚಿಸಲಾಯಿತು. ಮಾರ್ಚ್ 1999ರಿಂದ, ರಾಜ್ಯ ಸರ್ಕಾರದ ವಿಶೇಷ ಮಾರ್ಗೋಪಾಯ ಮುಂಗಡಗಳ ಮಿತಿಯನ್ನು ಭಾರತ ಸರ್ಕಾರದ ಭದ್ರತೆಗಳಲ್ಲಿ ಸರ್ಕಾರ ತೊಡಗಿಸಿರುವ ಮೊತ್ತಕ್ಕೆ ಕೊಂಡಿ ಹಾಕಲಾಗಿದೆ. ಈ ಮುಂಗಡಗಳು ಕಾಲಕಾಲಕ್ಕೆ ಭಾರತೀಯ ರಿಸರ್ವ್ ಬ್ಯಾಂಕು ನಿಗದಿ ಪಡಿಸಬಹುದಾದಂತಹ ದರಗಳಲ್ಲಿ ಬಡ್ಡಿಯನ್ನು ಹೊಂದಿರುತ್ತವೆ.
- 2020–21ರಲ್ಲಿ ರಾಜ್ಯ ಸರ್ಕಾರವು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಯಾವುದೇ ಮಾರ್ಗೋಪಾಯ ಮುಂಗಡಗಳನ್ನು ಪಡೆದಿರಲಿಲ್ಲ. ಅದು ಇಡೀ ವರ್ಷದಲ್ಲಿ ಅಗತ್ಯವಿರುವ ದೈನಂದಿನ ಕನಿಷ್ಠ ಶಿಲ್ಕನ್ನು ಉಳಿಸಿಕೊಂಡಿದೆ.

ರಾಜ್ಯ ಸರ್ಕಾರವು ದೊಡ್ಡ ಪ್ರಮಾಣದ ನಗದು ಶಿಲ್ಕುಗಳನ್ನು ಹೊಂದಿದ್ದರೂ ಅದನ್ನು ಉತ್ಪಾದಕ ಬಳಕೆಗೆ ಒಳಪಡಿಸದೆ ನಗದು ಶಿಲ್ಕಿಗೆ ಮತ್ತಷ್ಟು ಸಂಚಯನಕ್ಕೆ ಕಾರಣವಾಗುವಂತೆ ಮಾರುಕಟ್ಟೆ ಸಾಲಗಳಿಗೆ ಆಶ್ರಯಿಸುವುದು ಅಪೇಕ್ಷಣೀಯವಲ್ಲ. 2020–21ರಲ್ಲಿ ರಾಜ್ಯ ಸರ್ಕಾರ ಮಾಡಿದ ನಗದು ಶಿಲ್ಕುಗಳು ಮತ್ತು ಹೂಡಿಕೆಗಳನ್ನು **ಕೋಷ್ಟಕ–2.38**ರಲ್ಲಿ ನೀಡಿದೆ.

**ಕೋಷ್ಟಕ–2.38: ನಗದು ಶಿಲ್ಕುಗಳು ಮತ್ತು ಅವುಗಳ ಹೂಡಿಕೆ**

(₹ ಕೋಟಿಗಳಲ್ಲಿ)

| | 1 ಏಪ್ರಿಲ್ 2020ರಲ್ಲಿ ಪ್ರಾರಂಭಿಕ ಶಿಲ್ಕು | 31 ಮಾರ್ಚ್ 2021ರಲ್ಲಿ ಅಂತಿಮ ಶಿಲ್ಕು |
|---|---|---|
| ಎ. ಸಾಮಾನ್ಯ ನಗದು ಶಿಲ್ಕು | | |
| ಖಜಾನೆಗಳಲ್ಲಿ ನಗದು | – | – |
| ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿ ಠೇವಣಿಗಳು | 1,659.20 | 1,583.33 |
| ಇತರೆ ಬ್ಯಾಂಕ್‌ಗಳಲ್ಲಿ ಠೇವಣಿಗಳು | – | – |
| ರವಾನೆಗಳು – ಸ್ಥಳೀಯ | 0.01 | 0.01 |
| ಉಪಮೊತ್ತ | **1,659.21** | **1,583.34** |
| ನಗದು ಶಿಲ್ಕು ಹೂಡಿಕೆ ಲೆಕ್ಕದಲ್ಲಿರುವ ಹೂಡಿಕೆಗಳು | 13,634.21 | 21,744.33 |
| ಒಟ್ಟು (ಎ) | **15,293.42** | **23,327.67** |
| ಬಿ. ಇತರೆ ನಗದು ಶಿಲ್ಕುಗಳು ಮತ್ತು ಹೂಡಿಕೆಗಳು | | |
| ಇಲಾಖಾ ಅಧಿಕಾರಿಗಳು ಅಂದರೆ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖಾ ಅಧಿಕಾರಿಗಳು, ಅರಣ್ಯ ಇಲಾಖೆ, ಜಿಲ್ಲಾಧಿಕಾರಿಗಳು ಮುಂತಾದವರೊಡನೆ ನಗದು | 2.09 | 2.09 |
| ಇಲಾಖಾ ಅಧಿಕಾರಿಗಳ ಬಳಿಯಿರುವ ಸಾದಿಲ್ವಾರು ವೆಚ್ಚಕ್ಕಾಗಿನ ಶಾಶ್ವತ ಮುಂಗಡಗಳು | 2.18 | 3.18 |
| ಮೀಸಲು ನಿಧಿಗಳಲ್ಲಿ ಹೂಡಿಕೆಗಳು | 19,165.44 | 23,810.24 |
| ಒಟ್ಟು (ಬಿ) | **19,169.71** | **23,815.51** |
| ಒಟ್ಟು (ಎ+ಬಿ) | **34,463.13** | **47,143.18** |
| ಗಳಿಸಿದ ಬಡ್ಡಿ | **535.10** | **627.42** |

*ಆಕರ : ಹಣಕಾಸು ಲೆಕ್ಕಗಳು*

ಖಜಾನೆಗಳು/ಇಲಾಖೆಗಳ ನಗದು, ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಠೇವಣಿಗಳು ಮತ್ತು ರವಾನೆ ರೂಪದಲ್ಲಿ ನಗದು ಇವು ನಗದು ಮತ್ತು ನಗದು ಸಮಾನಗಳು ರಾಜ್ಯದ ನಗದು ಶಿಲ್ಕು ಆಗುತ್ತವೆ. ಖಜಾನೆ ಬಿಲ್‌ಗಳ ಜೊತೆಗೆ, ನಗದು ಶಿಲ್ಕನ್ನು ಸಂಚಿತ ಋಣ ಪರಿಹಾರ ನಿಧಿ, ಅಭಿವೃದ್ಧಿ ಮತ್ತು ಕಲ್ಯಾಣ ನಿಧಿ ಮುಂತಾದ ಮೀಸಲು ನಿಧಿಗಳಲ್ಲಿ ಹೂಡಿಕೆ ಮಾಡಲಾಗುತ್ತದೆ. ಒಟ್ಟು ₹23,810 ಕೋಟಿಗಳ ಮೀಸಲಿಟ್ಟ ನಿಧಿಯಲ್ಲಿ, ₹4,820 ಕೋಟಿಗಳನ್ನು ಸಂಚಿತ ಋಣ ಪರಿಹಾರ ನಿಧಿಯಲ್ಲಿ, ₹18,965 ಕೋಟಿಗಳನ್ನು

ಅಭಿವೃದ್ಧಿ ಮತ್ತು ಕಲ್ಯಾಣ ನಿಧಿಯಲ್ಲಿ ಮತ್ತು ಉಳಿದ ₹25 ಕೋಟಿಗಳನ್ನು ಇತರ ಮೀಸಲು ನಿಧಿಗಳಲ್ಲಿ ಹೂಡಿಕೆ ಮಾಡಲಾಗಿದೆ.

ಹಿಂದಿನ ವರ್ಷಕ್ಕೆ ಹೋಲಿಸಿದರೆ ನಗದು ಶಿಲ್ಕಿನಲ್ಲಿ ಶೇಕಡ 53ರಷ್ಟು ಹೆಚ್ಚಳವಾಗಿದೆ. ಪ್ರಸಕ್ತ ವರ್ಷದ ಅಂತ್ಯದಲ್ಲಿ ರಾಜ್ಯ ಸರ್ಕಾರದ ನಗದು ಶಿಲ್ಕು 2019–20ರಲ್ಲಿನ ₹15,293.42 ಕೋಟಿಗಳಿಂದ ₹23,327.67 ಕೋಟಿಗಳಿಗೆ ಏರಿ ₹8,034.25 ಕೋಟಿಗಳಷ್ಟು ಗಣನಾರ್ಹ ಹೆಚ್ಚಳವನ್ನು ಕಂಡಿದೆ. 2020–21ರ ಲ್ಲಿ ರಾಜಸ್ವ ಸ್ವೀಕೃತಿಯಲ್ಲಿನ ಕುಸಿತದ ಹಿನ್ನೆಲೆಯಲ್ಲಿ ವೆಚ್ಚದ ಬದ್ಧತೆಗಳನ್ನು ಪೂರೈಸಲು ಪಡೆದಿರುವ ₹69,000 ಕೋಟಿಗಳ ಮಾರುಕಟ್ಟೆ ಸಾಲಗಳು ನಗದು ಶಿಲ್ಕಿನ ಹೆಚ್ಚಳಕ್ಕೆ ಪ್ರಮುಖ ಕಾರಣವಾಗಿದೆ.

ರಾಜ್ಯ ಸರ್ಕಾರವು ತನ್ನ ಹೆಚ್ಚುವರಿ ನಗದು ಶಿಲ್ಕನ್ನು ಅಲ್ಪ ಮತ್ತು ದೀರ್ಘಾವಧಿಯ ಭಾರತ ಸರ್ಕಾರದ ಭದ್ರತೆಗಳಲ್ಲಿ ಮತ್ತು ಖಜಾನೆ ಬಿಲ್‌ಗಳಲ್ಲಿ ಹೂಡಿಕೆ ಮಾಡುತ್ತದೆ. ಅಂತಹ ಹೂಡಿಕೆಗಳಿಂದ ಪಡೆದ ಲಾಭವನ್ನು '0049–ಬಡ್ಡಿ ಸ್ವೀಕೃತಿಗಳು' ಶೀರ್ಷಿಕೆಯಡಿಯಲ್ಲಿ ಆದಾಯವಾಗಿ ಜಮಾ ಮಾಡಲಾಗುತ್ತದೆ. ರಾಜ್ಯ ಸರ್ಕಾರವು 2020–21ರಲ್ಲಿ 14 ದಿನಗಳ ಖಜಾನೆ ಬಿಲ್‌ಗಳಿಗೆ ಶೇಕಡ 1.41ರ ಸರಾಸರಿ ಬಡ್ಡಿ ದರದೊಂದಿಗೆ ಮತ್ತು 91 ದಿನಗಳ ಖಜಾನೆ ಬಿಲ್‌ಗಳಿಗೆ ಶೇಕಡ 3.15ರ ಬಡ್ಡಿ ದರದೊಂದಿಗೆ ₹627 ಕೋಟಿಗಳ ಬಡ್ಡಿಯನ್ನು ಗಳಿಸಿದೆ ಮತ್ತು ವಾರ್ಷಿಕ ಸರಾಸರಿ ದರ ಶೇಕಡ 6.38 ದರದಲ್ಲಿ ಸಾಲಗಳನ್ನು ಮಾಡಲಾಗಿದೆ.

2016–17 ರಿಂದ 2020–21ರ ಐದು ವರ್ಷಗಳ ಅವಧಿಯಲ್ಲಿ ರಾಜ್ಯದ ನಗದು ಶಿಲ್ಕಿನ ಹೂಡಿಕೆಗಳನ್ನು **ಕೋಷ್ಟಕ–2.39**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.39: ನಗದು ಶಿಲ್ಕಿನ ಹೂಡಿಕೆ ಲೆಕ್ಕ (ಪ್ರಧಾನ ಲೆಕ್ಕ ಶೀರ್ಷಿಕೆ–8673)**

(₹ ಕೋಟಿಗಳಲ್ಲಿ)

| ವರ್ಷ | ಪ್ರಾರಂಭಿಕ ಶಿಲ್ಕು | ಅಂತಿಮ ಶಿಲ್ಕು | ಹೆಚ್ಚಳ (+)/ ಇಳಿಕೆ(–) | ಗಳಿಸಿದ ಬಡ್ಡಿ |
|---|---|---|---|---|
| **2016–17** | 16,917.13 | 23,977.48 | 7,060.35 | 1,054.16 |
| **2017–18** | 23,977.48 | 12,655.49 | (–)11,321.99 | 1,078.30 |
| **2018–19** | 12,655.49 | 5,139.28 | (–)7,516.21 | 936.47 |
| **2019–20** | 5,139.28 | 13,634.21 | 8,494.93 | 535.10 |
| **2020–21** | 13,634.21 | 21,744.33 | 8,110.12 | 627.42 |

*ಆಕರ: ಹಣಕಾಸು ಲೆಕ್ಕಗಳು*

2016–17ರಿಂದ 2020–21ರ ಅವಧಿಯಲ್ಲಿ ರಾಜ್ಯ ಸರ್ಕಾರದ ನಗದು ಶಿಲ್ಕಿನ ಹೂಡಿಕೆಯ ಪ್ರವೃತ್ತಿಯ ವಿಶ್ಲೇಷಣೆಯು 2019–20 ಮತ್ತು 2020–21ರ ಅವಧಿಯಲ್ಲಿ ಹೂಡಿಕೆಯು ಗಮನಾರ್ಹವಾಗಿ ಹೆಚ್ಚಾಗಿದೆ ಎಂದು ಸೂಚಿಸಿದೆ.

**ನಕ್ಷೆ–2.17**ರಲ್ಲಿ 2016–17ರಿಂದ 2020–21ರ ಅವಧಿಯಲ್ಲಿ ನಗದು ಶಿಲ್ಕಿನ ಹೂಡಿಕೆ ಲೆಕ್ಕದಲ್ಲಿ ಲಭ್ಯವಿರುವ ಶಿಲ್ಕು ಮತ್ತು ರಾಜ್ಯವು ತೆಗೆದುಕೊಂಡ ಮಾರುಕಟ್ಟೆ ಸಾಲಗಳ ಮುಕ್ತಾಯದ ಬಾಕಿಯನ್ನು ಹೋಲಿಸಲಾಗಿದೆ. ಮಾರುಕಟ್ಟೆ ಸಾಲಗಳನ್ನು ಹೆಚ್ಚಿನ ಬಡ್ಡಿ ದರದಲ್ಲಿ ತೆಗೆದುಕೊಳ್ಳಲಾಗಿದೆ, ಆದರೆ ಖಜಾನೆ ಬಿಲ್‌ಗಳಲ್ಲಿನ ಹೂಡಿಕೆಯು ಕಡಿಮೆ ದರಗಳಲ್ಲಿ ಬಡ್ಡಿಯನ್ನು ನೀಡುತ್ತಿದೆ.

**ನಕ್ಷೆ–2.17: ಮಾರುಕಟ್ಟೆ ಸಾಲಗಳಿಗೆ ಅಭಿಮುಖವಾಗಿ ನಗದು ಶಿಲ್ಕು**




*ಆಕರ: ಹಣಕಾಸು ಲೆಕ್ಕಗಳು*

ಕಳೆದ ಎರಡು ವರ್ಷಗಳಲ್ಲಿ ಅಂದರೆ, 2019–20 ಮತ್ತು 2020–21ರಲ್ಲಿ, ಮಾರುಕಟ್ಟೆ ಸಾಲಗಳ ಹೆಚ್ಚಳದಿಂದಾಗಿ ನಗದು ಶಿಲ್ಕು ಹೂಡಿಕೆಯ ಲೆಕ್ಕದಲ್ಲಿ ಹೆಚ್ಚಳವಾಗಿದೆ ಎಂಬುದು **ನಕ್ಷೆ–2.17**ರಿಂದ ಸ್ಪಷ್ಟವಾಗಿದೆ. **ನಕ್ಷೆ–2.18**ರಲ್ಲಿ ರಾಜ್ಯವು ಪಡೆದ ಮಾರುಕಟ್ಟೆ ಸಾಲಗಳೊಂದಿಗೆ ನಗದು ಶಿಲ್ಕನ್ನು ಹೋಲಿಸಲಾಗಿದೆ. **ನಕ್ಷೆ–2.19**ರಲ್ಲಿ ಪ್ರತಿ ತಿಂಗಳಿನ ನಗದು ಶಿಲ್ಕಿನ ಹರಿವು ಮತ್ತು ವರ್ಷದಲ್ಲಿ ನಿವ್ವಳ ನಗದು ಶಿಲ್ಕಿನ ಹೂಡಿಕೆಯನ್ನು ಹೋಲಿಸಲಾಗಿದೆ.

**ನಕ್ಷೆ–2.18: 2020–21ರಲ್ಲಿ ಪ್ರತಿ ತಿಂಗಳು ರಾಜ್ಯವು ಪಡೆದ ಮಾರುಕಟ್ಟೆ ಸಾಲಗಳೊಂದಿಗೆ ನಗದು ಶಿಲ್ಕಿನ ಹೂಡಿಕೆಯ ಹೋಲಿಕೆ**




***ಆಕರ: ಪ್ರಧಾನ ಮಹಾಲೇಖಾಪಾಲರ (ಲೆ ಮತ್ತು ಹ) ಕಛೇರಿ***

**ನಕ್ಷೆ–2.19: ವರ್ಷದಲ್ಲಿ ಮಾಸಿಕ ನಿವ್ವಳ ನಗದು ಶಿಲ್ಕಿನ ಹೂಡಿಕೆ ಮತ್ತು ನಗದು ಶಿಲ್ಕಿನ ಹರಿವು**




*ಆಕರ: ಪ್ರಧಾನ ಮಹಾಲೇಖಾಪಾಲರ (ಲೆ ಮತ್ತು ಹ) ಕಛೇರಿ*

ಹಿಂದಿನ ನಕ್ಷೆಯು ಸೂಚಿಸುವ ಪ್ರಕಾರ, ರಾಜ್ಯ ಸರ್ಕಾರವು ವರ್ಷದಲ್ಲಿ ಹಲವಾರು ಸಂದರ್ಭಗಳಲ್ಲಿ ಸಾಕಷ್ಟು ನಗದು ಮೊತ್ತದ ಲಭ್ಯತೆ ಇದ್ದರೂ ಅದನ್ನು ಅಭಿವೃದ್ಧಿಗೆ ಬಳಕೆ ಮಾಡದೆ ಮಾರುಕಟ್ಟೆ ಸಾಲಗಳನ್ನು ಆಶ್ರಯಿಸಿ ನಗದು ಶಿಲ್ಕಿನ ಸಂಚಯಕ್ಕೆ ಕಾರಣವಾಗಿದೆ ಎಂಬುದನ್ನು ಸೂಚಿಸುತ್ತದೆ. 2020–21ನೇ ಸಾಲಿನಲ್ಲಿ, ರಾಜ್ಯ ಸರ್ಕಾರವು ಮಾರುಕಟ್ಟೆಯಿಂದ ₹69,000 ಕೋಟಿಗಳನ್ನು ಸಂಗ್ರಹಿಸಿದೆ ಅದೇ ಸಮಯದಲ್ಲಿ ನಗದು ಶಿಲ್ಕು ₹13,634 ಕೋಟಿಗಳಿಂದ ₹21,744 ಕೋಟಿಗಳಿಗೆ ಗಣನೀಯವಾಗಿ ಏರಿಕೆಯಾಗಿದೆ, ಇದು ಹೆಚ್ಚಿನ ಸಾಲವನ್ನು ತಪ್ಪಿಸಬಹುದಾಗಿತ್ತು ಎಂದು ಸೂಚಿಸುತ್ತದೆ.

ಇದಲ್ಲದೆ, ಎರವಲುಗಳನ್ನು ಸಾಮಾನ್ಯವಾಗಿ ಬಂಡವಾಳ ಯೋಜನೆಗಳ ಹೂಡಿಕೆ ಮತ್ತು ಸ್ವತ್ತುಗಳ ಸೃಷ್ಟಿಗೆ ಆಶ್ರಯಿಸಲಾಗುತ್ತದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ 2020–21ರಲ್ಲಿ ರಾಜ್ಯವು ಬಂಡವಾಳ ವೆಚ್ಚದಲ್ಲಿ ಹೆಚ್ಚಳವನ್ನು ಕಂಡರೂ, ರಾಒಆಂಉದ ಶೇಕಡಾವಾರು ಪ್ರಮಾಣದಲ್ಲಿ ಇಳಿಕೆ ಕಂಡು ಬಂದಿದೆ. ಹೆಚ್ಚುವರಿಯಾಗಿ, ಪ್ರಸಕ್ತ ವರ್ಷದಲ್ಲಿ ರಾಜ್ಯವು ₹19,338 ಕೋಟಿಗಳ ರಾಜಸ್ವ ಕೊರತೆಯನ್ನು ಕಂಡಿದ್ದರಿಂದ, ಕೊರತೆಯನ್ನು ಸಾಲದಿಂದ ಪೂರೈಸಲಾಗಿದೆ. ರಾಜ್ಯ ಸರ್ಕಾರವು ವೆಚ್ಚದ ಅವಶ್ಯಕತೆ ಮತ್ತು ನಗದು ಲಭ್ಯತೆಯ ಆಧಾರದ ಮೇಲೆ ಮುಕ್ತಮಾರುಕಟ್ಟೆಯ ಸಾಲಗಳನ್ನು ಆಯ್ಕೆ ಮಾಡಿದೆ ಎಂದು ಹೇಳಿದೆ. ಆದರೆ, ಮೇಲಿನ ನಕ್ಷೆಗಳಿಂದ ರಾಜ್ಯವು ಸಾಕಷ್ಟು ನಗದು ಶಿಲ್ಕನ್ನು ಹೊಂದಿತ್ತಾದ್ದರಿಂದ ವರ್ಷದ ಕೊನೆಯ ತ್ರೈಮಾಸಿಕದಲ್ಲಿ ಪಡೆದ ಕೆಲವು ಮಾರುಕಟ್ಟೆ ಸಾಲಗಳನ್ನು ಮತ್ತು ಅದರ ಫಲಿತವಾದ ಬಡ್ಡಿಯ ಹೊರೆಯನ್ನು ತಪ್ಪಿಸಬಹುದಿತ್ತು.

ಸತತ ಹಣಕಾಸು ಆಯೋಗಗಳು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ನ ಹೊಸ ಸಾಲಗಳನ್ನು ಆಶ್ರಯಿಸುವ ಮೊದಲು ತಮ್ಮ ಅಸ್ತಿತ್ವದಲ್ಲಿರುವ ನಗದು ಶಿಲ್ಕುಗಳನ್ನು ಬಳಸಿಕೊಳ್ಳಲು ಮತ್ತು ತಮ್ಮ ನಗದು ಶಿಲ್ಕನ್ನು ಹೆಚ್ಚು ದಕ್ಷತೆಯಿಂದ ನಿರ್ವಹಿಸಲು ಅಧಿಕ ಶಿಲ್ಕುಗಳನ್ನು ಹೊಂದಿರುವ ರಾಜ್ಯಗಳು ಪ್ರಯತ್ನಿಸಬೇಕು ಎಂದು ಪುನರುಚ್ಚರಿಸುತ್ತಿವೆ. ಹದಿನೈದನೆಯ ಹಣಕಾಸು ಆಯೋಗವು ವರ್ಷದ ಕೊನೆಯಲ್ಲಿ ನಗದು ಶಿಲ್ಕನ್ನು ಕಡಿಮೆ ಮಾಡಿಕೊಳ್ಳುವ ಗುರಿಯನ್ನು ಸಾಧಿಸಲು ಸಾಲ ಮಾಡುವ ಅವಧಿ ಪಟ್ಟಿಯನ್ನು ಮರುಮಾಪನ ಮಾಡಬೇಕಾಗಿದೆ ಎಂದು ರಾಜ್ಯಕ್ಕೆ ಶಿಫಾರಸು ಮಾಡಿದೆ.

ಆರ್ಥಿಕ ಇಲಾಖೆಯು ರಾಜ್ಯ ಸರ್ಕಾರವು ಸಾಮಾನ್ಯವಾಗಿ ಹಣಕಾಸು ವರ್ಷದ ಮೊದಲ ಎರಡು ತ್ರೈಮಾಸಿಕಗಳಲ್ಲಿ ಹಣವನ್ನು ಎರವಲು ಪಡೆಯುವುದಿಲ್ಲ ಮತ್ತು ಸಾಮಾನ್ಯವಾಗಿ ಹಣಕಾಸು ವರ್ಷದ ಕೊನೆಯ ಎರಡು ತ್ರೈಮಾಸಿಕಗಳಲ್ಲಿ ಸಾಲವನ್ನು ಮಾಡಲಾಗುತ್ತದೆ. ಕೋವಿಡ್ 19 ಸಾಂಕ್ರಾಮಿಕ ಪರಿಸ್ಥಿತಿಯ ಕಾರಣದಿಂದಾಗಿ, ರಾಜಸ್ವ ಸ್ವೀಕೃತಿಗಳಲ್ಲಿ ಇಳಿಕೆ ಕಂಡು ಬಂದು ವೆಚ್ಚವು ಹೆಚ್ಚಾಯಿತು ಮತ್ತು ₹23,237.67 ಕೋಟಿಗಳ ನಗದು ಶಿಲ್ಕನ್ನು ಹೊಂದಿರುವುದು ಅತ್ಯಗತ್ಯ ಮತ್ತು ಸಮರ್ಥನೀಯವಾಗಿದೆ ಎಂದು ಉತ್ತರಿಸಿದೆ (ಡಿಸೆಂಬರ್ 2021).

ಹಣಕಾಸು ವರ್ಷದ ಕೊನೆಯ ಎರಡು ತ್ರೈಮಾಸಿಕಗಳಲ್ಲಿ ಹಣವನ್ನು ಎರವಲು ಪಡೆಯಲಾಗಿದೆ ಎಂಬ ಆರ್ಥಿಕ ಇಲಾಖೆಯ ಉತ್ತರವು ಒಪ್ಪಿಕೊಳ್ಳತಕ್ಕುದುದಲ್ಲ, 2020–21ರ ಮೊದಲ ಎರಡು ತ್ರೈಮಾಸಿಕಗಳಲ್ಲಿ ಶೇಕಡ 43ರಷ್ಟು ಸಾಲಗಳನ್ನು ಪಡೆಯಲಾಗಿದೆ ಎಂಬುದು ಎಂದು **ನಕ್ಷೆ–2.18**ನ್ನು ನೋಡಿದಾಗ ಸ್ಪಷ್ಟವಾಗುತ್ತದೆ. ಇದಲ್ಲದೆ, ಕೋವಿಡ್ 19ರ ಸಂದರ್ಭದಲ್ಲಿ ನಗದು ಶಿಲ್ಕಿನಲ್ಲಿ ಶೇಕಡ 53ರಷ್ಟು ಹೆಚ್ಚಳವು ಸ್ವೀಕಾರಾರ್ಹವಲ್ಲ, ಏಕೆಂದರೆ, ಅಂತರರಾಷ್ಟ್ರೀಯ ಹಣಕಾಸು ನಿಧಿಯೂ ಕೂಡ ಹಣಕಾಸಿನ ಒತ್ತಡದ ಸಮಯಗಳಲ್ಲಿ ಸರ್ಕಾರಿ ನಗದು ನಿರ್ವಹಣೆಯ ಕುರಿತಾದ ತನ್ನ ನಿಬಂಧದಲ್ಲಿ ದುರ್ಬಲ ಮುಂಜಾಗ್ರತೆಯ ಸಾಮರ್ಥ್ಯವನ್ನು ಹೊಂದಿರುವ ಸರ್ಕಾರಗಳಿಗೆ ಈ ಒತ್ತಡ ನಿವಾರಕಗಳ ಅಗತ್ಯವಿದೆ ಎಂದು ಹೇಳಿದೆ. ರಾಜ್ಯವು ದೃಢವಾದ ಮುಂಜಾಗ್ರತಾ ಕಾರ್ಯ ವಿಧಾನವನ್ನು ಹೊಂದಿರುವುದರಿಂದ, ಅಂತಹ ಬೃಹತ್ ಒತ್ತಡ ನಿವಾರಕದ ಅಗತ್ಯವಿರುವುದಿಲ್ಲ. 2021ರ ಏಪ್ರಿಲ್ ಮತ್ತು ಮೇ ತಿಂಗಳ ರಾಜಸ್ವ ಸ್ವೀಕೃತಿಗಳು ಮತ್ತು ರಾಜಸ್ವ ವೆಚ್ಚಗಳಿಂದ ನೋಡಿದಾಗಲೂ, ಹೆಚ್ಚುವರಿ ವೆಚ್ಚವು ಸುಮಾರು ₹2,000 ಕೋಟಿಗಳಷ್ಟಿದೆ ಎಂದು ಗಮನಿಸಲಾಗಿದೆ ಮತ್ತು ಇದನ್ನು ಹಿಂದಿನ ವರ್ಷದ ನಗದು ಶಿಲ್ಕಿನಿಂದಲೇ ಪೂರೈಸಬಹುದಾಗಿತ್ತು.

## 2.9 ತೀರ್ಮಾನ ಮತ್ತು ಶಿಫಾರಸುಗಳು

**ರಾಜ್ಯದ ಸ್ವಂತ ಸಂಪನ್ಮೂಲಗಳು**

ರಾಜ್ಯ ಸರ್ಕಾರವು 2020–21ರಲ್ಲಿ ತನ್ನ ರಾಜಸ್ವ ಸ್ವೀಕೃತಿಗಳಲ್ಲಿ ಶೇಕಡ 10.67ರಷ್ಟು ಇಳಿಕೆ ದಾಖಲಿಸಿದೆ. 2018–19ನೇ ವರ್ಷವನ್ನು ಹೊರತುಪಡಿಸಿ 2016–17ರಿಂದ 2020–21ರ ಅವಧಿಯಲ್ಲಿ ರಾಜಸ್ವ ಸ್ವೀಕೃತಿಗಳ ವೃದ್ಧಿಯ ದರವು ಇಳಿಮುಖವಾಗಿದೆ. ಸ್ವಂತ ತೆರಿಗೆ ಆದಾಯವು ರಾಜ್ಯದ ರಾಜಸ್ವ ಸ್ವೀಕೃತಿಯ ಪ್ರಮುಖ ಭಾಗದ (ಶೇಕಡ 62) ಕೊಡುಗೆ ನೀಡಿದೆ. ಆದರೂ, ರಾಒಆಂಉಕ್ಕೆ ರಾಜಸ್ವ ಸ್ವೀಕೃತಿಯ ಅನುಪಾತವು ಕುಸಿತದ ಪ್ರವೃತ್ತಿಯನ್ನು ತೋರಿಸಿದೆ. ಅಲ್ಲದೆ, ರಾಒಆಂಉಕ್ಕೆ ತೆರಿಗೆಯೇತರ ಆದಾಯದ ಅನುಪಾತದಲ್ಲಿ ಯಾವುದೇ ಸುಧಾರಣೆ ಕಂಡು ಬಂದಿಲ್ಲ ಮತ್ತು ಇದು 2016–17ರಿಂದ 2020–21ರ ಅವಧಿಯಲ್ಲಿ ರಾಒಆಂಉದ ಶೇಕಡ ಒಂದಕ್ಕಿಂತ ಕಡಿಮೆಯಿತ್ತು.

**ಶಿಫಾರಸು: ವಿತ್ತೀಯ ನಿರ್ವಹಣಾ ಸುಧಾರಣಾ ಸಮಿತಿಯು (ಮಧ್ಯಂತರ ವಿತ್ತೀಯ ಯೋಜನೆ 2021–25) ಶಿಫಾರಸು ಮಾಡಿದ ಬಳಕೆದಾರರ ಶುಲ್ಕಗಳು ಮತ್ತು ನಿಯಮಿತ ಮತ್ತು ನಿಯತ ಕಾಲಿಕ ಮೇಲ್ವಿಚಾರಣೆಯ ಮೂಲಕ ತೆರಿಗೆಯೇತರ ಆದಾಯಗಳಿಗೆ ಗಮನಾರ್ಹವಾದ ಪರಿಷ್ಕರಣೆಯ ಅಗತ್ಯವಿದೆ.**

**ರಾಜಸ್ವ ವೆಚ್ಚ**

2020–21ರಲ್ಲಿ, ಹಿಂದಿನ ವರ್ಷಕ್ಕಿಂತ (ಶೇಕಡ ಏಳು) ಸಾಮಾಜಿಕ ಸೇವೆಗಳ ವಿಭಾಗದ ವೃದ್ಧಿಯಲ್ಲಿ ಕುಸಿತ ಕಂಡು ಬಂದಿದೆ ಮತ್ತು ಒಟ್ಟು ರಾಜಸ್ವ ವೆಚ್ಚಕ್ಕೆ ಸಾಮಾಜಿಕ ಸೇವೆಗಳ ಮೇಲಿನ ವೆಚ್ಚದ ಪಾಲು ಕೂಡ 2019–20ರಲ್ಲಿದ್ದ ಶೇಕಡ 38 ರಿಂದ 2020–21ರಲ್ಲಿ ಶೇಕಡ 35ಕ್ಕೆ ಇಳಿಕೆಯಾಗಿದೆ. 2020–21ರಲ್ಲಿ ಆರ್ಥಿಕ ಸೇವೆಗಳ ಮೇಲಿನ ವೆಚ್ಚದ ಬೆಳವಣಿಗೆಯು ಸ್ವಲ್ಪ ಮಟ್ಟಿಗೆ ಎರಡು ಪ್ರತಿಶತದಷ್ಟು ಹೆಚ್ಚಾಗಿದೆ.

ಶೇಕಡ 85ರಷ್ಟು ರಾಜಸ್ವ ವೆಚ್ಚವು ಸಂಬಳ, ಬಡ್ಡಿಪಾವತಿಗಳು, ಪಿಂಚಣಿಗಳು, ಸಹಾಯಧನ, ಸಹಾಯಾನುದಾನ ಮತ್ತು ಹಣಕಾಸಿನ ನೆರವು, ಆಡಳಿತಾತ್ಮಕ ವೆಚ್ಚಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆ ಮುಂತಾದವುಗಳ ಮೇಲಿನ ಬದ್ಧವೆಚ್ಚವನ್ನು ಒಳಗೊಂಡಿದೆ.

**ಶಿಫಾರಸುಗಳು: ವೇತನ, ಪಿಂಚಣಿ ಮತ್ತು ಬಡ್ಡಿಯ ವೆಚ್ಚಗಳು ಅನಮ್ಯವಾಗಿರುವುದರಿಂದ, ಸ್ಥಳೀಯ ಸಂಸ್ಥೆಗಳನ್ನು ಹೊರತುಪಡಿಸಿ ಸ್ಥಿರವಾಗಿ ಹೆಚ್ಚುತ್ತಿರುವ ಸಹಾಯಧನ, ಸಹಾಯನುದಾನದ ಮೇಲಿನ ವೆಚ್ಚಗಳು ಮುಂತಾದವುಗಳ ಮೇಲೆ, ಫಲಾನುಭವಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ರಾಜ್ಯ ಸರ್ಕಾರವು ಹೆಚ್ಚಿನ ಗಮನಹರಿಸಬೇಕಾಗಿದೆ.**

**ವೆಚ್ಚದ ಗುಣಮಟ್ಟ**

ಪ್ರಸಕ್ತ ವರ್ಷದಲ್ಲಿ ಒಟ್ಟು ವೆಚ್ಚದಲ್ಲಿ ಬಂಡವಾಳ ವೆಚ್ಚದ ಪಾಲು ಶೇಕಡ 21ರಷ್ಟಿತ್ತು. 2020–21ರ ಅಂತ್ಯದ ವೇಳೆಗೆ ಒಟ್ಟು ₹3,628 ಕೋಟಿಗಳ ಮೊತ್ತವನ್ನು ಅಪೂರ್ಣ ಯೋಜನೆಗಳಲ್ಲಿ ತೊಡಗಿಸಲಾಗಿದೆ.

31 ಮಾರ್ಚ್ 2021ರಂತೆ ಕಂಪನಿಗಳು/ನಿಗಮಗಳಲ್ಲಿ ಹೂಡಿರುವ ₹68,257 ಕೋಟಿಗಳಿಂದ ಬಂದ ಪ್ರತಿಫಲವು ಅತ್ಯಲ್ಪವಾಗಿದೆ (₹80.70 ಕೋಟಿ). ನಿರಂತರವಾಗಿ ನಷ್ಟದಲ್ಲಿರುವ ಕಂಪನಿಗಳು/ನಿಗಮಗಳಲ್ಲಿ ಸರ್ಕಾರವು ₹42,120 ಕೋಟಿಗಳನ್ನು (ಶೇಕಡ 62) ಹೂಡಿಕೆ ಮಾಡಿದೆ.

**ಶಿಫಾರಸುಗಳು: ರಾಜ್ಯ ಸರ್ಕಾರವು ಅಪೂರ್ಣ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಮಾರ್ಗಸೂಚಿಗಳನ್ನು ರೂಪಿಸಬೇಕು ಮತ್ತು ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳುವ ದೃಷ್ಟಿಯಿಂದ ಸಮಯ ಮತ್ತು ವೆಚ್ಚಗಳು ಮಿತಿ ಮೀರಲು ಕಾರಣಗಳನ್ನು ಕಟ್ಟುನಿಟ್ಟಾಗದ ಮೇಲ್ವಿಚಾರಣೆ ಮಾಡಬೇಕು. ಜತೆಗೆ ಮುಕ್ತಾಯದ ಹಂತದಲ್ಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಆದ್ಯತೆ ನೀಡಬೇಕು.**

**ರಾಜ್ಯ ಸರ್ಕಾರವು ಭಾರಿ ನಷ್ಟವನ್ನು ಅನುಭವಿಸುತ್ತಿರುವ ರಾಜ್ಯ ಸಾರ್ವಜನಿಕ ವಲಯದ ಉದ್ಯಮಗಳ ಕೆಲಸವನ್ನು ಪರಿಶೀಲಿಸಬೇಕು ಮತ್ತು ಹೂಡಿಕೆ/ಪುನಶ್ಚೇತನ/ಮುಚ್ಚುವಿಕೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು.**

**ನಿಧಿಗಳು ಮತ್ತು ಇತರ ಹೊಣೆಗಾರಿಕೆಗಳು**

ಪ್ರಸಕ್ತ ವರ್ಷದಲ್ಲಿ, ಹಸಿರು ತೆರಿಗೆ ಮತ್ತು ರಸ್ತೆ ಸುರಕ್ಷತೆ ತೆರಿಗೆಗಳಡಿ ಸಂಗ್ರಹವಾದ ಕ್ರಮವಾಗಿ ₹10.86 ಕೋಟಿಗಳು ಮತ್ತು ₹87.65 ಕೋಟಿಗಳ ಮೊತ್ತವನ್ನು ನಿಧಿ ಲೆಕ್ಕಕ್ಕೆ ವರ್ಗಾಯಿಸಲಾಗಿಲ್ಲ.

**ಶಿಫಾರಸುಗಳು: ವಿವಿಧ ಮೀಸಲು ನಿಧಿಗಳ ನಿರ್ವಹಣೆ ಮತ್ತು ಹೂಡಿಕೆಗಳ ಮಾದರಿಗೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸುವ ಅಗತ್ಯವಿದೆ.**

**ಋಣ ಸಹಿಷ್ಣುತೆ**

ರಾಜ್ಯದ ಒಟ್ಟು ಹಣಕಾಸಿನ ಹೊಣೆಗಾರಿಕೆಗಳಲ್ಲಿ ಮುಕ್ತ ಮಾರುಕಟ್ಟೆ ಸಾಲಗಳು ಪ್ರಮುಖ ಪಾಲನ್ನು (ಶೇಕಡ 63) ಹೊಂದಿದ್ದವು. ಬಡ್ಡಿ ಪಾವತಿಯ ಹೊರೆಯನ್ನು ಅಳೆಯುವ ರಾಜಸ್ವ ಸ್ವೀಕೃತಿ ಮತ್ತು ಬಡ್ಡಿ ಪಾವತಿಗಳ ಅನುಪಾತವು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದೆ ಮತ್ತು 2020–21ರಲ್ಲಿ ಇದು ಶೇಕಡ 14.95ರಷ್ಟಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ 2020–21ರಲ್ಲಿ ರಾಜ್ಯಕ್ಕೆ ಲಭ್ಯವಿರುವ ನಿವ್ವಳ ಸಾಲವು (₹41,946 ಕೋಟಿಗಳು) ಶೇಕಡ 4.14ರಷ್ಟು ಹೆಚ್ಚಾಗಿದೆ.

**ಶಿಫಾರಸುಗಳು: ರಾಜ್ಯ ಸರ್ಕಾರವು ಬದ್ಧ ವೆಚ್ಚಗಳನ್ನು ಮಿತಗೊಳಿಸಲು ವೆಚ್ಚಕ್ಕೆ ಸಂಬಂಧಿಸಿದಂತೆ ಮಧ್ಯಂತರ ತಿದ್ದುಪಡಿಗಳನ್ನು ಮಾಡಬೇಕಾಗಿದೆ.**

**ನಗದು ಶಿಲ್ಕಿನ ಸ್ಥಿತಿ**

ಹೆಚ್ಚುವರಿ ಮಾರುಕಟ್ಟೆಯ ಎರವಲುಗಳ ಕಾರಣದಿಂದಾಗಿ ವರ್ಷದ ಅಂತ್ಯದಲ್ಲಿ ರಾಜ್ಯದ ನಗದು ಶಿಲ್ಕು (ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಮೀಸಲಿಟ್ಟ ನಿಧಿಗಳು ಮತ್ತು ಠೇವಣಿಗಳ ಹೂಡಿಕೆ ಸೇರಿದಂತೆ) ಹಿಂದಿನ ವರ್ಷಕ್ಕಿಂತ ಶೇಕಡ 37ರಷ್ಟು ಹೆಚ್ಚಾಗಿದೆ.

**ಶಿಫಾರಸುಗಳು: ನಿಷ್ಫಲ ನಗದು ಶಿಲ್ಕನ್ನು ಹೊಂದಿರುವುದು ವಿವೇಕಯುಕ್ತ ನಗದು ನಿರ್ವಹಣೆಯಲ್ಲ. ಆದ್ದರಿಂದ ಸರ್ಕಾರವು ಮಾರುಕಟ್ಟೆ ಸಾಲಗಳನ್ನು ತನ್ನ ಅಗತ್ಯಕ್ಕೆ ತಕ್ಕಂತೆ ಸೀಮಿತಗೊಳಿಸಿಕೊಳ್ಳಬೇಕಾಗಿದೆ.**

# ಅಧ್ಯಾಯ – 3

# ಆಯವ್ಯಯ ನಿರ್ವಹಣೆ

# ಅಧ್ಯಾಯ-3 : ಆಯವ್ಯಯ ನಿರ್ವಹಣೆ

## 3.1 ಪೀಠಿಕೆ

ಈ ಅಧ್ಯಾಯವು ರಾಜ್ಯದ ಧನವಿನಿಯೋಗ ಲೆಕ್ಕಗಳ ಪರಿಶೋಧನೆಯನ್ನು ಆಧರಿಸಿದೆ. ಇದು ಸರ್ಕಾರದ ಹಂಚಿಕೆಯ ಆದ್ಯತೆಗಳನ್ನು ಪರಿಶೀಲಿಸುತ್ತದೆ. ಸಾಂವಿಧಾನಿಕ ಅವಕಾಶಗಳಿಂದ ವಿಚಲನಗಳನ್ನು ವರದಿ ಮಾಡುತ್ತದೆ ಮತ್ತು ಪಾರದರ್ಶಕತೆಯ ಮೇಲೆ ಪರಿಣಾಮ ಬೀರುವ ಅಂಶಗಳನ್ನು ಎತ್ತಿ ತೋರಿಸುತ್ತದೆ.

## 3.2 ಆಯವ್ಯಯ ಪ್ರಕ್ರಿಯೆ

ಕರ್ನಾಟಕ ಆಯವ್ಯಯ ಕೈಪಿಡಿಯು ಆಯವ್ಯಯ ಅಂದಾಜುಗಳನ್ನು ತಯಾರಿಸಲು ಅನುಸರಿಸಬೇಕಾದ ಕಾರ್ಯವಿಧಾನವನ್ನು ಮತ್ತು ವೆಚ್ಚದ ಅಧಿಕರಿಸುವಿಕೆಗೆ ಸಂಬಂಧಿಸಿದ ನಂತರದ ಕ್ರಮವನ್ನು ಸೂಚಿಸುತ್ತದೆ. ಇಲಾಖೆಗಳ ಮುಖ್ಯಸ್ಥರಿಂದ ಸ್ವೀಕರಿಸಿದ ಪ್ರಸ್ತಾವನೆಗಳ ಆಧಾರದ ಮೇಲೆ ಆರ್ಥಿಕ ಇಲಾಖೆಯು ಆಯವ್ಯಯವನ್ನು ಸಿದ್ಧಪಡಿಸುತ್ತದೆ. ಆರ್ಥಿಕ ಇಲಾಖೆಯು ಸರ್ಕಾರದ ನಿರ್ಧಾರವನ್ನು ಸಾಕಾರಗೊಳಿಸುವ ಅಂದಾಜುಗಳನ್ನು ಕ್ರೋಢೀಕರಿಸಿ ಕೆಳಗಿನವುಗಳನ್ನು ಸಿದ್ಧಪಡಿಸುತ್ತದೆ;

(i) ಆಯವ್ಯಯ ವರ್ಷದ ಹಣಕಾಸು ಸ್ಥಿತಿಯ ಸಾರಾಂಶದ ವಿವರಣಾ ಪಟ್ಟಿ;
(ii) ಸ್ವೀಕೃತಿಗಳ ವಿವರವಾದ ಅಂದಾಜುಗಳು ಮತ್ತು
(iii) ವೆಚ್ಚದ ವಿವರವಾದ ಅಂದಾಜಿನ ನಂತರ ಅನುದಾನಕ್ಕಾಗಿ ಬೇಡಿಕೆಗಳ ವಿವರಣಾ ಪಟ್ಟಿ.

ಈ ಅಂದಾಜುಗಳು ರಾಜ್ಯದ ಸಂಚಿತ ನಿಧಿಯಿಂದ ಪೂರೈಸಬೇಕಾದ ಪುರಸ್ಕೃತ ಮತ್ತು ಪ್ರಭೃತ ವೆಚ್ಚಗಳನ್ನು ಒಳಗೊಂಡಿವೆ. ಆಯವ್ಯಯ ಅಂದಾಜುಗಳನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳಲ್ಲಿ ಪ್ರತಿ ವರ್ಷ ಹಣಕಾಸು ಸಚಿವರು ಮಂಡಿಸುತ್ತಾರೆ.

2020-21ರಲ್ಲಿ ಮೂಲ ಮತ್ತು ಪೂರಕ ಅಂದಾಜುಗಳು, ವೆಚ್ಚಗಳು ಮತ್ತು ಉಳಿಕೆಗಳನ್ನು ಒಳಗೊಂಡಂತೆ ರಾಜ್ಯ ಶಾಸಕಾಂಗವು ಅನುಮೋದಿಸಿದ ಒಟ್ಟು ಮೊತ್ತವನ್ನು **ನಕ್ಷೆ-3.1**ರಲ್ಲಿ ಚಿತ್ರಿಸಲಾಗಿದೆ.

**ನಕ್ಷೆ-3.1: 2020-21ಕ್ಕೆ ಕರ್ನಾಟಕ ಆಯವ್ಯಯ ಮತ್ತು ವೆಚ್ಚದ ಸಾರಾಂಶ**



## 3.3 ಕರ್ನಾಟಕದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯ

2005–06ರಲ್ಲಿ ಕೇಂದ್ರ ಸರ್ಕಾರದ ವೆಚ್ಚ ಆಯವ್ಯಯದ ಭಾಗವಾಗಿ ಮೊದಲ ಬಾರಿಗೆ ಮಹಿಳಾ ಉದ್ದೇಶಿತ ಆಯವ್ಯಯವನ್ನು ಪರಿಚಯಿಸಲಾಯಿತು. ಕರ್ನಾಟಕ ಸರ್ಕಾರವು 2007–08ರಿಂದ ವಿಧಾನಮಂಡಲದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯ ಮಂಡಿಸುತ್ತಿದೆ. ವಿತ್ತೀಯ ಕಾರ್ಯನೀತಿ ಸಂಸ್ಥೆಯಲ್ಲಿನ ಮಹಿಳಾ ಉದ್ದೇಶಿತ ಆಯವ್ಯಯ ಕೋಶವು ವಿವಿಧ ಇಲಾಖೆಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ತಜ್ಞರ ಸಮನ್ವಯದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯವನ್ನು ಸಿದ್ಧಪಡಿಸುತ್ತದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಯೋಜನಾ ಇಲಾಖೆಯ ಸಹಯೋಗದೊಂದಿಗೆ ಈ ಆಯವ್ಯಯದ ಮೇಲ್ವಿಚಾರಣೆ ಮತ್ತು ಮೌಲ್ಯ ಮಾಪನಕ್ಕಾಗಿ ನೋಡಲ್ ಏಜೆನ್ಸಿಯಾಗಿದೆ.

ಮಾರ್ಚ್ 2020ಕ್ಕೆ ಕೊನೆಗೊಳ್ಳುವ ರಾಜ್ಯ ಹಣಕಾಸು ವ್ಯವಹಾರಗಳ ಲೆಕ್ಕ ಪರಿಶೋಧನಾ ವರದಿ (ಕಂಡಿಕೆ 3.3) ಯಲ್ಲಿ ಕರ್ನಾಟಕದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯದ ಸಮೀಕ್ಷೆಯನ್ನು ಸೇರಿಸಲಾಗಿದೆ ಮತ್ತು ಯೋಜನೆ ಮತ್ತು ನೀತಿಯ ಸೂತ್ರೀಕರಣ, ಮಹಿಳಾ ಉದ್ದೇಶಿತ ಆಯವ್ಯಯ ದಾಖಲೆಗಳ ವಿಶ್ಲೇಷಣೆ, ಮಹಿಳಾ ಉದ್ದೇಶಿತ ಆಯವ್ಯಯ ಪ್ರಕ್ರಿಯೆಗಳನ್ನು ಲೆಕ್ಕಪರಿಶೋಧನೆಯ ಗಮನಿಸುವಿಕೆಗಳಲ್ಲಿ ವಿವರವಾಗಿ ಹೊರತರಲಾಗಿದೆ. ವರದಿಯಲ್ಲಿ ತಂದಿರುವ ಅಂಶಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಆರ್ಥಿಕ ಇಲಾಖೆಯು ಉತ್ತರ ನೀಡಿದೆ.

2016–17ರಿಂದ 2020–21ರ ಅವಧಿಗೆ ವಿವಿಧ ಇಲಾಖೆಗಳಲ್ಲಿ ಮಹಿಳೆಯರಿಗೆ ಮೀಸಲಿಟ್ಟ ಒಟ್ಟು ಹಂಚಿಕೆಯು ವರ್ಗ ಎ (ಮಹಿಳೆಯರಿಗೆ 100 ಪ್ರತಿಶತ ವಿನಿಯೋಗದೊಂದಿಗೆ ಮಹಿಳಾ ನಿರ್ದಿಷ್ಟ ಯೋಜನೆಗಳು) ಮತ್ತು ವರ್ಗ ಬಿ (ಪ್ರತಿಶತ 30ಕ್ಕಿಂತ ಹೆಚ್ಚು ಮತ್ತು 100ಕ್ಕಿಂತ ಕಡಿಮೆ) ಹಂಚಿಕೆಗಳೊಂದಿಗೆ ಮಹಿಳಾ ಪರ ಯೋಜನೆಗಳು ಒಟ್ಟು ಹಂಚಿಕೆಗೆ ಅವುಗಳ ಶೇಕಡಾವಾರು ಪಾಲನ್ನು **ಕೋಷ್ಟಕ 3.1**ರಲ್ಲಿ ಸೂಚಿಸಲಾಗಿದೆ.

**ಕೋಷ್ಟಕ 3.1: 2016–17ರಿಂದ 2020–21ರ ಅವಧಿಯಲ್ಲಿ ವರ್ಗವಾರು ಹಂಚಿಕೆ**

(₹ ಕೋಟಿಗಳಲ್ಲಿ)

| ವರ್ಷ | ಒಟ್ಟು ಹಂಚಿಕೆ | ವರ್ಗ 'ಎ' ಒಟ್ಟು ಹಂಚಿಕೆ | ವರ್ಗ 'ಬಿ' ಒಟ್ಟು ಹಂಚಿಕೆ | ವರ್ಗ 'ಬಿ' ಹಂಚಿಕೆಯ ಶೇಕಡ 30 | ಒಟ್ಟು ಹಂಚಿಕೆಗೆ ವರ್ಗ 'ಎ' ಶೇಕಡಾವಾರು | ಒಟ್ಟು ಹಂಚಿಕೆಗೆ ವರ್ಗ 'ಬಿ' (ಶೇಕಡ 30) ಶೇಕಡಾವಾರು |
|---|---|---|---|---|---|---|
| 2016–17 | 1,72,097.16 | 5,047.45 | 61,066.96 | 18,320.09 | 2.93 | 10.64 |
| 2017–18 | 1,94,917.19 | 5,901.83 | 82,156.54 | 24,646.96 | 3.03 | 12.64 |
| 2018–19 | 2,24,110.77 | 6,049.41 | 95,975.37 | 28,792.61 | 2.70 | 12.85 |
| 2019–20 | 2,40,745.86 | 5,100.95 | 1,20,868.97 | 36,260.69 | 2.12 | 15.06 |
| 2020–21 | 2,44,733.57 | 4,732.34 | 1,10,170.20 | 33,051.06 | 1.93 | 13.50 |

*ಆಕರ: ಮಹಿಳಾ ಉದ್ದೇಶಿತ ಆಯವ್ಯಯ*

ಒಟ್ಟು ಹಂಚಿಕೆಗೆ ವರ್ಗ 'ಎ' ಹಂಚಿಕೆಯ ಶೇಕಡಾವಾರು, 2017–18ರ ಅವಧಿಯನ್ನು ಹೊರತುಪಡಿಸಿ ಬೇರೆ ಅವಧಿಯಲ್ಲಿ ಇಳಿಕೆ ಪ್ರವೃತ್ತಿಯನ್ನು ತೋರಿಸಿರುವುದು ಮೇಲಿನ ಕೋಷ್ಟಕದಿಂದ ಗಮನಿಸಬಹುದು.

## 3.4 ಮಕ್ಕಳ ಆಯವ್ಯಯ

### *3.4.1 ಪೀಠಿಕೆ*

ಮಕ್ಕಳ ಆಯವ್ಯಯ ವಿವರಣಾ ಪಟ್ಟಿಯು ಕರ್ನಾಟಕ ಸರ್ಕಾರದ ವಾರ್ಷಿಕ ಆಯವ್ಯಯದಲ್ಲಿ ಮಕ್ಕಳ ಮೇಲಿನ (0–18 ವರ್ಷಗಳು) ಹಂಚಿಕೆಗಳು ಮತ್ತು ವೆಚ್ಚಗಳನ್ನು ಗುರುತಿಸಲು ಮತ್ತು ವರ್ಗೀಕರಿಸಲು ನೀತಿ ಸಾಧನವಾಗಿದೆ. ಈ ಪಟ್ಟಿಯು ರಾಜ್ಯದ ವಿವಿಧ ಇಲಾಖೆಗಳಲ್ಲಿನ ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಎಷ್ಟು ಆಯವ್ಯಯ ಸಂಪನ್ಮೂಲವನ್ನು ನಿಗದಿಪಡಿಸಲಾಗಿದೆ ಮತ್ತು ವೆಚ್ಚ ಮಾಡಲಾಗಿದೆ ಎಂಬ ಮಾಹಿತಿಯನ್ನು ನೀಡುತ್ತದೆ.

2020–21ರ ಹಣಕಾಸು ವರ್ಷದಿಂದ ಮಕ್ಕಳ ಆಯವ್ಯಯವನ್ನು ಕರ್ನಾಟಕ ಸರ್ಕಾರವು ಸಿದ್ಧ ಪಡಿಸಲು (ಆಗಸ್ಟ್ 2019) ನಿರ್ಧರಿಸಿದೆ. ಒಟ್ಟಾರೆ ಆಯವ್ಯಯ ಸಂಪನ್ಮೂಲಗಳಲ್ಲಿ ರಾಜ್ಯವು ಮಕ್ಕಳ ಸೌಲಭ್ಯಗಳಿಗೆ ನೀಡುವ ಕಾರ್ಯಕ್ರಮಗಳು, ಯೋಜನೆಗಳಿಗೆ ಮಾಡಿದ ಹಂಚಿಕೆ ಮತ್ತು ವೆಚ್ಚವನ್ನು ವಿಶ್ಲೇಷಿಸುವ ಗುರಿಯನ್ನು ಹೊಂದಿದೆ.

### *3.4.2 ಮಕ್ಕಳ ಆಯವ್ಯಯದ ಉದ್ದೇಶಗಳು*

ಮಕ್ಕಳ ಆಯವ್ಯಯದ ತಯಾರಿಕೆಯ ಪ್ರಧಾನ ಉದ್ದೇಶವು ಕೆಳಗಿನ ಅಂಶಗಳನ್ನು ವಿಶ್ಲೇಷಿಸುವುದು.

(i) ಆರ್ಥಿಕ ವರ್ಷದಲ್ಲಿ ಮಕ್ಕಳಿಗೆ ಪ್ರಯೋಜನವಾಗುವ ಕಾರ್ಯಕ್ರಮ, ಯೋಜನೆಗಳೆಗೆ ರಾಜ್ಯ ಸರ್ಕಾರದ ಸಂಪನ್ಮೂಲಗಳ ಒಟ್ಟಾರೆ ಹಂಚಿಕೆ ಮತ್ತು ವೆಚ್ಚ;

(ii) ಹಿಂದಿನ ಹಣಕಾಸು ವರ್ಷಗಳಲ್ಲಿ ಇದೇ ರೀತಿಯ ಕಾರ್ಯಕ್ರಮ, ಯೋಜನೆಗಳ ಮೇಲಿನ ವೆಚ್ಚಗಳಿಗೆ ಹೋಲಿಸಿದರೆ ಪ್ರಸಕ್ತ ವರ್ಷದ ಹಂಚಿಕೆಗಳಲ್ಲಿನ ಸುಧಾರಣೆಗಳು.

ಒಟ್ಟಾರೆ ವೆಚ್ಚ ಆಯವ್ಯದಲ್ಲಿ ಮಕ್ಕಳ ಕೇಂದ್ರಿತ ಆಯವ್ಯಯಕ್ಕೆ ಹಂಚಿಕೆ, ವೆಚ್ಚ ಹಾಗೂ ಕರ್ನಾಟಕ ಸರ್ಕಾರದ ವಿತ್ತೀಯ ನೀತಿಯನ್ನು ಪ್ರಧಾನವಾಗಿ ಹೇಳಲು ಉಪಯುಕ್ತವಾಗಿದೆ. ರಾಜ್ಯದ ಆಯವ್ಯಯದ ಚೌಕಟ್ಟಿನೊಳಗೆ ಮಕ್ಕಳಿಗಾಗಿ ಕಾರ್ಯಕ್ರಮ/ಯೋಜನೆಗಳನ್ನು ವಿನ್ಯಾಸಗೊಳಿಸಲು, ಅನುಷ್ಠಾನಗೊಳಿಸಲು ಮತ್ತು ಮೇಲ್ವಿಚಾರಣೆ ಮಾಡಲು ಸಂಬಂಧಿಸಿದ ಇಲಾಖೆಗಳಿಗೆ ಇದು ಉಪಯುಕ್ತವಾಗಿದೆ.

### *3.4.3 ಮಕ್ಕಳ ಕೇಂದ್ರಿತ ಮತ್ತು ಕೇಂದ್ರಿತವಲ್ಲದ ಕಾರ್ಯಕ್ರಮಗಳ ಗುರುತಿಸುವಿಕೆ ಮತ್ತು ವರ್ಗೀಕರಣ*

ಮಕ್ಕಳ ಕೇಂದ್ರಿತ ಮತ್ತು ಮಕ್ಕಳ ಕೇಂದ್ರಿತವಲ್ಲದ ಕಾರ್ಯಕ್ರಮಗಳನ್ನು ನಾಲ್ಕು ವರ್ಗಗಳ ಅಡಿಯಲ್ಲಿ ಗುರುತಿಸಲಾಗಿದೆ ಮತ್ತು ವರ್ಗೀಕರಿಸಲಾಗಿದೆ (i) 100 ಪ್ರತಿಶತ ಮಕ್ಕಳ ಕೇಂದ್ರಿತ ಕಾರ್ಯಕ್ರಮ (ii) 100 ಪ್ರತಿಶತ ಮಕ್ಕಳ ಕೇಂದ್ರಿತವಲ್ಲದ ಕಾರ್ಯಕ್ರಮ (iii) 100 ಪ್ರತಿಶತಕ್ಕಿಂತ ಕಡಿಮೆ ಮಕ್ಕಳ ಕೇಂದ್ರಿತ ಕಾರ್ಯಕ್ರಮ ಮತ್ತು (iv) 100 ಪ್ರತಿಶತಕ್ಕಿಂತ ಕಡಿಮೆ ಮಕ್ಕಳ ಕೇಂದ್ರಿತವಲ್ಲದ ಕಾರ್ಯಕ್ರಮ

ಈ ಗುರುತಿಸುವಿಕೆ ಮತ್ತು ವರ್ಗೀಕರಣಕ್ಕೆ ಬಳಸಲಾದ ಮಾನದಂಡಗಳನ್ನು **ಕೋಷ್ಟಕ 3.2**ರಲ್ಲಿ ನೀಡಲಾಗಿದೆ.

**ಕೋಷ್ಟಕ–3.2: ಮಕ್ಕಳ ಕೇಂದ್ರಿತ ಕಾರ್ಯಕ್ರಮ/ಯೋಜನೆಗಳ ಗುರುತಿಸುವಿಕೆ ಮತ್ತು ವರ್ಗೀಕರಣದ ಮಾನದಂಡ**

| ಗುರುತಿಸುವಿಕೆ | ವರ್ಗೀಕರಣ | ಮಾನದಂಡ |
|---|---|---|
| **100 ಪ್ರತಿಶತ ಮಕ್ಕಳ ಕೇಂದ್ರಿತ ಕಾರ್ಯಕ್ರಮ/ ಯೋಜನೆ** | 100 ಪ್ರತಿಶತ ಮಕ್ಕಳ ಕೇಂದ್ರಿತ ಕಾರ್ಯಕ್ರಮ /ಯೋಜನೆ | ಮಕ್ಕಳಿಗೆ ಅನುಕೂಲವಾಗುವಂತೆ ವಿಶೇಷವಾಗಿ ವಿನ್ಯಾಸಗೊಳಿಸಿದ, ಗುರಿಪಡಿಸಿದ ಅಥವಾ ಉದ್ದೇಶಿಸಿರುವ ಕಾರ್ಯಕ್ರಮ/ಯೋಜನೆಗಳು |
| | 100 ಪ್ರತಿಶತಕ್ಕಿಂತ ಕಡಿಮೆ ಮಕ್ಕಳ ಕೇಂದ್ರಿತ ಕಾರ್ಯಕ್ರಮ/ಯೋಜನೆ | ವಿನ್ಯಾಸ, ಗುರಿ ಅಥವಾ ಉದ್ದೇಶದಿಂದ ಮಕ್ಕಳು ಮತ್ತು ಇತರ ಫಲಾನುಭವಿಗಳನ್ನು ಒಳಗೊಂಡಿರುವ ಕಾರ್ಯಕ್ರಮ/ ಯೋಜನೆಗಳು |

| ಗುರುತಿಸುವಿಕೆ | ವರ್ಗೀಕರಣ | ಮಾನದಂಡ |
|---|---|---|
| **100 ಪ್ರತಿಶತ ಮಕ್ಕಳ ಕೇಂದ್ರಿತವಲ್ಲದ ಕಾರ್ಯಕ್ರಮ/ಯೋಜನೆ** | 100 ಪ್ರತಿಶತ ಮಕ್ಕಳ ಕೇಂದ್ರಿತ ಕಾರ್ಯಕ್ರಮ /ಯೋಜನೆ | ಮಕ್ಕಳ ಫಲಾನುಭವಿಗಳಿಗಾಗಿ ಪ್ರತ್ಯೇಕವಾಗಿ ವಿನ್ಯಾಸಗೊಳಿಸಲಾದ, ಗುರಿಪಡಿಸಿದ ಅಥವಾ ಉದ್ದೇಶಿಸಲಾದ ಕಾರ್ಯಕ್ರಮವಲ್ಲದ ಯೋಜನೆಗಳು |
| | 100 ಪ್ರತಿಶತಕ್ಕಿಂತ ಕಡಿಮೆ ಮಕ್ಕಳ ಕೇಂದ್ರಿತ ಕಾರ್ಯಕ್ರಮ/ಯೋಜನೆ | ವಿನ್ಯಾಸ, ಗುರಿ ಅಥವಾ ಉದ್ದೇಶದಿಂದ ಮಕ್ಕಳು ಮತ್ತು ಇತರ ಫಲಾನುಭವಿಗಳನ್ನು ಒಳಗೊಂಡಿರುವ ಕಾರ್ಯಕ್ರಮವಲ್ಲದ/ ಯೋಜನೆಗಳು |

*ಟಿಪ್ಪಣಿ: (i)ಮಕ್ಕಳ ಕೇಂದ್ರಿತವಲ್ಲದ ಕಾರ್ಯಕ್ರಮ/ಯೋಜನೆಗೆ ಆಯವ್ಯಯ ಹಂಚಿಕೆ ಮತ್ತು ವೆಚ್ಚವು ಮಕ್ಕಳಿಗೆ ಪ್ರಯೋಜನವಾಗುವ ಸಾಂಸ್ಥಿಕ ಸ್ಥಾಪನೆಗಳು, ಆಡಳಿತ ಭಾಗಗಳು, ಮೂಲಸೌಕರ್ಯ ಸೌಲಭ್ಯಗಳು ಮತ್ತು ಆಡಳಿತಾತ್ಮಕ ಬೆಂಬಲವನ್ನು ಒಳಗೊಂಡ ಯೋಜನೆಗಳು.*

*(ii) ಶೇಕಡ 100ರಷ್ಟು ಕೇಂದ್ರಿತ ಕಾರ್ಯಕ್ರಮದ ಫಲಾನುಭವಿಗಳಲ್ಲಿ ಗರ್ಭಿಣಿ ಅಥವಾ ನಿರೀಕ್ಷಿತ ತಾಯಂದಿರು ಮತ್ತು ಹಾಲುಣಿಸುವ ತಾಯಂದಿರು ಸೇರಿದ್ದಾರೆ.*

2020–21ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರವು ಮಕ್ಕಳ ಕೇಂದ್ರಿತ ಕಾರ್ಯಕ್ರಮ/ಯೋಜನೆಗಳಿಗೆ ಒಟ್ಟು ಆಯವ್ಯಯದ ₹2,44,733.57 ಕೋಟಿಯಲ್ಲಿ ₹51,084.28 ಕೋಟಿ (ಶೇಕಡ 21) ಮೀಸಲಿಟ್ಟಿದೆ. ಹಂಚಿಕೆಯ ಶೇಕಡವಾರು ಮತ್ತು ವಿವಿಧ ವರ್ಗಗಳಿಗೆ ಮಾಡಿದ ವೆಚ್ಚವನ್ನು **ಕೋಷ್ಟಕ 3.3**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 3.3: ಮಕ್ಕಳ ಕೇಂದ್ರಿತ ಕಾರ್ಯಕ್ರಮ/ಯೋಜನೆಗಳ ಅಡಿಯಲ್ಲಿ ಹಂಚಿಕೆಯ ವಿವರಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ವರ್ಗೀಕರಣ | 2020–21ರಲ್ಲಿ ಹಂಚಿಕೆ | ವೆಚ್ಚ | ಉಳಿತಾಯ (ಶೇಕಡ) |
|---|---|---|---|---|
| 1 | 100 ಪ್ರತಿಶತ ಮಕ್ಕಳ ಕೇಂದ್ರಿತ ಕಾರ್ಯಕ್ರಮ | 11,881.94 | 10,321.61 | 1,560.33(13) |
| 2 | 100 ಪ್ರತಿಶತಕ್ಕಿಂತ ಕಡಿಮೆ ಮಕ್ಕಳ ಕೇಂದ್ರಿತ ಕಾರ್ಯಕ್ರಮ | 18,892.79 | 16,950.08 | 1,942.71(10) |
| 3 | 100 ಪ್ರತಿಶತ ಮಕ್ಕಳ ಕೇಂದ್ರಿತವಲ್ಲದ ಕಾರ್ಯಕ್ರಮ | 15,421.42 | 13,869.29 | 1,552.13(10) |
| 4 | 100 ಪ್ರತಿಶತಕ್ಕಿಂತ ಕಡಿಮೆ ಮಕ್ಕಳ ಕೇಂದ್ರಿತವಲ್ಲದ ಕಾರ್ಯಕ್ರಮ | 4,888.13 | 4,418.79 | 469.34(10) |
| ಒಟ್ಟು | | **51,084.28** | **45,559.77** | **5,524.51(11)** |

*ಆಕರ: ಅನುದಾನ ವಹಿಗಳು*

ಕೋಷ್ಟಕದಿಂದ ನೋಡಿದಂತೆ, ಮಕ್ಕಳ ಕೇಂದ್ರಿತ ಕಾರ್ಯಕ್ರಮದ ಅಡಿಯಲ್ಲಿ ಎಲ್ಲಾ ವಿಭಾಗಗಳಲ್ಲಿ ಹಂಚಿಕೆಯ ಶೇಕಡ 11ರಷ್ಟು ಬಳಕೆಯಾಗದೆ ಉಳಿದಿದೆ.

2020–21ರಲ್ಲಿ ವರ್ಗಾವಾರು/ಇಲಾಖಾರು ಆಯವ್ಯಯ ಹಂಚಿಕೆ ಮತ್ತು ವೆಚ್ಚವನ್ನು **ಅನುಬಂಧ–3.1**ರಲ್ಲಿ ತೋರಿಸಲಾಗಿದೆ.

## 3.5 ಆಯವ್ಯಯದಲ್ಲಿನ ಪ್ರಮುಖ ನೀತಿ ಘೋಷಣೆಗಳು ಮತ್ತು ಅವುಗಳ ಅನುಷ್ಠಾನವನ್ನು ಖಾತ್ರಿಪಡಿಸಿಕೊಳ್ಳಲು ವಾಸ್ತವ ಹಣ ಬಿಡುಗಡೆ

2020–21ರ (ಮಾರ್ಚ್ 2020) ಆಯವ್ಯಯದಲ್ಲಿ ಸರ್ಕಾರವು ಪ್ರಮುಖ ನೀತಿ ಉಪಕ್ರಮಗಳನ್ನು ಘೋಷಿಸಿತು. 2021–22 ಆಯವ್ಯಯ ದಾಖಲೆಗಳ ಜೊತೆಗೆ ಕ್ರಮ ತೆಗೆದುಕೊಂಡ ವರದಿಯನ್ನು ಹೊರತರಲಾಯಿತು.

ಒಟ್ಟಾರೆಯಾಗಿ, ರಾಜ್ಯ ಸರ್ಕಾರವು ಕೃಷಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಗಳಿಗೆ ಸಂಬಂಧಿಸಿದಂತೆ 26 ಹೊಸ ನೀತಿಗಳನ್ನು ಉಪಕ್ರಮಿಸಿತು. ಲೆಕ್ಕಪರಿಶೋಧನೆಯು 17 ಉಪಕ್ರಮಗಳಿಗೆ ಸಂಬಂಧಿಸಿದಂತೆ ಸರ್ಕಾರವು ಕೈಗೊಂಡ ಕ್ರಮಗಳ ಕುರಿತ ಅಧ್ಯಯನವನ್ನು ಕೈಗೊಂಡಿತು. ಪ್ರಮುಖ ನೀತಿಗಳಿಗೆ ಸಂಬಂಧಿಸಿದಂತೆ ಸರ್ಕಾರವು ಪ್ರಾರಂಭಿಸಿದ ಕ್ರಮವನ್ನು **ಅನುಬಂಧ 3.2**ರಲ್ಲಿ ಸಂಕ್ಷೇಪಿಸಲಾಗಿದೆ.

17 ಉಪಕ್ರಮಗಳಲ್ಲಿ, ಐದು ಉಪಕ್ರಮಗಳಿಗೆ ಸಂಬಂಧಿಸಿದಂತೆ ಕ್ರಮವು ಇನ್ನೂ ಪ್ರಾಥಮಿಕ ಹಂತದಲ್ಲಿದೆ. ಮುಂದಿನ ಆರ್ಥಿಕ ವರ್ಷದಿಂದ ಒಂದು ಉಪಕ್ರಮವನ್ನು ಜಾರಿಗೆ ತರಲು ಪ್ರಸ್ತಾಪಿಸಲಾಗಿದೆ ಹಾಗೂ ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ಮೂರು ಉಪಕ್ರಮಗಳಿಗೆ ಸಂಬಂಧಿಸಿದಂತೆ ಕ್ರಮವನ್ನು ತೆಗೆದುಕೊಳ್ಳಲಾಗಿಲ್ಲ. ಮೂರು ಉಪಕ್ರಮಗಳಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ ಮತ್ತು 2020-21ರಲ್ಲಿ ಐದು ಉಪಕ್ರಮಗಳನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಲಾಗಿದೆ.

ಆದರೆ ಇನ್ನೂ ಆರಂಭಿಕ ಹಂತದಲ್ಲಿರುವ ಮಹತ್ವ/ಗಣನೀಯತೆಯ ಆಧಾರದ ಮೇಲೆ ಕಾರ್ಯಗತ ಗೊಳಿಸಬಹುದಾಗಿದ್ದ ಕೆಲವು ಉಪಕ್ರಮಗಳನ್ನು **ಕೋಷ್ಟಕ 3.4**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ 3.4: ಇನ್ನೂ ಕ್ರಮ ತೆಗೆದುಕೊಳ್ಳಬೇಕಾದ ಪ್ರಮುಖ ಉಪಕ್ರಮಗಳು**

| ಕ್ರಮ ಸಂಖ್ಯೆ | ಆಯವ್ಯಯ ಭರವಸೆ | ತೆಗೆದುಕೊಂಡ ಕ್ರಮ |
|---|---|---|
| | ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ | |
| **1** | ಪದವಿ ಪೂರ್ವ ಕಾಲೇಜುಗಳಲ್ಲಿ ಅಭ್ಯಾಸ ಮಾಡುತ್ತಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗುರುತಿಸಿ ಉತ್ತೇಜಿಸುವ ವಿಜ್ಞಾನ ಮತ್ತು ಪ್ರತಿಭಾಶೋಧನೆ ಕಾರ್ಯಕ್ರಮವನ್ನು ಆರಂಭಿಸುವುದು. ಸುಮಾರು 500 ವಿದ್ಯಾರ್ಥಿಗಳನ್ನು ಆಯ್ಕೆಮಾಡಿ ಪ್ರಮುಖ ವಿಜ್ಞಾನ ವಿದ್ಯಾಸಂಸ್ಥೆಗಳಲ್ಲಿ ಅವರನ್ನು ತರಬೇತುಗೊಳಿಸಲಾಗುವುದು. ಆಯ್ಕೆಯಾದ ವಿದ್ಯಾರ್ಥಿಗಳಿಗೆ ₹1000 ಮಾಸಿಕ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು | 2020-21ರಲ್ಲಿ ಪದವಿಪೂರ್ವ ಮಂಡಳಿಯಿಂದ ಪ್ರತಿ ವಿದ್ಯಾಸಂಸ್ಥೆಯ ಮೊದಲ 20 ಸ್ಥಾನ ಪಡೆದ ವಿದ್ಯಾರ್ಥಿಗಳ ಆಯ್ಕೆ ಪಟ್ಟಿಯನ್ನು ಸ್ವೀಕರಿಸುವುದರಲ್ಲಿ ಆದ ವಿಳಂಬದಿಂದಾಗಿ ಕಾರ್ಯಕ್ರಮವನ್ನು ಅನುಷ್ಠಾನ ಗೊಳಿಸಲಾಗಲಿಲ್ಲ. ಇದನ್ನು ಅಕ್ಟೋಬರ್ 2021 ರಿಂದ ಮಾರ್ಚ್ 2022ರ ಅವಧಿಯಲ್ಲಿ ಕೈಗೊಳ್ಳಲಾಗುವುದು ಎಂದು ತಿಳಿಸಿದೆ. |
| **2** | ಕರ್ನಾಟಕ ಬೆಳವಣಿಗೆಗೆ ವಿವಿಧ ವಲಯಗಳಲ್ಲಿರುವ ತಾಂತ್ರಿಕ ಸವಾಲುಗಳನ್ನು ಎದುರಿಸಲು ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್‌ಆಫ್ ಇಂಡಿಯಾ ಸಹಭಾಗಿತ್ವದೊಂದಿಗೆ ದಕ್ಷತಾ ವರ್ಧನೆ ಉತ್ಕೃಷ್ಟತಾ ಕೇಂದ್ರವನ್ನು ₹30 ಕೋಟಿಗಳ ವೆಚ್ಚದಲ್ಲಿ ಸ್ಥಾಪಿಸಲಾಗುವುದು. | ಕರ್ನಾಟಕ ಇನೋವೇಷನ್ ಅಂಡ್ ಟೆಕ್ನಾಲಜಿ ಸೊಸೈಟಿ, ಐಐಟಿ-ಬಿ ಮತ್ತು ವರ್ಲ್ಡ್ ಎಕನಾಮಿಕ್ ಫೋರಂ ನಡುವೆ 10.08.2021 ರಂದು ಎಂಒಎ ಸಹಿಯಾಗಿದ್ದು ನವೆಂಬರ್ 2020ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದ್ದು 2020-21ರಲ್ಲಿ ಹಣವನ್ನು ಒದಗಿಸದಿದ್ದುದರಿಂದ ಯೋಜನೆಯನ್ನು ಅನುಷ್ಠಾನ ಗೊಳಿಸಲಿಲ್ಲ. |
| **3** | ಎ1-ಅವಿಷ್ಕಾರ, ಎ1-ವಾಣಿಜ್ಯೀಕರಣ, ಪರಿಕ್ಷಾರ್ಥಕ ಪ್ರಾಯೋಜನಾ ಅನುಷ್ಠಾನರೊಂದಿಗೆ 5 ಜಿ ತಂತ್ರಜ್ಞಾನದ ಅಭಿವೃದ್ಧಿಗಾಗಿ ಒಂದು ಕೃತಕ ಬುದ್ಧಿ ಮತ್ತೆ ಸಂಶೋಧನಾ ಅನುವಾದ ಕೇಂದ್ರವನ್ನು ಭಾರತೀಯ ವಿಜ್ಞಾನ ಸಂಸ್ಥೆಯ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗುವುದು. ಈ ಉದ್ದೇಶಕ್ಕಾಗಿ ಮುಂದಿನ ಮೂರು ವರ್ಷಗಳಿಗಾಗಿ ₹ 60 ಕೋಟಿಗಳ ಇಡಿಗಂಟು ಅನುದಾನವನ್ನು ಒದಗಿಸಲಾಗುವುದು. | ನವಂಬರ್ 2020ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದ್ದರೂ, ಹಣವನ್ನು ಬಿಡುಗಡೆ ಮಾಡಿರಲಿಲ್ಲ. ಇದರಿಂದಾಗಿ 2020-21ರಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಿಲ್ಲ |
| **4** | ನೈತಿಕತೆಗೆ ಒತ್ತು ನೀಡುವ ಗುರಿಯಿಂದ ಸೂಕ್ತ ಪರ್ಯಾವರಣ ವ್ಯವಸ್ಥೆಯನ್ನು ಸೃಜಿಸಲು ವೇದಿಕೆಯನ್ನು ಕಲ್ಪಿಸವ ಸಲುವಾಗಿ ನಿ ವರ್ಲ್ಡ್ ಎಕನಾಮಿಕ್ ಫೋರಂ ಆಫ್ ಡೆವೋಸ್ ಸಹಯೋಗದಲ್ಲಿ | 2020-21ರಲ್ಲಿ ರಾಜ್ಯ ಸರ್ಕಾರವು ಯಾವುದೇ ಹಣವನ್ನು ಬಿಡುಗಡೆ ಮಾಡಿಲ್ಲ. ಇದರಿಂದ 2020-21ರಲ್ಲಿ ಈ ಯೋಜನೆಯು ಅನುಷ್ಠಾನಗೊಳ್ಳಲಿಲ್ಲ |

| ಕ್ರಮ ಸಂಖ್ಯೆ | ಆಯವ್ಯಯ ಭರವಸೆ | ತೆಗೆದುಕೊಂಡ ಕ್ರಮ |
|---|---|---|
| | ಆಸಕ್ತಿಯುಳ್ಳ ಮಧ್ಯವರ್ತಿಗಳನ್ನೂ ಒಳಗೊಂಡಂತೆ ನೈತಿಕ ವಿಷಯಗಳ ಅಂತರ್ಜಾಲದ ಉತ್ಕೃಷ್ಟತಾ ಕೇಂದ್ರ ಸ್ಥಾಪನೆಗಾಗಿ ರಾಜ್ಯ ಸರ್ಕಾರವು ಐದು ವರ್ಷಗಳಲ್ಲಿ ₹30 ಕೋಟಿಗಳ ಆರ್ಥಿಕ ಸಹಾಯವನ್ನು ಒದಗಿಸುವುದು. 2020-21ರಲ್ಲಿ ₹7.50 ಕೋಟಿಗಳ ಅನುದಾನವನ್ನು ಒದಗಿಸಲಾಗುವುದು. | |
| ಕೃಷಿ ಇಲಾಖೆ | | |
| 5 | ಜಲ ಸಂರಕ್ಷಣೆ, ಭೂ ಬ್ಯಾಂಕ್ ಮತ್ತು ಸಮೂಹ ಕೃಷಿ, ಸೂಕ್ಷ್ಮ ನೀರಾವರಿ, ಕೃಷಿ ಉತ್ಪನ್ನಗಳ ಸಂಸ್ಕರಣೆ, ಮಾರುಕಟ್ಟೆಯ ಪ್ರೋತ್ಸಾಹ ಅಲ್ಲದೆ ಕೃಷಿ ಮತ್ತು ತೋಟಗಾರಿಕೆಯನ್ನು ಒಂದು ಉದ್ದಿಮೆಯಾಗಿ ಪರಿಗಣಿಸಲು ಸರ್ಕಾರವು ಒಂದು ಹೊಸ ಕೃಷಿ ಕಾರ್ಯನೀತಿಯನ್ನು ರೂಪಿಸುವುದು. | ಹೊಸ ಕೃಷಿ ಕಾರ್ಯನೀತಿಯನ್ನು ರೂಪಿಸಲು ನವೆಂಬರ್ 2020ರಲ್ಲಿ ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದ್ದರೂ ಕರಡು ಕಾರ್ಯನೀತಿಯು ಇನ್ನೂ ಅಂತಿಮಗೊಂಡಿಲ್ಲ. |
| 6 | ಭೂ ಸಂಪನ್ಮೂಲ ಇಲಾಖೆಯ ಶಿಫಾರಸುಗಳು, ರೈತರು ಸೂಕ್ತ ಪ್ರಾದೇಶಿಕ ಬೆಳೆಗಳನ್ನು ಬೆಳೆಯಲು, ಅಗತ್ಯವಾದ ಬೀಜಗಳನ್ನು, ರಸ ಗೊಬ್ಬರಗಳನ್ನು, ಸೂಕ್ಷ್ಮ ಪೋಷಕಾಂಶಗಳನ್ನು ಬಳಸಲು, ನೀರು ಮತ್ತು ಸ್ವಸ್ಥ ಮಣ್ಣಿನ ಲಭ್ಯತೆಗಳನ್ನು ಆಧರಿಸಿ ರಾಜ್ಯ ಸರ್ಕಾರವು ಮಣ್ಣಿನ ಸ್ವಾಸ್ಥತೆಯ ಕಾರ್ಯಕ್ರಮ ನೀತಿಯನ್ನು ರೂಪಿಸುವುದು. | ಅಕ್ಟೋಬರ್ 2020ರಲ್ಲಿ ಉನ್ನತ ಮಟ್ಟದ ಸಮಿತಿಯು ರಚನೆಯಾಗಿ, ಅಂತಿಮಗೊಂಡ ಕೃಷಿ ಹೂಡುವಳಿ ನೀತಿಯನ್ನು 11.08.2021ರಂದು ಸಲ್ಲಿಸಿದ್ದರೂ ಮಂತ್ರಿ ಮಂಡಲದಿಂದ ಇನ್ನೂ ಅನುಮೋದನೆಯಾಗಿಲ್ಲ |

## 3.6 ಧನವಿನಿಯೋಗ ಲೆಕ್ಕಗಳು

ಧನವಿನಿಯೋಗ ಲೆಕ್ಕಗಳು ಭಾರತದ ಸಂವಿಧಾನದ 204 ಮತ್ತು 205ರ ಅಡಿಯಲ್ಲಿ ಅಂಗೀಕರಿಸಲಾದ ಧನವಿನಿಯೋಗ ಕಾಯಿದೆಯ ಅನುಸೂಚಿಗಳಲ್ಲಿ ನಿರ್ದಿಷ್ಟ ಪಡಿಸಿದಂತೆ ಪುರಸ್ಕೃತ ಅನುದಾನ ಪ್ರಭೃತ ವಿನಿಯೋಗಗಳಡಿ ಅವಕಾಶ ಕಲ್ಪಿಸಿದ ಮೊತ್ತಕ್ಕೆ ಹೋಲಿಸಿದಂತೆ ಪ್ರತಿ ಹಣಕಾಸು ವರ್ಷಕ್ಕೆ ಸರ್ಕಾರದ ವೆಚ್ಚದ ಲೆಕ್ಕಗಳಾಗಿವೆ. ಧನವಿನಿಯೋಗ ಲೆಕ್ಕಗಳು ಒಟ್ಟಾರೆ ವೆಚ್ಚದ ಆಧಾರದಲ್ಲಿವೆ. ಈ ಲೆಕ್ಕಗಳು ಮೂಲ ಆಯವ್ಯಯ ಅವಕಾಶಗಳು, ಪೂರಕ ಅಂದಾಜುಗಳು, ಅಧ್ಯರ್ಪಣೆಗಳು, ಪುನರ್‌ವಿನಿಯೋಗಗಳನ್ನು ಸ್ಪಷ್ಟವಾಗಿ ಚಿತ್ರಿಸುತ್ತದೆ ಮತ್ತು ಆಯವ್ಯಯದ ಪುರಸ್ಕೃತ ಮತ್ತು ಪ್ರಭೃತಗಳಡಿಯ ಎರಡೂ ಅಂಶಗಳಿಗೆ ಸಂಬಂಧಿಸಿದಂತೆ ವಿನಿಯೋಗ ಕಾಯಿದೆಯಿಂದ ಅಧಿಕೃತಗೊಳಿಸಲಾದ ವಿವಿಧ ನಿರ್ದಿಷ್ಟ ಪಡಿಸಿದ ಸೇವೆಗಳ ಮೇಲಿನ ನಿಜವಾದ ಬಂಡವಾಳ ಮತ್ತು ರಾಜಸ್ವದ ವೆಚ್ಚವನ್ನು ಸೂಚಿಸುತ್ತದೆ. ಧನವಿನಿಯೋಗ ಲೆಕ್ಕಗಳು ಹೀಗೆ ನಿಧಿಯ ಬಳಕೆ, ಹಣಕಾಸು ನಿರ್ವಹಣೆ ಮತ್ತು ಆಯವ್ಯಯ ಅವಕಾಶಗಳ ಮೇಲ್ವಿಚಾರಣೆಯನ್ನು ಅರ್ಥ ಮಾಡಿಕೊಳ್ಳಲು ಅನುಕೂಲವಾಗುತ್ತವೆ ಮತ್ತು ಅದರಿಂದ ಹಣಕಾಸು ಲೆಕ್ಕಗಳಿಗೆ[30] ಪೂರಕವಾಗಿವೆ.

### *3.6.1 2020-21ರಲ್ಲಿ ಒಟ್ಟು ಅವಕಾಶಗಳು, ವಾಸ್ತವ ವಿತರಣೆಗಳು ಮತ್ತು ಉಳಿತಾಯ/ಹೆಚ್ಚಳಗಳ ಸಾರಾಂಶ*

2020-21ರಲ್ಲಿ ಪೂರಕ ಅಂದಾಜುಗಳೂ ಸೇರಿದಂತೆ ಆಯವ್ಯಯ ಅವಕಾಶದ ಒಟ್ಟು 29 ಅನುದಾನಗಳು/ ವಿನಿಯೋಗಗಳನ್ನು ರಾಜಸ್ವ/ಬಂಡವಾಳ ಮತ್ತು ಪುರಸ್ಕೃತ/ಪ್ರಭೃತಗಳಡಿಯ ವಾಸ್ತವಿಕ ಖರ್ಚು ಮತ್ತು ಉಳಿತಾಯ/ಹೆಚ್ಚಳಗಳು ಎಂದು ಮತ್ತಷ್ಟು ವಿಭಜಿಸಿ ಸಾರಾಂಶವನ್ನು **ಕೋಷ್ಟಕ 3.5**ರಲ್ಲಿ ನೀಡಲಾಗಿದೆ.

[30] ಹಣಕಾಸು ಲೆಕ್ಕಗಳು ಕರ್ನಾಟಕ ಸರ್ಕಾರದ ಪ್ರಸಕ್ತ ವರ್ಷದ ಹಣಕಾಸು ವ್ಯವಹಾರಗಳ ಸ್ಥೂಲ ನೋಟವನ್ನು ಒದಗಿಸುತ್ತದೆ. ಇದನ್ನು ಈ ವರದಿಯ ಅಧ್ಯಾಯ 1 ಮತ್ತು 2 ರಲ್ಲಿ ಚರ್ಚಿಸಲಾಗಿದೆ.

**ಕೋಷ್ಟಕ 3.5: ಮೂಲ/ಪೂರಕ ಅವಕಾಶಗಳಿಗೆ ಪ್ರತಿಯಾಗಿ ವಾಸ್ತವಿಕ ವೆಚ್ಚದ ಸಾರಾಂಶ**

(₹ ಕೋಟಿಗಳಲ್ಲಿ)

| ವೆಚ್ಚದ ಸ್ವರೂಪ | | ಮೂಲ ಅನುದಾನ/ ವಿನಿಯೋಗ | ಪೂರಕ ಅನುದಾನ/ ವಿನಿಯೋಗ | ಒಟ್ಟು | ವಾಸ್ತವ ವೆಚ್ಚ | ಬಳಕೆ ಮಾಡದ ಅವಕಾಶ (–) / ಅವಕಾಶಕ್ಕಿಂತ ಅಧಿಕ (+) | ಅಧ್ಯರ್ಪಿಸಿದ ಮೊತ್ತ | 31 ಮಾರ್ಚ್ ರಂದು ಅಧ್ಯರ್ಪಿಸಿದ ಮೊತ್ತ | 31 ಮಾರ್ಚ್ ರಂದು ಅಧ್ಯರ್ಪಿಸಿದ ಉಳಿತಾಯದ ಶೇಕಡವಾರು |
|---|---|---|---|---|---|---|---|---|---|
| ಪುರಸ್ಕೃತ | I ರಾಜಸ್ವ | 1,57,427.29 | 11,612.15 | 1,69,039.44 | 1,54,669.11 | (–)14,370.33 | 3,208.65 | 3,208.65 | 100 |
| | II ಬಂಡವಾಳ | 42,564.01 | 7,714.37 | 50,278.38 | 44,691.99 | (–)5,586.39 | 281.01 | 281.01 | 100 |
| | III ಸಾಲಗಳು ಮತ್ತು ಮುಂಗಡಗಳು | 4,847.26 | 590.48 | 5,437.74 | 4,063.95 | (–)1,373.79 | 2.33 | 2.33 | 100 |
| ಒಟ್ಟು ಪುರಸ್ಕೃತ | | **2,04,838.56** | **19,917.00** | **2,24,755.56** | **2,03,425.05** | **(–)21,330.51** | **3,491.99** | **3,491.99** | **100** |
| ಪ್ರಭೃತ | IV ರಾಜಸ್ವ | *25,646.09* | *483.50* | *26,129.59* | *25,477.96* | *(–)651.63* | *361.85* | *361.85* | *100* |
| | V ಸಾರ್ವಜನಿಕ ಋಣ ಪಾವತಿ | *11,605.28* | *0.00* | *11,605.28* | *11,015.81* | *(–)589.47* | *589.34* | *589.34* | *100* |
| | VI ಬಂಡವಾಳ | *2,643.64* | *86.66* | *2,730.30* | *2,775.67* | *(+)45.37* | *0.00* | *0.00* | *100* |
| ಒಟ್ಟು ಪ್ರಭೃತ | | ***39,895.01*** | ***570.16*** | ***40,465.17*** | ***39,269.44*** | ***(–)1,195.73*** | ***951.19*** | ***951.19*** | ***100*** |
| ಒಟ್ಟು ಮೊತ್ತ | | **2,44,733.57** | **20,487.16** | **2,65,220.73** | **2,42,694.49** | **(–)22,526.24** | **4,443.18** | **4,443.18** | **100** |

*ಆಧಾರ: ಧನವಿನಿಯೋಗ ಲೆಕ್ಕಗಳು*

2020–21ನೇ ಸಾಲಿನಲ್ಲಿ ₹2,65,220.73 ಕೋಟಿಗಳ ಅವಕಾಶದಲ್ಲಿ ₹2,42,694.49 ಕೋಟಿ ವೆಚ್ಚಗಳನ್ನು ಮಾಡಲಾಗಿದೆ. 29 ಅನುದಾನ/ವಿನಿಯೋಗಗಳ ಅಡಿಯಲ್ಲಿ ಒಟ್ಟಾರೆ ಉಳಿಕೆಯಾದ ಒಟ್ಟು ₹22,110.34 ಕೋಟಿಗಳು ಬೇಡಿಕೆ ಸಂಖ್ಯೆ 14 – ಕಂದಾಯ ಮತ್ತು ಬೇಡಿಕೆ ಸಂಖ್ಯೆ 24 – ಇಂಧನಗಳಡಿಯ ಪುರಸ್ಕೃತ/ ಪ್ರಭೃತ ವಿಭಾಗಗಳ ರಾಜಸ್ವ ಮತ್ತು ಬಂಡವಾಳ ವಿಭಾಗಗಳಲ್ಲಿ ಅಧಿಕ ವೆಚ್ಚವಾದ ₹415.90 ಕೋಟಿಗಳ ಮೊತ್ತದಿಂದ ಪ್ರತಿತೋಲನವಾಗಿದೆ.

### *3.6.2 ಪುರಸ್ಕೃತ ಮತ್ತು ಪ್ರಭೃತ ವಿತರಣೆಗಳು*

2016–17ರಿಂದ 2020–21ರ ವರೆಗಿನ ಅನುದಾನ ಮತ್ತು ವಿನಿಯೋಗಳ ವಿತರಣೆಗಳ ಸ್ಥಿತಿಯ ಸಾರಾಂಶವನ್ನು **ಕೋಷ್ಟಕ 3.6**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 3.6: 2016–17ರಿಂದ 2020–21ರ ಅವಧಿಯ ಪುರಸ್ಕೃತ ಮತ್ತು ಪ್ರಭೃತ ವಿತರಣೆಗಳು**

| ವರ್ಷ | ವಿತರಣೆಗಳು | | ಉಳಿತಾಯಗಳು (ಉಳಿತಾಯದ ಶೇಕಡಾವಾರು) | |
|---|---|---|---|---|
| | ಪುರಸ್ಕೃತ | *ಪ್ರಭೃತ* | ಪುರಸ್ಕೃತ | *ಪ್ರಭೃತ* |
| **2016–17** | 1,51,848.04 | *21,196.98* | 11,750.35(8) | *1,256.97(6)* |
| **2017–18** | 1,67,845.36 | *24,474.88* | 16,547.66(10) | *611.60(2)* |
| **2018–19** | 1,89,840.99 | *30,693.11* | 23,265.27(12) | *1,873.70(6)* |
| **2019–20** | 2,01,922.89 | *32,055.34* | 27,819.96(14) | *2,006.48(6)* |
| **2020–21** | 2,03,425.05 | *39,269.44* | 21,330.51(11) | *1,195.73(3)* |

*ಆಧಾರ: ಧನವಿನಿಯೋಗ ಲೆಕ್ಕಗಳು*

## 3.7 ಧನವಿನಿಯೋಗ ಲೆಕ್ಕಪರಿಶೋಧನೆ

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಧನವಿನಿಯೋಗದ ಲೆಕ್ಕಪರಿಶೋಧನೆಯು ವಿವಿಧ ಅನುದಾನಗಳ ಅಡಿಯಲ್ಲಿ ವಾಸ್ತವವಾಗಿ ಮಾಡಿದ ವೆಚ್ಚವು ಧನವಿನಿಯೋಗ ಕಾಯಿದೆಯ ಅಡಿಯಲ್ಲಿ ನೀಡಲಾದ ಅಧಿಕಾರಕ್ಕೆ ಅನುಗುಣವಾಗಿದೆಯೇ ಮತ್ತು ಸಂವಿಧಾನದ ನಿಬಂಧನೆಗಳ ಅಡಿಯಲ್ಲಿ ಪ್ರಭೃತ ಗೊಳಿಸಬೇಕಾದ ವೆಚ್ಚವನ್ನು (ಅನುಚ್ಛೇದ 202) ಪ್ರಭೃತಗೊಳಿಸಲಾಗಿದೆಯೇ ಎಂದು ಖಚಿತ ಪಡಿಸಿಕೊಳ್ಳುತ್ತದೆ ಮತ್ತು ಮಾಡಿದ ವೆಚ್ಚವು ಕಾನೂನುಗಳು, ಸಂಬಂಧಿತ ನಿಯಮಗಳು, ನಿಬಂಧನೆಗಳು ಮತ್ತು ಸೂಚನೆಗಳಿಗೆ ಅನುಗುಣವಾಗಿದೆಯೇ ಎಂಬುದನ್ನು ಸಹ ಇದು ಖಚಿತ ಪಡಿಸುತ್ತದೆ.

### *3.7.1 ಹಣಕಾಸು ಹೊಣೆಗಾರಿಕೆ ಮತ್ತು ಆಯವ್ಯಯ ಸಮೀಕ್ಷೆ*

#### 3.7.1.1 ಆಯವ್ಯಯದಲ್ಲಿನ ದೋಷಗಳು

**(ಎ) 2020–21ರ ಆಯವ್ಯಯದಲ್ಲಿ ಹಣವನ್ನು ಒದಗಿಸದಿರುವುದು**

2020–21ನೇ ಸಾಲಿನಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಗೆ ₹689.27 ಕೋಟಿ ಮೊತ್ತವನ್ನು ವರ್ಗಾಯಿಸಲಾಗಿದ್ದು, ಇದಕ್ಕಾಗಿ ಆಯವ್ಯಯದಲ್ಲಿ ಅವಕಾಶ ಕಲ್ಪಿಸದ ಕಾರಣ ₹689.27 ಕೋಟಿಗಳ ಹೆಚ್ಚುವರಿ ವೆಚ್ಚವಾಗಿದೆ.

**(ಬಿ) ಹೊಸ ಸೇವಾ ಮಾನದಂಡ**

ಸಂವಿಧಾನದ 205ನೇ ವಿಧಿಯನ್ವಯ ವಾರ್ಷಿಕ ಹಣಕಾಸು ವಿವರಣದಲ್ಲಿ (ಆಯವ್ಯಯ) ಪರಿಗಣಿಸದ 'ಹೊಸ ಸೇವೆ'ಯ ವೆಚ್ಚವನ್ನು ಶಾಸಕಾಂಗದ ನಿರ್ದಿಷ್ಟ ಅನುಮೋದನೆಯ ನಂತರವೇ ಭರಿಸಬಹುದಾಗಿದೆ. ಸಾರ್ವಜನಿಕ ಲೆಕ್ಕ ಸಮಿತಿಯ ನಾಲ್ಕನೇ ವರದಿಯಲ್ಲಿ (ಹದಿನಾಲ್ಕನೇ ವಿಧಾನಸಭೆ) ಶಿಫಾರಸುಗಳ ಆಧಾರದ ಮೇಲೆ ಸರ್ಕಾರವು ಆಗಸ್ಟ್ 2015ರಲ್ಲಿ ಆದೇಶಗಳನ್ನು ಹೊರಡಿಸಿ, 'ಹೊಸ ಸೇವೆ' ಮಾನದಂಡಗಳು ಅನ್ವಯವಾಗದ ವೆಚ್ಚದ ಕೆಲವು ಬಾಬುಗಳಿಗೆ ವಿನಾಯಿತಿ ನೀಡಿ ಮತ್ತು ವೆಚ್ಚವನ್ನು 'ಹೊಸ ಸೇವೆ' ಎಂದು ಪರಿಗಣಿಸಲು ಮಾನದಂಡಗಳನ್ನು ಸಹ ನಿಗದಿಪಡಿಸಿದೆ. 'ಹೊಸ ಸೇವೆ'ಯ ಪರಿಷ್ಕೃತ ಮಾನದಂಡವು 2015–16ನೇ ಹಣಕಾಸು ವರ್ಷದಿಂದ ಜಾರಿಗೆ ಬಂದಿದೆ. ಈ ಆದೇಶದ ಪ್ರಕಾರ, ಶಾಸಕಾಂಗವು ಈಗಾಗಲೇ ಒದಗಿಸಿದ ಮತ್ತು ಅನುಮೋದಿಸಿದ ಪ್ರಕರಣಗಳು ಆದರೆ ಆಯಾವ್ಯಯದಲ್ಲಿ ಮೂಲತಃ ಒದಗಿಸಿದ ಮೊತ್ತವು ತರುವಾಯ ಹೆಚ್ಚಬಹುದೆಂದು ನಿರೀಕ್ಷಿಸಲಾದ ಪ್ರಕರಣಗಳನ್ನು ವಾಸ್ತವ ಅವಕಾಶವನ್ನು ಮೀರಿದ ಅವಕಾಶದ ಎರಡರಷ್ಟು ಅಥವಾ ₹ ಐದು ಕೋಟಿ, ಇವುಗಳಲ್ಲಿ ಯಾವುದು ಹೆಚ್ಚು ಅದನ್ನು ಹೊರತುಪಡಿಸಿ 'ಹೊಸ ಸೇವೆ' ಎಂದು ಪರಿಗಣಿಸಲಾಗುವುದಿಲ್ಲ

2020–21ನೇ ಸಾಲಿನಲ್ಲಿ, ಅನುದಾನ ಸಂಖ್ಯೆ.14 ಕಂದಾಯ ಅಡಿಯ, ಲೆಕ್ಕ ಶೀರ್ಷಿಕೆ 4059–01–201–0–02–132 ಬಂಡವಾಳ ವೆಚ್ಚಗಳಡಿ, ₹5 ಕೋಟಿಗಳ ಅವಕಾಶವನ್ನು ಮಾಡಲಾಗಿದ್ದು, ಪ್ರತಿಯಾಗಿ ₹53.01 ಕೋಟಿ ವೆಚ್ಚವಾಗಿದ್ದು, ₹48.01 ಕೋಟಿಗಳ ಹೆಚ್ಚು ವೆಚ್ಚವನ್ನು ಉಂಟುಮಾಡಿದೆ, ಇದನ್ನು 'ಹೊಸ ಸೇವೆ' ಎಂದು ಪರಿಗಣಿಸಬೇಕು.

ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ (ಡಿಸೆಂಬರ್ 2021) ಸಾರ್ವಜನಿಕ ಲೆಕ್ಕ ಸಮಿತಿಯ ಶಿಫಾರಸಿನ ನಂತರ ಹೆಚ್ಚುವರಿ ವೆಚ್ಚವನ್ನು ಸಕ್ರಮಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದೆ.

### 3.7.2 ಆಯವ್ಯಯ ಮತ್ತು ಲೆಕ್ಕಪತ್ರ ಪ್ರಕ್ರಿಯೆಯ ಸಮಗ್ರತೆಯ ಕುರಿತು ವ್ಯಾಖ್ಯಾನಗಳು

#### 3.7.2.1 ಕಾರ್ಯನಿರ್ವಾಹಕ ಆದೇಶಗಳ ಮೂಲಕ ಹೆಚ್ಚುವರಿ ಮೊತ್ತವನ್ನು ಬಿಡುಗಡೆ ಮಾಡಿರುವುದು.

ಸಂವಿಧಾನದ ಅನುಚ್ಛೇದ 204 ಮತ್ತು 205 ರ ಅಡಿಯಲ್ಲಿ ಧನವಿನಿಯೋಗ ಕಾಯಿದೆಗಳನ್ನು ಶಾಸಕಾಂಗವು ಅಂಗೀಕರಿಸದ ಹೊರತು ಭಾರತದ ಸಂವಿಧಾನದ 266(3)ನೇ ವಿಧಿಯು ರಾಜ್ಯದ ಸಂಚಿತ ನಿಧಿಯಿಂದ ಹಣ ಸೆಳೆಯುವುದನ್ನು ನಿಷೇಧಿಸುತ್ತದೆ.

2020–21ರ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ, ಬಂಡವಾಳ/ರಾಜಸ್ವ ವಿಭಾಗದಡಿ (ಇದು ಕೇವಲ ಉದಾಹರಣೆಗಳು), (**ಅನುಬಂಧ 3.3**) 10 ಅನುದಾನಗಳಲ್ಲಿ ₹5,281.70 ಕೋಟಿಗಳನ್ನು 36 ಕಾರ್ಯನಿರ್ವಾಹಕ ಆದೇಶಗಳ ಮೂಲಕ ಬಿಡುಗಡೆ ಮಾಡಲಾಗಿದೆ, ನಂತರ ಅವುಗಳನ್ನು ಪೂರಕ ಅಂದಾಜುಗಳ ಮೂಲಕ ಕ್ರಮಬದ್ಧಗೊಳಿಸಲಾಯಿತು. ಈ ಹೆಚ್ಚುವರಿ ವೆಚ್ಚವು ಮುಖ್ಯವಾಗಿ ಸಾಮಾನ್ಯ ವೆಚ್ಚಗಳಾದ ಸಹಾಯಧನ, ಪರಿಶಿಷ್ಟ ಜಾತಿ ಉಪಯೋಜನೆ, ಗಿರಿಜನ ಉಪಯೋಜನೆ ಸುಧಾರಣೆಗಳು, ಬಂಡವಾಳ ವೆಚ್ಚಗಳು, ಗುತ್ತಿಗೆ/ ಹೊರಗುತ್ತಿಗೆ ಇತ್ಯಾದಿಗಳ ಮೇಲಿನ ವೆಚ್ಚಗಳು ಒಳಗೊಂಡಿರುವುದನ್ನು ಗಮನಿಸಲಾಗಿದ್ದು, ಇವು ತುರ್ತು/ಅನಿರೀಕ್ಷಿತ ವೆಚ್ಚಗಳಾಗಿರುವುದಿಲ್ಲ ಮತ್ತು ಪೂರಕ ಅಂದಾಜುಗಳ ಮಂಡನೆಯವರಿಗೆ ಕಾಯಬಹುದಾಗಿತ್ತು. ಸಾರ್ವಜನಿಕ ಲೆಕ್ಕ ಸಮಿತಿಯು ತನ್ನ ಐದನೇ ವರದಿಯಲ್ಲಿ (ಹದಿನಾಲ್ಕನೇ ವಿಧಾನಸಭೆ) ಕಾರ್ಯ ನಿರ್ವಾಹಕ ಸೂಚನೆಗಳ ಮೂಲಕ ಹೆಚ್ಚುವರಿ ಮಂಜೂರಾತಿಯನ್ನು ನೀಡುವ ಪ್ರಕರಣಗಳನ್ನು (ಜುಲೈ 2015) ಸೀಮಿತಗೊಳಿಬೇಕೆಂದು ಶಿಫಾರಸು ಮಾಡಿದೆ. ಆದಾಗ್ಯೂ, ಶಾಸಕಾಂಗದ ಅನುಮೋದನೆಯಿಲ್ಲದೆ ಮೊದಲು ವೆಚ್ಚ ಮಾಡುವುದನ್ನು ಮತ್ತು ನಂತರ ಪೂರಕ ಅಂದಾಜುಗಳಲ್ಲಿ ಅನುಮೋದನೆಯನ್ನು ಪಡೆಯುವುದು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸುಗಳ ಹೊರತಾಗಿಯೂ ಮುಂದುವರೆದಿದೆ ಎಂದು ಗಮನಿಸಲಾಗಿದೆ.

2018–19ರಿಂದ 2020–21ರ ಅವಧಿಯಲ್ಲಿ ಕಾರ್ಯಕಾರಿ ಆದೇಶಗಳ ಮೂಲಕ ಬಿಡುಗಡೆಯಾದ ಹೆಚ್ಚುವರಿ ಮೊತ್ತಗಳ ವಿವರಗಳನ್ನು **ಕೋಷ್ಟಕ 3.7**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–3.7: 2018–19ರಿಂದ 2020–21ರ ಅವಧಿಯಲ್ಲಿ ಕಾರ್ಯನಿರ್ವಾಹಕ ಆದೇಶಗಳ ಮೂಲಕ ಬಿಡುಗಡೆಯಾದ ಹೆಚ್ಚುವರಿ ಮೊತ್ತಗಳು**

**(₹ ಕೋಟಿಗಳಲ್ಲಿ)**

| ವರ್ಷ | ಒಟ್ಟು ಅನುದಾನಗಳಲ್ಲಿ ಒಳಗೊಂಡಿರುವುದು | ಪ್ರಕರಣಗಳ ಸಂಖ್ಯೆ | ಮೊತ್ತ |
|---|---|---|---|
| **2018–19** | 19 | 77 | 3,940.35 |
| **2019–20** | 19 | 78 | 3,518.84 |
| **2020–21** | 10 | 36 | 5,281.70 |

*ಆಕರ: ಧನವಿನಿಯೋಗ ಲೆಕ್ಕಗಳು*

ಕಾರ್ಯ ನಿರ್ವಾಹಕ ಆದೇಶಗಳ ಮೂಲಕ ಬಿಡುಗಡೆಯಾದ ಹೆಚ್ಚುವರಿ ಮೊತ್ತದ ಪ್ರಕರಣಗಳ ಸಂಖ್ಯೆಯು ಕಡಿಮೆಯಾಗುತ್ತಿರುವ ಪ್ರವೃತ್ತಿಯನ್ನು ತೋರಿಸಿದೆಯಾದರೂ, ಹಿಂದಿನ ವರ್ಷಕ್ಕೆ ಹೋಲಿಸಿದರೆ 2020–21ರಲ್ಲಿ ಈ ಆದೇಶಗಳು ಒಳಗೊಂಡಿರುವ ಮೊತ್ತವು ಹೆಚ್ಚಾಗಿದೆ. ಕಾರ್ಯ ನಿರ್ವಾಹಕ ಆದೇಶದ ಮೂಲಕ ಮೊತ್ತವನ್ನು ಸೆಳೆದ ನಂತರ ಶಾಸಕಾಂಗದ ಅನುಮೋದನೆಯನ್ನು ಪಡೆಯುವುದು ಒಳ್ಳೆಯ ಅಭ್ಯಾಸವಲ್ಲ.

ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ (ಡಿಸೆಂಬರ್ 2021) ಸಹಾಯಧನ, ಪರಿಶಿಷ್ಟ ಜಾತಿ ಉಪಯೋಜನೆ, ಗಿರಿಜನ ಉಪಯೋಜನೆ, ಸುಧಾರಣೆಗಳು ಮತ್ತು ಗುತ್ತಿಗೆ/ಹೊರಗುತ್ತಿಗೆ ಮೇಲಿನ ಹೆಚ್ಚುವರಿ ವೆಚ್ಚಗಳನ್ನು

ಪೂರಕ ಅಂದಾಜಿಗೆ ಅನುಮೋದನೆ ಪಡೆಯುವವರೆಗೆ ಮುಂದೂಡಲಾಗುವುದಿಲ್ಲವಾದ್ದರಿಂದ ಬಿಡುಗಡೆಯ ಆದೇಶಗಳನ್ನು ನೀಡಲಾಗಿದೆ ಎಂದು ಹೇಳಿದೆ.

ಮೇಲೆ ಸೂಚಿಸಿದ ವೆಚ್ಚಗಳು ತುರ್ತು ಪ್ರಕರಣಗಳ ಅಡಿಯಲ್ಲಿ ಬರುವುದಿಲ್ಲವಾದ್ದರಿಂದ ಇಲಾಖೆಯ ಉತ್ತರವು ಸ್ವೀಕಾರಾರ್ಹವಲ್ಲ.

### 3.7.2.2 ಬಂಡವಾಳ ವೆಚ್ಚವನ್ನು ರಾಜಸ್ವ ವೆಚ್ಚ ಮತ್ತು ವಿಪರ್ಯಯವಾಗಿ ತಪ್ಪು ವರ್ಗೀಕರಣ

ವಹಿವಾಟುಗಳನ್ನು ರಾಜಸ್ವ/ಬಂಡವಾಳಗಳ ನಡುವೆ ತಪ್ಪಾಗಿ ವರ್ಗೀಕರಿಸುವುದು ಸಂಬಂಧಿತ ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ವರ್ಗೀಕರಣ ನಿಯಮಗಳ ಅನ್ವಯದ ಕೊರತೆಯಿಂದ ಉಂಟಾಗುತ್ತದೆ. ರಾಜಸ್ವ ಮತ್ತು ಬಂಡವಾಳ ವೆಚ್ಚಗಳ ನಡುವಿನ ತಪ್ಪು ವರ್ಗೀಕರಣವು ರಾಜಸ್ವ ಲೆಕ್ಕ ಮತ್ತು ಹಣಕಾಸಿನ ಸೂಚಕವಾದ ರಾಜಸ್ವ ಹೆಚ್ಚಳ/ಕೊರತೆಯ ಮೇಲೆ ಪ್ರಭಾವ ಬೀರುತ್ತದೆ. 2020–21ನೇ ಸಾಲಿನಲ್ಲಿ ರಾಜಸ್ವ ವಿಭಾಗದ ಬದಲಿಗೆ ಲೆಕ್ಕಶೀರ್ಷಿಕೆ 5055–00–190–3–00–103–ಸಹಾಯಾನುದಾನ–ಸಾಮಾನ್ಯ ಅಡಿಯಲ್ಲಿ ₹100 ಕೋಟಿಯನ್ನು ಬಂಡವಾಳ ವಿಭಾಗದ ಅಡಿಯಲ್ಲಿ ತಪ್ಪಾಗಿ ವರ್ಗೀಕರಿಸಲಾಗಿದೆ. ಐಜಿಎಎಸ್–2ರ ಪ್ರಕಾರ, ಅನುದಾನ ನೀಡುವವರು ಅನುದಾನಿತರಿಗೆ ವಿತರಿಸಿದ ಅನುದಾನವನ್ನು ರಾಜಸ್ವ ಎಂದು ವರ್ಗೀಕರಿಸಬೇಕು ಮತ್ತು ಹಣವನ್ನು ವಿತರಿಸಿದ ಉದ್ದೇಶವನ್ನು ಪರಿಗಣಿಸದೆ ಅನುದಾನ ನೀಡುವವರ ಹಣಕಾಸು ವಿವರಣದಲ್ಲಿ ರಾಜಸ್ವ ವೆಚ್ಚ ಎಂದು ಲೆಕ್ಕ ಹಾಕಬೇಕಾಗುತ್ತದೆ. ಈ ತಪ್ಪು ವರ್ಗೀಕರಣವು ಬಂಡವಾಳದ ವೆಚ್ಚವನ್ನು ಅತಿಯಾಗಿ ಹೇಳುವಿಕೆಗೆ ಕಾರಣವಾಗಿ, ಹಣಕಾಸಿನ ಸೂಚಕವಾದ ರಾಜಸ್ವ ಕೊರತೆಯನ್ನು ವಿಪರ್ಯಾಸೆಗೊಳಿಸಿದೆ.

### 3.7.2.3 ರಾಜಸ್ವ ಸ್ವರೂಪದ ವೆಚ್ಚಕ್ಕಾಗಿ ಬಂಡವಾಳ ವಿಭಾಗದ ಅಡಿಯಲ್ಲಿ ನಿಧಿಯ ಬಳಕೆ

2020–21ನೇ ಸಾಲಿನಲ್ಲಿ, ರಾಜ್ಯ ಸರ್ಕಾರವು (ಜುಲೈ 2020) ನಾಲ್ಕು ಸಾರಿಗೆ ನಿಗಮಗಳ (ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ ಮತ್ತು ವಾಯವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಅಧಿಕಾರಿಗಳು/ ನೌಕರರ ವೇತನ ಪಾವತಿಗಾಗಿ ₹117.02 ಕೋಟಿಗಳನ್ನು, **ಕೋಷ್ಟಕ 3.8**ರಲ್ಲಿ ತೋರಿಸಿರುವಂತೆ ಕೆಲವು ಬಂಡವಾಳ ಲೆಕ್ಕಗಳ ಅಡಿಯಲ್ಲಿ ಬಿಡುಗಡೆ ಮಾಡಿದೆ.

**ಕೋಷ್ಟಕ 3.8–ಸಂಬಳ ಪಾವತಿಗಾಗಿ ಬಂಡವಾಳ ವಿಭಾಗದ ಅಡಿಯಲ್ಲಿ ಬಿಡುಗಡೆಯಾದ ನಿಧಿಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಆಯವ್ಯಯ ಅವಕಾಶ | ಭರಿಸಿದ ವೆಚ್ಚ | ಬಿಡುಗಡೆಯಾದ ಮೊತ್ತ |
|---|---|---|---|---|
| 1 | 5055–00–190–1–00–132–ಬಂಡವಾಳ ವೆಚ್ಚಗಳು | 14.61 | 14.61 | 14.61 |
| 2 | 5055–00–190–1–00–133 – ವಿಶೇಷ ಅಭಿವೃದ್ಧಿ ಯೋಜನೆ | 23.75 | 23.75 | 23.75 |
| 3 | 5055–00–102–3–01–132–ಬಂಡವಾಳ ವೆಚ್ಚಗಳು | 100.00 | 100.00 | 21.00 |
| 4 | 5055–00–190–2–00–132– ಬಂಡವಾಳ ವೆಚ್ಚಗಳು | 8.34 | 8.34 | 8.34 |
| 5 | 5055–00–190–2–00–133– ವಿಶೇಷ ಅಭಿವೃದ್ಧಿ ಯೋಜನೆ | 20.45 | 20.45 | 20.45 |
| 6 | 5055–00–190–4–00–132– ಬಂಡವಾಳ ವೆಚ್ಚಗಳು | 12.43 | 12.43 | 12.43 |
| 7 | 5055–00–190–4–00–133 – ವಿಶೇಷ ಅಭಿವೃದ್ಧಿ ಯೋಜನೆ | 16.44 | 16.44 | 16.44 |
| ಒಟ್ಟು | | **196.02** | **196.02** | **117.02** |

*ಆಕರ: ಅನುದಾನ ವಹಿ*

ಕೋವಿಡ್–19 ಸಾಂಕ್ರಾಮಿಕ ಹಿನ್ನೆಲೆಯಲ್ಲಿ ಸಾರಿಗೆ ವ್ಯವಸ್ಥೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸದ ಕಾರಣ ಈ ನಿಗಮಗಳು ಹಲವು ಸವಾಲುಗಳನ್ನು ಎದುರಿಸುತ್ತಿದ್ದು, ತೀವ್ರ ಆದಾಯ ಕೊರತೆಯನ್ನು

ಎದುರಿಸುತ್ತಿದ್ದು, ವೇತನ ಪಾವತಿಗೆ ಹಣ ಬಿಡುಗಡೆ ಮಾಡುವಂತೆ ಸಾರಿಗೆ ನಿಗಮ/ಸಂಸ್ಥೆಗಳು ಸರ್ಕಾರಕ್ಕೆ ಮನವಿ ಮಾಡಿರುವುದಾಗಿ ಬಿಡುಗಡೆ ಆದೇಶದಲ್ಲಿ ತಿಳಿಸಲಾಗಿದೆ.

2020–21ನೇ ಸಾಲಿನ ರಾಜಸ್ವ ಕೊರತೆ ಮತ್ತು ವಿತ್ತೀಯ ಕೊರತೆಯಂತಹ ವಿತ್ತೀಯ ಸೂಚಕಗಳ ಮೇಲೆ ಪರಿಣಾಮ ಬೀರುವುದರಿಂದ ರಾಜಸ್ವ ಸ್ವರೂಪದ ಸಂಬಳದ ಪಾವತಿಗೆ ಬಂಡವಾಳ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಹಣವನ್ನು ಬಿಡುಗಡೆ ಮಾಡುವ ಸರ್ಕಾರದ ಕ್ರಮವು ತಪ್ಪಾಗಿದೆ. ಹಣವನ್ನು ಸಂಬಳದ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದ್ದರೂ, 2020–21ನೇ ಸಾಲಿನ ಲೆಕ್ಕಗಳಲ್ಲಿ ಬಂಡವಾಳ ವೆಚ್ಚದ ಅಡಿಯಲ್ಲಿ ಲೆಕ್ಕ ಹಾಕಲಾಗಿದೆ, ಇದರ ಪರಿಣಾಮವಾಗಿ ಬಂಡವಾಳ ವೆಚ್ಚವನ್ನು ಅತಿಯಾಗಿ ತೋರಿಸಲಾಗಿದೆ. ಬದಲಿಗೆ, ಸರ್ಕಾರವು ಬಂಡವಾಳದ ಅಡಿಯಲ್ಲಿ ಅವಕಾಶವನ್ನು ಅಧ್ಯರ್ಪಣೆ ಮಾಡಿ, ಪೂರಕ ಬೇಡಿಕೆಗಳಲ್ಲಿ ರಾಜಸ್ವ ಲೆಕ್ಕದಡಿ ಸಂಬಳ ಪಾವತಿಗೆ ಹೊಸ ಅವಕಾಶವನ್ನು ಪಡೆಯಬಹುದಿತ್ತು.

ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ (ಡಿಸೆಂಬರ್ 2021) ಬಂಡವಾಳ ವೆಚ್ಚಕ್ಕಾಗಿ ಬಂಡವಾಳದ ಅಡಿಯಲ್ಲಿ ಹಣವನ್ನು ಒದಗಿಸಲಾಗಿದ್ದರೂ, ಕೋವಿಡ್ 19 ಸಾಂಕ್ರಾಮಿಕ ರೋಗದಿಂದಾಗಿ, ಸಾರಿಗೆ ನಿಗಮಗಳು ನೌಕರರ ವೇತನವನ್ನು ಪಾವತಿಸುವುದು ಅನಿವಾರ್ಯವಾಗಿ, ಬಂಡವಾಳ ಶೀರ್ಷಿಕೆಯಡಿ ಅಡಿಯಲ್ಲಿ ಸಂಬಳ ವೆಚ್ಚವನ್ನು ಭರಿಸಲಾಗಿದೆ ಎಂದು ಹೇಳಿದೆ.

ಸಾಮಾನ್ಯ ಹಣಕಾಸು ನಿಯಮಗಳು 2017, ನಿಯಮ 84ರೊಂದಿಗೆ ಓದಿದ ನಿಯಮ 98ರ ಪ್ರಕಾರ, ಶಾಶ್ವತ ಗುಣಲಕ್ಷಣಗಳ ಆಸ್ತಿಗಳನ್ನು ಹೆಚ್ಚಿಸುವ ಅಥವಾ ಶಾಶ್ವತ ಹೊಣೆಗಾರಿಕೆಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಬಂಡವಾಳ ವೆಚ್ಚವನ್ನು ಭರಿಸಲಾಗುವುದರಿಂದ ಇಲಾಖೆಯ ಉತ್ತರವನ್ನು ಒಪ್ಪಲಾಗುವುದಿಲ್ಲ. ಈ ಪ್ರಕರಣದಲ್ಲಿ, ವೆಚ್ಚವು ಆದಾಯದ ಸ್ವರೂಪದ್ದಾಗಿರುವುದರಿಂದ, ಬಂಡವಾಳದ ಅಡಿಯಲ್ಲಿ ಅವಕಾಶವನ್ನು ಅಧ್ಯರ್ಪಣೆ ಮಾಡಬಹುದಿತ್ತು ಮತ್ತು ರಾಜಸ್ವ ಲೆಕ್ಕಶೀರ್ಷಿಕೆಯಡಿಯಲ್ಲಿ ಹೊಸ ಅವಕಾಶವನ್ನು ಪಡೆಯಬಹುದಿತ್ತು.

**3.7.2.4 ಅನಗತ್ಯ/ಅತಿಯಾದ/ಅಸಮರ್ಪಕ ಪೂರಕ ಅನುದಾನ**

2020–21ನೇ ಸಾಲಿನಲ್ಲಿ, 24 ಅನುದಾನಗಳ ಅಡಿಯಲ್ಲಿ ಒದಗಿಸಲಾದ ₹531.13 ಕೋಟಿಗಳ ಪೂರಕ ಅವಕಾಶವು ಅನಗತ್ಯವೆಂದು ಸಾಧಿತವಾಗಿದೆ.

ಪರೀಕ್ಷಾ ಪರಿಶೀಲನೆ ನಡೆಸಿದ ಪೂರಕ ಅವಕಾಶಗಳ ಪ್ರಕರಣಗಳನ್ನು **ನಕ್ಷೆ 3.2**ರಲ್ಲಿ ವಿವರಿಸಿದಂತೆ ಅನಗತ್ಯ/ ಅತಿಯಾದ/ಅಸಮರ್ಪಕ ಅವಕಾಶಗಳ ನಿದರ್ಶನಗಳನ್ನು ತೋರಿಸಿದೆ (**ಅನುಬಂಧ 3.4, ಅನುಬಂಧ 3.5 ಮತ್ತು ಅನುಬಂಧ 3.6**)

**ನಕ್ಷೆ 3.2: ಅನಗತ್ಯ/ಅತಿಯಾದ/ಅಸಮರ್ಪಕ ಪೂರಕ ಅವಕಾಶಗಳು**




ಮೇಲಿನವುಗಳಿಂದ, ವೆಚ್ಚವನ್ನು ಭರಿಸಲು ಮೂಲ ಅವಕಾಶಗಳು ಸಾಕಾಗಿದ್ದುದರಿಂದ ಪೂರಕ ಅವಕಾಶಗಳು ಅನಗತ್ಯ/ಅತಿಯಾದ ನಿದರ್ಶನಗಳಾಗಿವೆ ಎಂದು ಗಮನಿಸಲಾಗಿದೆ, ಇದಲ್ಲದೆ, ಕೆಲವು ಲೆಕ್ಕಗಳ ಪ್ರಧಾನ ಶೀರ್ಷಿಕೆಗಳ ಅವಕಾಶಗಳನ್ನು ಒಳಗೊಂಡಂತೆ ಒಟ್ಟು ಅವಕಾಶವು ಸಾಕಷ್ಟಿಲ್ಲದ ಕಾರಣ ಹೆಚ್ಚುವರಿ ವೆಚ್ಚಕ್ಕೆ ಕಾರಣವಾಯಿತು.

**ಪೂರಕ ಅಂದಾಜುಗಳು ಹೆಚ್ಚು ವಾಸ್ತವಿಕವಾಗಿರಬೇಕು ಮತ್ತು ಅನಗತ್ಯ/ಅತಿಯಾದ/ಅಸಮರ್ಪಕ ಅವಕಾಶಗಳನ್ನು ತಪ್ಪಿಸಲು ವಾಸ್ತವ ಅಗತ್ಯಕ್ಕೆ ಅನುಗುಣವಾಗಿ ಅವುಗಳನ್ನು ಸಿದ್ಧಪಡಿಸಬೇಕು**

ಪೂರಕ ಅಂದಾಜುಗಳನ್ನು ನಿರ್ದಿಷ್ಟ ಪ್ರಸ್ತಾವನೆಗಳು/ಆಡಳಿತ ಇಲಾಖೆಗಳ ಅಗತ್ಯತೆಗಳ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ ಮತ್ತು ಆಯವ್ಯಯ ಕೈಪಿಡಿಯ ನಿಬಂಧನೆಗಳನ್ನು ಅನುಸರಿಸುತ್ತದೆ ಎಂದು ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ ಹೇಳಿತು (ಡಿಸೆಂಬರ್ 2021). ಈಗಾಗಲೇ ಬಳಸಲಾದ ಮೂಲ ಆಯವ್ಯಯ ಅವಕಾಶಗಳು ಮತ್ತು ವರ್ಷದ ಉಳಿದ ಅವಧಿಗೆ ಹಣದ ಅವಶ್ಯಕತೆ, ಮೂಲ ಆಯವ್ಯಯ ಅಂದಾಜುಗಳಲ್ಲಿ ಕಲ್ಪಿಸದ ಕಾರ್ಯಕ್ರಮಗಳು/ ಕಾಮಗಾರಿಗಳನ್ನು ಪರಿಗಣಿಸಲಾಗುತ್ತದೆ. ನಂತರ ಸಂಭವಿಸುವ ವಿವಿಧ ಬದಲಾವಣೆಗಳು, ಅಂದರೆ,

(i) ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರುವುದು,
(ii) ಕಾರ್ಯಕ್ರಮಗಳು/ಚಟುವಟಿಕೆಗಳನ್ನು ಪ್ರಾರಂಭಿಸದಿರುವುದು,
(iii) ಕಾಮಗಾರಿಗಳನ್ನು ಪೂರ್ಣಗೊಳಿಸದಿರುವುದು/ಮುಗಿಸುವಲ್ಲಿ ವಿಳಂಬ,
(iv) ಸಕಾಲದಲ್ಲಿ ಬಿಲ್‌ಗಳ ಸ್ವೀಕೃತಿ/ಪಾವತಿಯಾಗದಿರುವುದು,
(v) ನಿರೀಕ್ಷಿತ ಕೇಂದ್ರ ಸಹಾಯವನ್ನು ಪಡೆಯದಿರುವುದು ಮತ್ತು

(vi) ಸರಕು ಮತ್ತು ಸೇವೆಗಳ ಸಂಗ್ರಹಣೆಯನ್ನು ಮುಂದೂಡುವುದು ಆಯವ್ಯಯ/ಪೂರಕ ಅವಕಾಶಗಳ ಬಳಕೆಯ ಮೇಲೆ ಪರಿಣಾಮ ಬೀರುತ್ತದೆ.

ಈ ಕೆಲವು ಬದಲಾವಣೆಗಳು ಇಲಾಖೆಗಳ ನಿಯಂತ್ರಣವನ್ನು ಮೀರಿವೆ. ಈ ಬದಲಾವಣೆಗಳು ಪೂರಕ ಅಂದಾಜುಗಳು ಅಗತ್ಯ ಮೀರಿದ ಅಪರ್ಯಾಪ್ತವಾಗಲು ಕಾರಣವಾಗುತ್ತವೆ. ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರಿಗೆ ವಿವರವಾದ ಸೂಚನೆಗಳನ್ನು (ಮಾರ್ಚ್ 2021) ನೀಡಲಾಗಿದೆ.

**3.7.2.5 ನಿಧಿಗಳ ಪುನರ್ವಿನಿಯೋಗ**

ಅನುದಾನ ಅಥವಾ ವಿನಿಯೋಗವನ್ನು ಕಾರ್ಯಕಾರಿ ಪ್ರಧಾನ/ಉಪ–ಪ್ರಧಾನ/ವಿವರವಾದ ಶೀರ್ಷಿಕೆ/ಉದ್ದೇಶ ಶೀರ್ಷಿಕೆ ಮೂಲಕ ವಿತರಿಸಲಾಗುತ್ತದೆ. ಸಕ್ಷಮ ಕಾರ್ಯನಿರ್ವಾಹಕ ಪ್ರಾಧಿಕಾರವು ಅಂತಹ ಅನುದಾನ ಅಥವಾ ವಿನಿಯೋಗವು ಸಂಬಂಧಿಸಿದ ಆರ್ಥಿಕ ವರ್ಷದ ಮುಕ್ತಾಯದ ಮೊದಲು ಅನುದಾನ ಅಥವಾ ವಿನಿಯೋಗದೊಳಗೆ ವಿನಿಯೋಗದ ಪ್ರಾಥಮಿಕ ಘಟಕಗಳ ನಡುವೆ ನಿಧಿಯ ಪುನರ್‌ವಿನಿಯೋಗ ಅನುಮೋದಿಸಬಹುದು. ಪುನರ್ವಿನಿಯೋಗ ಎಂದರೆ, ಒಂದು ಸಕ್ಷಮ ಅಧಿಕಾರಿಯು ಅನುದಾನ/ ವಿನಿಯೋಗದ ಒಂದು ಘಟಕದಲ್ಲಿನ ಉಳಿತಾಯದ ಹೆಚ್ಚುವರಿ ವೆಚ್ಚವನ್ನು ಮತ್ತೊಂದು ಘಟಕದ ಅಡಿಯಲ್ಲಿ ಅದೇ ಅನುದಾನದ ಪುರಸ್ಕೃತ ಅಥವಾ ಪ್ರಭೃತ ಮಾಡಿದ ವಿನಿಯೋಗದೊಳಗೆ ಬಳಸುವುದು. ಹಣದ ಅವಕಾಶವನ್ನು ವರ್ಗಾಯಿಸುವ ಘಟಕದಲ್ಲಿ ವಿನಿಯೋಗವನ್ನು ಪೂರ್ಣವಾಗಿ ಬಳಸಲಾಗುವುದಿಲ್ಲ ಅಥವಾ ವಿನಿಯೋಗದ ಘಟಕದಲ್ಲಿ ಅದು ಮುಂದೆ ಬಳಕೆಯಾಗದೆ ಉಳಿಯುತ್ತದೆ ಎಂದು ತಿಳಿದಾಗ ಅಥವಾ ನಿರೀಕ್ಷಿಸಿದಾಗ ಮಾತ್ರ ನಿಧಿಯ ಪುನರ್ವಿನಿಯೋಗವನ್ನು ಮಾಡಬೇಕು

2019–20ರಲ್ಲಿ ನೀಡಲಾದ ₹5,519.56 ಕೋಟಿಗಳ 420 ಪುನರ್ವಿನಿಯೋಗ ಆದೇಶಗಳಿಗೆ ಪ್ರತಿಯಾಗಿ 2020–21ರಲ್ಲಿ ₹5,531.05 ಕೋಟಿ ಮೊತ್ತಕ್ಕೆ 464 ಪುನರ್ವಿನಿಯೋಗ ಆದೇಶಗಳನ್ನು ನೀಡಲಾಗಿದೆ. ಆದೇಶಗಳ/ಪ್ರಕರಣಗಳ ಪರಿಶೀಲನೆಯು ಈ ಕೆಳಗಿನವುಗಳನ್ನು ಪ್ರಕಟಪಡಿಸಿದೆ.

**(ಎ) ನಿಧಿಗಳ ಅನಗತ್ಯ/ಹೆಚ್ಚಾದ/ಅಪರ್ಯಾಪ್ತ ಪುನರ್ವಿನಿಯೋಗ**

2020–21ರ ಅವಧಿಯಲ್ಲಿ ನಿಧಿಯ ಪುನರ್‌ವಿನಿಯೋಗದ ಪರೀಕ್ಷಿತ ಪ್ರಕರಣಗಳಲ್ಲಿ, ಕೆಳಗೆ ವಿವರಿಸಿದಂತೆ ಹಣದ ಅನಗತ್ಯ/ಹೆಚ್ಚಾದ/ಅಪರ್ಯಾಪ್ತ ಪುನರ್ವಿನಿಯೋಗ ಪ್ರಕರಣಗಳು (**ಅನುಬಂಧ 3.7**) ಇರುವುದನ್ನು ಗಮನಿಸಲಾಗಿದೆ.

- ಆರು ಅನುದಾನಗಳ ಅಡಿಯ 15 ಪ್ರಕರಣಗಳಲ್ಲಿ ಪುನರ್ವಿನಿಯೋಗದ ಮೂಲಕ (₹ ಮೂರು ಕೋಟಿಗಿಂತ ಹೆಚ್ಚಿನ ಮೊತ್ತದ ಪ್ರಕರಣಗಳು) ಮೂಲಕ ಒದಗಿಸಿದ ₹161.36 ಕೋಟಿಗಳು ಅಂತಿಮವಾಗಿ ₹436.19 ಕೋಟಿಗಳ ಬಳಕೆ ಮಾಡದ ಅವಕಾಶವಾಗಿ ಉಳಿದು (₹ ಮೂರು ಕೋಟಿಗಿಂತ ಹೆಚ್ಚಿನ ಪ್ರಕರಣಗಳು) ಪುನರ್ವಿನಿಯೋಗವು ಅನಗತ್ಯವಾಗಿತ್ತು ಎಂಬುದನ್ನು ಸಾಬೀತುಗೊಳಿಸಿದೆ.
- ಎಂಟು ಅನುದಾನಗಳ 19 ಪ್ರಕರಣಗಳಲ್ಲಿ ಒದಗಿಸಿದ ₹653.20 ಕೋಟಿಯ ಹೆಚ್ಚುವರಿ ನಿಧಿಗಳು (₹ ಮೂರು ಕೋಟಿಗಿಂತ ಹೆಚ್ಚಿನ ಪ್ರಕರಣಗಳು) ಅಗತ್ಯಕ್ಕಿಂತ ಹೆಚ್ಚಾದ ಪರಿಣಾಮವಾಗಿ ₹188.27 ಕೋಟಿ ವೆಚ್ಚವಾಗದ ಅವಕಾಶದಲ್ಲಿ (₹ ಮೂರು ಕೋಟಿಗಿಂತ ಹೆಚ್ಚಿನ ಪ್ರಕರಣಗಳು) ಪರ್ಯಾವಸಾನವಾಯಿತು.
- ಒಂಬತ್ತು ಅನುದಾನದ ಅಡಿಯ 15 ಪ್ರಕರಣಗಳಲ್ಲಿ, ಪುನರ್ವಿನಿಯೋಗದ ಮೂಲಕ ಒದಗಿಸಲಾದ ₹136.96 ಕೋಟಿ ಹೆಚ್ಚುವರಿ ನಿಧಿಗಳು (₹ ಒಂದು ಕೋಟಿಗಿಂತ ಹೆಚ್ಚಿನ ಪ್ರಕರಣಗಳು) ಸಾಕಷ್ಟಿಲ್ಲವಾಗಿದ್ದು ₹ 164.10 ಕೋಟಿಗಳ ಹೆಚ್ಚುವರಿ ವೆಚ್ಚದಲ್ಲಿ (₹ ಒಂದು ಕೋಟಿಗಿಂತ ಹೆಚ್ಚಿನ ಪ್ರಕರಣಗಳು) ಫಲಿತವಾಯಿತು.

- ಎರಡು ಪ್ರಕರಣಗಳಲ್ಲಿ, ಎರಡು ಅನುದಾನಗಳ ಅಡಿಯಲ್ಲಿ ಪುನರ್ವಿನಿಯೋಗದ ಮೂಲಕ ಮಾಡಿದ್ದ ₹61.02 ಕೋಟಿಯನ್ನು ವಿನಾಕಾರಣ ಹಿಂತೆಗೆದುಕೊಳ್ಳಲಾಗಿದೆ, ಮೂಲ ಅವಕಾಶವೇ ಸಾಕಷ್ಟಿಲ್ಲವಾಗಿದ್ದು ₹520.03 ಕೋಟಿ ಹೆಚ್ಚುವರಿ ವೆಚ್ಚಕ್ಕೆ ಕಾರಣವಾಯಿತು.

ಆರ್ಥಿಕ ಇಲಾಖೆಯು (ಡಿಸೆಂಬರ್ 2021) ಆಯವ್ಯಯ ಅವಕಾಶಗಳ ಬಳಕೆಯನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಸೂಕ್ತ ಕ್ರಮಗಳನ್ನು ಕೈಗೊಳ್ಳವುದು ಇಲಾಖೆಗಳ ಅನುದಾನ ನಿಯಂತ್ರಣಾಧಿಕಾರಿಗಳ ಪ್ರಾಥಮಿಕ ಜವಾಬ್ದಾರಿಯಾಗಿದೆ ಎಂದು ಉತ್ತರಿಸಿದೆ. ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರಿಗೆ ವಿವರವಾದ ಸೂಚನೆಗಳನ್ನು (ನವೆಂಬರ್ 2018) ನೀಡಲಾಗಿದೆ ಎಂದು ಹೇಳಿದೆ.

ಅನಗತ್ಯ/ಅತಿಯಾದ ಪುನರ್ವಿನಿಯೋಗವನ್ನು ತಪ್ಪಿಸಲು ಎಲ್ಲಾ ಇಲಾಖೆಗಳ ಮುಖ್ಯಸ್ಥರು, ಆರ್ಥಿಕ ಇಲಾಖೆಯು ನೀಡಿದ ಸೂಚನೆಗಳನ್ನು ಅನುಸರಿಸುತ್ತಾರೆಯೇ ಎಂದು ಮೇಲ್ವಿಚಾರಣೆ ಮಾಡಬೇಕು.

**(ಬಿ) ದೋಷಪೂರಿತ ಪುನರ್ವಿನಿಯೋಗ**

ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 309, 312 ಮತ್ತು 315(ಎ) ಅನ್ವಯ ಶಾಸಕಾಂಗವು ಅನುಮೋದನೆ ಮಾಡಿದ ಒಂದು ಅನುದಾನದಿಂದ ಮತ್ತೊಂದು ಅನುದಾನಕ್ಕೆ, ಪುರಸ್ಕೃತ ಬಾಬ್ತುಗಳಿಂದ ಪ್ರಭೃತ ಬಾಬ್ತುಗಳಿಗೆ, ಬಂಡವಾಳ ಶೀರ್ಷಿಕೆಯಿಂದ ರಾಜಸ್ವ ಶೀರ್ಷಿಕೆ ಹಾಗೂ ವಿಪರ್ಯಯವಾಗಿ, ಪುನರ್ವಿನಿಯೋಗ ಪಟ್ಟಿಯು ಸ್ವಯಂ ಸಮತೋಲಿತವಾಗಿಲ್ಲದಿದ್ದರೆ ಮತ್ತು ನಿಗದಿತ ನಮೂನೆಯಲ್ಲಿಲ್ಲದಿದ್ದರೆ (ನಮೂನೆ 22ಎ) ಪುನರ್ವಿನಿಯೋಗಕ್ಕೆ ಅವಕಾಶವಿರುವುದಿಲ್ಲ. 2020–21ರಲ್ಲಿ ಆಯವ್ಯಯ ಅವಕಾಶಗಳಲ್ಲಿನ ವ್ಯತ್ಯಾಸ ನಮೂನೆ 22ಎ ಸಮತೋಲಿತವಾಗಿಲ್ಲವಾದುದು, ಆಯವ್ಯಯ ಕೊರತೆ ಇತ್ಯಾದಿಗಳ ಕಾರಣದಿಂದ ₹7.41 ಕೋಟಿಗಳನ್ನು ಒಳಗೊಂಡ 43 ಪುನರ್ವಿನಿಯೋಗ ಆದೇಶಗಳನ್ನು ಪ್ರಧಾನ ಮಹಾಲೇಖಾಪಾಲರು (ಲೆ ಮತ್ತು ಹ) ಒಪ್ಪಿಕೊಂಡಿಲ್ಲ **(ಅನುಬಂಧ 3.8)**

ಆರ್ಥಿಕ ಇಲಾಖೆಯು (ಡಿಸೆಂಬರ್ 2021) ಪುನರ್ವಿನಿಯೋಗ ಮಾಡ್ಯೂಲ್ ಅನ್ನು ಅಳವಡಿಸಿಕೊಳ್ಳುವ ಮೂಲಕ ಈಗಾಗಲೇ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಮತ್ತು ಪುನರ್ವಿನಿಯೋಗ ಆದೇಶಗಳನ್ನು ನೀಡುವ ಮೊದಲು ಸರಿಯಾದ ಪರಿಶೀಲನೆಗಳನ್ನು ನಡೆಸಲು ಮತ್ತು ಯಾವುದೇ ದೋಷವಿಲ್ಲವೆಂದು ಖಚಿತ ಪಡಿಸಿಕೊಳ್ಳಲು ಎಲ್ಲಾ ಇಲಾಖೆಗಳಿಗೆ (ಮಾರ್ಚ್ 2021) ಸೂಚನೆ ನೀಡಲಾಗಿದೆ ಎಂದು ಉತ್ತರಿಸಿದೆ.

**3.7.2.6 ಹಂಚಿಕೆಯ ಅವಕಾಶಗಳಿಗೆ ಪ್ರತಿಯಾಗಿ ಉಳಿತಾಯ/ಅಧ್ಯರ್ಪಣೆಗಳು/ಬಳಕೆ ಮಾಡದ ಉಳಿಕೆಗಳು**

**(ಎ) 2020–21ರಲ್ಲಿ ಭಾರಿ ಉಳಿಕೆ ( ₹100 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ಉಳಿಕೆ) ಹೊಂದಿರುವ ಅನುದಾನಗಳು**

23 ಅನುದಾನ/ವಿನಿಯೋಗಗಳ ಅಡಿಯ 32 (ಪ್ರತಿಯೊಂದೂ ₹100 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತದ) ಪ್ರಕರಣಗಳಲ್ಲಿ ಒಟ್ಟು ₹22,211.65 ಕೋಟಿಗಳ ಮೊತ್ತದ ಅವಕಾಶವು ಬಳಕೆಯಾಗದೆ ಉಳಿದಿದೆ. **ಅನುಬಂಧ 3.9**ರಲ್ಲಿ ಸೂಚಿಸಿದಂತೆ ಆರ್ಥಿಕ, ಒಳಾಡಳಿತ ಮತ್ತು ಸಾರಿಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಸಮಾಜ ಕಲ್ಯಾಣ, ಶಿಕ್ಷಣ, ನಗರಾಭಿವೃದ್ಧಿ ಮತ್ತು ಜಲಸಂಪನ್ಮೂಲ ಕ್ಷೇತ್ರಗಳಲ್ಲಿ ₹1,000 ಕೋಟಿಗಳಿಗೂ ಹೆಚ್ಚು ಮೊತ್ತದ ಅವಕಾಶ ಬಳಕೆಯಾಗದೆ ಉಳಿದಿದೆ.

ಕರ್ನಾಟಕ ಆಯವ್ಯಯ ಕೈಪಿಡಿಯ ನಿಯಮ 264ರ ಪ್ರಕಾರ, ನಿಯಂತ್ರಣಾಧಿಕಾರಿಗಳು ನಿರೀಕ್ಷಿಸಿದ ಎಲ್ಲಾ ಉಳಿಕೆಗಳನ್ನು ಸಂಪೂರ್ಣ ವಿವರ ಮತ್ತು ಕಾರಣಗಳೊಂದಿಗೆ ಉಳಿತಾಯ ನಿರೀಕ್ಷಿಸಿದ ತಕ್ಷಣವೇ ಆರ್ಥಿಕ ಇಲಾಖೆಗೆ ವರದಿ ಮಾಡಬೇಕು. ಆದಾಗ್ಯೂ ಇಲಾಖೆಗಳು ಕಾರಣಗಳನ್ನು ಸೂಕ್ತವಾಗಿ ವಿವರಿಸಿಲ್ಲ ಅಥವಾ ಒದಗಿಸಿಲ್ಲ ಎಂಬುದನ್ನು ಗಮನಿಸಲಾಗಿದೆ.

**(ಬಿ) ಉಳಿಕೆಗಳ ಅಧ್ಯರ್ಪಣೆ**

ಸಾಮಾನ್ಯ ಹಣಕಾಸು ನಿಯಮಗಳು 2017, ನಿಯಮ 66(1)ರ ಅನ್ವಯ ಇಲಾಖೆಗಳು ತಮ್ಮ ನಿಯಂತ್ರಣದಲ್ಲಿರುವ ಅನುದಾನ/ ವಿನಿಯೋಗಗಳಲ್ಲಿ ಗಮನಿಸಲಾದ ಎಲ್ಲಾ ನಿರೀಕ್ಷಿತ ವೆಚ್ಚ ಮಾಡಲಾಗದ ಅವಕಾಶಗಳನ್ನು ನಿಗದಿತ ದಿನಾಂಕದೊಳಗೆ ಆರ್ಥಿಕ ಇಲಾಖೆಗೆ ಒಪ್ಪಿಸಬೇಕಾಗುತ್ತದೆ. 2020–21ರಲ್ಲಿ ಒಟ್ಟು ಆಯವ್ಯಯದ ಅವಕಾಶದ 8.49 ಪ್ರತಿಶತದಷ್ಟು (₹22,526.24 ಕೋಟಿ) ವೆಚ್ಚ ಮಾಡಲಾಗಿಲ್ಲ. ಒಟ್ಟು ಉಳಿತಾಯದಲ್ಲಿ ಅಧ್ಯರ್ಪಿಸಿದ ಮೊತ್ತವು ₹4,443.18 ಕೋಟಿಗಳಾಗಿದೆ (ಶೇಕಡ 20).

18 ಅನುದಾನ/ವಿನಿಯೋಗಗಳ ಸಂದರ್ಭದಲ್ಲಿ ವೆಚ್ಚವೇ ಮಾಡದಿರುವ ಇಡೀ ಅವಕಾಶದ, ಒಟ್ಟು ₹5,168.09 ಕೋಟಿಗಳು ಅಧ್ಯರ್ಪಣೆ ಆಗಿಲ್ಲ (**ಅನುಬಂಧ 3.10**). ಇದಲ್ಲದೆ, 26 ಅನುದಾನ/ವಿನಿಯೋಗಗಳ 37 ಪ್ರಕರಣಗಳಲ್ಲಿ, ಕೇವಲ ಭಾಗಶಃ ಅಧ್ಯರ್ಪಣೆ ಆಗಿದ್ದು (₹4,443.18 ಕೋಟಿ) ಮತ್ತು ವೆಚ್ಚ ಮಾಡದ ಒಟ್ಟು ಅವಕಾಶದ (₹17,773.11 ಕೋಟಿ) ಸುಮಾರು 75 ಪ್ರತಿಶತವು (₹13,341.58 ಕೋಟಿ) ಅಧ್ಯರ್ಪಣೆ ಆಗಿಲ್ಲ (**ಅನುಬಂಧ 3.11**).

23 ಪ್ರಕರಣಗಳಲ್ಲಿ ಶೇಕಡ 100ರಷ್ಟನ್ನು ಒಳಗೊಂಡ ಗಣನಾರ್ಹ ಅಧ್ಯರ್ಪಣೆಗಳು (ಶೇಕಡ 50 ಕ್ಕಿಂತ ಹೆಚ್ಚು) ₹1,679.24ರಷ್ಟಿವೆ (**ಅನುಬಂಧ 3.12**). ಅಲ್ಲದೆ, 17 ಅನುದಾನಗಳಲ್ಲಿ ₹ ಐದು ಕೋಟಿಗಿಂತ ಹೆಚ್ಚಿನ ಮೊತ್ತವು ಅಧ್ಯರ್ಪಣೆ ಆಗಿದ್ದರೆ, ಅಸಮರ್ಪಕ ಹಣಕಾಸಿನ ನಿಯಂತ್ರಣವನ್ನು ಸೂಚಿಸುವ ಆರ್ಥಿಕ ವರ್ಷದ ಕೊನೆಯ ಎರಡು ಕೆಲಸದ ದಿನಗಳಲ್ಲಿ ₹3,961.94 ಕೋಟಿಗಳನ್ನು (ಒಟ್ಟು ಅಧ್ಯರ್ಪಣೆಯ ಶೇಕಡ 89) ಅಧ್ಯರ್ಪಣೆ ಮಾಡಲಾಗಿದೆ (**ಅನುಬಂಧ 3.13**)

### 3.7.2.7 2020–21ರಲ್ಲಿ ಅವಕಾಶಕ್ಕಿಂತ ಹೆಚ್ಚಿನ ವೆಚ್ಚ

2020–21ನೇ ಸಾಲಿನಲ್ಲಿ ಅನುದಾನ ಸಂಖ್ಯೆ 14 – ಕಂದಾಯ ಆದಾಯ ಮತ್ತು 24 – ಇಂಧನದ ಅಡಿಯಲ್ಲಿ ಅವಕಾಶನ್ನು ಮೀರಿದ ₹415.90 ಕೋಟಿಗಳ ವೆಚ್ಚವನ್ನು ಸಕ್ರಮೀಕರಣಗೊಳಿಸಬೇಕಾಗಿದೆ. ಅದರ ವಿವರಗಳನ್ನು **ಕೋಷ್ಟಕ 3.9**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.9: 2020–21ರಲ್ಲಿ ಸಕ್ರಮೀಕರಣದ ಅಗತ್ಯವಿರುವ ಅವಕಾಶಕ್ಕಿಂತಲೂ ಹೆಚ್ಚಾದ ವೆಚ್ಚ**

**(ಮೊತ್ತ ರೂಪಾಯಿಗಳಲ್ಲಿ)**

| ಕ್ರಮ ಸಂಖ್ಯೆ | ಅನುದಾನ | ಅವಕಾಶ | ವೆಚ್ಚ | ಅಧಿಕ |
|---|---|---|---|---|
| 1 | 14– ರಾಜಸ್ವ<br>ರಾಜಸ್ವ ಪುರಸ್ಕೃತ | 1,30,72,40,24,000 | 1,34,26,99,73,004 | 3,54,59,49,004 |
| 2 | *14* – ರಾಜಸ್ವ<br>ಬಂಡವಾಳ ಪ್ರಭೃತ | *5,00,00,000* | *53,00,88,483* | *48,00,88,483* |
| 3 | 24 – ಇಂಧನ<br>ರಾಜಸ್ವ ಪುರಸ್ಕೃತ | 1,42,82,28,00,000 | 1,42,95,57,91,400 | 13,29,91,400 |
| ಒಟ್ಟು | | **2,73,59,68,24,000** | **2,77,75,58,52,887** | **4,15,90,28,887** |

*ಆಕರ: ಧನವಿನಿಯೋಗ ಲೆಕ್ಕಗಳು*

### 3.7.2.8 ಹೆಚ್ಚುವರಿ ವೆಚ್ಚ ಮತ್ತು ಅದರ ಸಕ್ರಮೀಕಣ

ಭಾರತದ ಸಂವಿಧಾನದ 204ನೇ ವಿಧಿಯ ಪ್ರಕಾರ, ರಾಜ್ಯ ಶಾಸಕಾಂಗವು ಕಾನೂನಿನ ಮೂಲಕ ಮಾಡಿದ ವಿನಿಯೋಗದ ಅಡಿಯಲ್ಲಿ ಹೊರತುಪಡಿಸಿ ಯಾವುದೇ ಹಣವನ್ನು ಸಂಚಿತ ನಿಧಿಯಿಂದ ಪಡೆಯಲಾಗುವುದಿಲ್ಲ. ಸಂವಿಧಾನದ 205ನೇ ಅನುಚ್ಛೇದವು ರಾಜ್ಯ ಶಾಸಕಾಂಗದಿಂದ ಕ್ರಮಬದ್ಧಗೊಳಿಸಿದ ಅನುದಾನ/ವಿನಿಯೋಗದ ಅವಕಾಶವನ್ನು ಮೀರಿದ ವೆಚ್ಚವನ್ನು ಸರ್ಕಾರವು ರಾಜ್ಯ ಶಾಸಕಾಂಗದಿಂದ ಸಕ್ರಮೀಕರಣಗೊಳಿಸಿಕೊಳ್ಳಬೇಕು

ಎಂದು ವಿಧಿಸುತ್ತದೆ. ಈ ಅನುಚ್ಛೇದ ಅಡಿ ಹೆಚ್ಚುವರಿ ವೆಚ್ಚವನ್ನು ಕ್ರಮಬದ್ಧಗೊಳಿಸಲು ಯಾವುದೇ ಕಾಲಮಿತಿಯನ್ನು ಸೂಚಿಸಲಾಗಿಲ್ಲವಾದರೂ, ಹೆಚ್ಚುವರಿ ವೆಚ್ಚದ ಕ್ರಮಬದ್ಧಗೊಳಿಸುವಿಕೆಯು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಚರ್ಚೆಯನ್ನು ಪೂರ್ಣಗೊಳಿಸಿದ ನಂತರ ಮಾಡಲಾಗುತ್ತದೆ.

**ಅನುಬಂಧ 3.14**ರಲ್ಲಿ ವಿವರಿಸಿದಂತೆ 2012–13 ರಿಂದ 2017–18 ರವರೆಗಿನ ವರ್ಷಗಳಲ್ಲಿ ಅವಕಾಶಕ್ಕಿಂತ ಹೆಚ್ಚಾದ ಒಟ್ಟು ಮೊತ್ತವು ₹2409.53 ಕೋಟಿಗಳಷ್ಟಿದೆ. 2018–19 ಮತ್ತು 2019–20ನೇ ಸಾಲಿಗೆ ಅನುದಾನ/ ವಿನಿಯೋಗಗಳ ಅಡಿಯಲ್ಲಿ ಯಾವುದೇ ಹೆಚ್ಚುವರಿ ವೆಚ್ಚವಿಲ್ಲದಿರುವುದನ್ನು ಗಮನಿಸಲಾಗಿದೆ.

ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ (ಡಿಸೆಂಬರ್ 2021) ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸಿನ ನಂತರ ಹೆಚ್ಚುವರಿ ವೆಚ್ಚವನ್ನು ಕ್ರಮಬದ್ಧಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದೆ.

### *3.7.3 ಆಯವ್ಯಯ ಮತ್ತು ಲೆಕ್ಕಪತ್ರ ಪ್ರಕ್ರಿಯೆಯ ಪರಿಣಾಮಕಾರಿತ್ವದ ಕುರಿತು ವ್ಯಾಖ್ಯಾನಗಳು*

#### 3.7.3.1 ಆಯವ್ಯಯ ವ್ಯತ್ಯಾಸಗಳಿಗೆ ವಿವರಣೆ ನೀಡದಿರುವುದು/ಅಪೂರ್ಣ ವಿವರಣೆ ನೀಡಿರುವುದು.

ಅನುಮೋದಿತ ಆಯವ್ಯಕ್ಕೆ ಪ್ರತಿಯಾಗಿ ವೆಚ್ಚವನ್ನು ತೋರಿಸುವುದರೊಂದಿಗೆ, ಧನವಿನಿಯೋಗ ಲೆಕ್ಕಗಳು ಆಯವ್ಯಯದಲ್ಲಿ ಒದಗಿಸಿದ ಅವಕಾಶದಿಂದ ವೆಚ್ಚವು ಗಮನಾರ್ಹವಾಗಿ ವ್ಯತ್ಯಾಸಗೊಳ್ಳುವ ಸಂದರ್ಭಗಳಿಗೆ ವಿವರಣೆಯನ್ನು ಸಹ ನೀಡುತ್ತವೆ.

ಧನವಿನಿಯೋಗ ಲೆಕ್ಕಗಳಲ್ಲಿ ವಿವರವಾದ ವ್ಯಾಖ್ಯಾನಗಳನ್ನು ಸೇರಿಸಲು ಅನುಸರಿಸಿದ ಮಿತಿಗಳು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಅನುಮೋದಿಸಿದ ಮಿತಿಗಳ ಪ್ರಕಾರವಾಗಿರುತ್ತದೆ. ಈ ನಿಯಮಗಳು 1983–84ರ ಆರ್ಥಿಕ ವರ್ಷದಿಂದ ಜಾರಿಗೆ ಬಂದಿದೆ.

ವ್ಯಾಖ್ಯಾನಗಳಿಗಾಗಿ ಉಪ–ಶೀರ್ಷಿಕೆಗಳ ಆಯ್ಕೆ ಮತ್ತು ಧನವಿನಿಯೋಗ ಲೆಕ್ಕಗಳಲ್ಲಿನ ವಿವರವಾದ ವ್ಯಾಖ್ಯಾನಗಳಿಗಾಗಿ ಇರುವ ಸೂತ್ರಗಳನ್ನು ಕೆಳಗೆ ನೀಡಲಾಗಿದೆ.

| | |
|---|---|
| ಉಳಿಕೆಗಳು | ಒಟ್ಟಾರೆ ಉಳಿಕೆ ಅನುದಾನ/ವಿನಿಯೋಗದ ಶೇಕಡ ಎರಡಕ್ಕಿಂತ ಹೆಚ್ಚಾಗಿದ್ದರೆ ಮತ್ತು ಉಪಶೀರ್ಷಿಕೆಯಡಿ ಉಳಿಕೆಯು ಶೇಕಡ 10ಕ್ಕಿಂತ ಹೆಚ್ಚಾಗಿದ್ದರೆ ವ್ಯಾಖ್ಯಾನಿಸಲಾಗುತ್ತದೆ |
| ಹೆಚ್ಚಳ | ಒಟ್ಟಾರೆ ಹೆಚ್ಚಾದ ವೆಚ್ಚವು ಅನುದಾನ/ವಿನಿಯೋಗದ ಶೇಕಡ 10ಕ್ಕಿಂತ ಹೆಚ್ಚಾಗಿದ್ದರೆ ಮತ್ತು ಹೆಚ್ಚಳವು ಉಪಶೀರ್ಷಿಕೆಯಡಿ ₹ ಎರಡು ಲಕ್ಷಕಿಂತ ಹೆಚ್ಚಿದ್ದರೆ ವ್ಯಾಖ್ಯಾನಿಸಲಾಗುತ್ತದೆ. |

*ಆಕರ: ಧನ ವಿನಿಯೋಗ ಲೆಕ್ಕಗಳು*

2020–21ರ ಧನವಿನಿಯೋಗ ಲೆಕ್ಕಗಳ ಪರಿಶೋಧನೆಯಲ್ಲಿ, ಆಯವ್ಯಯ ಹಂಚಿಕೆಯನ್ನು ಹೋಲಿಸಿದರೆ ವೆಚ್ಚದಲ್ಲಿನ ವ್ಯತ್ಯಾಸಗಳಿಗೆ (ಸುಮಾರು 80 ಪ್ರತಿಶತದಷ್ಟು ಉಳಿತಾಯಗಳಿಗೆ) ನಿಯಂತ್ರಣ ಅಧಿಕಾರಿಗಳು ವಿವರಣೆ/ನಿರ್ದಿಷ್ಟ ಕಾರಣಗಳನ್ನು ಒದಗಿಸದಿರುವುದು ಗಮನಕ್ಕೆ ಬಂದಿದೆ. 29 ಅನುದಾನ/ವಿನಿಯೋಗಗಳಲ್ಲಿ, 28 ಅನುದಾನ/ವಿನಿಯೋಗಗಳಲ್ಲಿ ₹17,629.62 ಕೋಟಿ ಮೊತ್ತದ ವ್ಯತ್ಯಾಸಕ್ಕೆ ನಿರ್ದಿಷ್ಟ ಕಾರಣಗಳನ್ನು ಸರ್ಕಾರಿ ಇಲಾಖೆಗಳ ನಿಯಂತ್ರಣಾಧಿಕಾರಿಗಳು ಒದಗಿಸಿಲ್ಲ. ಅನುದಾನವಾರು ವಿವರಗಳನ್ನು **ಅನುಬಂಧ 3.15**ರಲ್ಲಿ ತೋರಿಸಲಾಗಿದೆ.

### 3.7.3.2 2020–21ರಲ್ಲಿ ವೆಚ್ಚದ ಒತ್ತಡ

2020–21ರಲ್ಲಿ ರಾಜ್ಯ ಬೊಕ್ಕಸದ ಮಾಸಿಕ ಸ್ವೀಕೃತಿ ಮತ್ತು ವಿತರಣೆಗಳನ್ನು **ನಕ್ಷೆ 3.3**ರಲ್ಲಿ ನೀಡಲಾಗಿದೆ.

**ನಕ್ಷೆ 3.3: 2020–21ರ ಅವಧಿಯಲ್ಲಿ ಮಾಸಿಕ ಸ್ವೀಕೃತಿಗಳು ಮತ್ತು ವಿತರಣೆಗಳು**

**(₹ ಕೋಟಿಗಳಲ್ಲಿ)**




*ಆಕರ: ಮಾಸಿಕ ಸಿವಿಲ್ ಲೆಕ್ಕಗಳು*

ಮಾರ್ಚ್ 2021ರಲ್ಲಿ ರಾಜ್ಯ ಸರ್ಕಾರವು ₹2,41,559.45 ಕೋಟಿ (ಸಾರ್ವಜನಿಕ ಸಾಲದ ವೆಚ್ಚ ಸೇರಿದಂತೆ) ಒಟ್ಟು ವೆಚ್ಚದ 24 ಪ್ರತಿಶತವನ್ನು ಒಳಗೊಂಡಿರುವ ₹58,964.05 ಕೋಟಿ ವೆಚ್ಚವನ್ನು ಮಾಡಿದೆ ಎಂದು ಗಮನಿಸಲಾಗಿದೆ.

ಮಾರ್ಚ್ 2021ರಲ್ಲಿ ಮಾತ್ರ ಒಟ್ಟು ವೆಚ್ಚದ ಶೇಕಡಾ 50ಕ್ಕಿಂತ ಹೆಚ್ಚು ಖರ್ಚು ಮಾಡಿದ ಪ್ರಮುಖ ಪ್ರಕರಣಗಳನ್ನು **ಕೋಷ್ಟಕ 3.10**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ 3.10: 2021ರ ಮಾರ್ಚ್‌ನಲ್ಲಿ ವೆಚ್ಚದ ಪ್ರಮಾಣ**

**(₹ ಕೋಟಿಗಳಲ್ಲಿ)**

| ಲೆಕ್ಕಶೀರ್ಷಿಕೆ/ವಿವರಣೆ | ಮೊದಲನೇ ತ್ರೈಮಾಸಿಕ | ಎರಡನೇ ತ್ರೈಮಾಸಿಕ | ಮೂರನೇ ತ್ರೈಮಾಸಿಕ | ಅಂತಿಮ ತ್ರೈಮಾಸಿಕ | ಒಟ್ಟು ವೆಚ್ಚ | ಮಾರ್ಚ್‌ನಲ್ಲಿ ವೆಚ್ಚ | ಒಟ್ಟು ವೆಚ್ಚಕ್ಕೆ ಮಾರ್ಚ್ ವೆಚ್ಚದ ಶೇಕಡಾವಾರು |
|---|---|---|---|---|---|---|---|
| **4055–ಪೋಲೀಸ್ ಮೇಲೆ ಬಂಡವಾಳ ವೆಚ್ಚ** | 0.00 | 1.66 | 59.25 | 304.85 | 365.76 | 245.72 | 67 |
| **4401–ಬೆಳೆ ಸಂಗೋಪನೆ ಮೇಲೆ ಬಂಡವಾಳ ವೆಚ್ಚ** | 0.00 | 205.27 | 252.13 | 871.42 | 1,328.82 | 668.45 | 50 |
| **4702–ಮಣ್ಣು ಮತ್ತು ನೀರಿನ ಸಂರಕ್ಷಣೆ ಮೇಲೆ ಬಂಡವಾಳ ವೆಚ್ಚ** | 47.07 | 373.71 | 526.77 | 1,525.35 | 2,472.90 | 1,361.95 | 55 |
| **4801–ವಿದ್ಯುತ್ ಯೋಜನೆಗಳ ಮೇಲೆ ಬಂಡವಾಳ ವೆಚ್ಚ** | 0.00 | 164.50 | 0.00 | 485.62 | 650.12 | 321.52 | 50 |

| ಲೆಕ್ಕಶೀರ್ಷಿಕೆ/ವಿವರಣೆ | ಮೊದಲನೇ ತ್ರೈಮಾಸಿಕ | ಎರಡನೇ ತ್ರೈಮಾಸಿಕ | ಮೂರನೇ ತ್ರೈಮಾಸಿಕ | ಅಂತಿಮ ತ್ರೈಮಾಸಿಕ | ಒಟ್ಟು ವೆಚ್ಚ | ಮಾರ್ಚ್‌ನಲ್ಲಿ ವೆಚ್ಚ | ಒಟ್ಟು ವೆಚ್ಚಕ್ಕೆ ಮಾರ್ಚ್ ವೆಚ್ಚದ ಶೇಕಡಾವಾರು |
|---|---|---|---|---|---|---|---|
| **4851– ಗ್ರಾಮ ಮತ್ತು ಸಣ್ಣ ಕೈಗಾರಿಕೆಗಳ ಮೇಲೆ ಬಂಡವಾಳ ವೆಚ್ಚ** | 0.00 | 26.98 | 35.75 | 202.92 | 265.63 | 163.52 | 62 |
| **6860–ಗ್ರಾಹಕ ಕೈಗಾರಿಕೆಗಳ ಸಾಲಗಳು** | 26.08 | 34.83 | 3.19 | 152.01 | 216.11 | 150.65 | 70 |

*ಆಕರ: ಮಾಸಿಕ ಸಿವಿಲ್ ಲೆಕ್ಕಗಳು*

ಮೇಲಿನ ಕೋಷ್ಟಕದಲ್ಲಿ ನೋಡಿದಂತೆ, ವರ್ಷಾಂತ್ಯದಲ್ಲಿ ಸರ್ಕಾರವು ಗಣನೀಯ ಪ್ರಮಾಣದ ವೆಚ್ಚವನ್ನು ಮಾಡಿದ್ದು, ಇದು ವೆಚ್ಚದ ಮೇಲೆ ಅಸಮರ್ಪಕ ನಿಯಂತ್ರಣ ಮತ್ತು ಅಪರ್ಯಾಪ್ತ ಆಯವ್ಯಯ ನಿರ್ವಹಣೆಯನ್ನು ಸೂಚಿಸುತ್ತದೆ.

ಆರ್ಥಿಕ ಇಲಾಖೆಯು (ಡಿಸೆಂಬರ್ 2021) ವರ್ಷದ ಮಾರ್ಚಿ ತಿಂಗಳಿನಲ್ಲಿ ಖರ್ಚಿನ ಒತ್ತದವನ್ನು ತಪ್ಪಿಸಲು ಪ್ರಯತ್ನಗಳನ್ನು ಮಾಡಲಾಗುವುದು ಎಂದು ಹೇಳಿದೆ.

## 3.8. ಆಯ್ದ ಅನುದಾನಗಳ ಪರಿಶೀಲನೆಯ ಫಲಿತಾಂಶ

2018–19ರಿಂದ 2020–21ರವರೆಗೆ ಮೂರು ವರ್ಷಗಳ ಅವಧಿಯಲ್ಲಿ ಎರಡು ಆಯ್ದ ಅನುದಾನಗಳಿಗೆ ಸಂಬಂಧಿಸಿದಂತೆ ವೆಚ್ಚದ ಮೇಲಿನ ನಿಯಂತ್ರಣಕ್ಕಾಗಿ ಅನುಸರಿಸಲಾದ ಆಯವ್ಯಯ ಕಾರ್ಯವಿಧಾನಗಳ ಪರಿಶೀಲನೆ ಮತ್ತು ವಿಧಾನಗಳು ಈ ಕೆಳಗಿನವುಗಳನ್ನು ತೋರಿಸಿವೆ.

### *3.8.1 ಅನುದಾನ ಸಂಖ್ಯೆ 10 – ಸಮಾಜ ಕಲ್ಯಾಣ ಸಮೀಕ್ಷೆ*

#### 3.8.1.1 ಪೀಠಿಕೆ

ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವಿಶೇಷವಾಗಿ ಅವರ ಸಾಮಾಜಿಕ–ಆರ್ಥಿಕ ಮತ್ತು ಶೈಕ್ಷಣಿಕ ಪ್ರಗತಿಗಾಗಿ ವಿವಿಧ ಕಾರ್ಯಕ್ರಮ ಮತ್ತು ಯೋಜನೆಗಳನ್ನು ರೂಪಿಸುವ ಜವಬ್ದಾರಿ ಹೊಂದಿದೆ. ಅನುದಾನ ಸಂಖ್ಯೆ 10– ಸಮಾಜ ಕಲ್ಯಾಣ ಈ ಕೆಳಗಿನ ಪ್ರಧಾನ ಶೀರ್ಷಿಕೆಗಳನ್ನು ಒಳಗೊಂಡಿದೆ.

2225– ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ

4225–ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗಗಳ ಅಲ್ಪಸಂಖ್ಯಾತರ ಕಲ್ಯಾಣದ ಮೇಲಿನ ಬಂಡವಾಳ ವೆಚ್ಚ

#### 3.8.1.2 ಆಯವ್ಯಯ ಮತ್ತು ವೆಚ್ಚ

ಕಳೆದ ಮೂರು ವರ್ಷಗಳಲ್ಲಿ (2018–19ರಿಂದ 2020–21) ಮೇಲಿನ ಕ್ರಿಯಾ ಪ್ರಧಾನ ಶೀರ್ಷಿಕೆ ಅಡಿಯಲ್ಲಿ ಆಯವ್ಯಯ ಅವಕಾಶ, ವಾಸ್ತವ ವಿತರಣೆ ಮತ್ತು ಉಳಿತಾಯದ ಒಟ್ಟಾರೆ ಸ್ಥಿತಿವನ್ನು **ಕೋಷ್ಟಕ 3.11**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.11 ಆಯವ್ಯಯ ಮತ್ತು ವೆಚ್ಚ**

(₹ ಕೋಟಿಗಳಲ್ಲಿ)

| ವರ್ಷ | ವಿಭಾಗ | ಆಯವ್ಯಯ ಅವಕಾಶ | ಒಟ್ಟು | ವೆಚ್ಚ | ಬಳಕೆ ಮಾಡದ ಅವಕಾಶ ಮತ್ತು ಶೇಕಡಾವಾರು |
|---|---|---|---|---|---|
| **2018–19** | ರಾಜಸ್ವ–ಮೂಲ | 8,782.26 | 8,932.79 | 8,677.96 | 254.83 |
| | ಪೂರಕ | 150.53 | | | (3) |
| | ಬಂಡವಾಳ–ಮೂಲ | 3,006.21 | 3,506.21 | 3,422.37 | 83.84 |
| | ಪೂರಕ | 500.00 | | | (2) |
| **2019–20** | ರಾಜಸ್ವ–ಮೂಲ | 8,454.51 | 8,335.99 | 7,384.92 | 1,151.07 |
| | ಪೂರಕ | 81.48 | | | (14) |
| | ಬಂಡವಾಳ–ಮೂಲ | 2,876.39 | 3,033.98 | 2,783.45 | 250.53 |
| | ಪೂರಕ | 157.59 | | | (8) |
| **2020–21** | ರಾಜಸ್ವ–ಮೂಲ | 7,470.02 | 7,833.09 | 6,364.02 | 1,469.07 |
| | ಪೂರಕ | 363.07 | | | (19) |
| | ಬಂಡವಾಳ–ಮೂಲ | 1,974.28 | 1,974.28 | 1,163.80 | 810.48 |
| | ಪೂರಕ | 0.00 | | | (41) |

*ಆಕರ: ಧನವಿನಿಯೋಗ ಲೆಕ್ಕಗಳು*

ಮೇಲಿನ ಕೋಷ್ಟಕದಿಂದ ನೋಡಿದಂತೆ, ರಾಜಸ್ವ ವಿಭಾಗದ ಅಡಿಯಲ್ಲಿ ಬಳಕೆಯಾಗದ ಅವಕಾಶವು ಶೇಕಡ 3 ಮತ್ತು 19ರ ನಡುವೆ ಮತ್ತು ಬಂಡವಾಳ ವಿಭಾಗದ ಅಡಿಯಲ್ಲಿ, ಇದು ಶೇಕಡ 2 ಮತ್ತು 41 ನಡುವೆ ಇದೆ.

### 3.8.1.3 ನಿರೀಕ್ಷಿತ ಉಳಿತಾಯಗಳು ಅಧ್ಯರ್ಪಣೆ ಮಾಡದಿರುವುದು/ಭಾಗಶಃ ಅಧ್ಯರ್ಪಣೆ ಆಗಿರುವುದು.

ಕರ್ನಾಟಕ ಆಯವ್ಯಯ ಕೈಪಿಡಿ 1975ರ ಕಂಡಿಕೆ 264ರ ಅನ್ವಯ, ಉಳಿತಾಯವನ್ನು ನಿರೀಕ್ಷಿಸಿದಾಗ ವೆಚ್ಚ ಮಾಡುವ ಇಲಾಖೆಗಳು ಅನುದಾನ/ವಿನಿಯೋಗ ಅಥವಾ ಅದರ ಭಾಗವನ್ನು ಆರ್ಥಿಕ ಇಲಾಖೆಗೆ ಅಧ್ಯರ್ಪಣೆ ಮಾಡಬೇಕಾಗುತ್ತದೆ. ಇದಲ್ಲದೆ, ಆರ್ಥಿಕ ಇಲಾಖೆಯು ಇತರ ಅಗತ್ಯವಿರುವ ಯೋಜನೆಗಳಲ್ಲಿ ನಿರೀಕ್ಷಿತ ಉಳಿತಾಯದ ಮೊತ್ತವನ್ನು ಸಮರ್ಥವಾಗಿ ಮರುಹಂಚಿಕೆ ಮಾಡಲು ಅನುವು ಮಾಡಿಕೊಡಲು, ಹಣಕಾಸಿನ ವರ್ಷದ ಅಂತ್ಯಕ್ಕೆ ಕಾಯದೆ ಉಳಿಕೆಯನ್ನು ನಿರೀಕ್ಷಿಸಿದ ತಕ್ಷಣ ಅಧ್ಯರ್ಪಣೆ ಮಾಡಬೇಕು. 2018–19ರಿಂದ 2020–21ರ ಅವಧಿಯಲ್ಲಿ ಒಟ್ಟು ₹4,019.82 ಕೋಟಿ ಉಳಿಕೆಯಲ್ಲಿ, ₹61.70 ಕೋಟಿ ರಾಜಸ್ವದ ಅಡಿಯಲ್ಲಿ ಅಧ್ಯರ್ಪಣೆ ಆಗಿದೆ ಮತ್ತು ಬಂಡವಾಳ ವಿಭಾಗದ ಅಡಿಯಲ್ಲಿ ಯಾವುದೇ ಮೊತ್ತವು ಅಧ್ಯರ್ಪಣೆ ಆಗಿಲ್ಲ. ಉಳಿದ ಉಳಿತಾಯ ₹3,958.12 ಕೋಟಿಗಳು (ಶೇಕಡ 98) ಅಧ್ಯರ್ಪಣೆ ಆಗಿಲ್ಲ. ವಿವರಗಳನ್ನು **ಕೋಷ್ಟಕ 3.12**ರಲ್ಲಿ ತೋರಿಸಲಾಗಿದೆ

**ಕೋಷ್ಟಕ 3.12: ನಿರೀಕ್ಷಿತ ಉಳಿತಾಯಗಳು ಅಧ್ಯರ್ಪಣೆ ಆಗದಿರುವುದು/ಭಾಗಶಃ ಆಗಿರುವುದು.**

(₹ ಕೋಟಿಗಳಲ್ಲಿ)

| ವರ್ಷ | ರಾಜಸ್ವ | | | ಬಂಡವಾಳ | | |
|---|---|---|---|---|---|---|
| | ಉಳಿತಾಯಗಳು | ಅಧ್ಯರ್ಪಿಸಿದ ಮೊತ್ತ | ಅಧ್ಯರ್ಪಣೆ ಮಾಡದ ಮೊತ್ತ | ಉಳಿತಾಯಗಳು | ಅಧ್ಯರ್ಪಿಸಿದ ಮೊತ್ತ | ಅಧ್ಯರ್ಪಣೆ ಮಾಡದ ಮೊತ್ತ |
| **2018–19** | 254.83 | 0.00 | 254.83 | 83.84 | 0.00 | 83.84 |
| **2019–20** | 1,151.07 | 1.06 | 1,150.01 | 250.53 | 0.00 | 250.53 |
| **2020–21** | 1,469.07 | 60.64 | 1,408.43 | 810.48 | 0.00 | 810.48 |
| **ಒಟ್ಟು** | **2,874.97** | **61.70** | **2,813.27** | **1,144.85** | **0.00** | **1,144.85** |

*ಆಕರ: ಧನವಿನಿಯೋಗ ಲೆಕ್ಕಗಳು*

### 3.8.1.4 ಸತತ ಉಳಿತಾಯಗಳು

ಕರ್ನಾಟಕ ಆಯವ್ಯಯ ಕೈಪಿಡಿ ಪ್ಯಾರಾ 110ರ ಪ್ರಕಾರ ಹಿಂದಿನ ಕಾರ್ಯನಿರ್ವಹಣೆ, ವಿವಿಧ ಯೋಜನೆಗಳ ರಚನೆ/ ಅನುಷ್ಠಾನದ ಹಂತ, ಯೋಜನೆಯನ್ನು ನಿಗದಿಪಡಿಸಿದಂತೆ ಅನುಷ್ಠಾನಗೊಳಿಸುವ ಅನುಷ್ಠಾನ ಏಜೆನ್ಸಿಗಳ ಸಾಂಸ್ಥಿಕ ಸಾಮರ್ಥ್ಯ, ವೆಚ್ಚ ಮಾಡುವ ಏಜೆನ್ಸಿಗಳು ವೆಚ್ಚ ಮಾಡಲು ಇರುವ ಕೊರತೆಗಳು ಮತ್ತು ಬಹು ಮುಖ್ಯವಾಗಿ ನಂತರದ ಹಂತದಲ್ಲಿ ಲಭ್ಯವಿರುವ ನಿಧಿಯ ಅಧ್ಯರ್ಪಣೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ, ಸರ್ಕಾರದ ಸಹಾಯದ ಪ್ರಮಾಣವು ಸ್ವೀಕರಿಸುವವರ ಬಳಿ ಬಳಕೆಯಾಗದೆ/ಲೆಕ್ಕಕ್ಕೆ ಸಿಗದೆ ಇತ್ಯಾದಿಗಳ ಕಾರಣಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. 2018–19ರಿಂದ 2020–21ರಲ್ಲಿ ಸತತ ಉಳಿತಾಯಗಳನ್ನು **ಕೋಷ್ಟಕ 3.13**ರಲ್ಲಿ ವಿವರಿಸಿದಂತೆ ಕೈಪಿಡಿಯ ಕಂಡಿಕೆ 110ರ ನಿಬಂಧನೆಗಳನ್ನು ಗಮನಿಸಲಾಗುತ್ತಿಲ್ಲ ಎಂಬುದನ್ನು ಸೂಚಿಸುತ್ತದೆ.

**ಕೋಷ್ಟಕ 3.13: ಸತತ ಉಳಿತಾಯಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕಶೀರ್ಷಿಕೆ | 2018–19 | 2019–20 | 2020–21 |
|---|---|---|---|---|
| 1 | 2225–01–001–0–07<br>ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಆಯೋಗ | 0.84 | 0.71 | 0.53 |
| 2 | 2225–01–800–0–22<br>ಖಾಲಿ ಹುದ್ದೆಗಳ ಅವಕಾಶ | 1.23 | 24.49 | 111.25 |
| 3 | 2225–02–001–0–02<br>ಸಂಶೋಧನೆ ಮತ್ತು ತರಬೇತಿ | 3.48 | 6.03 | 0.95 |
| 4 | 2225–01–796–0–02–059<br>ಇತರೆ ವೆಚ್ಚಗಳು | 0.24 | 50.88 | 11.41 |
| 5 | 2225–01–277–0–02–051<br>ಸಾಮಾನ್ಯ ವೆಚ್ಚಗಳು | 12.79 | 0.46 | 20.06 |
| 6 | 2225–03–277–2–53–034<br>ಗುತ್ತಿಗೆ/ಹೊರಗುತ್ತಿಗೆ | 0.43 | 0.27 | 16.24 |
| 7 | 2225–03–001–0–05–103<br>ಸಹಾಯಾನುದಾನಗಳು–ಸಾಮಾನ್ಯ | 1.05 | 134.74 | 43.51 |

*ಆಕರ: ಅನುದಾನ ವಹಿ*

### 3.8.1.5 ಉದ್ದೇಶ ಶೀರ್ಷಿಕೆ ₹211–ಹೂಡಿಕೆ' ಅಡಿಯಲ್ಲಿ ತಪ್ಪು ವರ್ಗೀಕರಣ

ವೆಚ್ಚದ ಸ್ವರೂಪವನ್ನು ತಿಳಿಯಲು ಮತ್ತು ಭವಿಷ್ಯದ ಆಯವ್ಯಯ ತಯಾರಿಕೆಗೆ ಸರಿಯಾದ ಉದ್ದೇಶ ಶೀರ್ಷಿಕೆಗೆ ವರ್ಗೀಕರಿಸುವುದು ಅತ್ಯಗತ್ಯವಾಗಿದೆ. 2020–21ನೇ ಸಾಲಿನಲ್ಲಿ, ಲೆಕ್ಕ ಶೀರ್ಷಿಕೆ 2225–01–190–4–01–211 ಅಡಿಯಲ್ಲಿ ₹40 ಕೋಟಿಗಳನ್ನು ಒದಗಿಸಲಾಗಿದೆ. ಹೂಡಿಕೆಗೆ ಪ್ರತಿಯಾಗಿ ₹20 ಕೋಟಿ ವೆಚ್ಚ ಮಾಡಲಾಗಿದೆ. ಅನುದಾನ ಬಿಡುಗಡೆಗಳ (18 ಮಾರ್ಚ್ 2021) ಸರ್ಕಾರದ ಆದೇಶವನ್ನು ಪರಿಶೀಲಿಸಿದಾಗ, ಪರಿಶಿಷ್ಟ ಜಾತಿಯ ಕಲ್ಯಾಣಕ್ಕಾಗಿ ನಿಯೋಜಿತವಲ್ಲದ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮಕ್ಕೆ "ಸಹಾಯಧನ"ವಾಗಿ ಈ ಮೊತ್ತವನ್ನು ಬಿಡುಗಡೆ ಮಾಡಿರುವುದು ಗಮನಕ್ಕೆ ಬಂದಿದೆ. ಆದ್ದರಿಂದ ವರ್ಗೀಕರಣವು ತಪ್ಪಾಗಿದೆ ಮತ್ತು ಲೆಕ್ಕಗಳ ಪಾರದರ್ಶಕತೆಯ ಮೇಲೆ ಪರಿಣಾಮ ಬೀರುತ್ತದೆ. ಇದಲ್ಲದೆ, 24 ಫೆಬ್ರವರಿ 2021ರ ಪಾವತಿದಾರರ ರಸೀದಿಯಲ್ಲಿ, ಪಾವತಿಯ ವಿವರಣೆಯನ್ನು ಭೋವಿ ಅಭಿವೃದ್ಧಿ ನಿಗಮಕ್ಕೆ ಹಣಕಾಸಿನ ನೆರವು ಎಂದು ತೋರಿಸಲಾಗಿದೆ.

### 3.8.1.6 ವೆಚ್ಚದ ಒತ್ತಡ

ಹಣದ ಬಿಡುಗಡೆಗಳು, ಹಣ ತೆಗೆತ ಮತ್ತು ಲೆಕ್ಕಪತ್ರ ನಿರ್ವಹಣೆಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಇಲಾಖೆಗಳು ಮತ್ತು ಇಲಾಖಾ ಮುಖ್ಯಸ್ಥರು, ಆರ್ಥಿಕ ವರ್ಷದ ವೆಚ್ಚವನ್ನು ಸರಿಯಾದ ರೀತಿಯಿಂದ 09 ಸೆಪ್ಟೆಂಬರ್ 2004ರಂದು ಆರ್ಥಿಕ ಇಲಾಖೆಯು ನೀಡಿದ ಸೂಚನೆಯ ಕಂಡಿಕೆ 6ರ ಪ್ರಕಾರ ಮತ್ತು ಲಭ್ಯವಿರುವ ಅನುದಾನದಲ್ಲಿ ಯೋಜಿಸಬೇಕಾಗಿದೆ. ಮಾರ್ಚ್ ತಿಂಗಳಿನ ಬಿಲ್‌ಗಳ ಒಗ್ಗೂಡಿಸುವಿಕೆ ಮತ್ತು ವೆಚ್ಚದ ಒತ್ತಡವನ್ನು ತಪ್ಪಿಸಬೇಕು. ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ಆಗಬಹುದಾದ ವೆಚ್ಚಗಳಿಗೆ ಅಗತ್ಯವಿರುವ ಮಟ್ಟದಲ್ಲಿ ಅಗತ್ಯ ಅನುಮೋದನೆಗಳನ್ನು ಪಡೆದ ನಂತರ ಆಡಳಿತಾತ್ಮಕ ಆದೇಶಗಳನ್ನು ಮುಂಚಿತವಾಗಿ ಹೊರಡಿಸಬೇಕಾಗಿದೆ. ಕೊನೆಯ ತ್ರೈ ಮಾಸಿಕದಲ್ಲಿ ವಿಶೇಷವಾಗಿ ಮಾರ್ಚ್ ತಿಂಗಳಲ್ಲಿ ವೆಚ್ಚದ ಒತ್ತಡದ ಹೆಚ್ಚಳವನ್ನು ಗಮನಿಸಲಾಗಿದೆ. 2020–21ರ ಅವಧಿಯಲ್ಲಿ ಮಾಡಿದ ಒಟ್ಟು ವೆಚ್ಚಕ್ಕೆ ಹೋಲಿಸಿದರೆ ಕೊನೆಯ ತ್ರೈ ಮಾಸಿಕ ಮತ್ತು ಮಾರ್ಚ್ ತಿಂಗಳಲ್ಲಿನ ವೆಚ್ಚವು ಹೆಚ್ಚಳವಾಗಿದ್ದು, ಶೇಕಡವಾರು ವೆಚ್ಚದ ಪ್ರಮಾಣದ ವಿವರವನ್ನು **ಕೋಷ್ಟಕ 3.14**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ 3.14: ವೆಚ್ಚದ ಒತ್ತಡ**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಲೆಕ್ಕಶೀರ್ಷಿಕೆ | ಒಟ್ಟು ವೆಚ್ಚ | ಕೊನೆಯ ತ್ರೈಮಾಸಿಕದಲ್ಲಿ ವೆಚ್ಚ | | ಮಾರ್ಚ್‌ನಲ್ಲಿ ವೆಚ್ಚ | |
|---|---|---|---|---|---|---|
| | | | ಮೊತ್ತ | ಶೇಕಡಾವಾರು | ಮೊತ್ತ | ಶೇಕಡಾವಾರು |
| 1 | 2225–01–190–2–01–103 ಸಹಾಯಾನುದಾನ–ಸಾಮಾನ್ಯ | 25.00 | 25.00 | 100 | 25.00 | 100 |
| 2 | 2225–03–190–0–04–106 ಸಹಾಯಧನಗಳು | 80.00 | 60.00 | 75 | 40.00 | 50 |
| 3 | 2225–03–277–2–51–117 ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹ | 180.00 | 180.00 | 100 | 180.00 | 100 |
| 4 | 2225–03–277–2–52–117 ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹ | 114.97 | 114.97 | 100 | 99.13 | 86 |
| 5 | 4225–04–190–0–03–133 ವಿಶೇಷ ಅಭಿವೃದ್ಧಿ ಯೋಜನೆ | 50.00 | 50.00 | 100 | 50.00 | 100 |

*ಆಕರ: ಅನುದಾನ ವಹಿ*

ಮೇಲಿನ ಕೋಷ್ಟಕದಲ್ಲಿ ನೋಡಿದಂತೆ, ಮಾರ್ಚ್ ತಿಂಗಳಲ್ಲಿನ ವೆಚ್ಚದ ಶೇಕಡವಾರು ಪ್ರಮಾಣವು 50 ರಿಂದ 100ರ ನಡುವೆ ಇತ್ತು. ಇದು ಹಣಕಾಸಿನ ಔಚಿತ್ಯತೆಯ ಉಲ್ಲಂಘನೆಯನ್ನು ಸೂಚಿಸುತ್ತದೆ.

### *3.8.2 ಅನುದಾನ ಸಂಖ್ಯೆ 12 – ಮಾಹಿತಿ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು – ಸಮೀಕ್ಷೆ*

ಅನುದಾನ ಸಂಖ್ಯೆ 12 – ಮಾಹಿತಿ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು ಈ ಕೆಳಗಿನ ಕ್ರಿಯಾತ್ಮಕ ಪ್ರಧಾನ ಲೆಕ್ಕ ಶೀರ್ಷಿಕೆಗಳನ್ನು ಒಳಗೊಂಡಿದೆ.

2204–ಕ್ರೀಡೆ ಮತ್ತು ಯುವ ಜನ ಸೇವೆಗಳು

2205–ಕಲೆ ಮತ್ತು ಸಂಸ್ಕೃತಿ

2220–ಮಾಹಿತಿ ಮತ್ತು ಪ್ರಚಾರ

3053–ನಾಗರಿಕ ವಿಮಾನಯಾನ

3452–ಪ್ರವಾಸೋದ್ಯಮ

4202–ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿಯ ಮೇಲಿನ ಬಂಡವಾಳ ವೆಚ್ಚ

4220–ಮಾಹಿತಿ ಮತ್ತು ಪ್ರಚಾರದ ಮೇಲಿನ ಬಂಡವಾಳ ವೆಚ್ಚ

5452–ಪ್ರವಾಸೋದ್ಯಮದ ಮೇಲಿನ ಬಂಡವಾಳದ ವೆಚ್ಚ

ಆಯವ್ಯಯ ನಿರ್ವಹಣೆ ಮತ್ತು ಅನುದಾನದ ವೆಚ್ಚ ನಿಯಂತ್ರಣದ ಪರಿಶೀಲನೆಗಾಗಿ ಪ್ರವಾಸೋದ್ಯಮ ಇಲಾಖೆಯ ಆಯವ್ಯಯ ಪರಾಮರ್ಶೆಯನ್ನು ಕೈಗೊಳ್ಳಲು ನಿರ್ಧರಿಸಲಾಯಿತು

### 3.8.2.1 ಪೀಠಿಕೆ

ಪ್ರವಾಸೋದ್ಯಮ ಇಲಾಖೆಯು ಕರ್ನಾಟಕದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವ ಮತ್ತು ಉತ್ತೇಜಿಸುವ ಜವಾಬ್ದಾರಿಯನ್ನು ಹೊಂದಿದೆ. ಇದು ಕೆಳಗಿನ ಲೆಕ್ಕಶೀರ್ಷಿಕೆಗಳನ್ನು ಒಳಗೊಳ್ಳುತ್ತದೆ.

3452–ಪ್ರವಾಸೋದ್ಯಮ

5452–ಪ್ರವಾಸೋದ್ರಮದ ಮೇಲಿನ ಬಂಡವಾಳ ವೆಚ್ಚ

### 3.8.2.2 ಆಯವ್ಯಯ ಮತ್ತು ವೆಚ್ಚ

ಕಳೆದ ಮೂರು ವರ್ಷಗಳಲ್ಲಿ (2018–19ರಿಂದ 2020–21) ಮೇಲಿನ ಕ್ರಿಯಾತ್ಮಕ ಪ್ರಧಾನ ಶೀರ್ಷಿಕೆಗಳ ಆಯವ್ಯಯ ಅವಕಾಶಗಳು, ವಾಸ್ತವ ವಿತರಣೆಗಳು ಮತ್ತು ಉಳಿತಾಯಗಳ ಒಟ್ಟಾರೆ ಸ್ಥಿತಿಯನ್ನು **ಕೋಷ್ಟಕ 3.15**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.15 ಆಯವ್ಯಯ ಮತ್ತು ವೆಚ್ಚ**

**(₹ ಕೋಟಿಗಳಲ್ಲಿ)**

| ವರ್ಷ | ವಿಭಾಗ | ಆಯವ್ಯಯ ಅವಕಾಶ | ಒಟ್ಟು | ವೆಚ್ಚ | ಬಳಕೆ ಮಾಡದ ಅವಕಾಶ ಮತ್ತು ಶೇಕಡಾವಾರು |
|---|---|---|---|---|---|
| **2018–19** | ರಾಜಸ್ವ–ಮೂಲ | 206.06 | 206.06 | 148.79 | 57.27 |
| | ಪೂರಕ | 0.00 | | | (28) |
| | ಬಂಡವಾಳ–ಮೂಲ | 450.93 | 450.93 | 265.72 | 185.21 |
| | ಪೂರಕ | 0.00 | | | (41) |
| **2019–20** | ರಾಜಸ್ವ–ಮೂಲ | 117.70 | 117.70 | 97.60 | 20.10 |
| | ಪೂರಕ | 0.00 | | | (17) |
| | ಬಂಡವಾಳ–ಮೂಲ | 379.83 | 379.83 | 283.18 | 96.65 |
| | ಪೂರಕ | 0.00 | | | (25) |
| **2020–21** | ರಾಜಸ್ವ–ಮೂಲ | 135.00 | 135.50 | 69.09 | 66.41 |
| | ಪೂರಕ | 0.50 | | | (49) |
| | ಬಂಡವಾಳ–ಮೂಲ | 152.85 | 152.85 | 69.99 | 82.86 |
| | ಪೂರಕ | 0.00 | | | (54) |

*ಆಕರ: ಧನವಿನಿಯೋಗ ಲೆಕ್ಕಗಳು*

ಮೇಲಿನ ಕೋಷ್ಟಕದಲ್ಲಿ ಕಂಡಂತೆ, ರಾಜಸ್ವ ವಿಭಾಗದ ಅಡಿಯಲ್ಲಿ ಬಳಕೆಯಾದ ಅವಕಾಶವು ಶೇಕಡ 17 ಮತ್ತು 49ರ ನಡುವೆ ಮತ್ತು ಬಂಡವಾಳ ವಿಭಾಗದ ಅಡಿಯಲ್ಲಿ ಇದು ಶೇಕಡ 25 ಮತ್ತು 54ರ ನಡುವೆ ಇದೆ.

### 3.8.2.3 ಸತತ ಉಳಿತಾಯ

ಕರ್ನಾಟಕ ಆಯವ್ಯಯ ಕೈಪಿಡಿ ಪ್ಯಾರಾ 110ರ ಪ್ರಕಾರ ಹಿಂದಿನ ಕಾರ್ಯ ನಿರ್ವಹಣೆ, ವಿವಿಧ ಯೋಜನೆಗಳ ರಚನೆ/ ಅನುಷ್ಠಾನದ ಹಂತ, ಯೋಜನೆಯನ್ನು ನಿಗದಿಪಡಿಸಿದಂತೆ ಅನುಷ್ಠಾನಗೊಳಿಸುವ ಅನುಷ್ಠಾನ ಏಜೆನ್ಸಿಗಳ ಸಾಂಸ್ಥಿಕ ಸಾಮರ್ಥ್ಯ, ವೆಚ್ಚ ಮಾಡುವ ಏಜೆನ್ಸಿಗಳು ವೆಚ್ಚ ಮಾಡಲು ಇರುವ ಕೊರತೆಗಳು ಮತ್ತು

ಬಹು ಮುಖ್ಯವಾಗಿ ನಂತರದ ಹಂತದಲ್ಲಿ ಲಭ್ಯವಿರುವ ನಿಧಿಯ ಅಧ್ಯರ್ಪಣೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ, ಸರ್ಕಾರದ ಸಹಾಯದ ಪ್ರಮಾಣವು ಸ್ವೀಕರಿಸುವವರ ಬಳಿ ಬಳಕೆಯಾಗದೆ/ಲೆಕ್ಕಕ್ಕೆ ಸಿಗದೆ ಇತ್ಯಾದಿಗಳ ಕಾರಣಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. 2018–20ರಲ್ಲಿ ಸತತ ಉಳಿತಾಯಗಳು, **ಕೋಷ್ಟಕ 3.16**ರಲ್ಲಿ ವಿವರಿಸಿದಂತೆ ಕೈಪಿಡಿಯ ಕಂಡಿಕೆ 110ರ ನಿಬಂಧನೆಗಳನ್ನು ಗಮನಿಸಲಾಗುತ್ತಿಲ್ಲ ಎಂಬುದನ್ನು ಸೂಚಿಸುತ್ತದೆ.

**ಕೋಷ್ಟಕ 3.16: ಸತತ ಉಳಿತಾಯಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಲೆಕ್ಕಶೀರ್ಷಿಕೆ | 2018–19 | 2019–20 | 2020–21 |
|---|---|---|---|---|
| 1 | 3452–01–101–0–04<br>ಹಂಪಿ, ಬೇಲೂರು ಮತ್ತು ವಿಜಯಪುರಗಳಲ್ಲಿ ಪ್ರವಾಸೋದ್ಯಮ ಕೇಂದ್ರಗಳ ಅಭಿವೃದ್ಧಿ | 40.00 | 5.74 | 4.52 |
| 2 | 3452–80–104–0–01<br>ಪ್ರವಾಸೋದ್ಯಮ ಪ್ರೋತ್ಸಾಹ ಮತ್ತು ಪ್ರಚಾರ | 15.94 | 13.86 | 61.18 |
| 3 | 5452–01–101–0–05<br>ಕರ್ನಾಟಕ ಪ್ರವಾಸೋದ್ಯಮ ವಿಷನ್ ಗ್ರೂಪ್ ಶಿಫಾರಸಿನ ಅನುಷ್ಠಾನ | 25.00 | 50.00 | 65.00 |

*ಆಕರ: ಅನುದಾನ ವಹಿ*

### 3.8.2.4 ಉಳಿತಾಯ ಬ್ಯಾಂಕ್ ಖಾತೆಯ ಅಡಿಯಲ್ಲಿ ₹1.05 ಕೋಟಿ ಸರ್ಕಾರಿ ನಿಧಿಗಳನ್ನು ನಿರ್ಬಂಧಿಸಿರುವುದು.

30 ಜನವರಿ 2017ರ ಸರ್ಕಾರಿ ಆದೇಶದ ಪ್ರಕಾರ, ಸಕ್ಷಮ ಪ್ರಾಧಿಕಾರದ ಸ್ಪಷ್ಟ ಅನುಮತಿಯಿಲ್ಲದೆ ಸರ್ಕಾರಿ ಇಲಾಖೆಗಳು ಯಾವುದೇ ಬ್ಯಾಂಕ್ ಖಾತೆಯನ್ನು ತೆರೆಯಬಾರದು. ಸರಿಯಾದ ಮಂಜೂರಾತಿ ಇಲ್ಲದೆ ಅಸ್ತಿತ್ವದಲ್ಲಿರುವ ಎಲ್ಲಾ ಬ್ಯಾಂಕ್ ಖಾತೆಗಳು ಮತ್ತು ಎಲ್ಲಾ ನಿಷ್ಕ್ರಿಯ ಖಾತೆಗಳ ಪರಿಶೀಲನೆ, ನೀಡಿದ ಚೆಕ್‌ಗಳ ನಗದೀಕರಣ ಮತ್ತು ನಗದೀಕರಣವಾಗದ ಚೆಕ್ಕುಗಳ ಸಮನ್ವಯ ಮಾಡಿದ ನಂತರ ಮುಕ್ತಾಯ ಮಾಡಬೇಕಾಗಿದೆ.

ಇಲಾಖೆಯು ವಿಜಯಾ ಬ್ಯಾಂಕ್‌ನಲ್ಲಿ ಉಳಿತಾಯ ಬ್ಯಾಂಕ್ ಖಾತೆ (ಸಂಖ್ಯೆ.1178011001657) ಯನ್ನು (ಮಾರ್ಚ್ 2012) ತೆರೆದಿತ್ತು, ಇದನ್ನು ಬ್ಯಾಂಕ್‌ಗಳ ವಿಲೀನದ ಕಾರಣ ಖಾತೆ (ಸಂಖ್ಯೆ 73920100000654)ಯೊಂದಿಗೆ ಬ್ಯಾಂಕ್ ಆಫ್ ಬರೋಡಾ (2020)ಗೆ ಸ್ಥಳಾಂತರಿಸಲಾಯಿತು. ಖಾತೆಯು 2014 ರಿಂದ ನಿಷ್ಕ್ರಿಯವಾಗಿದೆ. ಮಾರ್ಚ್ 2021ರ ಅಂತ್ಯದ ವೇಳೆಗೆ, ಖಾತೆಯಲ್ಲಿ ನಿಯತಕಾಲಿಕ ಬಡ್ಡಿ ಸೇರಿದಂತೆ ₹1.04 ಕೋಟಿ ಮೊತ್ತವನ್ನು ಸಂಗ್ರಹಿಸಲಾಗಿದೆ. ಆದಾಗ್ಯೂ, ಈ ಖಾತೆಗೆ ಸಂಬಂಧಿಸಿದ ಯಾವುದೇ ನಗದು ಪುಸ್ತಕವನ್ನು ನಿರ್ವಹಿಸಲಾಗಿಲ್ಲ ಮತ್ತು ಖಾತೆಯನ್ನು ಅಧಿಕೃತಗೊಳಿಸುವ ಸರ್ಕಾರದ ಮಂಜೂರು/ಅನುಮತಿ ದಾಖಲೆಯಲ್ಲಿಲ್ಲ ಎಂಬುದನ್ನು ಗಮನಿಸಿದೆ. ಈ ನಿಷ್ಕ್ರಿಯ ಖಾತೆಯನ್ನು ಮುಕ್ತಾಯಗೊಳಿಸದಿರುವುದು ₹1.05 ಕೋಟಿಗಳ ಸರ್ಕಾರದ ಹಣವನ್ನು ಉಪಯೋಗವಿಲ್ಲದೆ ನಿರ್ಬಂಧಿಸಲು ಕಾರಣವಾಯಿತು.

### 3.8.2.5 ವೈಯಕ್ತಿಕ ಠೇವಣಿ ಖಾತೆಯಲ್ಲಿದ್ದ ₹49.16 ಕೋಟಿಯನ್ನು ಸರ್ಕಾರಿ ಖಾತೆಗೆ ಜಮೆ ಮಾಡದಿರುವುದು

ಕರ್ನಾಟಕ ಆರ್ಥಿಕ ಸಂಹಿತೆಯ (ಅನುಚ್ಛೇದ 286 ಎ) ಪ್ರಕಾರ, ವೈಯಕ್ತಿಕ ಠೇವಣಿ ಖಾತೆಯನ್ನು ಗಣನೀಯ ಅವಧಿಯವರೆಗೆ ನಿರ್ವಹಿಸದಿದ್ದರೆ (2 ಮೇ 2016ರ ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ

ಎಫ್‌ಡಿ/ಟಿಎಆರ್/2014ರ ಪ್ರಕಾರ 3 ವರ್ಷಗಳು), ಯಾರ ಪರವಾಗಿ ಠೇವಣಿ ಖಾತೆ ತೆರೆಯಲಾಗಿದೆಯೋ ಅವರ ಜೊತೆ ಸಮಲೋಚಿಸಿ ಅದನ್ನು ಮುಕ್ತಾಯಗೊಳಿಸಬೇಕು. ಖಾತೆಗಳನ್ನು ಅದರ ಚಾಲ್ತಿಯ ಅವಧಿಯನ್ನು ಮೀರಿ ಮುಂದುವರಿಸಲು, ಆಡಳಿತಾಧಿಕಾರಿಯು ಆರ್ಥಿಕ ಇಲಾಖೆಯ ಅನುಮೋದನೆಯನ್ನು ಪಡೆಯಬೇಕು

ಇಲಾಖೆ ದಾಖಲೆಗಳ ಪರಿಶೀಲನೆಯಲ್ಲಿ, ಇಲಾಖೆಯು ನಿರ್ವಹಿಸುತ್ತಿರುವ ವೈಯಕ್ತಿಕ ಠೇವಣಿ ಖಾತೆಯು ಏಪ್ರಿಲ್ 2017ರಿಂದ ನಿಷ್ಕ್ರಿಯವಾಗಿದೆ ಎಂದು ತಿಳಿದು ಬಂದಿದೆ, ಅದರ ಮುಂದುವರಿಕೆಗೆ ಆರ್ಥಿಕ ಇಲಾಖೆಯಿಂದ ಅನುಮೋದನೆಯನ್ನು ಪಡೆದಿಲ್ಲ ಅಥವಾ ಖರ್ಚು ಮಾಡದ ₹49.16 ಕೋಟಿಯನ್ನು ಇಲ್ಲಿಯವರೆಗೆ ಸರ್ಕಾರಕ್ಕೆ ಜಮೆ ಮಾಡಲಾಗಿಲ್ಲ, ಇದು ಠೇವಣಿ ಖಾತೆಯಲ್ಲಿ ಸರ್ಕಾರಿ ಹಣವು ಬಳಕೆಯಾಗದೆ ನಿರ್ಬಂಧವಾಗಲು ಕಾರಣವಾಯಿತು, ಇದು ಆರ್ಥಿಕ ಸಂಹಿತೆಯು ನಿಬಂಧನೆಯನ್ನು ಉಲ್ಲಂಘಿಸುತ್ತದೆ.

ಪ್ರತ್ಯುತ್ತರವಾಗಿ (ಅಕ್ಟೋಬರ್ 2021), ವೆಚ್ಚ ಮಾಡದ ಶಿಲ್ಕುಗಳನ್ನು ರಾಜ್ಯದ ಸಂಚಿತ ನಿಧಿಗೆ ಜಮಾ ಮಾಡಲು ಕ್ರಮ ತೆಗೆಕೊಳ್ಳಲಾಗುವುದು ಎಂದು ಇಲಾಖೆ ಹೇಳಿದೆ.

### 3.8.2.6 ವೆಚ್ಚದ ಒತ್ತಡ

ಹಣದ ಬಿಡುಗಡೆಗಳು, ಹಣ ತೆಗೆತ ಲೆಕ್ಕಪತ್ರ ನಿರ್ವಹಣೆಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಇಲಾಖೆಗಳು ಮತ್ತು ಇಲಾಖೆಗಳ ಮುಖ್ಯಸ್ಥರು, ಆರ್ಥಿಕ ವರ್ಷದ ವೆಚ್ಚವನ್ನು ಸರಿಯಾದ ರೀತಿಯಿಂದ 09 ಸೆಪ್ಟೆಂಬರ್ 2004ರಂದು ಆರ್ಥಿಕ ಇಲಾಖೆಯು ನೀಡಿದ ಸೂಚನೆಯ ಕಂಡಿಕೆ 6ರ ಪ್ರಕಾರ ಮತ್ತು ಲಭ್ಯವಿರುವ ಅನುದಾನದಲ್ಲಿ ಯೋಜಿಸಬೇಕಾಗಿದೆ. ಮಾರ್ಚ್ ತಿಂಗಳಿನಲ್ಲಿ ಬಿಲ್‌ಗಳ ಒಗ್ಗೂಡಿಸುವಿಕೆ ಮತ್ತು ವೆಚ್ಚದ ಒತ್ತಡವನ್ನು ತಪ್ಪಿಸಬೇಕು. ಫೆಬ್ರವರಿ ಮತ್ತು ಮಾರ್ಚ್ ತಿಂಗಳಿನಲ್ಲಿ ಆಗಬಹುದಾದ ವೆಚ್ಚಗಳಿಗೆ ಅಗತ್ಯವಿರುವ ಮಟ್ಟದಲ್ಲಿ ಅಗತ್ಯ ಅನುಮೋದನೆಗಳನ್ನು ಪಡೆದ ನಂತರ ಆಡಳಿತಾತ್ಮಕ ಆದೇಶಗಳನ್ನು ಮುಂಚಿತವಾಗಿ ಹೊರಡಿಸಬೇಕಾಗಿದೆ. ಕೊನೆಯ ತ್ರೈಮಾಸಿಕದಲ್ಲಿ ವಿಶೇಷವಾಗಿ ಮಾರ್ಚ್ ತಿಂಗಳಲ್ಲಿ ವೆಚ್ಚದ ಒತ್ತಡದ ವಿಪರೀತವನ್ನು ಗಮನಿಸಲಾಗಿದೆ. ಮತ್ತು 2020–21ರ ಅವಧಿಯಲ್ಲಿ ಮಾಡಿದ ಒಟ್ಟು ವೆಚ್ಚಕ್ಕೆ ಹೋಲಿಸಿದರೆ ಕೊನೆಯ ತ್ರೈಮಾಸಿಕ ಮತ್ತು ಮಾರ್ಚ್ ತಿಂಗಳಲ್ಲಿನ ವೆಚ್ಚದ ಹೆಚ್ಚಳವಾಗಿದ್ದು, ಶೇಕಡಾವಾರು ಪ್ರಮಾಣ ವೆಚ್ಚದ ವಿವರವನ್ನು **ಕೋಷ್ಟಕ 3.17**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ 3.17: ವೆಚ್ಚದ ಒತ್ತಡ**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕಶೀರ್ಷಿಕೆ | ಒಟ್ಟು ವೆಚ್ಚ | ಕೊನೆಯ ತ್ರೈಮಾಸಿಕದ ವೆಚ್ಚ | | ಮಾರ್ಚ್‌ನಲ್ಲಿನ ವೆಚ್ಚ | |
|---|---|---|---|---|---|---|
| | | | ಮೊತ್ತ | ಶೇಕಡ | ಮೊತ್ತ | ಶೇಕಡ |
| 1 | 3452–01–101–0–04–200 ನಿರ್ವಹಣೆ | 2.52 | 2.52 | 100 | 1.45 | 58 |
| 2 | 3452–80–104–0–01–051 ಸಾಮಾನ್ಯ ವೆಚ್ಚಗಳು | 11.86 | 8.45 | 71 | 8.23 | 69 |
| 3 | 3452–80–104–0–01–059 ಇತರೆ ವೆಚ್ಚಗಳು | 22.13 | 11.29 | 51 | 10.16 | 46 |
| 4 | 3452–80–104–0–04–106 ಸಹಾಯಧನ | 19.85 | 15.45 | 78 | 10.96 | 55 |
| 5 | 5452–01–101–0–05–132 ಬಂಡವಾಳ ವೆಚ್ಚಗಳು | 35.00 | 16.67 | 48 | 11.20 | 32 |
| 6 | 5452–01–800–0–14–132 ಬಂಡವಾಳ ವೆಚ್ಚಗಳು | 34.99 | 20.29 | 58 | 10.74 | 31 |

*ಆಕರ: ಅನುದಾನ ವಹಿ*

## 3.9 ತೀರ್ಮಾನ

- ಒಟ್ಟು ಅವಕಾಶದ ಶೇಕಡ 8.49ರಷ್ಟು ಬಳಕೆಯಾಗದೆ ಉಳಿದಿರುವುದರಿಂದ ರಾಜ್ಯ ಸರ್ಕಾರವು ಕೈಗೊಂಡಿರುವ ಆಯವ್ಯಯ ಕಸರತ್ತು ಹೆಚ್ಚು ವಾಸ್ತವಿಕವಾಗಿರಬೇಕು. ಪೂರಕ ಅವಕಾಶಗಳು ಮೂಲ ಆಯವ್ಯತದ ಶೇಕಡ 8.37ರಷ್ಟಿತ್ತು. ಅನಗತ್ಯ, ಅತಿಯಾದ ಮತ್ತು ಅಸಮರ್ಪಕ ಪೂರಕ ಅವಕಾಶ ಪ್ರಕರಣಗಳು ಉಳಿತಾಯ/ಹೆಚ್ಚುವರಿ ವೆಚ್ಚಕ್ಕೆ ಕಾರಣವಾಯಿತು. ಇದಲ್ಲದೆ, ವೆಚ್ಚ ಮಾಡದ ಅವಕಾಶದ 80 ಪ್ರತಿಶತವನ್ನು ಅಧ್ಯರ್ಪಣೆ ಮಾಡಿಲ್ಲ;
- ಕರ್ನಾಟಕ ಆಯವ್ಯಯ ಕೈಪಿಡಿಯ ಅನುಚ್ಛೇದ 264ರ ಅನ್ವಯ ಉಳಿತಾಯಕ್ಕೆ ಕಾರಣಗಳನ್ನು ನೀಡುವುದನ್ನು ನಿರ್ದಿಷ್ಟ ಪಡಿಸಿದ್ದರೂ, ಇಲಾಖೆಗಳು ಶೇಕಡ 80ರಷ್ಟು ಉಳಿತಾಯಕ್ಕೆ ಕಾರಣಗಳನ್ನು ಒದಗಿಸಿಲ್ಲ;
- ವಿಜ್ಞಾನ ಮತ್ತು ಪ್ರತಿಭಾ ಶೋಧ ಕಾರ್ಯಕ್ರಮಗಳು, ಕೃತಕ ಬುದ್ಧಿಮತ್ತೆ ಸಂಶೋಧನಾ ಅನುವಾದ ಪಾರ್ಕ್, ನೀರಿನ ಸಂರಕ್ಷಣೆಗಾಗಿ ಟ್ಯಾಂಕ್ ಬ್ಯಾಂಕ್, ಮಣ್ಣಿನ ಸ್ವಾಸ್ಥತೆಯ ನೀತಿ ಇತ್ಯಾದಿಗಳಂತಹ ಸರ್ಕಾರದ ಮಹತ್ವದ ನೀತಿ ಉಪಕ್ರಮಗಳಿಗೆ ಹಣವನ್ನು ಬಿಡುಗಡೆ ಮಾಡದಿರುವುದು ಮತ್ತು ಮಾಹಿತಿಯ ಸ್ವೀಕೃತಿಯಲ್ಲಿನ ವಿಳಂಬದಿಂದಾಗಿ ವರ್ಷದಲ್ಲಿ ಪೂರೈಸಲಾಗಿಲ್ಲ;
- ಪ್ರಸಕ್ತ ವರ್ಷದಲ್ಲಿ ಹಾಗೂ 2012–13ರಿಂದ 2017–18 ರವರೆಗಿನ ಅವಧಿಯಲ್ಲಿ ಉಂಟಾದ ಹೆಚ್ಚುವರಿ ವೆಚ್ಚವನ್ನು ಸಂವಿಧಾನದ 205ನೇ ವಿಧಿಯ ಅಡಿಯಲ್ಲಿ ಸಕ್ರಮೀಕರಣಗೊಳಿಸಬೇಕಾಗಿದೆ; ಮತ್ತು
- ಪುನರ್ವಿ ಯೋಗಗಳನ್ನು ಸಾಕಷ್ಟು ಸಮರ್ಥನೆ ಇಲ್ಲದೆ ಮಾಡಲಾಗಿದೆ, ಇದರಿಂದಾಗಿ ವಾಸ್ತವ ವೆಚ್ಚದಲ್ಲಿ ಉಳಿತಾಯ/ಹೆಚ್ಚುವರಿಯಾಗಿದೆ. 43 ಪ್ರಕರಣಗಳಲ್ಲಿ ಪುನರ್ವಿನಿಯೋಗ ಮಂಜೂರಾತಿ ಆದೇಶಗಳು ದೋಷಪೂರಿತವಾಗಿದ್ದು ತಿರಸ್ಕರಿಸಲ್ಪಟ್ಟಿವೆ.

## 3.10 ಶಿಫಾರಸುಗಳು

- ಬಳಕೆಯಾಗದೆ ಉಳಿದಿರುವ ಆಯವ್ಯಯ ಅವಕಾಶ ಪ್ರಕರಣಗಳನ್ನು ತಪ್ಪಿಸಲು ಎಲ್ಲಾ ಇಲಾಖೆಗಳಲ್ಲಿ ಆಯವ್ಯಯ ನಿಯಂತ್ರಣವನ್ನು ಬಲಪಡಿಸಬೇಕು.
- 2012–13ರಿಂದ ಆಗಿರುವ ಹೆಚ್ಚುವರಿ ವೆಚ್ಚವನ್ನು ಕ್ರಮಬದ್ಧಗೊಳಿಸಲು ಅಂಥಹ ಪ್ರಕರಣಗಳನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮಂಡಿಸಲು ಆದ್ಯತೆಯನ್ನು ನೀಡಬೇಕು.
- ಅನಗತ್ಯ/ಅತಿಯಾದ ಪೂರಕ ಅವಕಾಶಗಳನ್ನು ತಪ್ಪಿಸಬೇಕು.
- ಆರ್ಥಿಕ ಸಂಹಿತೆಯ ನಿಬಂಧನೆಗಳಿಗೆ ಅನುಗುಣವಾಗಿ ಪುನರ್ವಿನಿಯೋಗ ಆದೇಶಗಳನ್ನು ನೀಡಬೇಕು.

# ಅಧ್ಯಾಯ–4

# ಲೆಕ್ಕಗಳ ಗುಣಮಟ್ಟ ಮತ್ತು ಆರ್ಥಿಕ ನಿರೂಪಣಾ ಪದ್ಧತಿಗಳು

# ಅಧ್ಯಾಯ 4 – ಲೆಕ್ಕಗಳ ಗುಣಮಟ್ಟ ಮತ್ತು ಆರ್ಥಿಕ ನಿರೂಪಣಾ ಪದ್ಧತಿಗಳು

ಹಣಕಾಸಿನ ನಿಯಮಗಳು ಮತ್ತು ನಿಖರವಾದ ಲೆಕ್ಕಗಳ ಅನುಸರಣೆಯ ಆಧಾರದ ಮೇಲೆ ಉತ್ತಮ ಆಂತರಿಕ ಹಣಕಾಸು ವರದಿ ವ್ಯವಸ್ಥೆಯು ಉತ್ತಮ ಆಡಳಿತದ ಗುಣಲಕ್ಷಣಗಳಲ್ಲಿ ಒಂದಾಗಿದೆ. ಈ ಅಧ್ಯಾಯವು ಪ್ರಸಕ್ತ ವರ್ಷದಲ್ಲಿ ವಿವಿಧ ಹಣಕಾಸು ನಿಯಮಗಳು, ಕಾರ್ಯ ವಿಧಾನಗಳು ಮತ್ತು ನಿರ್ದೇಶನಗಳ ಅನುಸರಣೆಯ ಅವಲೋಕನ ಮತ್ತು ಸ್ಥಿತಿಯನ್ನು ಒದಗಿಸುತ್ತದೆ.

## ಎ ಖಾತೆಗಳ ಸಂಪೂರ್ಣತೆಗೆ ಸಂಬಂಧಿಸಿದ ಅವಲೋಕನಗಳು

### 4.1 ರಾಜ್ಯ ಸಂಚಿತ ನಿಧಿ ಅಥವಾ ಸಾರ್ವಜನಿಕ ಲೆಕ್ಕದ ಹೊರಗಿನ ನಿಧಿಗಳು

- **ಖಾಸಗಿ ಬ್ಯಾಂಕ್‌ನಲ್ಲಿ ನಿಧಿಯನ್ನು ಇರಿಸಿರುವುದು**

ಕರ್ನಾಟಕದಲ್ಲಿ ಸರ್ಕಾರದ ಹಣಕಾಸು ವ್ಯವಹಾರಗಳನ್ನು ಸರ್ಕಾರದ ಪರವಾಗಿ ಹಣವನ್ನು ಸ್ವೀಕರಿಸುವ ಮತ್ತು ವಿತರಿಸುವ ಖಜಾನೆಗಳ ಮೂಲಕ ನಿರ್ವಹಿಸಲಾಗುತ್ತದೆ. ಆದರೂ, ವಿಶೇಷ ಸಂದರ್ಭಗಳಲ್ಲಿ ಬ್ಯಾಂಕ್‌ಗಳ ಮೂಲಕ ಹಣವನ್ನು ನಿರ್ವಹಿಸಲು ಸರ್ಕಾರಿ ಇಲಾಖೆಗಳಿಗೆ ಅನುಮತಿ ಇದೆ. ಕರ್ನಾಟಕ ಸರ್ಕಾರವು ನಿಧಿಗಳ ನಿರ್ವಹಣೆಗೆ ಮಾರ್ಗಸೂಚಿಗಳನ್ನು (ಜನವರಿ 2017) ಬಿಡುಗಡೆಮಾಡಿದ್ದು, ಇದು ಹೆಚ್ಚುವರಿ ಹಣವನ್ನು ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಅಥವಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಲ್ಲಿ ಮಾತ್ರ ಠೇವಣಿ ಇಡಬೇಕು ಎಂದು ಷರತ್ತು ವಿಧಿಸಿದೆ. ಆದಾಗ್ಯೂ, ಸಂಸ್ಥೆಯು ತನ್ನ ಕಾರ್ಯಾಚರಣೆಯ ಅನುಕೂಲಕ್ಕಾಗಿ ನಿರ್ದಿಷ್ಟ ಬ್ಯಾಂಕಿಂಗ್ ಪರಿಹಾರದ ಅಗತ್ಯವಿರುವಾಗ ಮತ್ತು ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಅಂತಹ ಸೇವೆಗಳನ್ನು ಒದಗಿಸಲು ಸಾಧ್ಯವಾಗದಿದ್ದಾಗ, ಸಂಸ್ಥೆಯು ಖಾತೆಯನ್ನು ತೆರೆಯಲು ಅನುಸೂಚಿತ ಬ್ಯಾಂಕ್ ಅನ್ನು ಪರಿಗಣಿಸಬಹುದಾಗಿದ್ದು ಅಂತಹ ಬ್ಯಾಂಕು ಸಂಸ್ಥೆಗೆ ಮೌಲ್ಯಯುತ ಬ್ಯಾಂಕಿಂಗ್ ಹಾಗೂ ವ್ಯವಹಾರ ನಿವಾರಣೋಪಾಯಗಳನ್ನು ಒದಗಿಸುವಂತಿರಬೇಕು. ಅಂತಹ ಎಲ್ಲಾ ಸಂದರ್ಭಗಳಲ್ಲಿ ಹಣಕಾಸು ಇಲಾಖೆಯ ಸಮ್ಮತಿಯೊಂದಿಗೆ ಆಡಳಿತ ಇಲಾಖೆಯಿಂದ ಅನುಮೋದನೆಯ ಅಗತ್ಯವಿದೆ.

ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಸ್ವಚ್ಛ ಭಾರತ್ ಮಿಷನ್ ಯೋಜನೆಯ ಅನುಷ್ಠಾನಕ್ಕೆ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದಿಂದ ಸ್ವೀಕೃತವಾದ ಮೊತ್ತವನ್ನು ಒಂದು ಖಾಸಗಿ ಬ್ಯಾಂಕ್ ಅಂದರೆ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್, ರಿಚ್ಮಂಡ್ ಟೌನ್, ಶಾಖೆಯ ಖಾತೆಯಲ್ಲಿ ಇರಿಸಿ ವ್ಯವಹಾರವನ್ನು ನಿರ್ವಹಿಸುತ್ತಿದೆ. ಈ ಖಾತೆಯಲ್ಲಿ ವೆಚ್ಚವಾಗದೆ ಉಳಿದ ಡದ ₹544.62 ಕೋಟಿಗಳಲ್ಲಿ ₹489.00 ಕೋಟಿಗಳನ್ನು ಐಸಿಐಸಿಐ ಬ್ಯಾಕಿನ ಫ್ಲೆಕ್ಸಿ ಠೇವಣಿಗೆ ವರ್ಗಾಯಿಸಲು ಪ್ರಸ್ತಾವನೆಯನ್ನು ಸಲ್ಲಿಸಿತ್ತು. ಇದನ್ನು ನಗರಾಭಿವೃದ್ಧಿ ಇಲಾಖೆಯು (ಅಕ್ಟೋಬರ್ 2018) ತಿರಸ್ಕರಿಸಿ, ಆರ್ಥಿಕ ಇಲಾಖೆಯ ಜನವರಿ 2017ರ ಸುತ್ತೋಲೆಯಲ್ಲಿ ನಿಗದಿಸಿರುವ ವಿಧಾನವನ್ನು ಅನುಸರಿಸಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ನಿಧಿಯನ್ನು ಇಡಲು ನಿರ್ದೇಶಿಸಿತು. ಆದರೆ, ಪೌರಾಡಳಿತ ನಿರ್ದೇಶನಾಲಯವು ಸರ್ಕಾರದ ನಿರ್ದೇಶನಗಳನ್ನು ಕಡೆಗಣಿಸಿ ಶೇಕಡ 7.15ರ ಬಡ್ಡಿಯೊಂದಿಗೆ ₹489.00 ಕೋಟಿಗಳನ್ನು ಐಸಿಐಸಿಐ ಬ್ಯಾಂಕ್‌ಗೆ ವರ್ಗಾಯಿಸಿದ್ದು, ಇದು ಅಕ್ರಮವಾಗಿತ್ತು.

ಇದಕ್ಕೆ ಉತ್ತರವಾಗಿ ಪೌರಾಡಳಿತ ನಿರ್ದೇಶನಾಲಯವು ಆರ್ಥಿಕ ಇಲಾಖೆಯ ಸೂಚನೆಯಂತೆ (ನವೆಂಬರ್ 2020) ಖಾತೆಯನ್ನು ತೆರೆಯಲಾಗಿದೆ ಎಂದು ಹೇಳಿದೆ. ಆದರೆ, ಪೌರಾಡಳಿತ

ನಿರ್ದೇಶನಾಲಯವು ಪರಿಶೋದನೆಗೆ ಅನುಮೋದನೆಯ ಪ್ರತಿಯನ್ನು ಒದಗಿಸಿಲ್ಲ ಅಥವಾ ರಾಜ್ಯ ಸರ್ಕಾರದ ಸೂಚನೆಗಳ ಪ್ರಕಾರ ಖಾತೆಯನ್ನು ಮುಕ್ತಾಯಗೊಳಿಸಲು ಕ್ರಮವನ್ನು ಪ್ರಾರಂಭಿಸಿಲ್ಲ.

ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ (ಡಿಸೆಂಬರ್ 2021) ನಗರಾಭಿವೃದ್ಧಿ ಇಲಾಖೆಯು ಬ್ಯಾಂಕಿನಿಂದ (ಐಸಿಐಸಿಐ) ವೆಚ್ಚ ಮಾಡದ ಹಣವನ್ನು ಹಿಂಪಡೆಯಲು ಮುಂದಿನ ಕ್ರಮ ಕೈಗೊಳ್ಳಲು ಕೋರಲಾಗುವುದು ಎಂದು ಹೇಳಿದೆ.

- **ಸರ್ಕಾರದ ಅನುದಾನದಿಂದ ಗಳಿಸಿದ ಬಡ್ಡಿಯನ್ನು ಜಮೆ ಮಾಡದಿರುವುದು**

ಸರ್ಕಾರವು ಕಂಪನಿಗಳು, ನಿಗಮಗಳು, ಸ್ವಾಯತ್ತಸಂಸ್ಥೆಗಳು ಸೇರಿದಂತೆ ಶಾಸನಬದ್ಧ ಮಂಡಳಿಗಳು ಮತ್ತು ಪ್ರಾದೇಶಿಕ ಸೊಸೈಟಿಗಳಿಗೆ ಸಂಬಂಧಿಸಿದ ಸಂಸ್ಥೆಯ ಸಂದಾಯಿತ ಷೇರು ಬಂಡವಾಳ ರೂಪದಲ್ಲಿ, ಅನುದಾನಗಳು, ಸಬ್ಸಿಡಿಗಳು, ವೆಚ್ಚಗಳ ಮರುಪಾವತಿ, ಸಾಲಗಳು ಮತ್ತುಯೋಜನೆಗಳಿಗೆ ಬಿಡುಗಡೆಯಾದ ಹಣ ಇತ್ಯಾದಿಗಳಿಗೆ ಹಣವನ್ನು ಬಿಡುಗಡೆ ಮಾಡುತ್ತದೆ.

ಆರ್ಥಿಕ ಇಲಾಖೆಯು ಸರ್ಕಾರದ ಆದೇಶದ (ಜುಲೈ 2003) ಮೂಲಕ ಎಲ್ಲಾ ನಿಗಮ/ಕಂಪನಿಗಳು/ ಸ್ವಾಯತ್ತ ಸಂಸ್ಥೆಗಳು ಇತ್ಯಾದಿಗಳಿಗೆ, ಅವುಗಳು ಪಡೆದ ಸರ್ಕಾರಿ ನಿಧಿಗಳ ಮೇಲೆ ಗಳಿಸಿದ ಬಡ್ಡಿಯನ್ನು '0049 ಬಡ್ಡಿ ಸ್ವೀಕೃತಿಗಳು' ಲೆಕ್ಕ ಶೀರ್ಷಿಕೆಗೆ ಜಮೆ ಮಾಡುವುದರ ಮೂಲಕ ಸರ್ಕಾರಿ ಖಾತೆಗೆ ಪಾವತಿಸಲು ನಿರ್ದೇಶಿಸಿದೆ. ಹಾಗೆ ಗಳಿಸಿದ ಬಡ್ಡಿಯನ್ನು ಸಂಸ್ಥೆಗಳು ಯಾವುದೇ ಇತರ ವೆಚ್ಚಕ್ಕೆ ಬಳಸಲು ಅವಕಾಶವಿರುವುದಿಲ್ಲ ಎಂದೂ ಅದು ಒತ್ತಿ ಹೇಳಿದೆ. ಇದನ್ನು ಆಗಸ್ಟ್ 2019ರ ಸುತ್ತೋಲೆಯಲ್ಲಿ ಪುನರುಚ್ಚರಿಸಲಾಗಿದೆ.

ಕರ್ನಾಟಕ ಉರ್ದು ಅಕಾಡೆಮಿ, ಬೆಂಗಳೂರು ಮೇಲಿನ ಸೂಚನೆಗಳಿಗೆ ವಿರುದ್ಧವಾಗಿ ಸರ್ಕಾರದ ಅನುದಾನದಿಂದ ಗಳಿಸಿದ ₹31.85 ಲಕ್ಷ ಬಡ್ಡಿಯನ್ನು ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಿಲ್ಲ ಎಂದು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾಗಿದೆ. 2018–19ರಿಂದ 2020–21ರ ಅವಧಿಯಲ್ಲಿ ಗಳಿಸಿದ ಬಡ್ಡಿ ಮತ್ತು ಅದರ ವ್ಯವಹೃತಿಯ ವಿವರಗಳನ್ನು **ಕೋಷ್ಟಕ 4.1** ರಲ್ಲಿ ಸೂಚಿಸಲಾಗಿದೆ:

**ಕೋಷ್ಟಕ–4.1: ಸಂಸ್ಥೆಯು ಗಳಿಸಿದ ಬಡ್ಡಿ ಮತ್ತು ಅದರ ವ್ಯವಹೃತಿಯ ವಿವರಗಳು**

**(₹ ಲಕ್ಷಗಳಲ್ಲಿ)**

| ಸಂಸ್ಥೆಯ ಹೆಸರು | ಬಡ್ಡಿ ಗಳಿಕೆ | | | | ಬಡ್ಡಿ ಹಣದ ವ್ಯವಹೃತಿ |
|---|---|---|---|---|---|
| | 2018–19 | 2019–20 | 2020–21 | ಒಟ್ಟು | |
| ಕರ್ನಾಟಕ ಉರ್ದು ಅಕಾಡೆಮಿ, ಬೆಂಗಳೂರು | 14.56 | 9.37 | 7.92 | **31.85** | 2018–19 ರಿಂದ 2020–21 ರ ಅವಧಿಯಲ್ಲಿ ಗಳಿಸಿದ ಬಡ್ಡಿಯನ್ನು ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಿಲ್ಲ ಮತ್ತು ಆ ವರ್ಷಗಳಲ್ಲಿ ಕಡಿಮೆ ಆಯವ್ಯಯ ಮಂಜೂರು ಆಗಿರುವುದರಿಂದ ಇದನ್ನು ಬಳಸಿಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದೆ |

ರಾಜ್ಯದ ತೆರಿಗೆಯೇತರ ಆದಾಯವನ್ನು ಹೆಚ್ಚಿಸಲು ಸಹಾಯವಾಗುವುದರಿಂದ, ಸರ್ಕಾರವು ಅನುದಾನಗಳ ಮೇಲೆಗಳಿಸಿದ ಬಡ್ಡಿಯನ್ನು ಜಮೆ ಮಾಡಿಸಿಕೊಳ್ಳಲು ಕ್ರಮ ಕೈಗೊಳ್ಳಬೇಕು.

ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ ಕರ್ನಾಟಕ ಉರ್ದು ಅಕಾಡೆಮಿಗೆ ಬಡ್ಡಿಯನ್ನು ಸರ್ಕಾರಕ್ಕೆ ಪಾವತಿಸಲು ಆಡಳಿತ ಇಲಾಖೆಯ ಮೂಲಕ ವಿನಂತಿಸಲಾಗುವುದು ಎಂದು ಹೇಳಿದೆ (ಡಿಸೆಂಬರ್ 2021).

## ಬಿ. ಪಾರದರ್ಶಕತೆಗೆ ಸಂಬಂಧಿಸಿದ ಅವಲೋಕನ

### 4.2 ಬಳಕೆಯ ಪ್ರಮಾಣ ಪತ್ರಗಳ ಸಲ್ಲಿಕೆಯಲ್ಲಿ ವಿಳಂಬ

ಕರ್ನಾಟಕ ಆರ್ಥಿಕ ಸಂಹಿತೆ 1958ರ ನಿಯಮ 161(5)ರ ಅನ್ವಯ ನಿರ್ದಿಷ್ಟ ಉದ್ದೇಶಗಳಿಗಾಗಿ ಒದಗಿಸಿದ ಅನುದಾನಗಳಿಗೆ ಸಂಬಂಧಿಸಿದಂತೆ ಅನುದಾನಿತರಿಂದ, ಮಂಜೂರಾತಿ ದಿನಾಂಕದಿಂದ 18 ತಿಂಗಳೊಳಗೆ ನಿರ್ದಿಷ್ಟಪಡಿಸದ ಹೊರತು, ಇಲಾಖಾ ಅಧಿಕಾರಿಗಳು ಬಳಕೆ ಪ್ರಮಾಣ ಪತ್ರಗಳನ್ನು ಪಡೆಯಬೇಕು ಮತ್ತು ಪರಿಶೀಲನೆಯ ನಂತರ ಅವುಗಳನ್ನು ಮಹಾಲೇಖಾಪಾಲರ (ಲೇ ಮತ್ತು ಹ) ಅವರಿಗೆ ರವಾನಿಸಬೇಕು. **ಕೋಷ್ಟಕ–4.2**ರಲ್ಲಿ ವಿವರಿಸಿದಂತೆ 2020–21 ನೇ ವರ್ಷಕ್ಕೆ ₹38.63 ಕೋಟಿಗಳ ಮೊತ್ತದ 37 ಬಳಕೆ ಪ್ರಮಾಣ ಪತ್ರಗಳು ಸಲ್ಲಿಕೆಯಾಗದೆ ಬಾಕಿ ಉಳಿದಿವೆ ಎಂದು ಲೆಕ್ಕಪರಿಶೋಧನೆಯು ಗಮನಿಸಿದೆ. ಬಾಕಿ ಉಳಿದಿರುವ ಬಳಕೆ ಪ್ರಮಾಣ ಪತ್ರಗಳ ವರ್ಷವಾರು ಸ್ಥಿತಿಯನ್ನು **ಕೋಷ್ಟಕ–4.3**ರಲ್ಲಿ ನೀಡಲಾಗಿದೆ.

**ಕೋಷ್ಟಕ–4.2: 2020–21ಕ್ಕೆ ಬಾಕಿ ಇರುವ ಬಳಕೆ ಪ್ರಮಾಣಪತ್ರಗಳು**

(₹ ಕೋಟಿಗಳಲ್ಲಿ)

| ವರ್ಷ | ಪ್ರಾರಂಭಿಕ ಶಿಲ್ಕು | | ಸೇರ್ಪಡೆ | | ತೀರುವಳಿ | | ಸಲ್ಲಿಕೆಗೆ ಬಾಕಿ | |
|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| **2019–20** | 110 | 764.81 | 79 | 737.13 | 138 | 1,319.45 | 51 | 182.49 |
| **2020–21** | 51 | 182.49 | 396 | 1,239.80 | 410 | 1,383.66 | 37 | 38.63 |

*ಆಕರ – ಮಹಾಲೇಖಾಪಾಲರ (ಲೆ ಮತ್ತು ಹ) ಕಚೇರಿ*

**ಕೋಷ್ಟಕ–4.3: ಬಾಕಿ ಇರುವ ಬಳಕೆ ಪ್ರಮಾಣಪತ್ರಗಳ ವರ್ಷವಾರು ವಿವರ**

(₹ ಕೋಟಿಗಳಲ್ಲಿ)

| ವರ್ಷ | ಬಳಕೆ ಪ್ರಮಾಣಪತ್ರಗಳ ಸಂಖ್ಯೆ | ಮೊತ್ತ |
|---|---|---|
| **2002–03** | 3 | 1.41 |
| **2007–08** | 1 | 0.24 |
| **2010–11** | 1 | 0.11 |
| **2015–16** | 2 | 1.85 |
| **2016–17** | 2 | 0.59 |
| **2018–19** | 16 | 26.52 |
| **2019–20** | 12 | 7.91 |
| **Total** | **37** | **38.63** |

*ಆಕರ – ಮಹಾಲೇಖಾಪಾಲರ (ಲೆ ಮತ್ತು ಹ) ಕಚೇರಿ*

ಇದಲ್ಲದೆ, ನಿಯಮ 161(5) ಅನ್ವಯ ನಿಗದಿತ ಬಳಕೆ ಪ್ರಮಾಣ ಪತ್ರದ ನಮೂನೆಯು ವರ್ಷದಲ್ಲಿ ಬಳಕೆಯಾಗದ ಅನುದಾನವನ್ನು ಅಧ್ಯರ್ಪಣೆ ಮಾಡಬೇಕು ಅಥವ ನಂತರದ ವರ್ಷದಲ್ಲಿ ಪಡೆಯ ಬೇಕಾದ ಅನುದಾನಕ್ಕೆ ಸರಿ ಹೊಂದಿಸಬೇಕು ಎಂದು ಸ್ಪಷ್ಟವಾಗಿ ಸೂಚಿಸುತ್ತದೆ. 2019–20ನೇ ಸಾಲಿನಲ್ಲಿ ₹182.49 ಕೋಟಿಗಳ ಮೊತ್ತದ 51 ಬಳಕೆ ಪ್ರಮಾಣ ಪತ್ರಗಳು ಬಾಕಿ ಇದ್ದು 2020–21 ರಲ್ಲಿ ₹38.63 ಕೊಟಿಗಳ ಮೊತ್ತದ 37 ಬಳಕೆ ಪ್ರಮಾಣ ಪತ್ರಗಳಿಗೆ ಇಳಿಕೆಯಾಗಿದ್ದು, 2019–20ಕ್ಕೆ ಹೋಲಿಸಿದರೆ, 2020–21ಕ್ಕೆ ಬಾಕಿ ಉಳಿದಿರುವ ಬಳಕೆ ಪ್ರಮಾಣ ಪತ್ರಗಳ ಮೊತ್ತವು ಶೇಕಡಾ 79ರಷ್ಟು ಕಡಿಮೆಯಾಗಿದೆ. ಆದರೂ ಮೇಲಿನ 37 ಪ್ರಕರಣಗಳಲ್ಲಿ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದ ಕಾರಣ, ಬಿಡುಗಡೆಯಾದ ಅನುದಾನದ ಸಂಪೂರ್ಣ ಬಳಕೆಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಬಳಕೆ ಪ್ರಮಾಣ ಪತ್ರಗಳ ಸಲ್ಲಿಕೆಯು ಬಾಕಿ ಉಳಿದಿರುವ ಹೊರತಾಗಿಯೂ ಸಂಸ್ಥೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಇದು ಅನುದಾನ ಮಂಜೂರಾತಿಯಲ್ಲಿರುವ ನಿಯಂತ್ರಣದ ಕೊರತೆಯನ್ನು ಸೂಚಿಸುತ್ತದೆ. ಆದ್ದರಿಂದ, ಮುಂದಿನ ಅನುದಾನವನ್ನು ಬಿಡುಗಡೆ ಮಾಡುವ ಮೊದಲು ಸರ್ಕಾರವು

ಒಂದು ವರ್ಷಕ್ಕೂ ಹೆಚ್ಚು ಕಾಲ ಬಾಕಿ ಇರುವ ಎಲ್ಲಾ ಬಳಕೆ ಪ್ರಮಾಣ ಪತ್ರದ ಬಾಬ್ತುಗಳನ್ನು ಪರಿಶೀಲಿಸುವ ಅಗತ್ಯವಿದೆ.

**ನಕ್ಷೆ 4.1 2019–20ರವರೆಗು ನೀಡಿರುವ ಅನುದಾನಗಳಿಗೆ ಬಳಕೆ ಪ್ರಮಾಣ ಪತ್ರ ಬಾಕಿ ಇರುವ 4 ಪ್ರಮುಖ ಇಲಾಖೆಗಳು**

**(₹ ಕೋಟಿಗಳಲ್ಲಿ)**




*ಆಕರ – ಮಹಾಲೇಖಾಪಾಲರ (ಲೆ ಮತ್ತು ಹ) ಕಚೇರಿ*

**ನಕ್ಷೆ 4.1**ರಲ್ಲಿ ನೋಡಿದಂತೆ, ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದಿರುವ ಹೆಚ್ಚಿನ ಪ್ರಕರಣಗಳು ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ ಇಲಾಖೆ (ಶೇಕಡ 63.42) ಮತ್ತು ಕ್ರೀಡೆ ಮತ್ತು ಯುವಜನ ಸೇವೆಗಳು (ಶೇಕಡ 32.02) ಇಲಾಖೆಗೆ ಸಂಬಂಧಿಸಿದೆ. ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸುವಲ್ಲಿ ಬಾಕಿ ಉಳಿದಿರುವುದು ಸಂಕಲ್ಪಿಸಿದ ಉದ್ದೇಶಗಳಿಗಾಗಿ ಬಿಡುಗಡೆಯಾದ ಅನುದಾನದ ಬಳಕೆಯ ಬಗ್ಗೆ ಭರವಸೆ ಇಲ್ಲದಿರುವುದರ ಜೊತೆಗೆ ಇಲಾಖೆಗಳಿಂದ ಅನುದಾನಿತರಿಗೆ ಬಿಡುಗಡೆಯಾದ ಅನುದಾನದ ಬಳಕೆಯ ಮೇಲ್ವಿಚಾರಣೆಯ ಕೊರತೆಯನ್ನು ಸೂಚಿಸುತ್ತದೆ. ಬಾಕಿ ಉಳಿದಿರುವ ಬಳಕೆ ಪ್ರಮಾಣ ಪತ್ರಗಳ ಪ್ರಧಾನ ಲೆಕ್ಕ ಶೀರ್ಷಿಕೆವಾರು ಮತ್ತು ಇಲಾಖಾವಾರು ವಿವರಗಳನ್ನು ಪ್ರತಿವರ್ಷಕ್ಕೆ ಪ್ರತ್ಯೇಕವಾಗಿ **ಅನುಬಂಧ 4.1**ರಲ್ಲಿ ನೀಡಲಾಗಿದೆ.

ಆರ್ಥಿಕ ಇಲಾಖೆಯು (ಡಿಸೆಂಬರ್ 2021) ಈ ಅವಲೋಕನಗಳನ್ನು ಅನುಸರಿಸಲು ಆಡಳಿತ ಇಲಾಖೆಗಳಿಗೆ ವಿನಂತಿಸಲಾಗುವುದು ಎಂದು ಉತ್ತರಿಸಿದೆ.

## 4.3 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು

ಸಾದಿಲ್ವಾರು ವೆಚ್ಚಗಳ ಕೈಪಿಡಿ, 1958ರ ನಿಯಮ 36ರ ಅಡಿಯಲ್ಲಿ, ನಿಯಂತ್ರಣ ಮತ್ತು ವಿತರಣಾ ಅಧಿಕಾರಿಗಳು ಸೇವಾ ಶೀರ್ಷಿಕೆಗಳಿಗೆ ಖರ್ಚು ಹಾಕಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಹಣವನ್ನು ಪಡೆಯಲು ಅಧಿಕಾರ ಹೊಂದಿದ್ದಾರೆ ಮತ್ತು ಈ ಬಿಲ್ಲುಗಳಿಗೆ ಪಾವತಿಗಲ್ಲದ ಸವಿವರ ಸಾದಿಲ್ವಾರು (ಎನ್‌ಡಿಸಿ) ಬಿಲ್ಲುಗಳನ್ನು (ಅಂತಿಮ ವೆಚ್ಚವನ್ನು ಬೆಂಬಲಿಸುವ ವೋಚರ್‌ಗಳು) ಬಿಲ್‌ಗೆ ಸಂಬಂಧಿಸಿದ ತಿಂಗಳ ನಂತರದ ತಿಂಗಳ 15ರ ಮೊದಲು ಖಜಾನೆಗಳ ಮೂಲಕ ಪ್ರಧಾನ ಮಹಾಲೇಖಾಪಾಲರು (ಲೆ ಮತ್ತು ಹ) ಅವರಿಗೆ ಪ್ರಸ್ತುತ ಪಡಿಸುವ ಅಗತ್ಯವಿದೆ. ನಿಯಂತ್ರಣ ಅಧಿಕಾರಿಗಳು ತಕ್ಷಣದ ವಿತರಣೆಗೆ ಅಗತ್ಯವಿಲ್ಲದ ಹೊರತು ಬಿಲ್‌ಗಳ ಮೂಲಕ ಖಜಾನೆಯಿಂದ ಯಾವುದೇ ಮೊತ್ತವನ್ನು ಪಡೆದಿಲ್ಲವೆಂಬುದನ್ನು ಖಚಿತ ಪಡಿಸಿಕೊಳ್ಳಬೇಕು. ಮಾರ್ಚ್ 2021ರ ಅಂತ್ಯಕ್ಕೆ 2,221 ಸಂಕ್ಷಿಪ್ತ ಸಾದಿಲ್ವಾರು ಬಿಲ್‌ಗಳ ಮೇಲೆ ಪಡೆದ ಒಟ್ಟು ₹126.34 ಕೋಟಿಗಳಿಗೆ ಸವಿವರ ಸಾದಿಲ್ವಾರು ಬಿಲ್‌ಗಳು ಸಲ್ಲಿಕೆಯಾಗದೆ **ಕೋಷ್ಟಕ–4.4**ರಲ್ಲಿ ವಿವರಿಸಿದಂತೆ ಬಾಕಿ ಉಳಿದಿವೆ.

**ಕೋಷ್ಟಕ–4.4: ಸಂಕ್ಷಿಪ್ತ ಸಾದಿಲ್ವಾರು ಬಿಲ್‌ಗಳಿಗೆ ಸವಿವರ ಬಿಲ್‌ಗಳ ಸಲ್ಲಿಕೆಯ ವರ್ಷವಾರು ಪ್ರಗತಿ**

**(₹ ಕೋಟಿಗಳಲ್ಲಿ)**

| ವರ್ಷ | ಪ್ರಾರಂಭಿಕ ಶಿಲ್ಕು | | ಸೇರ್ಪಡೆ | | ತೀರುವಳಿ | | ಅಂತಿಮ ಶಿಲ್ಕು | |
|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| **2017–18 ವರೆಗೆ** | 3,272 | 84.81 | 3,094 | 90.03 | 3,090 | 90.84 | 3,276 | 84.00 |
| **2018–19** | 3,276 | 84.00 | 2,286 | 188.64 | 3,467 | 179.37 | 2,095 | 93.27 |
| **2019–20** | 2,095 | 93.27 | 2,109 | 182.90 | 2,245 | 179.49 | 1,959 | 96.68 |
| **2020–21** | 1,959 | 96.68 | 2,247 | 153.46 | 1,985 | 123.80 | 2,221 | 126.34 |

*ಆಕರ–ಹಣಕಾಸು ಲೆಕ್ಕಗಳು*

** ಮಾರ್ಚ್ 2021ರ ಬಿಲ್ಲುಗಳನ್ನು ಹೊರತುಪಡಿಸಿ*

**ನಕ್ಷೆ–4.2: ಸವಿವರ ಸಾದಿಲ್ವಾರು ಬಿಲ್‌ಗಳು ಸಲ್ಲಿಕೆಯಾಗದೆ ಉಳಿದಿರುವ ಪ್ರಮುಖ ಇಲಾಖೆಗಳು**

**(₹ ಕೋಟಿಗಳಲ್ಲಿ)**




*ಆಕರ : ಮಹಾಲೇಖಪಾಲರು(ಲೆ ಮತ್ತು ಹ) ಅವರ ಕಛೇರಿ*

ಬಾಕಿ ಉಳಿದಿರುವ ಸವಿವರ ಸಾದಿಲ್ವಾರು ಬಿಲ್‌ಗಳಲ್ಲಿ ಶೇಕಡ 30ರಷ್ಟು ಇತರೆ ಗ್ರಾಮೀಣಾಭಿವೃದ್ಧಿ ಇಲಾಖೆ – ಪ್ರಧಾನ ಶೀರ್ಷಿಕೆ 2515 (₹38.02 ಕೋಟಿಗಳು), ಶೇಕಡ 29ರಷ್ಟು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಚುನಾವಣೆಗಳು) – ಪ್ರಧಾನ ಶೀರ್ಷಿಕೆ 2015 (₹36.92 ಕೋಟಿಗಳು), ಶೇಕಡ 25ರಷ್ಟು ಗೃಹ ಇಲಾಖೆ (ಪೋಲಿಸ್) ಪ್ರಧಾನ ಶೀರ್ಷಿಕೆ – 2055 (₹31.56 ಕೋಟಿ) ಗಳಿಗೆ ಸಂಬಂಧಿಸಿದೆ ಎಂದು **ನಕ್ಷೆ–4.2** ತೋರಿಸುತ್ತದೆ.

ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಪಡೆದ ಹಣವನ್ನು ಸಂಚಿತ ನಿಧಿಯ ಪ್ರಧಾನ ಶೀರ್ಷಿಕೆಯಡಿ ಲೆಕ್ಕ ಹಾಕಲಾಗುತ್ತದೆ. ನಿಗದಿಪಡಿಸಿದ ಸಮಯದೊಳಗೆ ಲೆಕ್ಕಗಳನ್ನು ಇತ್ಯರ್ಥಪಡಿಸದಿದ್ದರೆ ವೆಚ್ಚವು ಉಬ್ಬಿಕೊಳ್ಳುತ್ತದೆ. ಮಾರ್ಚ್ 2019ಕ್ಕೆ ಕೊನೆಗೊಳ್ಳುವ ವರ್ಷದ ರಾಜ್ಯ ಹಣಕಾಸು ವ್ಯವಹಾರಗಳ ವರದಿಯ **ಕಂಡಿಕೆ 3.6**ರಲ್ಲಿನ ಲೆಕ್ಕಪರಿಶೋಧನಾ ಟೀಕೆಗೆ ಉತ್ತರವಾಗಿ, ಆರ್ಥಿಕ ಇಲಾಖೆಯು (ಆಗಸ್ಟ್ 2021) ಬಾಕಿ ಉಳಿದಿರುವ ಎನ್‌ಡಿಸಿ ಬಿಲ್‌ಗಳ ಇತ್ಯರ್ಥಕ್ಕಾಗಿ ಎಲ್ಲಾ ಸಂಬಂಧಿತ ಇಲಾಖೆಗಳಿಗೆ ಸೂಚನೆಗಳನ್ನು ನೀಡಲಾಗಿದೆ (ಫೆಬ್ರವರಿ 2021) ಮತ್ತು 25 ಅಕ್ಟೋಬರ್ 2019ರ ಸುತ್ತೋಲೆಯ ಪ್ರಕಾರ ಸಂಕ್ಷಿಪ್ತ ಸಾದಿಲ್ವಾರು ಬಿಲ್‌ಗಳಿಗೆ ಸವಿವರ ಸಾದಿಲ್ವಾರು ಬಿಲ್‌ಗಳನ್ನು ಸಲ್ಲಿಸಲು ವಿಫಲವಾದ ಬಟವಾಡೆ ಅಧಿಕಾರಿಗಳ ಸಂಬಳದ ಮತ್ತು ಸಂಬಳೇತರ ಬಿಲ್‌ಗಳನ್ನು ಖಜಾನೆ–2ರಲ್ಲಿ ತಡೆಹಿಡಿಯಲು ಖಜಾನೆಗಳಿಗೆ ಸೂಚಿಸಲಾಗಿದೆ ಎಂದು ಹೇಳಿದೆ. ಆದಾಗ್ಯೂ, ಹಿಂದಿನ ವರ್ಷಕ್ಕೆ ಹೋಲಿಸಿದರೆ ಬಾಕಿ ಇರುವ ಬಿಲ್‌ಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ.

ಸಂಕ್ಷಿಪ್ತ ಸಾದಿಲ್ವಾರು ಬಿಲ್‌ಗಳ ಮೇಲೆ ಸೆಳೆದ ಮೊತ್ತಗಳಿಗೆ ಸಮರ್ಥನೀಯವಾಗಿ ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್‌ಗಳನ್ನು ಸಾದಿಲ್ವಾರು ವೆಚ್ಚ ಕೈಪಿಡಿಯಲ್ಲಿ ನಿಗದಿಪಡಿಸಿದ ಅವಧಿಯೊಳಗೆ ಸಲ್ಲಿಸಬೇಕು.

ಆರ್ಥಿಕ ಇಲಾಖೆಯು (ಡಿಸೆಂಬರ್ 2021) ಈ ಅವಲೋಕನಗಳ ಅನುಪಾಲನೆಗೆ ಆಡಳಿತ ಇಲಾಖೆಗಳಿಗೆ ವಿನಂತಿಸಲಾಗುವುದು ಎಂದು ಉತ್ತರಿಸಿದೆ.

## 4.4 ವೈಯಕ್ತಿಕ ಠೇವಣಿ ಲೆಕ್ಕಗಳು

ಕರ್ನಾಟಕ ಆರ್ಥಿಕ ಸಂಹಿತೆ 1958ರ 286ನೇ ನಿಯಮವು, ಹಣಕಾಸು ವ್ಯವಹಾರಗಳಿಗೆ ಸಾಮಾನ್ಯ ಲೆಕ್ಕಪತ್ರ ವ್ಯವಸ್ಥೆಯು ಸೂಕ್ತವಲ್ಲದ ಸಂದರ್ಭಗಳಲ್ಲಿ ಸರ್ಕಾರದ ಅನುಮತಿಯೊಂದಿಗೆ ವೈಯಕ್ತಿಕ ಠೇವಣಿ (ಪಿಡಿ) ಖಾತೆಗಳನ್ನು ತೆರೆಯಲು ಅವಕಾಶವನ್ನು ಒದಗಿಸುತ್ತದೆ. ರಾಜ್ಯದ ಸಂಚಿತ ನಿಧಿಗೆ ಖರ್ಚು ಹಾಕುವ ಮೂಲಕ ರಚಿಸಲಾದ ಪಿಡಿ ಖಾತೆಗಳನ್ನು ಆರ್ಥಿಕ ವರ್ಷದ ಕೊನೆಯಲ್ಲಿ ಮುಕ್ತಾಯಗೊಳಿಸಬೇಕು. ಆದಾಗ್ಯೂ, ಕೆಳಗಿನ ಪ್ಯಾರಾಗಳಲ್ಲಿ ಚರ್ಚಿಸಿರುವಂತೆ ನಂತರದ ವರ್ಷಕ್ಕೆ ಗಮನಾರ್ಹ ಶಿಲ್ಕುಗಳನ್ನು ಮುಂದುವರಿಸಿದ್ದು ಸಂಹಿತೆಯ ನಿಯಮಗಳನ್ನು ರಾಜ್ಯದಲ್ಲಿ ಕಟ್ಟುನಿಟ್ಟಾಗಿ ಅನುಸರಿಸಿರುವುದಿಲ್ಲ. ಪಿಡಿ ಖಾತೆಗಳ ಆಡಳಿತಾಧಿಕಾರಿಗಳು ಸಂಚಿತ ನಿಧಿಗೆ ವರ್ಗಾಯಿಸಬೇಕಾದ ಶಿಲ್ಕಿನ ಬಗ್ಗೆ ಖಜಾನೆ ಅಧಿಕಾರಿಗೆ ತಿಳಿಸಬೇಕು. ತಮ್ಮ ಪಿಡಿ ಖಾತೆಗಳನ್ನು ನಿಗದಿತ ಅವಧಿಯನ್ನು ಮೀರಿ ಮುಂದುವರಿಸಲು ಆಡಳಿತಾಧಿಕಾರಿಗಳು ಹಣಕಾಸು ಇಲಾಖೆಯ ಅನುಮತಿಯನ್ನು ಪಡೆಯಬೇಕಾಗುತ್ತದೆ. ಖಜಾನೆಯ ಲೆಕ್ಕಗಳೊಂದಿಗೆ ತಮ್ಮ ವೈಯಕ್ತಿಕ ಠೇವಣಿ ಖಾತೆಗಳ ಲೆಕ್ಕಗಳನ್ನು ನಿಯತಕಾಲಿಕವಾಗಿ ಹೊಂದಾಣಿಕೆ ಮಾಡುವುದು ಸಂಬಂಧಪಟ್ಟ ಆಡಳಿತಾಧಿಕಾರಿಗಳ ಜವಾಬ್ದಾರಿಯಾಗಿದೆ.

### *4.4.1 ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಶಿಲ್ಕುಗಳ ಪ್ರವೃತ್ತಿಗಳು*

ಕಳೆದ ಐದು ವರ್ಷಗಳಲ್ಲಿ ಅಂದರೆ 2016–17ರಿಂದ 2020–21ರ ಅವಧಿಯಲ್ಲಿ ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಅಂತಿಮ ಶಿಲ್ಕುಗಳನ್ನು **ಕೋಷ್ಟಕ–4.5**ರಲ್ಲಿ ಸೂಚಿಸಲಾಗಿದೆ.

**ಕೋಷ್ಟಕ 4.5: ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಇರಿಸಲಾದ ನಿಧಿಗಳು**

**(₹ ಕೋಟಿಗಳಲ್ಲಿ)**

| ವರ್ಷ | ಆರಂಭಿಕ ಶಿಲ್ಕು | ಸ್ವೀಕೃತಿಗಳು/ಠೇವಣಿಗಳು | ಹಿಂಪಡೆತಗಳು | ಅಂತಿಮ ಶಿಲ್ಕು |
|---|---|---|---|---|
| **2016–17** | 2,735.61 | 5,516.51 | 5,310.01 | 2,942.12 |
| **2017–18** | 2,942.12 | 4,191.46 | 4,395.06 | 2,741.52 |
| **2018–19** | 2,741.52 | 5,350.98 | 4,007.36 | 4,085.14 |
| **2019–20** | 4,085.14 | 6,557.67 | 6,221.25 | 4,421.56 |
| **2020–21** | 4,421.56 | 4,711.16 | 5,143.49 | 3,989.23 |

*ಆಕರ: ಹಣಕಾಸು ಲೆಕ್ಕಗಳು*

2019–20ರಲ್ಲಿ ಅಸ್ತಿತ್ವದಲ್ಲಿದ್ದ 76 ವೈಯಕ್ತಿಕ ಠೇವಣಿ ಖಾತೆಗಳಲ್ಲಿ 2020–21ರಲ್ಲಿ ₹2.79 ಕೋಟಿಗಳ ಶಿಲ್ಕು ಇರುವ ಐದು ಖಾತೆಗಳನ್ನು ಮುಕ್ತಾಯಗೊಳಿಸಲಾಗಿದ್ದು ವರ್ಷದ ಅಂತ್ಯದ ವೇಳೆಗೆ 71 ವೈಯಕ್ತಿಕ ಠೇವಣಿ ಖಾತೆಗಳು ಅಸ್ತಿತ್ವದಲ್ಲಿವೆ. 2020–21ರಲ್ಲಿ ವೈಯಕ್ತಿಕ ಠೇವಣಿ ಖಾತೆಗಳಿಗೆ ಜಮೆಯಾದ ₹4,711.16 ಕೋಟಿಗಳಲ್ಲಿ ₹1,358.86 ಕೋಟಿಗಳನ್ನು ಮಾರ್ಚ್ 2021ರಲ್ಲೇ ವರ್ಗಾಯಿಸಲಾಗಿದೆ. ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಮುಕ್ತಾಯದ ಶಿಲ್ಕು 2019–20ಕ್ಕೆ ಹೋಲಿಸಿದರೆ 2020–21ರಲ್ಲಿ ಶೇಕಡ 9.7ರಷ್ಟು ಕಡಿಮೆಯಾಗಿದೆ.

2020–21ರ ಅಂತ್ಯದ ವೇಳೆಗೆ ಹೆಚ್ಚು ಶಿಲ್ಕುಗಳನ್ನು ಹೊಂದಿರುವ ಕೆಲವು ಆಡಳಿತಾಧಿಕಾರಿಗಳ ವೈಯಕ್ತಿಕ ಠೇವಣಿ ಖಾತೆಗಳಿಗೆ ಸಂಬಂಧಿಸಿದಂತೆ ನಿವ್ವಳ ಮುಕ್ತಾಯದ ಶಿಲ್ಕನ್ನು **ಕೋಷ್ಟಕ–4.6**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–4.6: ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಅಂತಿಮ ಶಿಲ್ಕು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಆಡಳಿತಾಧಿಕಾರಿ | ಮೊತ್ತ |
|---|---|---|
| 1 | ವೈಯಕ್ತಿಕ ಠೇವಣಿಗಳು – ಸಾಮಾನ್ಯ | 378.12 |
| 2 | ಜಿಲ್ಲಾಧಿಕಾರಿಗಳ ವೈಯಕ್ತಿಕ ಠೇವಣಿ ಖಾತೆಗಳು | 8,640.33 |
| 3 | ನಿರ್ದೇಶಕರು, ಪರಿಶಿಷ್ಟ ಪಂಗಡ ಇಲಾಖೆ ಅವರ ವೈಯಕ್ತಿಕ ಠೇವಣಿಗಳು | 368.66 |
| 4 | ಕಂದಾಯ ಇಲಾಖೆಯ ಅಸಿಸ್ಟಂಟ್ ಕಮೀಷನರ್– ವೈಯಕ್ತಿಕ ಠೇವಣಿಗಳು | 265.05 |

*ಆಕರ: ಡಿಡಿಆರ್ ಲೆಡ್ಜರ್*

ತುಮಕೂರು ಪೌರಾಡಳಿತ ಮತ್ತು ಆಹಾರ ಮತ್ತು ನಾಗರಿಕ ಸರಬರಾಜು (ಆಗಸ್ಟ್ 2021) ಕಚೇರಿಗಳ ಲೆಕ್ಕ ಪರಿಶೋಧನೆಯ ಸಮಯದಲ್ಲಿ, ಉಪ ಆಯುಕ್ತರ ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಅಂತಿಮ ಶಿಲ್ಕು ಈ ಕೆಳಗಿನವುಗಳನ್ನು ಒಳಗೊಂಡಿರುವುದನ್ನು ಗಮನಿಸಲಾಗಿದೆ:

- ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ಸಂಬಂಧಿಸಿದ ₹20.00 ಲಕ್ಷಗಳ ಮೊತ್ತವನ್ನು ಸೆಪ್ಟೆಂಬರ್ 2003ರಲ್ಲಿ ಠೇವಣಿ ಮಾಡಲಾಗಿದ್ದು 18 ವರ್ಷಗಳಿಗೂ ಹೆಚ್ಚು ಕಾಲದಿಂದ ಖಾತೆಯು (ಆಗಸ್ಟ್ 2021ರಂತೆ) ನಿಷ್ಕ್ರಿಯವಾಗಿದೆ. ಆದರೆ, ಯಾವ ಉದ್ದೇಶಕ್ಕಾಗಿ ಹಣವನ್ನು ಬಿಡುಗಡೆ ಮಾಡಿ ವೈಯಕ್ತಿಕ ಠೇವಣಿ ಖಾತೆಗೆ ಜಮಾ ಮಾಡಲಾಗಿದೆ ಎಂಬುದು ಲೆಕ್ಕ ಪರಿಶೋಧನೆಗೆ ಲಭ್ಯವಾಗಿರುವ ದಾಖಲೆಗಳಿಂದ ತಿಳಿದುಬಂದಿಲ್ಲ. ಇಲಾಖೆಯು ತನ್ನ ಉತ್ತರದಲ್ಲಿ (ಆಗಸ್ಟ್ 2021) ಮೊತ್ತವನ್ನು ಸರ್ಕಾರದ ಲೆಕ್ಕಕ್ಕೆ ಹಿಂತಿರುಗಿಸಲು ಕ್ರಮವನ್ನು ಪ್ರಾರಂಭಿಸಲಾಗುವುದು ಎಂದು ಹೇಳಿದೆ.
- 2020–21ರಲ್ಲಿ, ಹದಿನೈದನೆಯ ಹಣಕಾಸು ಆಯೋಗದ ನಗರ ಸ್ಥಳೀಯ ಸಂಸ್ಥೆಗಳ ಅನುದಾನದಡಿ ರಾಜ್ಯದಲ್ಲಿ ಸ್ವೀಕೃತವಾದ ₹1,549 ಕೋಟಿಗಳಲ್ಲಿ ₹991 ಕೋಟಿಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಿ ಜಿಲ್ಲಾಧಿಕಾರಿಗಳ ವೈಯಕ್ತಿಕ ಠೇವಣಿ ಖಾತೆಗೆ ಜಮಾ ಮಾಡಲಾಗಿತ್ತು. ಈ ಮೊತ್ತದಲ್ಲಿ ಕೇವಲ ₹80.04 ಕೋಟಿಗಳ ಬಳಕೆ ಮಾಡಲಾಗಿದ್ದು, ₹910.96 ಕೋಟಿಗಳು (ಶೇಕಡ 92) ವೈಯಕ್ತಿಕ ಠೇವಣಿ ಖಾತೆಗಳಲ್ಲಿ ವೆಚ್ಚವಾಗದೆ ಉಳಿದಿದೆ.
- ಹದಿನೈದನೆಯ ಹಣಕಾಸು ಆಯೋಗದ ಅನುದಾನಗಳಲ್ಲದೆ ವೈಯಕ್ತಿಕ ಠೇವಣಿ ಖಾತೆಗಳ ಮುಕ್ತಾಯದ ಶಿಲ್ಕು **ಕೋಷ್ಟಕ–4.7**ರಲ್ಲಿ ಸೂಚಿಸಿರುವಂತೆ ₹1,405.21 ಕೋಟಿಗಳ ಬಳಕೆಯಾಗದ ಮೊತ್ತವನ್ನು ಒಳಗೊಂಡಿದೆ.

**ಕೋಷ್ಟಕ–4.7: ಕೇಂದ್ರ ಮತ್ತು ರಾಜ್ಯ ಹಣಕಾಸು ಆಯೋಗಗಳ ಬಳಕೆಯಾಗದ ಮೊತ್ತಗಳು ಮತ್ತು ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಇತರ ನಿಧಿಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಅನುದಾನದ ಮಾದರಿ | ಬಳಕೆಯಾಗದ ಮೊತ್ತ |
|---|---|---|
| 1. | ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ 13ನೆಯ ಹಣಕಾಸು ಆಯೋಗದ ಅನುದಾನ | 12.22 |
| 2. | 14ನೆಯ ಹಣಕಾಸು ಆಯೋಗದ ಅನುದಾನ (ಮೂಲ ಮತ್ತು ಕಾರ್ಯಸಾಧನಾ) | 773.80 |
| 3 | ರಾಜ್ಯ ಹಣಕಾಸು ಆಯೋಗದ ಅನುದಾನ – ಮುಕ್ತ ಅನುದಾನ, ಕುಡಿಯುವ ನೀರಿನ ಅಭಾವ ಅನುದಾನ ಮತ್ತು ವಿಶೇಷ ಅನುದಾನ, | 393.98 |
| 4 | ಅಂಗನವಾಡಿ ನಿರ್ಮಾಣ, ಸ್ವಚ್ಛ ಭಾರತ ಮಿಷನ್ ಮುಂತಾದ ಇತರ ವಿವಿಧ ಅನುದಾನಗಳು | 225.21 |
| ಒಟ್ಟು | | **1,405.21** |

ಜಿಲ್ಲಾಧಿಕಾರಿಗಳ ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ₹8,640.33 ಕೋಟಿಗಳ ಬಳಕೆಯಾಗದ ಅಂತಿಮ ಶಿಲ್ಕಿನಲ್ಲಿ ಸುಮಾರು ಶೇಕಡ 27ರಷ್ಟು ಮೊತ್ತವು ಹಣಕಾಸು ಆಯೋಗದ ಅನುದಾನ, ಯೋಜನೆಗಳು, ಇತ್ಯಾದಿಗಳಿಗೆ ಸಂಬಂಧಿಸಿದ್ದು ಇದನ್ನು ಸರ್ಕಾರಕ್ಕೆ ಹಿಂತಿರುಗಿಸಬೇಕಾಗಿದೆ.

ಆರ್ಥಿಕ ಇಲಾಖೆಯು (ಡಿಸೆಂಬರ್ 2021), ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ಸೆಪ್ಟಂಬರ್ 2003ರಿಂದ ತಮ್ಮ ವೈಯಕ್ತಿಕ ಠೇವಣಿ ಖಾತೆಯಲ್ಲಿ ಬಳಕೆಯಾಗದೆ ಉಳಿದಿರುವ ₹20 ಲಕ್ಷಗಳನ್ನು ಜಮೆ ಮಾಡಲು ವಿನಂತಿಸಲಾಗುವುದು ಮತ್ತು ನಗರಾಭಿವೃದ್ಧಿ ಇಲಾಖೆಯನ್ನೂ ಸಹ ಜಿಲ್ಲಾಧಿಕಾರಿಗಳ ವೈಯಕ್ತಿಕ ಠೇವಣಿ ಖಾತೆಯಲ್ಲಿ ಇಡಲಾಗಿರುವ ₹910.96 ಕೋಟಿಗಳ ಬಳಕೆಯಾಗದ ಮೊತ್ತವನ್ನು ಮರುಪಾವತಿಸಲು ವಿನಂತಿಸಲಾಗುವುದು ಎಂದು ಹೇಳಿದೆ.

ಆದಾಗ್ಯೂ, ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಕೇಂದ್ರ ಮತ್ತು ರಾಜ್ಯ ಹಣಕಾಸು ಆಯೋಗಗಳ ಅನುದಾನ ಮತ್ತು ಇತರ ಜಮೆಗಳಲ್ಲಿ ಬಳಕೆಯಾಗದೆ ಉಳಿದಿರುವ ಇತರ ನಿಧಿಗಳ (₹1,405.21 ಕೋಟಿ) ಬಗ್ಗೆ ಇಲಾಖೆಯ ಉತ್ತರವು ಮೌನವಾಗಿದೆ.

### *4.4.2 ನಿಷ್ಕ್ರಿಯ ಮತ್ತು ಲೆಕ್ಕ ಹೊಂದಾಣಿಕೆ ಮಾಡದ ವೈಯಕ್ತಿಕ ಠೇವಣಿ ಖಾತೆಗಳು*

ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 286A ಪ್ರಕಾರ, ರಾಜ್ಯ ಸರ್ಕಾರವು ಗಣನೀಯ ಅವಧಿಯವರೆಗೆ ನಿಷ್ಕ್ರಿಯವಾಗಿರುವ ಎಲ್ಲಾ ವೈಯಕ್ತಿಕ ಠೇವಣಿ ಖಾತೆಗಳನ್ನು ಮುಕ್ತಾಯಗೊಳಿಸುವ ಅಗತ್ಯವಿದೆ. 2021ರ ಹಣಕಾಸು ಲೆಕ್ಕಗಳಿಗೆ ಟಿಪ್ಪಣಿಯಲ್ಲಿ ಹೇಳಿರುವಂತೆ, 71 ವೈಯಕ್ತಿಕ ಠೇವಣಿ ಖಾತೆಗಳಲ್ಲಿ, 24 ಖಾತೆಗಳು (₹50.73 ಕೋಟಿಗಳ ಜಮೆ ಶಿಲ್ಕು ಇರುವ 14 ವೈಯಕ್ತಿಕ ಠೇವಣಿ ಖಾತೆಗಳು, ₹2.02 ಕೋಟಿಗಳ ಖರ್ಚು ಶಿಲ್ಕು ಇರುವ ಎಂಟು ವೈಯಕ್ತಿಕ ಠೇವಣಿ ಖಾತೆಗಳು ಮತ್ತು ಶೂನ್ಯ ಶಿಲ್ಕಿನ ಎರಡು ವೈಯಕ್ತಿಕ ಠೇವಣಿ ಖಾತೆಗಳು) ಮೂರು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ನಿಷ್ಕ್ರಿಯವಾಗಿತ್ತು (**ಅನುಬಂಧ 4.2**). ಆಡಳಿತಾಧಿಕಾರಿಗಳು ಈ ಶಿಲ್ಕುಗಳನ್ನು ವಿಶ್ಲೇಷಿಸಿ ಮತ್ತು ಲೆಕ್ಕಹೊಂದಾಣಿಕೆ ಮಾಡಿ ಖಾತೆಗಳನ್ನು ಮುಕ್ತಾಯಗೊಳಿಸಿ ಶಿಲ್ಕುಗಳನ್ನು ರಾಜ್ಯದ ಸಂಚಿತ ನಿಧಿಗೆ ಹಿಂತಿರುಗಿಸಲು ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ.

ಆರ್ಥಿಕ ಇಲಾಖೆಯು, ಮೂರು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಬಳಸದೆ ಶಿಲ್ಕು ಉಳಿದಿರುವಂತಹ ವೈಯಕ್ತಿಕ ಠೇವಣಿ ಖಾತೆಗಳನ್ನು ಪರಿಶೀಲಿಸಲು ಮತ್ತು ಅಂಥಹ ಖಾತೆಗಳನ್ನು ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳಲು ಸಂಬಂಧಿಸಿದ ಆಡಳಿತಾಧಿಕಾರಿಗಳು ಮತ್ತು ಇಲಾಖೆಗಳ ಮುಖ್ಯಸ್ಥರನ್ನು ವಿನಂತಿಸಲಾಗಿದೆ ಎಂದು ಉತ್ತರಿಸಿದೆ (ಡಿಸೆಂಬರ್ 2021).

## ಸಿ. ಮಾಪನಗಳಿಗೆ ಸಂಬಂಧಿಸಿದ ವ್ಯಾಖ್ಯಾನಗಳು

### 4.5 ಅಮಾನತ್ತು ಮತ್ತು ಋಣ ಠೇವಣಿ ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ಬಾಕಿ ಉಳಿದಿರುವ ಶಿಲ್ಕುಗಳು

### *4.5.1 ಪ್ರಮುಖ ಅಮಾನತ್ತು ಮತ್ತು ಋಣ ಠೇವಣಿ ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ಬಾಕಿ ಉಳಿದಿರುವ ಶಿಲ್ಕುಗಳು*

ಸರ್ಕಾರದ ಲೆಕ್ಕಗಳನ್ನು ನಗದು ಆಧಾರದ ಮೇಲೆ ಇರಿಸಲಾಗುತ್ತದೆ. ಸ್ವೀಕೃತಿಗಳು ಮತ್ತು ಪಾವತಿಗಳ ವಹಿವಾಟುಗಳನ್ನು ಅವುಗಳ ಸ್ವರೂಪದ ಮಾಹಿತಿಯ ಕೊರತೆಯಿಂದಾಗಿ ಅಥವಾ ಇತರ ಕಾರಣಗಳಿಗಾಗಿ ಲೆಕ್ಕದ ಅಂತಿಮ ಶೀರ್ಷಿಕೆಗೆ ಜಮೆ/ಖರ್ಚು ಹಾಕಲಾಗುವುದಿಲ್ಲ. ಇಂತಹ ವಹಿವಾಟುಗಳನ್ನು ಪ್ರತಿಬಿಂಬಿಸಲು 'ಅಮಾನತ್ತು' ಎಂದು ಕರೆಯಲ್ಪಡುವ ಕೆಲವು ತಾತ್ಕಾಲಿಕ/ಹೊಂದಾಣಿಕೆ ಲೆಕ್ಕಗಳ ಶೀರ್ಷಿಕೆಗಳನ್ನು ಸರ್ಕಾರಿ ಲೆಕ್ಕಗಳಲ್ಲಿ ನಿರ್ವಹಿಸಲಾಗುತ್ತದೆ. ಈ ಅಮಾನತ್ತು ಲೆಕ್ಕವು ಅಂತಿಮವಾಗಿ ಸಂಬಂಧಿಸಿದ ಲೆಕ್ಕ ಶೀರ್ಷಿಕೆಯಡಿ ಖರ್ಚಿನ ಕಳೆಯುವಿಕೆ ಅಥವಾ ಜಮೆಯ ಕಳೆಯುವಿಕೆಯ ಮೂಲಕ ಲೆಕ್ಕ ಹಾಕಿ ತೀರಿಕೆ ಮಾಡಲಾಗುತ್ತದೆ. ಈ ಮೊತ್ತಗಳು ತೀರಿಕೆಯಾಗದೆ ಉಳಿದಿದ್ದರೆ, ಅಮಾನತ್ತು ಶೀರ್ಷಿಕೆಯಲ್ಲಿ ಶಿಲ್ಕುಗಳು ಸಂಗ್ರಹವಾಗುತ್ತವೆ ಮತ್ತು ಸರ್ಕಾರದ ಸ್ವೀಕೃತಿಗಳು ಮತ್ತು ವೆಚ್ಚಗಳು ನಿಖರವಾಗಿ ಪ್ರತಿಬಿಂಬಿತವಾಗುವುದಿಲ್ಲ. ಪ್ರಧಾನ ಮಹಾಲೇಖಪಾಲರು (ಲೆ ಮತ್ತು ಹ) ಅವರು ನಿರ್ವಹಿಸಿರುವ

ಲೆಡ್ಜರ್‌ನಲ್ಲಿ ದಾಖಲಿಸಲಾದ ಲೆಕ್ಕಗಳ ಕೆಲವು ಪ್ರಮುಖ ಅಮಾನತ್ತುಗಳನ್ನು **ಕೋಷ್ಟಕ – 4.8**ರಲ್ಲಿ ಸೂಚಿಸಲಾಗಿದೆ.

ಸರ್ಕಾರವು, ಸಾರ್ವಜನಿಕ ಹಣದ ಪಾಲಕನಾಗಿ ಅವುಗಳನ್ನು ಸ್ವೀಕರಿಸಿ ನಂಬಿಕೆಯಲ್ಲಿ ಇರಿಸುವ ವ್ಯವಹಾರಗಳನ್ನು ಸಾಲ, ಠೇವಣಿ ಮತ್ತು ಇರಸಾಲು (ಡಿಡಿಆರ್)ಗಳ ಲೆಕ್ಕಶೀರ್ಷಿಕೆಗಳಲ್ಲಿ ನಿರ್ವಹಿಸುತ್ತದೆ.

2020–21ರ ರಾಜ್ಯ ಹಣಕಾಸು ಖಾತೆಗಳ ನಿಖರತೆಯು ಕೆಳಗೆ ಕಾಣಿಸಿರುವಂತಹ ಅಂಶಗಳಿಂದ ಪ್ರತಿಕೂಲವಾಗಿ ಬಾಧಿತವಾಗಿದೆ.

(i) ಅಂತಿಮ ವರ್ಗೀಕರಣಕ್ಕಾಗಿ ಕಾಯುತ್ತಿರುವ ಹೆಚ್ಚಿನ ಸಂಖ್ಯೆಯ ಅಮಾನತ್ತು ವಹಿವಾಟುಗಳು.

(ii) ಸಾಲ ಠೇವಣಿ ಇರಸಾಲುಗಳ ಲೆಕ್ಕ ಶೀರ್ಷಿಕೆಯಲ್ಲಿ ಹೆಚ್ಚಿದ ವ್ಯತಿರಿಕ್ತ ಶಿಲ್ಕುಗಳ ಪ್ರಮಾಣ ಮತ್ತು ಮೊತ್ತ.

**ಕೋಷ್ಟಕ 4.8: ಅಮಾನತ್ತು ಶೀರ್ಷಿಕೆಗಳಡಿಯ ಶಿಲ್ಕುಗಳು**

**(₹ ಕೋಟಿಗಳಲ್ಲಿ)**

| ಕಿರು ಲೆಕ್ಕಶೀರ್ಷಿಕೆ | 2018–19 | | 2019–20 | | 2020–21 | |
|---|---|---|---|---|---|---|
| ಪ್ರಮುಖ ಲೆಕ್ಕಶೀರ್ಷಿಕೆ 8658–ಅಮಾನತ್ತು | ಖರ್ಚು | ಜಮೆ | ಖರ್ಚು | ಜಮೆ | ಖರ್ಚು | ಜಮೆ |
| 101– ಪಾವತಿ ಮತ್ತು ಲೆಕ್ಕ ಕಚೇರಿ ಅಮಾನತ್ತು | 288.08 | 16.93 | 270.30 | 10.86 | 283.51 | 3.40 |
| ನಿವ್ವಳ | ಖರ್ಚು 271.15 | | ಖರ್ಚು 259.44 | | ಖರ್ಚು 280.11 | |
| 102– ಅಮಾನತ್ತು ಲೆಕ್ಕ (ಸಿವಿಲ್) | 17.76 | 296.45 | 18.14 | 414.95 | 18.42 | 378.75 |
| ನಿವ್ವಳ | ಜಮೆ 278.69 | | ಜಮೆ 396.81 | | ಜಮೆ 360.33 | |
| 107–ನಗದು ತೀರುವಳಿ ಅಮಾನತ್ತು ಲೆಕ್ಕ | 20.53 | | 20.53 | | 20.53 | – |
| ನಿವ್ವಳ | ಖರ್ಚು 20.53 | | ಖರ್ಚು 20.53 | | ಖರ್ಚು 20.53 | |
| 110–ರಿಸರ್ವ್ ಬ್ಯಾಂಕ್ ಅಮಾನತ್ತು ಕೇಂದ್ರ ಲೆಕ್ಕ ಕಚೇರಿ | 91.41 | 183.28 | 17.59 | 154.67 | 72.61 | 53.35 |
| ನಿವ್ವಳ | ಜಮೆ 91.87 | | ಜಮೆ .137.08 | | ಖರ್ಚು 19.26 | |
| 112–ಮೂಲದಲ್ಲಿ ಕಳೆದ ತೆರಿಗೆ (ಟಿಡಿಎಸ್) ಅಮಾನತ್ತು | 204.16 | 233.34 | 0.74 | 32.77 | 0.74 | 4.75 |
| ನಿವ್ವಳ | ಜಮೆ .29.18 | | ಜಮೆ 32.03 | | ಜಮೆ 4.01 | |
| 123– ಎಐಎಸ್ ಅಧಿಕಾರಿಗಳ ಸಮೂಹ ವಿಮಾ ಯೋಜನೆ | 9.30 | | 1.00 | | 1.28 | – |
| ನಿವ್ವಳ | ಖರ್ಚು .9.30 | | ಖರ್ಚು 1.00 | | ಖರ್ಚು 1.28 | |
| 8782–ನಗದು ರವಾನೆಗಳು | | | | | | |
| 102–01 ಖಜಾನೆಗೆ ಸಾರ್ವಜನಿಕ ಕಾಮಗಾರಿಗಳ ಇರಸಾಲುಗಳು | 82.61 | – | 82.61 | – | 82.61 | – |
| ನಿವ್ವಳ | ಖರ್ಚು 82.61 | | ಖರ್ಚು 82.61 | | ಖರ್ಚು 82.61 | |
| 103–01 ಖಜಾನೆಗೆ ಅರಣ್ಯ ಇರಸಾಲುಗಳು | 12.13 | – | 12.13 | – | 12.13 | – |
| ನಿವ್ವಳ | ಖರ್ಚು 12.13 | | ಖರ್ಚು 12.13 | | ಖರ್ಚು 12.13 | |

*ಆಕರ : ಡಿಡಿಆರ್ ಲೆಡ್ಜರುಗಳು*

ಹಣಕಾಸು ಲೆಕ್ಕಗಳು ಈ ಶೀರ್ಷಿಕೆಗಳ ಅಡಿಯಲ್ಲಿ ನಿವ್ವಳ ಶಿಲ್ಕುಗಳನ್ನು ಪ್ರತಿಬಿಂಬಿಸುತ್ತವೆ. ಬಾಕಿ ಇರುವ ಖರ್ಚು ಮತ್ತು ಜಮೆ ಶಿಲ್ಕುಗಳನ್ನು ಪ್ರತ್ಯೇಕವಾಗಿ ಒಟ್ಟುಗೂಡಿಸುವ ಮೂಲಕ ಬಾಕಿ ಉಳಿದಿರುವ ಶಿಲ್ಕುಗಳನ್ನು ಲೆಕ್ಕ ಮಾಡಲಾಗುತ್ತದೆ. ಈ ಶೀರ್ಷಿಕೆಗಳ ಅಡಿಯಲ್ಲಿರುವ ಶಿಲ್ಕುಗಳ ಪರಿಣಾಮಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ:

- **ಪಾವತಿ ಮತ್ತು ಲೆಕ್ಕ ಕಚೇರಿ ಅಮಾನತ್ತು**

ಭಾರತ ಸರ್ಕಾರದ ವಿವಿಧ ಪ್ರತ್ಯೇಕ ಪಾವತಿ ಮತ್ತು ಲೆಕ್ಕ ಕಚೇರಿಗಳು ಮತ್ತು ಪ್ರಧಾನ ಮಹಾಲೇಖಾಪಾಲರ ನಡುವಿನ ವಹಿವಾಟುಗಳ ಇತ್ಯರ್ಥ ಈ ಶೀರ್ಷಿಕೆಯ ಉದ್ದೇಶವಾಗಿದೆ. ಪ್ರಧಾನ ಮಹಾಲೇಖಾಪಾಲರ ಪುಸ್ತಕಗಳಲ್ಲಿ ಈ ಶೀರ್ಷಿಕೆಯಲ್ಲಿ ಆರಂಭದಲ್ಲಿ ದಾಖಲಿಸಲಾದ ವಹಿವಾಟುಗಳನ್ನು ಪಾವತಿ ಮತ್ತು ಲೆಕ್ಕ

ಕಚೇರಿಗಳಿಂದ ಚೆಕ್/ಡಿಮಾಂಡ್ ಡ್ರಾಫ್ಟ್‌ಗಳ ಸ್ವೀಕೃತಿಯ ಮೇಲೆ ಮತ್ತು ಪಾವತಿ ಮತ್ತು ಲೆಕ್ಕ ಕಚೇರಿಗಳ ಪರವಾಗಿ ರಾಜ್ಯ ಖಜಾನೆಗಳಲ್ಲಿ ಸ್ವೀಕರಿಸಿದ ಮೊತ್ತಕ್ಕೆ ಸಂಬಂಧಿಸಿದಂತೆ ಚೆಕ್/ ಡಿಮಾಂಡ್ ಡ್ರಾಫ್ಟ್‌ಗಳ ವಿತರಣೆಯ ಮೇಲೆ ಇತ್ಯರ್ಥಗೊಳಿಸಲಾಗುತ್ತದೆ. ಈ ಶೀರ್ಷಿಕೆಯ ಅಡಿಯಲ್ಲಿಬಾಕಿ ಉಳಿದಿರುವ ಖರ್ಚು ಶಿಲ್ಕು ಎಂದರೆ ಪಾವತಿ ಮತ್ತು ಲೆಕ್ಕ ಕಚೇರಿಗಳ ಪರವಾಗಿ ಪ್ರಧಾನ ಮಹಾಲೇಖಾಪಾಲರು ಮಾಡಿರುವ ಪಾವತಿಗಳು ಇನ್ನೂ ಮರು ಪಡೆಯಲು ಬಾಕಿ ಉಳಿದಿರುವುದು. ಬಾಕಿ ಉಳಿದಿರುವ ಜಮೆ ಶಿಲ್ಕು ಎಂದರೆ ಪಾವತಿ ಮತ್ತು ಲೆಕ್ಕ ಕಚೇರಿಗಳ ಪರವಾಗಿ ಮಹಾಲೇಖಾಪಾಲರು ಸ್ವೀಕರಿಸಲಾದ ಮೊತ್ತಗಳು ಇನ್ನೂ ಪಾವತಿಸಬೇಕಾಗಿದೆ. ಈ ಶೀರ್ಷಿಕೆ ಅಡಿಯಲ್ಲಿ ನಿವ್ವಳ ಖರ್ಚು ಶಿಲ್ಕು ಹೆಚ್ಚುತ್ತಿರುವ ಪ್ರವೃತ್ತಿಯನ್ನು ತೋರಿಸಿದೆ. ಇದರ ತೀರಿಕೆ/ಇತ್ಯರ್ಥ ಆದ ಮೇಲೆ, ರಾಜ್ಯ ಸರ್ಕಾರದ ನಗದು ಶಿಲ್ಕು ಹೆಚ್ಚಾಗುತ್ತದೆ. ಈ ಬಾಬ್ತು ಮುಖ್ಯವಾಗಿ ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದ ವಹಿವಾಟುಗಳು ಮತ್ತು ಕೇಂದ್ರ ಸರ್ಕಾರದ ಸಿವಿಲ್ ಪಿಂಚಣಿ ದಾರರಿಗೆ ರಾಜ್ಯ ಸರ್ಕಾರದಿಂದ ಮಾಡಿದ ಪಾವತಿಗಳಿಗೆ ಸಂಬಂಧಿಸಿದೆ.

- **ಅಮಾನತ್ತು ಲೆಕ್ಕ (ಸಿವಿಲ್)**

ವರ್ಗೀಕರಣದ ಸಂಪೂರ್ಣ ವಿವರಗಳು ಲಭ್ಯವಿಲ್ಲದ ವಹಿವಾಟುಗಳು, ಅಥವಾ ಅದಕ್ಕೆ ಪೂರಕವಾದ ಸಂಬಂಧಿತ ವೋಚರ್‌ಗಳು/ಅನುಸೂಚಿಗಳು ಲಭ್ಯವಿಲ್ಲದಿದ್ದಲ್ಲಿ ಅಥವಾ ಪಾವತಿ / ನಗದು ಲೆಕ್ಕಗಳ ಖಜಾನೆ ಅನುಸೂಚಿಗಳಲ್ಲಿ ವರದಿ ಮಾಡಲಾದ ಅಂಕಿಗಳು ಮತ್ತು ಪೂರಕ ವೋಚರ್‌ಗಳಲ್ಲಿ ಕಂಡು ಬರುವ ಅಂಕಿಗಳ ನಡುವೆ ವ್ಯತ್ಯಾಸಗಳಿದ್ದರೆ ಇತ್ಯಾದಿಗಳು ಈ ಶೀರ್ಷಿಕೆಯಲ್ಲಿ ಬಾಕಿ ಇರುವ ಅಂಕಿಗಳ ಪ್ರಮುಖ ಭಾಗವಾಗಿರುತ್ತದೆ. ರೈಲ್ವೇ, ರಕ್ಷಣಾ ಮತ್ತು ಅಂಚೆ ಮತ್ತು ದೂರ ಸಂಪರ್ಕ ಇಲಾಖೆಗಳ ಪರವಾಗಿ ರಾಜ್ಯ ಖಜಾನೆಗಳಲ್ಲಿ ನಡೆಯುವ ವಹಿವಾಟುಗಳನ್ನು ಸಂಬಂಧಿಸಿದ ಅಧಿಕಾರಿಗಳು ಬಾಕಿಗಳನ್ನು ಇತ್ಯರ್ಥಗೊಳಿಸುವವರೆಗೆ ಆರಂಭದಲ್ಲಿ ಈ ಶೀರ್ಷಿಕೆಯಡಿ ವರ್ಗೀಕರಿಸಲಾಗುತ್ತದೆ. ಈ ಶೀರ್ಷಿಕೆ ಅಡಿಯಲ್ಲಿ ನಿವ್ವಳ ಜಮೆ ಶಿಲ್ಕು ವರ್ಷದಲ್ಲಿ ₹36.48 ಕೋಟಿಗಳು ಕಡಿಮೆಯಾಗಿದೆ. ರೈಲ್ವೆ ಲೆಕ್ಕಗಳು (₹3.15 ಕೋಟಿ) ಮತ್ತು ರಕ್ಷಣಾ ಲೆಕ್ಕಗಳು (₹1.85 ಕೋಟಿ) ಸಂಬಂಧಿಸಿದಂತೆ, ಅಮಾನತ್ತು ಇತ್ಯರ್ಥದ ನಂತರ ನಗದು ಶಿಲ್ಕು ಹೆಚ್ಚಾಗುತ್ತದೆ. ಉಳಿದವುಗಳಿಗೆ ಸಂಬಂಧಿಸಿದಂತೆ ನಗದು ಶಿಲ್ಕಿನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

- **ರಿಸರ್ವ್ ಬ್ಯಾಂಕ್ ಅಮಾನತ್ತು ಕೇಂದ್ರ ಲೆಕ್ಕ ಕಚೇರಿ**

ರಿಸರ್ವ್ ಬ್ಯಾಂಕ್ ಕೇಂದ್ರ ಲೆಕ್ಕ ಕಚೇರಿ ವಿಭಾಗಕ್ಕೆ ಸೂಚನೆಯನ್ನು ಕಳುಹಿಸುವ ಮೂಲಕ ಎರಡು ಸರ್ಕಾರಗಳ ನಗದು ಶಿಲ್ಕುಗಳ ನಡುವೆ ಹಣ ಇತ್ಯರ್ಥವನ್ನು ಮಾಡುವ ಅಂತರ–ಸರ್ಕಾರಿ ವಹಿವಾಟುಗಳನ್ನು ದಾಖಲಿಸಲು ಈ ಶೀರ್ಷಿಕೆಯನ್ನು ನಿರ್ವಹಿಸಲಾಗುತ್ತದೆ. ರಿಸರ್ವ್ ಬ್ಯಾಂಕ್ ಮಾಡಿದ ಹಣ ಇತ್ಯರ್ಥ ಸೂಚನೆಯ ಸ್ವೀಕೃತಿಯ ಮೇಲೆ ಮೊತ್ತವನ್ನು ಲೆಕ್ಕದ ಅಂತಿಮ ಶೀರ್ಷಿಕೆಗೆ ವರ್ಗಾಯಿಸುವ ಮೂಲಕ ಈ ಅಮಾನತ್ತು ಶೀರ್ಷಿಕೆಯನ್ನು ಚುಕ್ತಗೊಳಿಸಲಾಗುತ್ತದೆ. ಭಾರತ ಸರ್ಕಾರದಿಂದ ಪಡೆದ ಅನುದಾನ, ಸಾಲಗಳು ಮತ್ತು ಸಾಲಗಳ ಮರುಪಾವತಿಗಳು, ಭದ್ರತೆಗಳ ವಿಮುಕ್ತತೆ ಮತ್ತು ಬ್ಯಾಂಕಿನ ಸಾರ್ವಜನಿಕ ಋಣ ಕಚೇರಿಗಳು ಪಾವತಿಸಿದ ಅವುಗಳ ಮೇಲಿನ ಬಡ್ಡಿ ಪಾವತಿ ಮತ್ತು ಪೂರೈಕೆ ಮತ್ತು ವಿಲೇವಾರಿಗಳ ಮಹಾ ನಿರ್ದೇಶಕರು ಸರ್ಕಾರಿ ಇಲಾಖೆಗಳಿಗೆ ಸರಬರಾಜು ಮಾಡಿದ ಸಾಮಗ್ರಿಗಳ ಪಾವತಿಗಳು ಈ ಅಮಾನತ್ತು ಶೀರ್ಷಿಕೆಯ ಮೂಲಕ ಇತ್ಯರ್ಥಗೊಳ್ಳುವ ಪ್ರಮುಖ ವಹಿವಾಟುಗಳು. 2020–21ರಲ್ಲಿ, ಈ ಶೀರ್ಷಿಕೆಯಡಿ ಖರ್ಚು ಶಿಲ್ಕು ₹19.26 ಕೋಟಿಗಳಷ್ಟಿದ್ದು ಹಿಂದಿನ ವರ್ಷಕ್ಕೆ ಹೋಲಿಸಿದರೆ ₹156.34 ಕೋಟಿಗಳು ಕಡಿಮೆಯಾಗಿದೆ.

- **ಖಜಾನೆಗೆ ಸಾರ್ವಜನಿಕ ಕಾಮಗಾರಿಗಳ ಇರಸಾಲುಗಳು**

ಸಾರ್ವಜನಿಕ ಕಾಮಗಾರಿಗಳ ವಿಭಾಗೀಯ ಅಧಿಕಾರಿಗಳು ಇರಸಾಲು ಮಾಡಿದ ಮೊತ್ತವನ್ನು ಖಜಾನೆಯಲ್ಲಿ ಅಂಗೀಕರಿಸಲಾಗಿದೆಯೇ ಎಂಬುದನ್ನು ಗಮನಿಸಲು ಈ ಶೀರ್ಷಿಕೆಯನ್ನು ನಿರ್ವಹಿಸಲಾಗುತ್ತದೆ. 2020–21ನೇ ವರ್ಷದ ಅಂತ್ಯದಲ್ಲಿ ₹82.61 ಕೋಟಿಗಳ ಖರ್ಚು ಶಿಲ್ಕು

ವಿಭಾಗೀಯ ಕಚೇರಿಗಳು ಖಜಾನೆಯೊಂದಿಗೆ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳದ ಕಾರಣ ಉಂಟಾಗಿದ್ದು ಮತ್ತು ಈ ವ್ಯತ್ಯಾಸಗಳು ದುರುಪಯೋಗ ಪ್ರಕರಣಗಳಿದ್ದಲ್ಲಿ ಪತ್ತೆ ಹಚ್ಚದಿರಲು ಕಾರಣವಾಗಬಹುದಾಗಿದ್ದು, ಸರ್ಕಾರಕ್ಕೆ ನಷ್ಟವನ್ನು ಉಂಟು ಮಾಡಬಹುದು.

- **ಖಜಾನೆಗೆ ಅರಣ್ಯ ಇರಸಾಲುಗಳು**

ಅರಣ್ಯ ವಿಭಾಗಗಳ ಮೂಲಕ ಅರಣ್ಯ ಆದಾಯ ಸಂಗ್ರಹಣೆ ಮತ್ತು ಖಜಾನೆಯಲ್ಲಿ ಸರ್ಕಾರಿ ಲೆಕ್ಕಗಳಿಗೆ ಅವುಗಳ ಜಮೆಯು ಆರಂಭದಲ್ಲಿ ಈ ನಡೆಯುತ್ತದೆ. ಹಣ ಇರಸಾಲುಗಳನ್ನು ಖಜಾನೆ ಅಧಿಕಾರಿಗಳು ಒಪ್ಪಿಕೊಂಡು ಲೆಕ್ಕಹಾಕಿದ ನಂತರ ಖಜಾನೆ ಲೆಕ್ಕಗಳಲ್ಲಿ ಕಾಣಿಸಿಕೊಳ್ಳುವ ಈ ಶೀರ್ಷಿಕೆಯ ಅಡಿಯಲ್ಲಿನ ಖರ್ಚುಗಳು ಜಮೆಗಳಿಂದ ತೀರುವಳಿಗೊಳ್ಳುತ್ತವೆ ಆದಾಯದ ನಿಜವಾದ ವಸೂಲಿ ಮತ್ತು ಖಜಾನೆಗೆ ಅದರ ಜಮೆಯ ನಡುವಿನ ಸಮಯದ ವಿಳಂಬದಿಂದಾಗಿ, ಈ ಶೀರ್ಷಿಕೆಯ ಅಡಿಯಲ್ಲಿ ವಿಭಾಗದ ಲೆಕ್ಕ ಗಳಲ್ಲಿ ಕಾಣಿಸಿಕೊಳ್ಳುವ ಖರ್ಚುಗಳು ಜಮೆ ಮಾಡಿದ ಹಣವು ಅಂತಿಮವಾಗಿ ಖಜಾನೆ ಲೆಕ್ಕಗಳಲ್ಲಿ ಲೆಕ್ಕಹಾಕುವವರೆಗೆ ಕಾಣಿಸಿಕೊಳ್ಳುತ್ತದೆ. ಈ ಶೀರ್ಷಿಕೆಯ ಅಡಿಯಲ್ಲಿ 2020–21ರ ಅಂತ್ಯದಲ್ಲಿ ₹12.13 ಕೋಟಿಗಳ ಖರ್ಚು ಶಿಲ್ಕು ಇದೆ.

ಆರ್ಥಿಕ ಇಲಾಖೆಯು (ಡಿಸೆಂಬರ್ 2021) ಈ ಕೆಳಗಿನಂತೆ ಉತ್ತರಿಸಿದೆ:

- ಪಾವತಿ ಮತ್ತು ಲೆಕ್ಕ ಕಚೇರಿ ಅಮಾನತ್ತು (ಸಿವಿಲ್) ಮತ್ತು ರಿಸರ್ವ್ ಬ್ಯಾಂಕ್ ಕೇಂದ್ರ ಲೆಕ್ಕ ಕಚೇರಿ ಅಮಾನತ್ತು ಅಡಿಯಲ್ಲಿ ಬಾಕಿ ಉಳಿದಿರುವ ಶಿಲ್ಕುಗಳ ತೀರುವಳಿಗಾಗಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವಂತೆ ಮಹಾಲೇಖಾಪಾಲ(ಲೆ ಮತ್ತು ಹ)ರಿಗೆ ವಿನಂತಿಸಲಾಗುವುದು.
- ಖಜಾನೆಗೆ ಸಾರ್ವಜನಿಕ ಕಾಮಗಾರಿಗಳು ಮತ್ತು ಅರಣ್ಯ ಇರಸಾಲುಗಳಿಗೆ ಸಂಬಂಧಿಸಿದಂತೆ, ಈ ಇಲಾಖೆಗಳು ಲೆಕ್ಕ ಸಮನ್ವಯಗೊಳಿಸಲು ಮತ್ತು ಬಾಕಿ ಉಳಿದಿರುವ ಶಿಲ್ಕುಗಳನ್ನು ತೀರುವಳಿ ಗೊಳಿಸಲು ವಿನಂತಿಸಲಾಗುವುದು.

### *4.5.2 ಋಣ ಠೇವಣಿ ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ವ್ಯತಿರಿಕ್ತ ಶಿಲ್ಕುಗಳು*

ಋಣಾತ್ಮಕ ಶಿಲ್ಕುಗಳು ಇರಬಾರದ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಋಣಾತ್ಮಕ ಶಿಲ್ಕುಗಳು ಇದ್ದರೆ ಅವು ವ್ಯತಿರಿಕ್ತ ಶಿಲ್ಕುಗಳು ಎನಿಸಿಕೊಳ್ಳುತ್ತವೆ. ಉದಾಹರಣೆಗೆ, ಯಾವುದೇ ಸಾಲ ಅಥವಾ ಮುಂಗಡದ ಲೆಕ್ಕ ಶೀರ್ಷಿಕೆಯಡಿಯ ಋಣಾತ್ಮಕ ಶಿಲ್ಕು ಮುಂಗಡದ ಮೂಲ ಮೊತ್ತಕ್ಕಿಂತ ಹೆಚ್ಚಿನ ಮರುಪಾವತಿಯನ್ನು ಸೂಚಿಸುತ್ತದೆ. **ಕೋಷ್ಟಕ 4.9** ಸಾರ್ವಜನಿಕ ಋಣ ಮತ್ತು ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ ವ್ಯತಿರಿಕ್ತ ಶಿಲ್ಕನ್ನು ಸೂಚಿಸುತ್ತದೆ. ಸಾರ್ವಜನಿಕ ಋಣ ಲೆಕ್ಕ ಶೀರ್ಷಿಕೆ (6003–00–108–0–01 – ರಾಜ್ಯದ ಆಂತರಿಕ ಸಾಲ– ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ನಿಯಮಿತದಿಂದ ಸರ್ಕಾರದ ಸಾಲ) ಅಡಿಯಲ್ಲಿನ ಶಿಲ್ಕು 2019–20ನೇ ವರ್ಷಕ್ಕೆ ಹೋಲಿಸಿದರೆ 2020–21ನೇ ಸಾಲಿನಲ್ಲಿ, ಈ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿನ ವ್ಯತಿರಿಕ್ತ ಶಿಲ್ಕನ್ನು ಚುಕ್ತಗೊಳಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳಿಂದ ₹40.83 ಕೋಟಿಗಳಷ್ಟು ಕಡಿಮೆಯಾಗಿದೆ ಆದಾಗ್ಯೂ, ಲೆಕ್ಕ ಶೀರ್ಷಿಕೆ 7610 – ಸರ್ಕಾರಿ ನೌಕರರಿಗೆ ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ 2019–20ನೇ ವರ್ಷಕ್ಕೆ ಹೋಲಿಸಿದರೆ, 2020–21ರಲ್ಲಿ ಶಿಲ್ಕು ₹2.14 ಕೋಟಿಗಳಷ್ಟು ಹೆಚ್ಚಳವಾಗಿದೆ. ಆದ್ದರಿಂದ, ಸಾರ್ವಜನಿಕ ಋಣ ಮತ್ತು ಸಾಲಗಳು ಮತ್ತು ಮುಂಗಡಗಳಿಗೆ ಸಂಬಂಧಿಸಿದಂತೆ ವ್ಯತಿರಿಕ್ತ ಶಿಲ್ಕಗಳನ್ನು ತೆರವುಗೊಳಿಸಲು ಅಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ.

**ಕೋಷ್ಟಕ 4.9: ಋಣ ಠೇವಣಿ ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ವ್ಯತಿರಿಕ್ತ ಶಿಲ್ಕುಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ವಿವರ | ಮೊತ್ತ | ಕಾರಣ |
|---|---|---|---|---|
| ಸಾರ್ವಜನಿಕ ಋಣ | | | | |
| 1 | 6003–00–108–0–01 | ರಾಜ್ಯ ಸರ್ಕಾರದ ಆಂತರಿಕ ಋಣ – ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ನಿಯಮಿತದಿಂದ ಸಾಲ | (ಖರ್ಚು) 133.57 | ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ನಿಯಮಿತದಿಂದ ಪಡೆದ ಸಾಲವನ್ನು ಲೆಕ್ಕಗಳಲ್ಲಿ ತೆಗೆದುಕೊಳ್ಳದಿರುವುದರಿಂದ, ಆದರೆ ಮರುಪಾವತಿಯನ್ನು ಸರ್ಕಾರಿ ಲೆಕ್ಕದ ಮೂಲಕ ಮಾಡಿರುವುದರಿಂದ. |
| 2 | 6004–03 & 6004–04 | ಕೇಂದ್ರ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಡಿಯಲ್ಲಿ ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು | (ಖರ್ಚು) 10.36 | ಕೇಂದ್ರ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಡಿಯಲ್ಲಿ ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು |
| ಒಟ್ಟು | | | (ಖರ್ಚು) . 143.93 | |
| ಸಾಲಗಳು ಮತ್ತು ಮುಂಗಡಗಳು | | | | |
| 3 | 6202,6215, 6217, 6401, 6402, 6405, 6408, 6435 6505, 6506, 6701, 7475 & 7615 | ರಾಜ್ಯ ಸಂಸ್ಥೆಗಳಿಗೆ ನೀಡಿದ ಸಾಲಗಳು | (ಜಮೆ) 90.06 | ತಪ್ಪು ವರ್ಗೀಕರಣದಿಂದ ವ್ಯತಿರಿಕ್ತ ಶಿಲ್ಕು ಉಂಟಾಗಿದ್ದು ಲೆಕ್ಕ ಹೊಂದಾಣಿಕೆ ಮಾಡಲಾಗುತ್ತಿದೆ. |
| 4 | 7610 | ಸರ್ಕಾರಿ ನೌಕರರಿಗೆ ಸಾಲ ಮತ್ತು ಮುಂಗಡಗಳು | (ಜಮೆ) 8.38 | ತಪ್ಪು ವರ್ಗೀಕರಣದಿಂದ ವ್ಯತಿರಿಕ್ತ ಶಿಲ್ಕು ಉಂಟಾಗಿದ್ದು ಲೆಕ್ಕ ಹೊಂದಾಣಿಕೆ ಮಾಡಲಾಗುತ್ತಿದೆ. |
| **ಒಟ್ಟು** | | | **ಜಮೆ 98.44** | |

*ಆಕರ – ಮಹಾಲೇಖಾಪಾಲರ (ಲೆ ಮತ್ತು ಹ) ಕಚೇರಿ*

## 4.6 ಇಲಾಖೆಗಳ ಅಂಕಿಗಳ ಹೊಂದಾಣಿಕೆ ಆಗದಿರುವುದು

ಆದಾಯ/ವೆಚ್ಚಗಳ ಮೇಲೆ ಪರಿಣಾಮ ಬೀರುವ ಆಯವ್ಯಯ ನಿಯಂತ್ರಣವನ್ನು ನಿರ್ವಹಿಸಲು ಮತ್ತು ಲೆಕ್ಕಗಳಲ್ಲಿ ನಿಖರತೆಯನ್ನು ಖಚಿತಪಡಿಸಿಕೊಳ್ಳಲು, ಎಲ್ಲಾ ನಿಯಂತ್ರಣ ಅಧಿಕಾರಿಗಳು ಪ್ರತಿ ತಿಂಗಳು ತಮ್ಮ ಪುಸ್ತಕಗಳಲ್ಲಿ ದಾಖಲಾದ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ಪ್ರಧಾನ ಮಹಾಲೇಖಾಪಾಲರ (ಲೆ ಮತ್ತು ಹ) ಲೆಕ್ಕ ಪುಸ್ತಕಗಳಲ್ಲಿ ಲೆಕ್ಕ ಹಾಕಿದ ಅಂಕಿಗಳೊಂದಿಗೆ ಸಮನ್ವಯಗೊಳಿಸಬೇಕಾಗುತ್ತದೆ. 2018–19 ರಿಂದ 2020–21ರ ಸ್ವೀಕೃತಿಗಳು ಮತ್ತು ವೆಚ್ಚದ ಸಮನ್ವಯದ ಕಳೆದ ಮೂರು ವರ್ಷಗಳ ವಿವರಗಳನ್ನು **ನಕ್ಷೆ–4.3**ರಲ್ಲಿ ಸೂಚಿಸಲಾಗಿದೆ.

**ನಕ್ಷೆ–4.3 : ಕಳೆದ ಮೂರು ವರ್ಷಗಳ – 2018–19 ರಿಂದ 2020–21ಲೆಕ್ಕ ಹೊಂದಾಣಿಕೆಯ ಸ್ಥಿತಿ.**

**(₹ ಕೋಟಿಗಳಲ್ಲಿ)**




*ಆಕರ – ಹಣಕಾಸು ಲೆಕ್ಕಗಳು*

** ಸಾಲಗಳು ಮತ್ತು ಮುಂಗಡಗಳನ್ನು ಹೊರತುಪಡಿಸಿ*

ನಿಯಂತ್ರಣ ಅಧಿಕಾರಿಗಳ ಸಂಖ್ಯೆ ಮತ್ತು ಕಳೆದ ಮೂರು ವರ್ಷಗಳಲ್ಲಿ ಲೆಕ್ಕ ಸಮನ್ವಯದ ಪ್ರಮಾಣಕ್ಕೆ ಸಂಬಂಧಿಸಿದ ವಿವರಗಳನ್ನು **ಕೋಷ್ಟಕ–4.10**ರಲ್ಲಿ ನೀಡಲಾಗಿದೆ.

**ಕೋಷ್ಟಕ 4.10: ಸ್ವೀಕೃತಿಗಳು ಮತ್ತು ವೆಚ್ಚದ ಅಂಕಿಗಳ ಸಮನ್ವಯದ ಸ್ಥಿತಿ**

**(₹ ಕೋಟಿಗಳಲ್ಲಿ)**

| ವರ್ಷ | ನಿಯಂತ್ರಣ ಅಧಿಕಾರಿಗಳ ಸಂಖ್ಯೆ | ಪೂರ್ಣವಾಗಿ ಲೆಕ್ಕ ಹೊಂದಾಣಿಕೆ ಮಾಡಿರುವುದು | ಭಾಗಶಃ ಲೆಕ್ಕ ಹೊಂದಾಣಿಕೆ ಮಾಡಿರುವುದು | ಲೆಕ್ಕ ಹೊಂದಾಣಿಕೆ ಮಾಡದೇ ಇರುವುದು | ವಹಿವಾಡು ನಡೆಸದ ನಿಯಂತ್ರಣ ಅಧಿಕಾರಿಗಳು | ಒಟ್ಟು ಮೊತ್ತ | ಲೆಕ್ಕ ಹೊಂದಾಣಿಕೆಯಾದ ಮೊತ್ತ | ಶತಾಂಶ |
|---|---|---|---|---|---|---|---|---|
| ಸ್ವೀಕೃತಿಗಳು | | | | | | | | |
| **2018–19** | 92 | 84 | 04 | 04 | – | 1,64,973.15 | 1,64,817.41 | 99.90 |
| **2019–20** | 101 | 75 | 18 | 08 | – | 1,75,487.87 | 1,73,687.60 | 98.97 |
| **2020–21** | 101 | 86 | – | 15 | – | 1,56,761.64 | 1,56,597.91 | 99.90 |
| ವೆಚ್ಚಗಳು | | | | | | | | |
| **2018–19** | 331 | 299 | 05 | 26 | 01 | 1,98,959.17 | 1,97,933.22 | 99.48 |
| **2019–20** | 322 | 245 | 50 | 27 | – | 2,09,786.84 | 1,79,098.38 | 85.37 |
| **2020–21** | 322 | 289 | – | 33 | – | 2,21,459.96 | 2,18,803.97 | 98.80 |

*ಆಕರ–ಎಮ್‌ಸಿಎ ಮೇಲಿನ ವರದಿ ಮತ್ತು ಹಣಕಾಸು ಲೆಕ್ಕಗಳು*

**ಕೋಷ್ಟಕ 4.10**ರಲ್ಲಿ ಸೂಚಿಸಿದಂತೆ ವೆಚ್ಚದ ಸಮನ್ವಯವು 2018–19ಕ್ಕೆ ಹೋಲಿಸಿದರೆ (ಶೇಕಡ 99) 2019–20ರಲ್ಲಿ (ಶೇಕಡ 85) ಕಡಿಮೆಯಾಗಿದೆ, ಇದು 2020–21ರಲ್ಲಿ (ಶೇಕಡ 98) ಹೆಚ್ಚಾಗಿದೆ. ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ ಸ್ವೀಕೃತಿಗಳು ಮತ್ತು ವಿತರಣೆಗಳಿಗೆ ಸಂಬಂಧಿಸಿದಂತೆ ಯಾವುದೇ ಲೆಕ್ಕ ಸಮನ್ವಯವನ್ನು ಕೈಗೊಳ್ಳಲಾಗಿಲ್ಲ. ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ ಸ್ವೀಕೃತಿಗಳು ಮತ್ತು ವೆಚ್ಚಗಳಿಗೆ ಸಂಬಂಧಿಸಿದಂತೆ ಸಮನ್ವಯಕ್ಕಾಗಿ ಅಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಆರ್ಥಿಕ ಇಲಾಖೆಯು (ಡಿಸೆಂಬರ್ 2021) ಲೆಕ್ಕ ಹೊಂದಾಣಿಕೆಯನ್ನು ಪೂರ್ಣಗೊಳಿಸಲು ಇಲಾಖೆಗಳಿಗೆ ವಿನಂತಿಸಲಾಗಿದೆ ಎಂದು ಹೇಳಿದೆ.

### 4.7 ನಗದು ಶಿಲ್ಕಿನ ಲೆಕ್ಕಹೊಂದಾಣಿಕೆ

ಮಹಾಲೇಖಾಪಾಲರು (ಲೆ ಮತ್ತು ಹ) ಲೆಕ್ಕ ಪುಸ್ತಕಗಳ ಪ್ರಕಾರ ರಾಜ್ಯದ ನಗದು ಶಿಲ್ಕು ಮತ್ತು ರಿಸರ್ವ್ ಬ್ಯಾಂಕು ವರದಿ ಮಾಡಿದಂತೆ ನಗದು ಶಿಲ್ಕುಗಳ ನಡುವೆ ಯಾವುದೇ ವ್ಯತ್ಯಾಸ ಇರಬಾರದು.

ಮಾರ್ಚ್ 2021 ರಲ್ಲಿದ್ದಂತೆ, ಲೆಕ್ಕಗಳಲ್ಲಿ ಬಿಂಬಿತವಾಗಿರುವ ಅಂಕಿಗಳು {₹1,588.33 ಕೋಟಿ (ಖರ್ಚು)} ಮತ್ತು ರಿಸರ್ವ್ ಬ್ಯಾಂಕು ವರದಿ ಮಾಡಿದ ಅಂಕಿಗಳ {₹1,511.17 ಕೋಟಿ (ಖರ್ಚು)} ನಡುವೆ ವ್ಯತ್ಯಾಸವಿತ್ತು. {(₹72.16 ಕೋಟಿ (ಖರ್ಚು)}. ಏಜೆನ್ಸಿ ಬ್ಯಾಂಕ್‌ಗಳಿಂದ ಅಂಕಿಗಳ ವರದಿ ಮಾಡದಿರುವುದು ಮತ್ತು ಲೆಕ್ಕ ಹೊಂದಾಣಿಕೆ ಮಾಡದಿರುವುದು ವ್ಯತ್ಯಾಸಕ್ಕೆ ಕಾರಣವಾಗಿದ್ದು ಇದು ಮಹಾಲೇಖಾಪಾಲರ (ಲೆ ಮತ್ತು ಹ) ಕಚೇರಿಯಲ್ಲಿ ಸಮನ್ವಯದಲ್ಲಿದೆ.

## ಡಿ. ಲೆಕ್ಕಗಳಲ್ಲಿ ವಿಷಯಗಳ ಕಾಣಿಸುವಿಕೆಗೆ ಸಂಬಂಧಿಸಿದ ಅವಲೋಕನ

### 4.8 ಲೆಕ್ಕಪತ್ರ ಮಾನದಂಡಗಳ ಅನುಸರಣೆ

ಭಾರತ ಸರ್ಕಾರದ ಬೆಂಬಲದೊಂದಿಗೆ ಭಾರತದ ಲೆಕ್ಕ ನಿಯಂತ್ರಕರು ಮತು ಮಹಾ ಲೆಕ್ಕ ಪರಿಶೋಧಕರ ಕಚೇರಿಯಲ್ಲಿ ಸ್ಥಾಪಿಸಲಾಗಿರುವ ಸರ್ಕಾರಿ ಲೆಕ್ಕಪತ್ರ ಮಾನದಂಡಗಳ ಸಲಹಾ ಮಂಡಳಿಗೆ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಿಗೆ ಲೆಕ್ಕಪತ್ರ ಮತ್ತು ಹಣಕಾಸು ವರದಿ ಮಾನದಂಡಗಳನ್ನು ರೂಪಿಸುವ ಮತ್ತು ಪ್ರಸ್ತಾಪಿಸುವ ಜವಾಬ್ದಾರಿಯನ್ನು ವಹಿಸಲಾಗಿದೆ. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಅವರ ಸಲಹೆಯ ಮೇರೆಗೆ, ಭಾರತದ ರಾಷ್ಟ್ರಪತಿಗಳು ಇಲ್ಲಿಯವರೆಗೆ ಮೂರು ಭಾರತೀಯ ಸರ್ಕಾರದ ಲೆಕ್ಕಪತ್ರ ಮಾನದಂಡಗಳನ್ನು (ಐಜಿಎಎಸ್) ಸೂಚಿಸಿದ್ದಾರೆ.

ಐಜಿಎಎಸ್ ನ ವಿವರಗಳು ಮತ್ತು 2020-21 ವರ್ಷಕ್ಕೆ ಕರ್ನಾಟಕ ಸರ್ಕಾರದ ಅವುಗಳ ಅನುಸರಣೆಯನ್ನು **ಕೋಷ್ಟಕ 4.11**ರಲ್ಲಿ ಚರ್ಚಿಸಲಾಗಿದೆ.

**ಕೋಷ್ಟಕ 4.11: ಲೆಕ್ಕಪತ್ರ ನಿರ್ವಹಣಾ ಮಾನದಂಡಗಳ ಅನುಸರಣೆ**

| ಕ್ರಮ ಸಂಖ್ಯೆ | ಲೆಕ್ಕಪತ್ರ ಮಾನದಂಡ | ಐಜಿಎಎಸ್‌ನ ಸಾರ | ಪ್ರಸ್ತುತ ಸ್ಥಿತಿ | ಕೊರತೆಯ ಪ್ರಭಾವ |
|---|---|---|---|---|
| 1 | ಐಜಿಎಎಸ್ - 1 ಸರ್ಕಾರ ನೀಡಿದ ಖಾತರಿಗಳು - ಅಗತ್ಯವಿರುವ ಕಾಣಿಸುವಿಕೆಗಳು | ಆಯಾ ವರ್ಷದಲ್ಲಿ ಸರ್ಕಾರವು ನೀಡಿದ ಗರಿಷ್ಠ ಖಾತರಿ, ಸೇರಿಕೆ, ತೆಗೆದು ಹಾಕಿದ್ದು (ಆ ವರ್ಷದ ಕೋರಿಕೆಗಳನ್ನು ಹೊರತುಪಡಿಸಿ) ವರ್ಷದ ಆರಂಭ ಮತ್ತು ಅಂತ್ಯದಲ್ಲಿನ ಶಿಲ್ಕು ಮತ್ತು ಖಾತರಿ ಶುಲ್ಕ ಇವುಗಳನ್ನು ಹಣಕಾಸು ವಿವರಣಾ ಪಟ್ಟಿಗಳಲ್ಲಿ ಕಾಣಿಸುವ ಮಾನದಂಡವನ್ನು ನಿಗದಿಗೊಳಿಸಿದೆ | ಅನುಸರಿಸಲಾಗಿದೆ | ಖಾತರಿಗಳ ಕಾಣಿಸುವಿಕೆಯ ಮಾನದಂಡಗಳನ್ನು ಅನುಸರಿಸಲಾಗಿದೆ |
| 2 | ಐಜಿಎಎಸ್ - 2 ಸಹಾಯಾನುದಾನಗಳ ಲೆಕ್ಕ ಹಾಕುವಿಕೆ ಮತ್ತು ವರ್ಗೀಕರಣ | ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರ ಸಲಹೆಯ ಮೇರೆಗೆ ರಾಷ್ಟ್ರಪತಿಗಳು ನಿರ್ದಿಷ್ಟವಾಗಿ ಅನುಮೋದಿಸಿದ ಪ್ರಕರಣಗಳ ಹೊರತಾಗಿ ಅನುದಾನವು ಆಸ್ತಿಗಳ ನಿರ್ಮಾಣವನ್ನು ಒಳಗೊಂಡಿದ್ದರೂ ಅನುದಾನ ನೀಡುವವರ ಲೆಕ್ಕದಲ್ಲಿ ಅದನ್ನು ರಾಜಸ್ವ ವೆಚ್ಚವೆಂದು, ಅನುದಾನಿತರ ಲೆಕ್ಕದಲ್ಲಿ ರಾಜಸ್ವ ಸ್ವೀಕೃತಿಗಳೆಂದು ಪರಿಗಣಿಸಬೇಕು | ಅನುಸರಿಸಲಾಗಿಲ್ಲ | ಸಂಸ್ಥೆಗಳಿಗೆ ನೀಡಿದ ₹100 ಕೋಟಿಗಳನ್ನು ರಾಜಸ್ವ ವೆಚ್ಚಕ್ಕೆ ಬದಲಾಗಿ ಬಂಡವಾಳ ವೆಚ್ಚದಡಿ ವರ್ಗೀಕರಣ ಮಾಡಲಾಗಿತ್ತು. ಇದು ನಿಗದಿಯ ಅನುಸರಣೆ ಆಗದಿರುವುದರಲ್ಲಿ ಫಲಿತವಾಗಿ ರಾಜಸ್ವ ಹೆಚ್ಚಳವನ್ನು ಮತ್ತು ಬಂಡವಾಳ ವೆಚ್ಚವನ್ನು ಅಧಿಕವಾಗಿ ತೋರಿಸಿದಂತಾಗಿದೆ. |
| 3 | ಐಜಿಎಎಸ್ - 3 ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳು | ಈ ಮಾನದಂಡವು ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳ ಗುರುತಿಸುವಿಕೆ, ಪ್ರಮಾಣ, ಮೌಲ್ಯನಿರ್ಣಯ, ವರದಿಗಳು ಮತ್ತು ಹಣಕಾಸು ವಿವರಣಾ ಪಟ್ಟಿಗಳಲ್ಲಿ ಪೂರ್ಣತೆ, ನಿಖರತೆ ಮತ್ತು ಏಕರೀತಿಯ ಲೆಕ್ಕರೂಢಿಯ ಅನುಸರಣೆಯನ್ನು ಖಚಿತಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದೆ. | ಭಾಗಶಃ ಅನುಪಾಲನೆಯಾಗಿದೆ. | ರಾಜ್ಯ ಸರ್ಕಾರವು ಮಾನದಂಡದಲ್ಲಿ ನಿಗದಿಪಡಿಸಿದ ನಮೂನೆಯನ್ನು ಅಳವಡಿಸಿಕೊಂಡಿದೆ. ಆದರೆ ಸಾಲ ಮತ್ತು ಮುಂಗಡಗಳಿಗೆ ಸಂಬಂಧಿಸಿದಂತೆ ಅಸಲು ಮತ್ತು ಬಡ್ಡಿಗಳ ಎಲ್ಲ ವಿವರಗಳನ್ನು ಪ್ರಧಾನ ಮಹಾಲೇಖಾಪಾಲರು(ಲೆ ಮತ್ತು ಹ) ಅವರಿಗೆ ಸಲ್ಲಿಸುತ್ತಿಲ್ಲವಾದ್ದರಿಂದ ಅನುಸರಣೆಯು ಅಪೂರ್ಣವಾಗಿದೆ. |

ಆರ್ಥಿಕ ಇಲಾಖೆಯು (ಡಿಸೆಂಬರ್ 2021) ಐಜಿಎಎಸ್ 2 - ಸಹಾಯಾನುದಾನಕ್ಕೆ ಸಂಬಂಧಿಸಿದಂತೆ, ತಪ್ಪು ವರ್ಗೀಕರಣವನ್ನು ತಪ್ಪಿಸಲಾಗುವುದು ಮತ್ತು ಐಜಿಎಎಸ್ 3 - ಸಾಲಗಳು ಮತ್ತು ಮುಂಗಡಗಳಿಗೆ ಸಂಬಂಧಿಸಿದಂತೆ, ಬಾಕಿ ಇರುವ ಸಾಲಗಳು ಮತ್ತು ಮುಂಗಡಗಳ ವಿವರಗಳನ್ನು ನೀಡಲು ಇಲಾಖೆಗಳಿಗೆ ವಿನಂತಿಸಲಾಗುವುದು ಎಂದು ಹೇಳಿದೆ.

### 4.9 ಸ್ವಾಯತ್ತಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆ ಮತ್ತು ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ಶಾಸಕಾಂಗದಲ್ಲಿ ಇಡುವುದು

ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳು, ನಗರಾಭಿವೃದ್ಧಿ, ಇತ್ಯಾದಿ ಕ್ಷೇತ್ರಗಳಲ್ಲಿ ರಾಜ್ಯ ಸರ್ಕಾರವು ಹಲವಾರು ಸ್ವಾಯತ್ತ ಸಂಸ್ಥೆಗಳನ್ನು ಸ್ಥಾಪಿಸಿದೆ. ರಾಜ್ಯದ 13 ಸ್ವಾಯತ್ತ ಸಂಸ್ಥೆಗಳ ಲೆಕ್ಕಗಳ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು (ಡಿಪಿಸಿ) ಕಾಯಿದೆ, 1971ರ ಪರಿಚ್ಛೇದ 19 ಮತ್ತು 20ರ ಅಡಿಯಲ್ಲಿ ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರಿಗೆ ವಹಿಸಲಾಗಿದೆ.

ಲೆಕ್ಕಪರಿಶೋಧನೆಯ ವಹಿಕೆ, ಲೆಕ್ಕಗಳ ಸಲ್ಲಿಕೆ, ಪ್ರತ್ಯೇಕ ಪರಿಶೋಧನಾ ವರದಿಗಳನ್ನು ನೀಡುವುದು ಮತ್ತು ರಾಜ್ಯ ಶಾಸಕಾಂಗದ ಮುಂದೆ ಅವುಗಳ ಮಂಡಿಕೆಗಳ ಸ್ಥಿತಿಯನ್ನು **ಅನುಬಂಧ 4.3**ರಲ್ಲಿ ಸೂಚಿಸಲಾಗಿದೆ.

ಅನುಬಂಧದಲ್ಲಿ ಕಾಣಿಸಿದಂತೆ ಐದು ಸ್ವಾಯತ್ತ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಒಂದು ಪ್ರತ್ಯೇಕ ಪರಿಶೋಧನಾ ವರದಿ ಮತ್ತು ಒಂದು ಸ್ವಾಯತ್ತ ಸಂಸ್ಥೆಗೆ ಸಂಬಂಧಿಸಿದಂತೆ ಎರಡು ಪ್ರತ್ಯೇಕ ಪರಿಶೋಧನಾ ವರದಿಗಳು ಶಾಸಕಾಂಗದಲ್ಲಿ ಮಂಡಿಸಲು ಬಾಕಿ ಇವೆ. ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವು 2017–18ನೇ ಸಾಲಿಗೆ ಮೊದಲ ಬಾರಿಗೆ ಲೆಕ್ಕಗಳನ್ನು ಸಲ್ಲಿಸಬೇಕಿದೆ.

## 4.10 ಇಲಾಖಾ ವಾಣಿಜ್ಯೋದ್ಯಮಗಳು/ನಿಗಮಗಳು/ಕಂಪನಿಗಳು

ವಾಣಿಜ್ಯ ಮತ್ತು ಅರೆ–ವಾಣಿಜ್ಯ ಸ್ವರೂಪದ ಚಟುವಟಿಕೆಗಳನ್ನು ನಿರ್ವಹಿಸುವ ಕೆಲವು ಸರ್ಕಾರಿ ಇಲಾಖಾ ಸಂಸ್ಥೆಗಳು ವಾರ್ಷಿಕವಾಗಿ ನಿಗದಿತ ಸ್ವರೂಪದಲ್ಲಿ ಹಣಕಾಸಿನ ಕಾರ್ಯಾಚರಣೆಗಳ ಫಲಿತಾಂಶವನ್ನು ತೋರಿಸುವ ಪ್ರಪತ್ರ ಲೆಕ್ಕಗಳನ್ನು ಸಿದ್ಧಪಡಿಸುವ ಅಗತ್ಯವಿದ್ದು, ಇದರಿಂದ ಸರ್ಕಾರವು ಈ ಸಂಸ್ಥೆಗಳ ಕಾರ್ಯ ಫಲವನ್ನು ಕೆಲಸವನ್ನು ನಿರ್ಣಯಿಸಬಹುದು. ವಾಣಿಜ್ಯ ಮತ್ತು ಅರೆ ವಾಣಿಜ್ಯ ಉದ್ಯಮಗಳ ಅಂತಿಮಗೊಳಿಸಿದ ಲೆಕ್ಕಗಳು ಅವುಗಳ ಒಟ್ಟಾರೆ ಆರ್ಥಿಕ ಸ್ವಾಸ್ಥ್ಯ ಮತ್ತು ದಕ್ಷತೆಯನ್ನು ಪ್ರತಿಬಿಂಬಿಸುತ್ತವೆ. ಲೆಕ್ಕಗಳ ಸಕಾಲಿಕ ಅಂತಿಮಗೊಳಿಸುವಿಕೆಯ ಅನುಪಸ್ಥಿತಿಯಲ್ಲಿ, ಸರ್ಕಾರದ ಹೂಡಿಕೆಯು ಲೆಕ್ಕ ಪರಿಶೋಧನೆ/ರಾಜ್ಯ ಶಾಸಕಾಂಗದ ಪರಿಶೀಲನೆಯಿಂದ ಹೊರಗೆ ಉಳಿಯುತ್ತದೆ. ತತ್ಪರಿಣಾಮವಾಗಿ, ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ದಕ್ಷತೆಯನ್ನು ಸುಧಾರಿಸಲು ಅಗತ್ಯವಿರುವ ಸರಿಪಡಿಕೆಯ ಕ್ರಮಗಳನ್ನು ಸಮಯಕ್ಕೆ ಸರಿಯಾಗಿ ತೆಗೆದುಕೊಳ್ಳಲಾಗುವುದಿಲ್ಲ. ಇದಲ್ಲದೆ, ವಿಳಂಬವು ವ್ಯವಸ್ಥೆಯನ್ನು ವಂಚನೆ ಮತ್ತು ಸಾರ್ವಜನಿಕ ಹಣದ ಸೋರಿಕೆಯ ಅಪಾಯಕ್ಕೆ ಈಡುಗೊಳಿಸುವ ಸಂಭವವಿದೆ.

ಸರ್ಕಾರದಲ್ಲಿನ ಇಲಾಖೆಗಳ ಮುಖ್ಯಸ್ಥರು ಈ ಉದ್ಯಮಗಳು ನಿಗದಿತ ಸಮಯದ ಚೌಕಟ್ಟಿನೊಳಗೆ ಲೆಕ್ಕಪತ್ರಗಳನ್ನು ಸಿದ್ಧಪಡಿಸಿ ಲೆಕ್ಕಪರಿಶೋಧನೆಗಾಗಿ ಪ್ರಧಾನ ಮಹಾಲೇಖಾಪಾಲರಿಗೆ ಸಲ್ಲಿಸುತ್ತವೆ ಎಂಬುದನ್ನು ಖಚಿತ ಪಡಿಸಿಕೊಳ್ಳಬೇಕು. ಮುಚ್ಚಿದ/ವರ್ಗಾಯಿಸಲ್ಪಟ್ಟ/ಸಹಕಾರಿ ಒಕ್ಕೂಟಗಳಾಗಿ ಪರಿವರ್ತಿಸಲಾದ ಒಂಬತ್ತು ಉದ್ಯಮಗಳಲ್ಲಿ, ಎರಡು ಉದ್ಯಮಗಳಿಗೆ ಸಂಬಂಧಿಸಿದಂತೆ ಪ್ರಪತ್ರ ಲೆಕ್ಕಗಳು 1969–70 ರಿಂದ ಸಲ್ಲಿಕೆಯಾಗದೆ ಬಾಕಿ ಉಳಿದಿವೆ. ಉದ್ಯಮಗಳ ಪ್ರಪತ್ರ ಲೆಕ್ಕಗಳ ತಯಾರಿಕೆಯಲ್ಲಿ ಬಾಕಿಯಿರುವ ಸ್ಥಿತಿಯನ್ನು **ಅನುಬಂಧ 4.4**ರಲ್ಲಿ ನೀಡಲಾಗಿದೆ.

ಅನುಬಂಧದಲ್ಲಿ ತೋರಿಸಿದಂತೆ 2008–09 ರವರೆಗೆ ಲೆಕ್ಕಗಳನ್ನು ಅಂತಿಮಗೊಳಿಸಿರುವ ಒಂದು ಉದ್ದಿಮೆ, 2015–16ರವರೆಗಿನ ನಾಲ್ಕು ಉದ್ದಿಮೆಗಳು 2016–17ರವರೆಗಿನ ಒಂದು ಉದ್ದಿಮೆ, ಒಟ್ಟು ಆರು ಉದ್ದಿಮೆಗಳಲ್ಲಿ ₹8.87 ಕೋಟಿಗಳ ಹೂಡಿಕೆ ಮಾಡಲಾಗಿದೆ.

ಮಾರ್ಚ್ 2019ಕ್ಕೆ ಕೊನೆಗೊಳ್ಳುವ ವರ್ಷದ ರಾಜ್ಯ ಹಣಕಾಸು ವರದಿಯ **ಕಂಡಿಕೆ 3.4**ರಲ್ಲಿನ ಲೆಕ್ಕ ಪರಿಶೋಧನೆಯ ಅವಲೋಕನಕ್ಕೆ ಉತ್ತರವಾಗಿ, ಆರ್ಥಿಕ ಇಲಾಖೆಯು ಲೆಕ್ಕಪರಿಶೋಧನಾ ಕಚೇರಿಗೆ ಪ್ರಪತ್ರ ಲೆಕ್ಕಗಳನ್ನು ಒದಗಿಸುವಂತೆ ವಿನಂತಿಸಲಾಗಿದೆ ಎಂದು ಹೇಳಿದೆ (ಮಾರ್ಚ್ 2019).

## 4.11 ಸಂಸ್ಥೆಗಳು ಮತ್ತು ಪ್ರಾಧಿಕಾರಗಳಿಗೆ ನೀಡಿದ ಅನುದಾನ/ಸಾಲಗಳ ವಿವರಗಳನ್ನು ಸಲ್ಲಿಸದಿರುವುದು

ಭಾರತದ ಲೆಕ್ಕ ನಿಯಂತ್ರಕರು ಮತು ಮಹಾ ಲೆಕ್ಕ ಪರಿಶೋಧಕರ (ಡಿಪಿಸಿ) ಕಾಯಿದೆ, 1971ರ ಪರಿಚ್ಛೇದ 14 ಅಡಿಯಲ್ಲಿ ಯಾವುದೇ ಸಂಸ್ಥೆ ಅಥವಾ ಪ್ರಾಧಿಕಾರಕ್ಕೆ ರಾಜ್ಯದ ಸಂಚಿತ ನಿಧಿಯಿಂದ ಅನುದಾನ ಅಥವಾ ಸಾಲಗಳಿಂದ ಗಣನೀಯವಾಗಿ ಹಣಕಾಸು ಒದಗಿಸಿದಾಗ, ಆ ಸಂಸ್ಥೆ ಅಥವಾ ಪ್ರಾಧಿಕಾರಕ್ಕೆ, ಆ ಸಮಯಕ್ಕೆ ಅನ್ವಯವಾಗುವ ಯಾವುದೇ ಕಾನೂನಿನ ನಿಬಂಧನೆಗಳಿಗೆ ಒಳಪಟ್ಟು ಸಿಎಜಿಯು ಆ ಸಂಸ್ಥೆ ಅಥವಾ ಪ್ರಾಧಿಕಾರದ ಎಲ್ಲಾ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ಪರಿಶೋಧನೆ ಮಾಡಿ ಪರಿಶೋಧಿತ ಸ್ವೀಕೃತಿಗಳು ಮತ್ತು ವೆಚ್ಚಗಳ ವರದಿಯನ್ನು ಸಲ್ಲಿಸುತ್ತಾರೆ. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ (ಡಿಪಿಸಿ) ಕಾಯಿದೆ, 1971ರ ಪರಿಚ್ಛೇದ 15ರ ಅಡಿಯಲ್ಲಿ, ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಯಾವುದೇ ಅನುದಾನ ಅಥವಾ ಸಾಲವನ್ನು ನೀಡಿದರೆ, ಅದಕ್ಕೆ ಸಂಬಂಧಿಸಿದ ಷರತ್ತುಗಳ

ಪಾಲನೆಗೆ ಅನುಸರಿಸ ಬೇಕಾದ ಕಾರ್ಯವಿಧಾನಗಳನ್ನು ಮಂಜೂರಾತಿ ಪ್ರಾಧಿಕಾರವು ತೃಪ್ತಿಕರವಾಗಿ ನಿರ್ವಹಿಸಿದೆಯೇ ಎಂಬುದನ್ನು ಸಿಎಜಿಯು ಪರಿಶೀಲಿಸುತ್ತಾರೆ.

ಮೇಲಿನ ವಿಧಿಗಳ ಅಡಿಯಲ್ಲಿ ಲೆಕ್ಕ ಪರಿಶೋಧನೆಗೆ ಒಳಪಡುವ ಸಂಸ್ಥೆಗಳು/ಸಂಸ್ಥೆಗಳು/ಪ್ರಾಧಿಕಾರಗಳನ್ನು ಗುರುತಿಸುವ ಅಗತ್ಯವಿದೆ ಮತ್ತು ಸರ್ಕಾರಿ ಇಲಾಖೆಗಳ ಮುಖ್ಯಸ್ಥರು ಪ್ರತಿವರ್ಷ ₹25 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಹಣಕಾಸಿನ ನೆರವು ನೀಡಿದ ಸಂಸ್ಥೆಗಳ ಮತ್ತು ಯಾವ ಉದ್ದೇಶಕ್ಕಾಗಿ ಸಹಾಯವನ್ನು ನೀಡಲಾಗಿದೆ ಮತ್ತು ಸಂಸ್ಥೆಗಳ ಒಟ್ಟು ವೆಚ್ಚದ ಬಗ್ಗೆ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಬೇಕಾಗಿರುತ್ತದೆ.

**ಅನುಬಂಧ 4.5**ರಲ್ಲಿ ವಿವರಿಸಿದಂತೆ ಇಪ್ಪತ್ತೆರಡು ಇಲಾಖೆಗಳು ಎರಡು ವರ್ಷದಿಂದ 20 ವರ್ಷಗಳಿಗೂ ಹೆಚ್ಚಿನ ಅವಧಿಯಲ್ಲಿ ₹25 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಅನುದಾನವನ್ನು ಸ್ವೀಕರಿಸುವ 1,082 ಸಂಸ್ಥೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸಿಲ್ಲ. ಅನುಬಂಧದಲ್ಲಿ ನೋಡಿದಂತೆ, ಪ್ರಮುಖವಾಗಿ ಶಿಕ್ಷಣ ಇಲಾಖೆಯು ಮಾಹಿತಿಯನ್ನು ನೀಡಿಲ್ಲ.

ಆದರೂ, ಮಾರ್ಚ್ 2019ಕ್ಕೆ ಕೊನೆಗೊಳ್ಳುವ ವರ್ಷದ ರಾಜ್ಯ ಹಣಕಾಸು ವ್ಯವಹಾರಗಳ **ವರದಿಯ ಕಂಡಿಕೆ 3.2**ರಲ್ಲಿನ ಲೆಕ್ಕ ಪರಿಶೋಧನೆಯ ಅವಲೋಕನಕ್ಕೆ ಉತ್ತರವಾಗಿ, ಆರ್ಥಿಕ ಇಲಾಖೆಯು (ಆಗಸ್ಟ್ 2021) ಲೆಕ್ಕ ಪರಿಶೋಧನಾ ಕಚೇರಿಗೆ ಮಾಹಿತಿಯನ್ನು ಒದಗಿಸಲು ಸಂಬಂಧಪಟ್ಟ ಇಲಾಖೆಗಳನ್ನು ಕೋರಲಾಗಿದೆ (ಫೆಬ್ರವರಿ 2021) ಎಂದು ಹೇಳಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಮಾಹಿತಿ ನೀಡದ ಇಲಾಖೆಗಳ ಸಂಖ್ಯೆ ಹೆಚ್ಚಿರುವುದು ಕಂಡು ಬಂದಿದೆ.

ಆರ್ಥಿಕ ಇಲಾಖೆಯು ₹25 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಹಣಕಾಸಿನ ನೆರವು/ಅನುದಾನವನ್ನು ಪಡೆಯುವ ಸಂಸ್ಥೆಗಳ ವಿವರಗಳನ್ನು ಒದಗಿಸಲು ವಿನಂತಿಸಲಾಗುವುದು ಎಂದು ಪುನರುಚ್ಚರಿಸಿದೆ (ಡಿಸೆಂಬರ್ 2021).

### 4.12 ಲೆಕ್ಕ ಸಲ್ಲಿಕೆಯ ಕಾಲಮಿತಿಗಳು ಮತ್ತು ಲೆಕ್ಕಗಳ ಗುಣಮಟ್ಟ

ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಅವರು 34 ಖಜಾನೆಗಳು, 3 ಇತರೆ, 103 ಲೋಕೋಪಯೋಗಿ ವಿಭಾಗಗಳು ಮತ್ತು 103 ಅರಣ್ಯ ವಿಭಾಗಗಳು ಸಲ್ಲಿಸಿದ ಆರಂಭಿಕ ಲೆಕ್ಕಗಳಿಂದ ಮತ್ತು ರಿಸರ್ವ್ ಬ್ಯಾಂಕು ನೀಡುವ ಸೂಚನೆಗಳಿಂದ ರಾಜ್ಯ ಸರ್ಕಾರದ ಲೆಕ್ಕಗಳನ್ನು ಸಂಕಲಿಸುತ್ತಾರೆ. ಇಲಾಖೆಗಳ ಕೆಲವು ವಿಭಾಗಗಳಿಂದ ಮೊದಲ ಮೂರು ತ್ರೈಮಾಸಿಕಗಳಲ್ಲಿ ಮಾಸಿಕ ಲೆಕ್ಕಗಳನ್ನು ಸಲ್ಲಿಸುವಲ್ಲಿ ವಿಳಂಬವಾಗಿದ್ದರೂ, ರಾಜ್ಯ ಸರ್ಕಾರವು ಮೇಲ್ವಿಚಾರಣೆ ಮತ್ತು ನಿಗದಿತ ಸಮಯಕ್ಕೆ ಸರಿಯಾಗಿ ಲೆಕ್ಕಗಳನ್ನು ಸಲ್ಲಿಸುವುದನ್ನು ಖಾತ್ರಿಪಡಿಸಿದೆ. ಈ ಸಮಯೋಚಿತ ಲೆಕ್ಕಗಳ ಸಲ್ಲಿಕೆಯು 2020–21ರಲ್ಲಿಯೂ ಮುಂದುವರೆದಿದ್ದು ಪರಿಣಾಮವಾಗಿ, ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಅವರು ಸರ್ಕಾರಕ್ಕೆ ಸಲ್ಲಿಸುವ ಮಾಸಿಕ ಸಿವಿಲ್ ಲೆಕ್ಕಗಳಲ್ಲಿ ಯಾವುದೇ ಲೆಕ್ಕಗಳನ್ನು ಹೊರತುಪಡಿಸಿರಲಿಲ್ಲ.

### 4.13 ಹಣ ದುರ್ಬಳಕೆ, ನಷ್ಟ, ಕಳ್ಳತನ ಇತ್ಯಾದಿ.

2020–21ರಅಂತ್ಯಕ್ಕೆ ₹26.40 ಕೋಟಿಗಳ ಮೊತ್ತದ ಸರ್ಕಾರಿ ಹಣದ ದುರುಪಯೋಗ, ನಷ್ಟ ಇತ್ಯಾದಿಗಳ 33 ಪ್ರಕರಣಗಳಿದ್ದು, ಅಂತಿಮ ಕ್ರಮ ಬಾಕಿ ಇದೆ. ಇಲಾಖಾವಾರು ಬಾಕಿ ಇರುವ ಪ್ರಕರಣಗಳ ವಿಭಜನೆಯನ್ನು **ಕೋಷ್ಟಕ 4.12**ರಲ್ಲಿ ಕೆಳಗೆ ನೀಡಲಾಗಿದೆ ಮತ್ತು **ಅನುಬಂಧ 4.6**ರಲ್ಲಿ ಕಾಲವಾರು ವಿಭಜನೆಯನ್ನು ಸೂಚಿಸಲಾಗಿದೆ.

**ಕೋಷ್ಟಕ 4.12: ದುರುಪಯೋಗ, ನಷ್ಟ ಮತ್ತು ಕಳ್ಳತನ ಇತ್ಯಾದಿಗಳ ಬಾಕಿ ಉಳಿದಿರುವ ಪ್ರಕರಣಗಳು**

**(₹ ಲಕ್ಷಗಳಲ್ಲಿ)**

| ಇಲಾಖೆಯ ಹೆಸರು | ಸರ್ಕಾರದ ಸವತ್ತುಗಳ ದುರ್ಬಳಕೆ, ನಷ್ಟ, ಕಳ್ಳತನ ಇತ್ಯಾದಿ | | ಬಾಕಿ ಇರುವ ದುರ್ಬಳಕೆ, ನಷ್ಟ, ಕಳ್ಳತನ ಇತ್ಯಾದಿಗಳ ಅಂತಿಮ ವಿಲೇವಾರಿಯಲ್ಲಿನ ವಿಳಂಬಕ್ಕೆ ಕಾರಣಗಳು | | | | | |
|---|---|---|---|---|---|---|---|---|
| | | | ಇಲಾಖಾ ಮತ್ತು ದಂಡಾರ್ಹ ಪರಿಶೋಧನೆಗಳು ನಿರೀಕ್ಷೆಯಲ್ಲಿರುವುದು | | ಇಲಾಖಾ ಕ್ರಮ ಪ್ರಾರಂಭವಾಗಿದ್ದು ಅಂತಿಮ ಗೊಳ್ಳದಿರುವುದು | | ದಂಡ ಪ್ರಕ್ರಿಯೆ ಅಂತಿಮವಾಗಿದ್ದು ಹಣ ವಸೂಲಿ ಬಾಕಿ ಇರುವುದು | |
| | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ |
| ಲೋಕೋಪಯೋಗಿ | 02 | 1,180.18 | – | – | 02 | 1,180.18 | – | – |
| ಗೃಹ | 08 | 256.09 | 03 | 101.93 | 05 | 154.16 | – | – |
| ಆಹಾರ ಮತ್ತು ನಾಗರೀಕ ಸರಬರಾಜು | 01 | 525.00 | 01 | 525.00 | – | – | – | – |
| ಸಮಾಜ ಕಲ್ಯಾಣ | 01 | 9.48 | 01 | 9.48 | – | – | – | – |
| ವೈದ್ಯಕೀಯ ಶಿಕ್ಷಣ | 02 | 1.91 | 02 | 1.91 | – | – | – | – |
| ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳು | 04 | 643.70 | 04 | 643.70 | – | – | – | – |
| ತಾಂತ್ರಿಕ ಶಿಕ್ಷಣ | 01 | 0.28 | 01 | 0.28 | – | – | – | – |
| ಅರಣ್ಯ | 02 | 0.74 | 02 | 0.74 | – | – | – | – |
| ಆರೋಗ್ಯ ಮತ್ತು ನಾಗರೀಕ ಪೂರೈಕೆ | 10 | 1.6 | 10 | 1.6 | – | – | – | – |
| ಕಾರ್ಮಿಕ | 01 | 0.89 | – | – | 01 | 0.89 | | |
| ನ್ಯಾಯಾಂಗ | 01 | 20.00 | 01 | 20.00 | | | | |
| ಒಟ್ಟು | **33** | **2,639.87** | **25** | **1,304.64** | **08** | **1,335.23** | – | – |

*ಆಕರ: ಮಹಾಲೇಖಾಪಾಲರು (ಲೆಕ್ಕಪರಿಶೋಧನೆ I) ಮತ್ತು ಮಹಾಲೇಖಾಪಾಲರು (ಲೆಕ್ಕಪರಿಶೋಧನೆ II) ಕಚೇರಿ*

## 4.14 ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಯ ಮೇಲಿನ ಅನುಸರಣಾ ಕ್ರಮ

2009–10ನೇ ಸಾಲಿನ ರಾಜ್ಯ ಹಣಕಾಸು ವ್ಯವಹಾರಗಳ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ ವರದಿಯನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಮೇ 2011ರಿಂದ ಆಗಸ್ಟ್ 2011ರ ಅವಧಿಯಲ್ಲಿ ಚರ್ಚಿಸಿದ್ದು ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ಡಿಸೆಂಬರ್ 2011ರಲ್ಲಿ ಶಾಸಕಾಂಗದ ಮುಂದೆ ಇರಿಸಲಾಯಿತು. ಸಾರ್ವಜವಿಕ ಲೆಕ್ಕಪತ್ರ ಸಮಿತಿಯ ಶಿಫಾರಸುಗಳ ಅನುಸರಣೆ, ಕ್ರಮ ತೆಗೆದುಕೊಂಡ ಟಿಪ್ಪಣಿಯನ್ನು ಸೆಪ್ಟೆಂಬರ್ 2014ರಲ್ಲಿ ಅದರ ಪರಿಗಣನೆಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮುಂದೆ ಇರಿಸಲಾಯಿತು. ಸಮಿತಿಯು ಸರ್ಕಾರವು ಒದಗಿಸಿದ ಕ್ರಮ ತೆಗೆದುಕೊಂಡ ಟಿಪ್ಪಣಿಯನ್ನು ಚರ್ಚಿಸಿ ಮತ್ತಷ್ಟು ಶಿಫಾರಸುಗಳನ್ನು ಮಾಡಿ ಜುಲೈ 2015ರಲ್ಲಿ ಶಾಸಕಾಂಗದ ಮುಂದೆ ಇರಿಸಿತು.

2012–13ರಿಂದ 2017–18ರವರೆಗಿನ ಹೆಚ್ಚುವರಿ ವೆಚ್ಚವನ್ನು ಸಕ್ರಮೀಕರಣಗೊಳಿಸುವುದು, ಧನವಿನಿಯೋಗ ಲೆಕ್ಕಗಳಲ್ಲಿನ ವ್ಯಾಖ್ಯಾನಗಳ ಆಯ್ಕೆಗೆ ವಿತ್ತೀಯ ಮಿತಿಗಳ ಪರಿಷ್ಕರಣೆಗಳಂತಹ, ರಾಜ್ಯ ಹಣಕಾಸುಗಳ ಕುರಿತು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಗಮನಕ್ಕೆ ಅರ್ಹವಾದ ಪ್ರಮುಖ ವಿಷಯಗಳನ್ನು ಪರಿಗಣನೆಗಾಗಿ ಶಾಸಕಾಂಗದ ಗಮನಕ್ಕೆ ತರಲಾಗಿದೆ.

## 4.15 ತೀರ್ಮಾನ

ಕಳೆದ ವರ್ಷಕ್ಕೆ ಹೋಲಿಸಿದರೆ 2020–21ರಲ್ಲಿ ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಮುಕ್ತಾಯದ ಶಿಲ್ಕುಗಳು ಸ್ವಲ್ಪಮಟ್ಟಿನ ಇಳಿಕೆಯನ್ನು ತೋರಿಸಿವೆ. ಅಂತಿಮ ಶಿಲ್ಕುಗಳಲ್ಲಿ ಇಳಿಕೆ ಕಂಡು ಬಂದರೂ, ಸರ್ಕಾರಕ್ಕೆ ಮರು ಪಾವತಿ ಮಾಡಬೇಕಾಗಿದ್ದ ಬಳಕೆಯಾಗದ ಮೊತ್ತವನ್ನು ಇದು ಒಳಗೊಂಡಿದೆ. ಜತೆಗೆ ನಿಷ್ಕ್ರಿಯ ವೈಯಕ್ತಿಕ

ಠೇವಣಿ ಖಾತೆಗಳ ಸಂಖ್ಯೆಯೂ ಹೆಚ್ಚಿದೆ. ಅಂತಹ ನಿಷ್ಕ್ರಿಯ ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಶಿಲ್ಕುಗಳನ್ನು ಸಮನ್ವಯಗೊಳಿಸದಿರುವುದು ಮತ್ತು ಅಂತಹ ಖಾತೆಗಳಲ್ಲಿ ಇರುವ ಬಳಕೆ ಮಾಡದ ಶಿಲ್ಕುಗಳನ್ನು ರಾಜ್ಯದ ಸಂಚಿತ ನಿಧಿಗೆ ವರ್ಗಾಯಿಸದಿರುವುದು ಸಾರ್ವಜನಿಕ ನಿಧಿಯ ದುರುಪಯೋಗ, ವಂಚನೆ ಮತ್ತು ದುರ್ಬಳಕೆಯ ಅಪಾಯದಿಂದ ಕೂಡಿದೆ.

ಅಮಾನತ್ತುಗಳ ಅಡಿಯಲ್ಲಿ ಶಿಲ್ಕುಗಳನ್ನು ತೆರವುಗೊಳಿಸದಿರುವುದು ಸರಿಯಾದ ಲೆಕ್ಕದ ಅಡಿಯಲ್ಲಿ ಸರ್ಕಾರದ ಸ್ವೀಕೃತಿ ಮತ್ತು ವೆಚ್ಚವನ್ನು ನಿಖರವಾಗಿ ಪ್ರತಿಬಿಂಬಿಸುವುದಿಲ್ಲ. ಇದಲ್ಲದೆ, ಕೆಲವು ಋಣ ಠೇವಣಿ ಇರಸಾಲುಗಳ ಶೀರ್ಷಿಕೆಯಡಿ ಪ್ರತಿಕೂಲ ಶಿಲ್ಕುಗಳಿದ್ದವು. ಇವುಗಳ ತೀರುವಳಿಗಾಗಿ ಪರಿಹಾರ ಕ್ರಮಗಳ ಅಗತ್ಯವಿತ್ತು.

ಪ್ರಸಕ್ತ ವರ್ಷದಲ್ಲಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಲ್ಲಿ ಶೇಕಡಾ 29ಕ್ಕಿಂತ ಹೆಚ್ಚು ಬಿಲ್ಲುಗಳು ಪಾವತಿಗಲ್ಲದ ಸವಿವರ ಸಂಕ್ಷಿಪ್ತ ಸಾದಿಲ್ವಾರು ಬಿಲ್‌ಗಳ ಕೊರತೆಯಿಂದ ಬಾಕಿ ಉಳಿದಿವೆ.

ಸರ್ಕಾರದಿಂದ ಗಣನೀಯವಾಗಿ ಅನುದಾನ ಪಡೆದ ಸಂಸ್ಥೆಗಳ ಬಗ್ಗೆ ಲೆಕ್ಕಪರಿಶೋಧನೆ ಮಾಡಲು ಮಾಹಿತಿ ನೀಡುವಂತೆ ಪ್ರಧಾನ ಇಲಾಖೆಯು ಆಡಳಿತಾತ್ಮಕ ಇಲಾಖೆಗಳಿಗೆ ಸೂಚನೆಗಳನ್ನು ನೀಡಿದ್ದರೂ, ಅಗತ್ಯ ಮಾಹಿತಿಯನ್ನು ಒದಗಿಸದ ಸಂಸ್ಥೆಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡು ಬಂದಿದೆ. ಇದು ಅಸಮರ್ಪಕ ಆಂತರಿಕ ನಿಯಂತ್ರಣ ಮತ್ತು ರಾಜ್ಯ ಸರ್ಕಾರದ ಮೇಲ್ವಿಚಾರಣಾ ಕಾರ್ಯ ವಿಧಾನದಲ್ಲಿನ ಕೊರತೆಯನ್ನು ಸೂಚಿಸುತ್ತದೆ.

### 4.16 ಶಿಫಾರಸುಗಳು

- ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಶಿಲ್ಕುಗಳಲ್ಲಿ ಬಳಕೆಯ ಅವಧಿಯನ್ನು ಮೀರಿದ ಶಿಲ್ಕುಗಳ ತೀರುವಳಿಗೊಳಿಸುವುದನ್ನು ಪರಿಶೀಲಿಸುವ ಅಗತ್ಯವಿದೆ ಮತ್ತು ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಸ್ಥಿತಿಯನ್ನು ಪರಿಶೀಲಿಸಲು ಮತ್ತು ಶಿಲ್ಕುಗಳ ಹೊಂದಾಣಿಕೆಯ ನಂತರ ಮತ್ತು ನಿರ್ವಾಹಕರು ಮತ್ತು ಖಜಾನೆಯೊಂದಿಗೆ ಸಮಾಲೋಚಿಸಿದ ನಂತರ ನಿಷ್ಕ್ರಿಯ ಖಾತೆಗಳನ್ನು ಮುಕ್ತಾಯ ಮಾಡಲು ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.
- ಹಿಂದಿನ ಹಣಕಾಸು ಆಯೋಗದ ಬಳಕೆಯಾಗದ ಮೊತ್ತಗಳು, ಯೋಜನೆಗಳು ಇತ್ಯಾದಿ, ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಉಳಿದಿರುವ ಹಣವನ್ನು ಸರ್ಕಾರಕ್ಕೆ ಹಿಂತಿರುಗಿಸಬೇಕಾಗಿದೆ.
- ಲೆಕ್ಕಪತ್ರ ವರ್ಷದಲ್ಲಿಯೇ ವಹಿವಾಟನ್ನು ಅಂತಿಮ ಲೆಕ್ಕಶೀರ್ಷಿಕೆಗೆ ತರಲು ಅಮಾನತ್ತು ಶೀರ್ಷಿಕೆಗಳ ಪರಿಶೀಲನೆಯನ್ನು ಮಾಡಬೇಕಾಗಿದೆ.
- ನಿಗದಿತ ಅವಧಿಯೊಳಗೆ ಸಂಕ್ಷಿಪ್ತ ಸಾದಿಲ್ವಾರು  ಬಿಲ್‌ಗಳ ಹೊಂದಾಣಿಕೆಯನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು.
- ಸರ್ಕಾರದಿಂದ ಗಣನೀಯವಾಗಿ ಹಣಕಾಸು ಒದಗಿಸಿದ ಸಂಸ್ಥೆಗಳ ಬಗ್ಗೆ ಎಲ್ಲಾ ಆಡಳಿತ ಇಲಾಖೆಗಳು  ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ) ಕಚೇರಿಗೆ ಮಾಹಿತಿಯನ್ನು ಒದಗಿಸುವುದನ್ನು ಸರ್ಕಾರವು ಖಚಿತ ಪಡಿಸಿಕೊಳ್ಳಬೇಕು.



**ಬೆಂಗಳೂರು** **(ಶಾಂತಿ ಪ್ರಿಯ ಎಸ್)**

**ದಿನಾಂಕ** **ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–I)**

**ಕರ್ನಾಟಕ**

**ಮೇಲು ಸಹಿ ಮಾಡಿದೆ**



**ನವದೆಹಲಿ** **(ಗಿರೀಶ್ ಚಂದ್ರ ಮುರ್ಮು)**

**ದಿನಾಂಕ** **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**

# ಅನುಬಂಧಗಳು

## ಅನುಬಂಧ 1.1 ರಾಜ್ಯ ಚಿತ್ರಣ
(ಉಲ್ಲೇಖ: ಕಂಡಿಕೆ 1.2; ಪುಟ 1)

| ಎ | ಸಾಮಾನ್ಯ ದತ್ತಾಂಶ | | |
|---|---|---|---|
| ಕ್ರ ಸಂ. | ವಿವರಗಳು | | ಅಂಕಿಅಂಶಗಳು |
| 1 | ವಿಸ್ತೀರ್ಣ | | 1,91,791 ಚ.ಕಿ.ಮೀ |
| 2 | ಜನಸಂಖ್ಯೆ | | |
| | ಎ | 2001ರ ಜನಗಣತಿ ಪ್ರಕಾರ | 5.29 ಕೋಟಿ |
| | ಬಿ | 2011ರ ಜನಗಣತಿ ಪ್ರಕಾರ | 6.11 ಕೋಟಿ |
| 3 | [1]ಜನಸಂಖ್ಯೆಯ ಸಾಂದ್ರತೆ (2011ರ ಜನಗಣತಿ)<br>(ರಾಷ್ಟ್ರೀಯ ಸಾಂದ್ರತೆ = **ಪ್ರತಿ ಚ.ಕಿ.ಮೀ.ಗೆ 382 ಜನ**) | | 319 ಜನ ಪ್ರತಿ ಚ.ಕಿ.ಮೀ |
| 4 | [2]ಬಡತನ ರೇಖೆಯ ಕೆಳಗಿನ ಜನಸಂಖ್ಯೆ<br>(ರಾಷ್ಟ್ರೀಯ ಸರಾಸರಿ = **2.90**%) | | ಶೇಕಡ 20.90 |
| 5 | [3]ಸಾಕ್ಷರತೆ (2011) (ರಾಷ್ಟ್ರೀಯ ಸರಾಸರಿ : ಶೇಕಡ 73) | | ಶೇಕಡ 75.36 |
| 6 | [4]ಶಿಶು ಮರಣದರ (ಪ್ರತಿ 1000 ಜೀವಂತ ಜನನಗಳಿಗೆ)<br>(ರಾಷ್ಟ್ರೀಯ ಸರಾಸರಿ = **33 ಪ್ರತಿ 1,000 ಜೀವಂತ ಜನನಗಳಿಗೆ**) | | ಪ್ರತಿ 1000 ಜೀವಂತ ಜನನಗಳಿಗೆ 23 |
| 7 | [5]ಜನನ ಸಮಯದ ಆಯು: ಪ್ರಮಾಣ (ರಾಷ್ಟ್ರೀಯ ಸರಾಸರಿ : 69.4 ವರ್ಷಗಳು) | | 69.4 ವರ್ಷಗಳು |
| 8 | [6]ಮಾನವ ಅಭಿವೃದ್ಧಿ ಸೂಚ್ಯಂಕವು[1] (2012) (ರಾಷ್ಟ್ರೀಯ – 0.587) | | 0.611 |
| 9 | [7]ರಾಜ್ಯದ ಒಟ್ಟು ಆಂತರಿಕ ಉತ್ಪನ್ನ(ರಾಒಆಂಉ) (2020–21) ಪ್ರಸಕ್ತ ಬೆಲೆಗಳಲ್ಲಿ (ಕೋಟಿಗಳು) | | 18,03,609 |
| 10 | ತಲಾ ರಾಒಆಂಉ 2020–21 ರೂಪಾಯಿಗಳಲ್ಲಿ) | ಕರ್ನಾಟಕ | 2,49,947 |
| | | ರಾಷ್ಟ್ರೀಯ ಸರಾಸರಿ | 1,41,945 |
| 11 | ತಲಾ ರಾಒಆಂಉ ಸಿಎಜಿಆರ್ (2011–12 ರಿಂದ 2020–21) | ಕರ್ನಾಟಕ | 10.91 |
| | | ಸಾಮಾನ್ಯ ವರ್ಗ ರಾಜ್ಯಗಳು | 8.08 |
| 12 | ರಾಒಆಂಉ ಸಿಎಜಿಆರ್ (2011–12 ರಿಂದ 2020–21) | ಕರ್ನಾಟಕ | 12.90 |
| | | ಸಾಮಾನ್ಯ ವರ್ಗ ರಾಜ್ಯಗಳು | 9.48 |
| 13 | ಜನಸಂಖ್ಯಾ ವೃದ್ಧಿ (2011–21) | ಕರ್ನಾಟಕ | 9.70 |
| | | ಸಾಮಾನ್ಯ ವರ್ಗ ರಾಜ್ಯಗಳು | 12.30 |

| ಬಿ | ಆರ್ಥಿಕ ದತ್ತಾಂಶ | | | | | | |
|---|---|---|---|---|---|---|---|
| ವಿವರಗಳು | | ಅಂಕಗಳು (ಶೇಕಡ) | | | | | |
| ಸಿಎಜಿಆರ್‌ನ | | ಸಾಮಾನ್ಯ ವರ್ಗ ರಾಜ್ಯಗಳು | | | ಕರ್ನಾಟಕ | | |
| | | 2011–12 ರಿಂದ 2014–15 | 2015–16 ರಿಂದ 2018–19 | 2019–20 ರಿಂದ 2020–21 | 2011–12 ರಿಂದ 2019–20 | 2015–16 ರಿಂದ 2019–20 | 2019–20 ರಿಂದ 2020–21^ |
| ಅ | ರಾಜಸ್ವ ಸ್ವೀಕೃತಿಗಳು | 13.49 | 11.85 | (–)4.56 | 10.61 | 10.30 | (–)10.67 |
| ಆ | ಸ್ವಂತ ತೆರಿಗೆ ಆದಾಯ | 11.86 | 11.04 | (–)4.43 | 9.65 | 7.79 | (–)5.19 |
| ಇ | ತೆರಿಗೆಯೇತರ ಆದಾಯ | 14.75 | 10.88 | (–)35.60 | 8.57 | 9.35 | 2.77 |
| ಈ | ಒಟ್ಟು ವೆಚ್ಚ | 14.99 | 10.54 | 4.54 | 13.32 | 11.40 | 4.83 |
| ಉ | ಬಂಡವಾಳ ವೆಚ್ಚ | 13.26 | 3.45 | (–)2.36 | 13.63 | 16.63 | 21.40 |
| ಊ | ಶಿಕ್ಷಣದ ಮೇಲಿನ ರಾಜಸ್ವ ವೆಚ್ಚ | 13.28 | 8.89 | (–)1.32 | 8.98 | 9.16 | (–)8.30 |

[1] ಮಾನವ ಅಭಿವೃದ್ಧಿ ಸೂಚ್ಯಂಕವು ಜೀವಿತಾವಧಿ, ಶಿಕ್ಷಣ ಮತ್ತು ತಲಾ ಆದಾಯವನ್ನು ಒಳಗೊಂಡಿರುವ ಸಂಯೋಜಿತ ಸೂಚ್ಯಂಕವಾಗಿದೆ.

| | | | | | | | |
|---|---|---|---|---|---|---|---|
| ಋ | ಆರೋಗ್ಯದ ಮೇಲಿನ ರಾಜಸ್ವ ವೆಚ್ಚ | 19.11 | 14.74 | 14.65 | 16.10 | 13.51 | 17.15 |
| ಎ | ಸಂಬಳ ಮತ್ತು ಮಜೂರಿ | 10.09 | 10.33 | 2.27 | 11.74 | 12.64 | 1.59 |
| ಏ | ಪಿಂಚಣಿ | 12.99 | 15.32 | 6.02 | 16.91 | 12.99 | 2.89 |

***ಆಕರ: ಹಣಕಾಸು ದತ್ತಾಂಶಗಳಿಗೆ ಹಣಕಾಸು ಲೆಕ್ಕಗಳು ಆಧಾರಿತ.***

***ಸಾಮಾನ್ಯ ವರ್ಗದ ರಾಜ್ಯಗಳ ಅಂಕಿಅಂಶಗಳನ್ನು, ಆರ್ಥಿಕ ಸಲಹೆಗಾರರು, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಕಛೇರಿ, ನವದೆಹಲಿ ಇವರಿಂದ ಮಾಹಿತಿ ಪಡೆಯಲಾಗಿದೆ.***

***^ 2019–20 ರಿಂದ 2020–21ರ ಅಂಕಿಅಂಶಗಳನ್ನು, ಮಾರ್ಚ್ 2021ಕ್ಕೆ ಕೊನೆಗೊಂಡ ಆರ್ಥಿಕ ಲೆಕ್ಕಗಳಿಂದ ಅಳವಡಿಸಲಾಗಿದೆ.***

**ಪ್ರಮುಖ ಮೂಲಭೂತ ಸೌಕರ್ಯಕ್ಕೆ ಸಂಬಂಧಿಸಿದ ಅಭಿವೃದ್ಧಿ ಸೂಚಕಗಳು**

(i) ನಯಮೇಲ್ಮೈ ರಸ್ತೆಗಳು (2019–20) – 100 ಚ.ಕೀ.ಮೀ 52.60 ಕಿ.ಮೀ.

(ii) ಒರಟುಮೇಲ್ಮೈ ರಸ್ತೆಗಳು (2019–20) – 100 ಚ.ಕೀ.ಮೀ 0.31 ಕಿ.ಮೀ.

(iii) ವಿದ್ಯುದೀಕರಣವಾದ ಹಳ್ಳಿಗಳು ಶೇಕಡ (2019–20) – 99.97.

(iv) ಒಟ್ಟಾರೆ ಕೃಷಿ ಪ್ರದೇಶ (2019–20) –135.51 ಹೆಕ್ಟೇರುಗಳು

(v) ಪ್ರಾಥಮಿಕ ಶಾಲೆಗಳು (2019–20ರಲ್ಲಿದ್ದಂತೆ) –62,431.

(vi) ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ – 2,359.

(vii) ಪ್ರತಿ ಒಂದು ಲಕ್ಷ ಜನ ಸಂಖ್ಯೆಗೆ ಇರುವ ಹಾಸಿಗೆಗಳು (2019–20) – 108.

1. *ಆರ್ಥಿಕ ಸಮೀಕ್ಷೆ, ಕರ್ನಾಟಕ ಸರ್ಕಾರ 2020–21*
2. *ಆರ್ಥಿಕ ಸಮೀಕ್ಷೆ, (ಭಾರತ ಸರ್ಕಾರ) 2020–21, ಸಂಪುಟ II ಪುಟ ಎ 168–169,* ಕೋಷ್ಟಕ 9.8.
3. *ಆರ್ಥಿಕ ಸಮೀಕ್ಷೆ, (ಭಾರತ ಸರ್ಕಾರ) 2020–21, ಸಂಪುಟ II ಪುಟ ಎ 164,* ಕೋಷ್ಟಕ 9.4.
4. *ಆರ್ಥಿಕ ಸಮೀಕ್ಷೆ, (ಭಾರತ ಸರ್ಕಾರ) 2020–21, ಸಂಪುಟ II ಪುಟ ಎ 160,* ಕೋಷ್ಟಕ 9.1.
5. *ಆರ್ಥಿಕ ಸಮೀಕ್ಷೆ, (ಭಾರತ ಸರ್ಕಾರ) 2020–21 ಪುಟ 514,* ಕೋಷ್ಟಕ 12.104.
6. *ಆರ್ಥಿಕ ಸಮೀಕ್ಷೆ (ಕರ್ನಾಟಕ ಸರ್ಕಾರ) 2020–21*
7. *ಭಾರತ ಜನಗಣತಿ 2001 (ಜನಸಂಖ್ಯಾ ಪ್ರಕ್ಷೇಪಣೆ 2001–2026, ಕೋಷ್ಟಕ 14, ಪುಟ 104 ರಿಂದ 115)*

*ಟಿಪ್ಪಣಿ: ಸಾಮಾನ್ಯ ವರ್ಗ ರಾಜ್ಯಗಳ ಅಖಿಲ ಭಾರತ ಸರಾಸರಿಯನ್ನು 16 ಸಾಮಾನ್ಯವರ್ಗದ ರಾಜ್ಯಗಳು ಒದಗಿಸಿದ ಅಂಕಿಸಂಖ್ಯೆಗಳ ಆಧಾರದ ಮೇರೆಗೆ ಲೆಕ್ಕ ಹಾಕಲಾಗಿದೆ – ತೆಲಂಗಾಣ ಸೇರಿದಂತೆ ಆಂಧ್ರಪ್ರದೇಶ, ಬಿಹಾರ, ಛತ್ತೀಸಗಢ, ಗುಜರಾತ್, ಹರಿಯಾಣ, ಜಾರ್ಖಂಡ್, ಕರ್ನಾಟಕ, ಕೇರಳ, ಮಧ್ಯ ಪ್ರದೇಶ, ಮಹಾರಾಷ್ಟ್ರ, ಒಡಿಶಾ, ಪಂಜಾಬ್, ರಾಜಾಸ್ಥಾನ, ತಮಿಳುನಾಡು, ಉತ್ತರಪ್ರದೇಶ ಹಾಗೂ ಪಶ್ಚಿಮ ಬಂಗಾಳ.*

## ಅನುಬಂಧ 1.2
## ಸರ್ಕಾರಿ ಲೆಕ್ಕಗಳ ಸ್ವರೂಪ
## (ಉಲ್ಲೇಖ : ಕಂಡಿಕೆ 1.4; ಪುಟ 6)

| ರಾಜ್ಯ ಸರ್ಕಾರದ ಹಣಕಾಸು ಲೆಕ್ಕಗಳ ವಿನ್ಯಾಸವು ಕೆಳಕಂಡಂತಿದೆ; | |
|---|---|
| ರಾಜ್ಯ ಹಣಕಾಸು ಲೆಕ್ಕಗಳನ್ನು ಎರಡು ಸಂಪುಟಗಳಲ್ಲಿ ತಯಾರಿಸಲಾಗುತ್ತದೆ. ಸಂಪುಟ – I ಸರ್ಕಾರದ ಹಣಕಾಸುಗಳ ಸಾರಾಂಶದ ವಿವರಣಾ ಪಟ್ಟಿಗಳನ್ನು ಮತ್ತು ಸಂಪುಟ – II ಸವಿವರ ವಿವರಣಾಪಟ್ಟಿಗಳನ್ನು ಸಾದರ ಪಡಿಸುತ್ತದೆ. ವಿನ್ಯಾಸದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಅಲ್ಲದೆ ಸಂಪುಟ – II ವಿವಿಧ ಅನುಬಂಧಗಳಲ್ಲಿ ನೀಡಿರುವಂತೆ ಪ್ರಧಾನ ಶೀರ್ಷಿಕೆಯಲ್ಲಿ ಸಂಬಳ ಮತ್ತು ಸಹಾಯಧನಗಳ ತುಲನಾತ್ಮಕ ವೆಚ್ಚ, ರಾಜ್ಯ ಸರ್ಕಾರ ನೀಡಿದ ಸಹಾಯಾನುದಾನಗಳು ಮತ್ತು ಆರ್ಥಿಕ ಸಹಾಯಗಳು, ಬಾಹ್ಯ ಬೆಂಬಲಿತ ಯೋಜನೆಗಳು, ಯೋಜನಾ ಕಾರ್ಯಕ್ರಮಗಳ ಮೇಲಿನ ವೆಚ್ಚ, ಅನುಷ್ಠಾನ ಏಜೆನ್ಸಿಗಳಿಗೆ ಕೇಂದ್ರ ಯೋಜನಾ ಮೊತ್ತಗಳ ನೇರ ಬಿಡುಗಡೆ, ಶಿಲ್ಕುಗಳ ಸಾರಾಂಶ, ನೀರಾವರಿ ಯೋಜನೆಗಳ ಆರ್ಥಿಕ ಫಲಗಳು ಅಪೂರ್ಣ ಸಾರ್ವಜಿಕ ಕಾಮಗಾರಿಗಳ ಗುತ್ತಿಗೆಗಳ ಬದ್ಧತೆಗಳು ಮತ್ತು ನಿರ್ವಹಣಾ ವೆಚ್ಚಗಳನ್ನು ಹೊಂದಿದೆ. | |
| ವಿವರಣಾ ಪಟ್ಟಿ ಸಂಖ್ಯೆ | ವಿನ್ಯಾಸ |
| 1 | ರಾಜ್ಯದ ಆರ್ಥಿಕ ಸ್ಥಿತಿಯ ವಿವರಣಾ ಪಟ್ಟಿ |
| 2 | ಸ್ವಿಕೃತಿಗಳು ಮತ್ತು ವಿತರಣೆಗಳ ವಿವರಣಾ ಪಟ್ಟಿ |
| 3 | ಸಂಚಿತ ನಿಧಿಯಲ್ಲಿನ ಸ್ವೀಕೃತಿಗಳ ವಿವರಣಾ ಪಟ್ಟಿ |
| 4 | ಸಂಚಿತ ನಿಧಿಯ ವೆಚ್ಚಗಳ ವಿವರಣಾ ಪಟ್ಟಿ |
| 5 | ಕ್ರಮವೃದ್ಧಿಯ ಬಂಡವಾಳ ವೆಚ್ಚಗಳ ವಿವರಣಾ ಪಟ್ಟಿ |
| 6 | ಸರ್ಕಾರದ ಸಾಲಗಳ ಮತ್ತು ಇತರ ಜವಾಬ್ದಾರಿಗಳ ವಿವರಣಾ ಪಟ್ಟಿ |
| 7 | ರಾಜ್ಯ ಸರ್ಕಾರವು ನೀಡಿದ ಸಾಲಗಳ ಮತ್ತು ಮುಂಗಡಗಳ ವಿವರಣಾ ಪಟ್ಟಿ |
| 8 | ಸರ್ಕಾರದ ಹೂಡಿಕೆಗಳ ವಿವರಣಾ ಪಟ್ಟಿ |
| 9 | ಸರ್ಕಾರ ನೀಡಿದ ಖಾತರಿಗಳ ವಿವರಣಾ ಪಟ್ಟಿ |
| 10 | ಸರ್ಕಾರವು ನೀಡಿದ ಅನುದಾನಗಳ ವಿವರಣಾ ಪಟ್ಟಿ |
| 11 | ಪುರಸ್ಕೃತ ಮತ್ತು ಪ್ರಭೃತ ವೆಚ್ಚಗಳ ವಿವರಣಾ ಪಟ್ಟಿ |
| 12 | ರಾಜಸ್ವ ಲೆಕ್ಕವನ್ನು ಹೊರತುಪಡಿಸಿ ವೆಚ್ಚದ ಆಕರ ಮತ್ತು ಅನ್ವಯಗಳ ವಿವರಣಾ ಪಟ್ಟಿ |
| 13 | ಸಂಚಿತ ನಿಧಿ, ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕಗಳಲ್ಲಿನ ಶಿಲ್ಕು ವಿವರಗಳ ಸಾರಾಂಶ |
| 14 | ಒಳಶೀರ್ಷಿಕೆಯ ಹಂತದವರೆಗೆ ರಾಜಸ್ವ ಮತ್ತು ಬಂಡವಾಳ ಜಮೆಗಳ ಸವಿವರ ವಿವರಣಾ ಪಟ್ಟಿ |
| 15 | ಒಳಶೀರ್ಷಿಕೆಯ ಹಂತದ ರಾಜಸé ವೆಚ್ಚಗಳ ಸವಿವರ ವಿವರಣಾ ಪಟ್ಟಿ. |
| 16 | ಒಳಶೀರ್ಷಿಕೆಯ ಮತ್ತು ಉಪಶೀರ್ಷಿಕೆಗಳ ಹಂತದ ಬಂಡವಾಳ ವೆಚ್ಚಗಳ ವಿವರಣಾ ಪಟ್ಟಿ |
| 17 | ಸಾಲಗಳು ಮತ್ತು ಇತರ ಜವಾಬ್ದಾರಿಗಳ ಸವಿವರ ವಿವರಣಾ ಪಟ್ಟಿ |
| 18 | ಸರ್ಕಾರವು ನೀಡಿರುವ ಸಾಲಗಳು ಮತ್ತು ಮುಂಗಡಗಳ ಸವಿವರ ವಿವರಣಾ ಪಟ್ಟಿ. |
| 19 | ಸರ್ಕಾರದ ಹೂಡಿಕೆಗಳ ಸವಿವರ ವಿವರಣಾ ಪಟ್ಟಿ |
| 20 | ಸರ್ಕಾರ ನೀಡಿದ ಖಾತರಿಗಳ ಸವಿವರ ವಿವರಣಾ ಪಟ್ಟಿ. |
| 21 | ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕ ವಹಿವಾಟುಗಳ ಸವಿವರ ವಿವರಣಾ ಪಟ್ಟಿ |
| 22 | ಮೀಸಲಿಟ್ಟ ನಿಧಿಗಳಲ್ಲಿನ ಶಿಲ್ಕುಗಳ ಸವಿವರ ವಿವರಣಾ ಪಟ್ಟಿ. |

## ಅನುಬಂಧ 1.3
### 31 ಮಾರ್ಚ್ 2021ರಲ್ಲಿದ್ದಂತೆ ಕರ್ನಾಟಕ ಸರ್ಕಾರದ ಸಂಕ್ಷಿಪ್ತ ಹಣಕಾಸು ಸ್ಥಿತಿ

(ಉಲ್ಲೇಖ: ಕಂಡಿಕೆ 1.7; ಪುಟ 9)

**(₹ ಕೋಟಿಗಳಲ್ಲಿ)**

| 31.03.2020 ರಂದು ಇದ್ದಂತೆ | | ಜವಾಬ್ದಾರಿಗಳು | | 31.03.2021 ರಂದು ಇದ್ದಂತೆ |
|---|---|---|---|---|
| **2,20,336.92** | | ಆಂತರಿಕ ಋಣ | | 2,81,140.19 |
| | 2,00,389.03 | ಬಡ್ಡಿ ಸಹಿತ ಮಾರುಕಟ್ಟೆ ಸಾಲಗಳು | 2,62,289.02 | |
| | 0.86 | ಬಡ್ಡಿರಹಿತ ಮಾರುಕಟ್ಟೆ ಸಾಲಗಳು | 0.86 | |
| | 72.50 | ಭಾರತೀಯ ಜೀವವಿಮಾ ನಿಗಮದಿಂದ ಪಡೆದ ಸಾಲಗಳು | 40.06 | |
| | 4,513.85 | ಇತರೆ ಸಂಸ್ಥೆಗಳಿಂದ ಪಡೆದ ಸಾಲಗಳು | 5,077.48 | |
| | 15,360.68 | ಭಾರತೀಯ ರಿಜರ್ವ್ ಬ್ಯಾಂಕಿನಿಂದ ಸಾಲಗಳು – ಕೇಂದ್ರದ ರಾಷ್ಟ್ರೀಯ ಸಣ್ಣ ಉಳಿತಾಯ ನಿಧಿಯಿಂದ ಪಡೆಯಲಾದ ವಿಶೇಷ ಭದ್ರತೆಗಳು | 13,732.77 | |
| **13,908.50** | | ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು | | 26,617.37^ |
| | 0.07 | 1984–85ನೇ ಸಾಲಿನ ಹಿಂದಿನ ವರ್ಷದ ಸಾಲಗಳು | 0.07 | |
| | 35.33 | ಯೋಜನೇತರ ಸಾಲಗಳು | 30.35 | |
| | 9,820.72 | ರಾಜ್ಯ ಯೋಜನೆ ಕಾರ್ಯಕ್ರಮಗಳಿಗಾಗಿ ಸಾಲಗಳು | 8,420.61 | |
| | 7.89 | ಕೇಂದ್ರ ಯೋಜನೆ ಕಾರ್ಯಕ್ರಮಗಳಿಗಾಗಿ ಸಾಲಗಳು | 7.89 | |
| | (–)18.25 | ಕೇಂದ್ರ ಪುರಸ್ಕೃತ ಯೋಜನೆಗಳಿಗಾಗಿ ಸಾಲಗಳು | (–)18.25 | |
| | 4,062.74 | ಇತರೆ ಸಾಲಗಳು | 18,176.70 | |
| **80.00** | | ಸಾದಿಲ್ವಾರು ನಿಧಿ | | 80.00 |
| **35,179.15** | | ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು ಇತ್ಯಾದಿ | | 38,811.09 |
| **37,599.04** | | ಮೀಸಲು ನಿಧಿಗಳು | | 43,873.08 |
| **31,559.22** | | ಠೇವಣಿಗಳು | | 30,874.07 |
| **5,296.95** | | ಅಮಾನತ್ತು ಮತ್ತು ಸಂಕೀರ್ಣ ಶಿಲ್ಕುಗಳು | | 2,377.03 |
| **3,43,959.78** | | **ಒಟ್ಟು** | | 4,23,772.83 |
| | | **ಆಸ್ತಿಗಳು** | | |
| **3,05,798.20** | | ಸ್ಥಿರ ಆಸ್ತಿಗಳ ಮೇಲೆನ ಒಟ್ಟು ಬಂಡವಾಳ ವೆಚ್ಚಗಳು | | 3,51,201.00 |
| | 67,816.71 | ಕಂಪನಿಗಳು, ನಿಗಮಗಳು ಇತ್ಯಾದಿಗಳ ಷೇರುಗಳಲ್ಲಿ ಹೂಡಿಕೆಗಳು | 68,256.68 | |
| | 2,37,981.49 | ಇತರೆ ಬಂಡವಾಳ ವೆಚ್ಚ | 2,82,944.32 | |
| **28,847.23** | | ಸಾಲಗಳು ಮತ್ತು ಮುಂಗಡಗಳು | | 31,246.53 |
| | 5,336.90 | ವಿದ್ಯುತ್ಶಕ್ತಿ ಯೋಜನೆಗಳಿಗಾಗಿ ಸಾಲಗಳು | 5,103.42 | |
| | 23,424.71 | ಇತರೆ ಅಭಿವೃದ್ಧಿ ಸಾಲಗಳು | 26,055.22 | |
| | 85.62 | ಸರ್ಕಾರಿ ನೌಕರರಿಗೆ ಸಾಲಗಳು ಮತ್ತು ಸಂಕೀರ್ಣ ಸಾಲಗಳು | 87.89 | |
| **1,037.95** | | ಇರಸಾಲಗಳು | | 1,073.33 |
| **6.94** | | ಇತರೆ ಮುಂಗಡಗಳು | | 6.94 |
| **34,463.13** | | ನಗದು | | 47,143.18 |

| 31.03.2020 ರಂದು ಇದ್ದಂತೆ | | ಜವಾಬ್ದಾರಿಗಳು | | 31.03.2021 ರಂದು ಇದ್ದಂತೆ |
|---|---|---|---|---|
| | --- | ಖಜಾನೆಗಳಲ್ಲಿನ ನಗದು | | |
| | 4.27 | ಖಾಯಂ ಮುಂಗಡಗಳು ಸೇರಿದಂತೆ ಇಲಾಖಾ ನಗದು ಶಿಲ್ಕು | 5.27 | |
| | 1,659.20 | ರಿಜರ್ವ್ ಬ್ಯಾಂಕ್ ಠೇವಣಿಗಳು | 1,583.33 | |
| | 0.01 | ರವಾನೆಯಲ್ಲಿರುವ ಇರಸಾಲಗಳು | 0.01 | |
| | 13,634.21 | ನಗದು ಶಿಲ್ಕು ಹೂಡಿಕೆಗಳು | 21,744.33 | |
| | 19,165.44 | ಮೀಸಲು ನಿಧಿಗಳಿಂದ ಹೂಡಿಕೆಗಳು | 23,810.24 | |
| **(–)26,193.67** | | ಸರ್ಕಾರಿ ಲೆಕ್ಕಗಳ ಹೆಚ್ಚಳ | | (–)6,898.15 |
| | (–)24,964.21 | ಸಂಚಿತ ಹೆಚ್ಚಳ | (–)26,193.67 | |
| | (–)1,185.39 | ರಾಜಸ್ವ ಕೊರತೆಯನ್ನು ಕೂಡಿರಿ | (+)19,337.50 | |
| | --- | ಇತರೆ ಹೊಂದಾಣಿಕೆಗಳನ್ನು ಕಳೆಯಿರಿ | | |
| | (–)44.07 | ಬಂಡವಾಳ ಸ್ವೀಕೃತಿಯನ್ನು ಕಳೆಯಿರಿ | (–)41.98* | |
| **3,43,959.78** | | **ಒಟ್ಟು** | | 4,23,772.83 |

* ಸಹಕಾರಿ ಸಂಸ್ಥೆಗಳಲ್ಲಿ ಮರುಪಾವತಿ ಆದ ಹೂಡಿಕೆಗಳು (₹3.25 ಕೋಟಿ) ಹೊರತು ಮೊತ್ತ ತೋರಿಸಲಾಗಿದೆ.

**^ ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ₹12,407 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ, ಪರಿಣಾಮಕಾರಿ ಸಾಲಗಳು ಮತ್ತು ಮುಂಗಡಗಳು ₹14,210.37 ಕೋಟಿಗಳಾಗುತ್ತದೆ**

## ಅನುಬಂಧ 2.1

ಸ್ವೀಕೃತಿಗಳು ಮತ್ತು ಬಟವಾಡೆಗಳ ಸಾರಾಂಶ

(ಉಲ್ಲೇಖ: ಕಂಡಿಕೆ 2.2; ಪುಟ: 19)

**(₹ ಕೋಟಿಗಳಲ್ಲಿ)**

| ಸ್ವೀಕೃತಿಗಳು | | | ಬಟವಾಡೆಗಳು | | |
|---|---|---|---|---|---|
| 2019-20 | | 2020-21 | 2019-20 | | 2020-21 |
| ಭಾಗ 'ಎ' : 2020-21ನೇ ಸಾಲಿನ ಜಮೆಗಳು ಮತ್ತು ವಿತರಣೆಗಳ ಸಾರಾಂಶ | | | | | |
| ಭಾಗ 'ಎ' : ರಾಜಸ್ವ | | | | | |
| **1,75,442.79** | **1. ರಾಜಸ್ವ ಜಮೆಗಳು** | **1,56,716.41** | **1,74,257.40** | **I. ರಾಜಸ್ವ ವೆಚ್ಚ** | **1,76,53.91#** |
| **1,02,362.79** | ತೆರಿಗೆ ರಾಜಸ್ವ | 97,052.54 | **48,823.84** | **ಸಾಮಾನ್ಯ ಸೇವೆಗಳು** | **55,017.93** |
| **7,681.47** | ತೆರಿಗೆಯೇತರ ರಾಜಸ್ವ | 7,893.84 | | **ಸಾಮಾಜಿಕ ಸೇವೆಗಳು** | |
| **30,919.00** | ಕೇಂದ್ರದ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು | 21,694.11 | 26,517.81 | ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 24,315.52 |
| **34,479.53** | ಕೇಂದ್ರ ಮತ್ತು ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮಗಳಿಗಾಗಿ ಅನುದಾನಗಳು | 30,075.92 | 8,338.53 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 9,768.46 |
| **12,213.55** | ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮಗಳು | 9,851.89 | 7,132.91 | ನೀರು ಪೂರೈಕೆ, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿ | 5,787.61 |
| **4,672.91** | ಹಣಕಾಸು **ಆಯೋಗದ ಅನುದಾನಗಳು** | 5,557.00 | 148.12 | ವಾರ್ತಾ ಮತ್ತು ಪ್ರಸಾರ | 203.99 |
| **17,593.07** | ಇತರೆ ವರ್ಗಾವಣೆಗಳು/ರಾಜ್ಯಗಳಿಗೆ ಅನುದಾನ | 14,667.03 | 7,167.25 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರು | 6,292.79 |
| | | | 525.01 | ಕಾರ್ಮಿಕ ಮತ್ತು ಕಾರ್ಮಿಕ ಕಲ್ಯಾಣ | 586.71 |
| | | | 16,327.50 | ಸಮಾಜ ಕಲ್ಯಾಣ ಮತ್ತು ಪೌಷ್ಠಿಕತೆ | 14,504.39 |
| | | | 215.68 | ಇತರೆ | 266.45 |
| | | | **66,372.81** | **ಒಟ್ಟು ಸಾಮಾಜಿಕ ಸೇವೆಗಳು** | **61,725.92** |
| | | | | **ಆರ್ಥಿಕ ಸೇವೆಗಳು** | |
| | | | 21,668.56 | ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳು | 16,686.91 |
| | | | 7,276.64 | ಗ್ರಾಮೀಣಾಭಿವೃದ್ಧಿ | 9,144.02 |
| | | | 226.42 | ವಿಶೇಷ ಪ್ರದೇಶ ಕಾರ್ಯಕ್ರಮಗಳು | 159.69 |
| | | | 2,103.15 | ನೀರಾವರಿ ಮತ್ತು ಪ್ರವಾಹ ನಿಯಂತ್ರಣ | 2,182.79 |
| | | | 12,264.40 | ಇಂಧನ | 14,277.18 |
| | | | 1,473.35 | ಕೈಗಾರಿಕೆ ಮತ್ತು ಖನಿಜಗಳು | 1,735.64 |

| ಸ್ವೀಕೃತಿಗಳು | | | ಬಟವಾಡೆಗಳು | | |
|---|---|---|---|---|---|
| **2019–20** | | **2020–21** | **2019–20** | | **2020–21** |
| | | | 3,566.77 | ಸಾರಿಗೆ | 4,545.09 |
| | | | 65.54 | ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ | 58.23 |
| | | | 3,991.21 | ಸಾಮಾನ್ಯ ಆರ್ಥಿಕ ಸೇವೆಗಳು | 4,839.47 |
| | | | **52,636.04** | **ಒಟ್ಟು ಆರ್ಥಿಕ ಸೇವೆಗಳು** | **53,629.02** |
| | | | **6,424.71** | **ಸಹಾಯಾನುದಾನ ಮತ್ತು ಕೊಡುಗೆಗಳು** | **5,681.04** |
| | | | **1,185.39** | **II ರಾಜಸ್ವ ಕೊರತೆ ಭಾಗ 'ಬಿ' ಗೆ ಮುಂದುವರೆಸಿದ್ದು** | **(–)19,337.50** |
| **1,75,442.79** | | **1,56,716.41** | **1,75,442.79** | **ಒಟ್ಟು** | **1,56,716.41** |
| **ಭಾಗ ಬಿ – ಬಂಡವಾಳ ಮತ್ತು ಇತರೆ** | | | | | |
| **22,003.87** | **II ಖಾಯಂ ಮುಂಗಡಗಳು, ನಗದು ಶಿಲ್ಕಿನ ಹೂಡಿಕೆಗಳು ಮತ್ತು ಮೀಸಲಿಟ್ಟ ನಿಧಿಗಳಿಂದ ಹೂಡಿಕೆಗಳೂ ಸೇರಿದಂತೆ ಆರಂಭಿಕ ನಗದು ಶಿಲ್ಕು** | **34,463.13** | | | |
| **45.07** | **III ಇತರೆ ಬಂಡವಾಳ ಜಮೆಗಳು** | **45.23** | **35,529.44** | **III. ಬಂಡವಾಳ ವೆಚ್ಚ** | **45,406.05***|
| | | | **778.92** | **ಸಾಮಾನ್ಯ ಸೇವೆಗಳು** | **1,206.29** |
| | | | | **ಸಾಮಾಜಿಕ ಸೇವೆಗಳು** | |
| | | | 1,203.17 | ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 1,167.87 |
| | | | 821.96 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 2,099.44 |
| | | | 4,244.78 | ನೀರು ಪೂರೈಕೆ, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿ | 6,830.52 |
| | | | 3.89 | ವಾರ್ತಾ ಮತ್ತು ಪ್ರಸಾರ | (–)3.60 |
| | | | 2,783.45 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರು | 1,163.80 |
| | | | 75.07 | ಸಮಾಜ ಕಲ್ಯಾಣ ಮತ್ತು ಪೌಷ್ಟಿಕತೆ | 167.86 |
| | | | 59.49 | ಇತರೆ ಸಾಮಾಜಿಕ ಸೇವೆಗಳು | 121.20 |
| | | | **9,191.81** | **ಒಟ್ಟು ಸಾಮಾಜಿಕ ಸೇವೆಗಳು** | **11,547.09** |
| | | | | **ಆರ್ಥಿಕ ಸೇವೆಗಳು** | |
| | | | 321.16 | ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳು | 640.73 |
| | | | 64.80 | ಗ್ರಾಮೀಣಾಭಿವೃದ್ಧಿ | 86.53 |

| ಸ್ವೀಕೃತಿಗಳು | | | ಬಟವಾಡೆಗಳು | | |
|---|---|---|---|---|---|
| **2019-20** | | **2020-21** | **2019-20** | | **2020-21** |
| | | | 1,190.16 | ವಿಶೇಷ ಪ್ರದೇಶ ಕಾರ್ಯಕ್ರಮಗಳು | 1,574.52 |
| | | | 13,342.73 | ನೀರಾವರಿ ಮತ್ತು ಪ್ರವಾಹ ನಿಯಂತ್ರಣ | 17,785.17 |
| | | | 858.35 | ಇಂಧನ | 650.12 |
| | | | 450.35 | ಕೈಗಾರಿಕೆ ಮತ್ತು ಖನಿಜಗಳು | 480.99 |
| | | | 8,896.81 | ಸಾರಿಗೆ | 11,016.83 |
| | | | 434.35 | ಸಾಮಾನ್ಯ ಆರ್ಥಿಕ ಸೇವೆಗಳು | 417.78 |
| | | | **25,558.71** | **ಒಟ್ಟು ಆರ್ಥಿಕ ಸೇವೆಗಳು** | **32,652.67** |
| **202.44** | **IV. ಸಾಲಗಳು ಮತ್ತು ಮುಂಗಡಗಳ ವಸೂಲಾತಿ** | **269.87** | **4,069.08** | **IV. ಸಾಲಗಳು ಮತ್ತು ಮುಂಗಡಗಳು** | **2,669.17** |
| **144.18** | ವಿದ್ಯುಚ್ಛಕ್ತಿ ಯೋಜನೆಗಳಿಂದ | 233.48 | 2,500.00 | ವಿದ್ಯುತ್ ಚ್ಛಕ್ತಿ ಯೋಜನೆಗಳಿಗೆ | - |
| **5.14** | ಸರ್ಕಾರಿ ನೌಕರರಿಂದ | 7.09 | 6.04 | ಸರ್ಕಾರಿ ನೌಕರರಿಗೆ | 4.80 |
| **53.12** | ಇತರರಿಂದ | 29.30 | 1,563.04 | ಇತರರಿಗೆ | 2,664.37 |
| **50,459.01** | **V. ಸಾರ್ವಜನಿಕ ಋಣ ಜಮೆಗಳು** | **84,527.94^** | **10,180.39** | **V. ಸಾರ್ವಜನಿಕ ಋಣ ಮರುಪಾವತಿ** | **11,015.81** |
| **49,473.26** | ಅರ್ಥೋಪಾಯ ಮುಂಗಡಗಳು ಮತ್ತು ಓವರ್ ಡ್ರಾಫ್ಟ್‌ಗಳನ್ನು ಹೊರತುಪಡಿಸಿ ಆಂತರಿಕ ಋಣ | 70,413.86 | 8,445.65 | ಅರ್ಥೋಪಾಯ ಮುಂಗಡಗಳು ಮತ್ತು ಓವರ್ ಡ್ರಾಫ್ಟ್‌ಗಳನ್ನು ಹೊರತುಪಡಿಸಿ ಆಂತರಿಕ ಋಣ | 9,610.60 |
| **310.49** | ಭಾರತೀಯ ರಿಸರ್ವ ಬ್ಯಾಂಕಿನಿಂದ ಅರ್ಥೋಪಾಯ ಮುಂಗಡಗಳು | | 310.49 | ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅರ್ಥೋಪಾಯ ಮುಂಗಡಗಳು | -- |
| **675.26** | ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು | 14,114.08 | 1,424.25 | ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮರುಪಾವತಿ | 1405.21 |
| **---** | **VI. ಸಾದಿಲ್ವಾರು ನಿಧಿ (ಪುನರ್ಭರ್ತಿ)** | ---------- | --- | **VI. ಸಾದಿಲ್ವಾರು ನಿಧಿ (ವಿತರಣೆಗಳು)** | --- |
| **2,55,637.80** | **VII. ಸಾರ್ವಜನಿಕ ಲೆಕ್ಕ ಜಮೆಗಳು** | **2,72,457.35** | **2,45,291.54** | **VII. ಸಾರ್ವಜನಿಕ ಲೆಕ್ಕ ವಿತರಣೆಗಳು** | **2,66,191.81** |
| **8,330.44** | ಸಣ್ಣ ಉಳಿತಾಯಗಳು ಮತ್ತು ಭವಿಷ್ಯ ನಿಧಿಗಳು ಇತ್ಯಾದಿ | 8,472.64 | 4,174.71 | ಸಣ್ಣ ಉಳಿತಾಯಗಳು ಮತ್ತು ಭವಿಷ್ಯ ನಿಧಿಗಳು ಇತ್ಯಾದಿ | 4,840.70 |
| **9,125.73** | ಮೀಸಲು ನಿಧಿಗಳು | 8,313.71 | 4,398.15 | ಮೀಸಲು ನಿಧಿಗಳು | 2,039.66 |
| **60,642.69** | ಠೇವಣಿಗಳು ಮತ್ತು ಮುಂಗಡಗಳು | 63,574.70 | 57,468.88 | ಠೇವಣಿಗಳು ಮತ್ತು ಮುಂಗಡಗಳು | 64,259.84 |
| **1,77,492.99** | ಅಮಾನತ್ತು ಮತ್ತು ಸಂಕೀರ್ಣಗಳು | 1,92,098.47 | 1,78,856.40 | ಅಮಾನತ್ತು ಮತ್ತು ಸಂಕೀರ್ಣಗಳು | 1,95,018.39 |
| **45.95** | ಇರಸಾಲುಗಳು | (-)2.17 | 393.40 | ಇರಸಾಲುಗಳು | 33.22 |
| **1,185.39** | **VIII. ರಾಜಸ್ವ ಕೊರತೆ ಭಾಗ 'ಎ' ಯಿಂದ ತೆಗೆದುಕೊಂಡಿದ್ದು** | **(-)19,337.50** | **34,463.13** | **VIII. ಅಂತಿಮ ನಗದು ಶಿಲ್ಕು (31.03.2021)** | **47,143.18** |

| ಸ್ವೀಕೃತಿಗಳು | | | ಬಟವಾಡೆಗಳು | | |
|---|---|---|---|---|---|
| **2019–20** | | **2020–21** | **2019–20** | | **2020–21** |
| | | | 0.01 | ಖಜಾನೆಗಳಲ್ಲಿನ ನಗದು ಮತ್ತು ಸ್ಥಳೀಯ ಇರಸಾಲುಗಳು | 0.01 |
| | | | | ರಿಸರ್ವ್ ಬ್ಯಾಂಕಿನಲ್ಲಿನ ಠೇವಣಿಗಳು | 1,583.33 |
| | | | 4.27 | ಖಾಯಂ ಮುಂಗಡಗಳು ಸೇರಿದಂತೆ ಇಲಾಖಾ ನಗದು ಶಿಲ್ಕು | 5.27 |
| | | | 13,634.21 | ನಗದು ಶಿಲ್ಕು ಹೂಡಿಕೆ | 21,744.33 |
| | | | 19,165.44 | ಉದ್ದೇಶಿತ ನಿಧಿಗಳಿಂದ ಹೂಡಿಕೆಗಳು | 23,810.24 |
| **3,29,844.07** | **ಒಟ್ಟು** | **3,72,426.02** | **3,29,844.07** | **ಒಟ್ಟು** | **3,72,426.02** |

*# ವಿವಿಧ ಸೇವಾ ಶೀರ್ಷಿಕೆಗಳಡಿ ಆಯವ್ಯಯದ ಹೊರಗಿನ ಸಾಲ ಮುಂತಾದವುಗಳಿಗೆ ಸಂಬಂಧಿಸಿದಂತೆ ಬಡ್ಡಿ ಪಾವತಿಯನ್ನು ಒಳಗೊಂಡಿದೆ. ₹1,512.31 ಕೋಟಿಗಳನ್ನು ವಿಶೇಷ ಉದ್ದೇಶ ಸಾಧನಗಳ ಮೂಲಕ ಸಾಲವನ್ನಾಗಿ ಪಡೆಯಲಾಗಿದೆ – ಸಾಮಾನ್ಯ ಸೇವೆಗಳು (₹0.11 ಕೋಟಿ) ಸಾಮಾಜಿಕ ಸೇವೆಗಳು (₹133.29 ಕೋಟಿ) ಮತ್ತು ಆರ್ಥಿಕ ಸೇವೆಗಳು (₹1,378.91 ಕೋಟಿ)*

** ಆಯವ್ಯಯದ ಹೊರಗಿನ ಸಾಲಗಳಿಂದಾದ ₹2,726.55 ಕೋಟಿಗಳ ವೆಚ್ಚವನ್ನು ಒಳಗೊಂಡಿದೆ.*

^ ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ₹12,407 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ ಪರಿಣಾಮಕಾರಿ ಸಾರ್ವಜನಿಕ ಋಣ ಸ್ವೀಕೃತಿಗಳು ₹72,120.94 ಕೋಟಿಗಳಾಗಿತ್ತು.

## ಅನುಬಂಧ 2.2

### ರಾಜ್ಯ ಸರ್ಕಾರದ ಹಣಕಾಸಿನ ಕಾಲ ಸರಣಿ ದತ್ತಾಂಶಗಳು

(ಉಲ್ಲೇಖ: 2.2, 2.4.3, 2.7.1; ಪುಟ 19, 24, 64)

(₹ ಕೋಟಿಗಳಲ್ಲಿ)

| | 2016–17 | 2017–18 | 2018–19 | 2019–20 | 2020–21 |
|---|---|---|---|---|---|
| ಭಾಗ ಎ : ಸ್ವೀಕೃತಿಗಳು | | | | | |
| 1. ರಾಜಸ್ವ ಸ್ವೀಕೃತಿಗಳು | **1,33,214** | **1,47,000** | **1,64,979** | **1,75,443** | **1,56,716** |
| ವೃದ್ಧಿಯ ದರ | **12.12** | **10.35** | **12.23** | **6.34** | **(–)10.67** |
| i) ತೆರಿಗೆ ಆದಾಯ | **82,956(62)** | **87,130(59)** | **96,830(59)** | **1,02,363(58)** | **97,052(62)** |
| ವೃದ್ಧಿಯ ದರ | **9.80** | **5.03** | **11.13** | **5.71** | **(–)5.19** |
| ರಾಜ್ಯ ಸರಕುಗಳು ಮತ್ತು ಸೇವಾ ತೆರಿಗೆ | – | 24,182(28) | 41,956(43) | 42,147(41) | 37,711(39) |
| ಕೃಷಿ ಆದಾಯದ ಮೇಲಿನ ತೆರಿಗೆ | 1(–) | 15(–) | – | 1(–) | – |
| ಮಾರಾಟ, ವ್ಯಾಪಾರ ಮುಂತಾದವುಗಳ ಮೇಲಿನ ತೆರಿಗೆ | 46,105(56) | 25,093(29) | 14,003(15) | 16,424(16) | 16,028(17) |
| ರಾಜ್ಯ ಅಬಕಾರಿ | 16,484(20) | 17,949(21) | 19,944(21) | 21,584(21) | 23,332(24) |
| ವಾಹನಗಳ ಮೇಲಿನ ತೆರಿಗೆಗಳು | 5,594(7) | 6,209(7) | 6,568(7) | 6,763(7) | 5607(6) |
| ಮುದ್ರಾಂಕ ಮತ್ತು ನೋಂದಣಿ ಶುಲ್ಕಗಳು | 7,806(9) | 9,024(10) | 10,775(11) | 11,308(11) | 10,576(11) |
| ಭೂ ಕಂದಾಯ | 209(–) | 195(–) | 144(–) | 203(–) | 184(–) |
| ಸರಕುಗಳು ಮತ್ತು ಪ್ರಯಾಣಿಕರ ಮೇಲಿನ ತೆರಿಗೆಗಳು | 3,306(4) | 1,279(1) | 28(–) | 65(–) | 16(–) |
| ವಿದ್ಯುಚ್ಛಕ್ತಿ ಸುಂಕದ ಮೇಲಿನ ತೆರಿಗೆ | 1,451(2) | 1,485(2) | 2,334(2) | 2,693(3) | 2,433(2) |
| ಇತರೆ ತೆರಿಗೆಗಳು–ಆದಾಯ ಮತ್ತು ಖರ್ಚಿನ ಮೇಲೆ | 901(1) | 964(1) | 1,057(1) | 1,140(1) | 1,127(1) |
| ಇತರೆ ತೆರಿಗೆಗಳು–ಸರಕುಗಳು ಮತ್ತು ಸೇವೆಗಳ ಮೇಲೆ | 1,099(1) | 736(1) | 21(–) | 34(–) | 38(–) |
| ii) ತೆರಿಗೆಯೇತರ ಆದಾಯ | **5,795(4)** | **6,477(4)** | **6,773(4)** | **7,681(4)** | **7,894(5)** |
| ವೃದ್ಧಿಯ ದರ | **8.22** | **11.77** | **4.57** | **13.41** | **2.77** |
| ಬಡ್ಡಿ ಸ್ವೀಕೃತಿಗಳು | 1,200 | 1,178 | 1,112 | 895 | 920 |
| ಲಾಭಾಂಶ ಮತ್ತು ಲಾಭಗಳು | 83 | 79 | 38 | 54 | 81 |
| ಕಬ್ಬಿಣೇತರ ಕೈಗಾರಿಕೆ ಮತ್ತು ಲೋಹಗಳ ಕೈಗಾರಿಕೆಗಳು | 2,419 | 2,747 | 3,027 | 3,629 | 3,893 |
| ವೈದ್ಯಕೀಯ ಮತ್ತು ಸಾರ್ವಜನಿಕ ಕೈಗಾರಿಕೆಗಳು | 153 | 364 | 330 | 599 | 419 |
| ಇತರೆ ಆಡಳಿತಾತ್ಮಕ ಸೇವೆಗಳು | 131 | 271 | 253 | 305 | 388 |
| ಅರಣ್ಯ ಪ್ರದೇಶ ಮತ್ತು ವನ್ಯಜೀವಿಗಳು | 292 | 314 | 309 | 267 | 276 |
| ಶಿಕ್ಷಣ, ಕ್ರೀಡೆ ಮತ್ತು ಸಂಸ್ಕೃತಿ | 193 | 176 | 200 | 183 | 175 |
| ಪೋಲೀಸ್ | 176 | 253 | 241 | 308 | 367 |
| ರಸ್ತೆಗಳು ಮತ್ತು ಸೇತುವೆಗಳು | 62 | 103 | 105 | 71 | 50 |
| ಇತರೆ ತೆರಿಗೆಯೇತರ ಸ್ವೀಕೃತಿಗಳು | 1,086 | 992 | 1,158 | 1,370 | 1,325 |
| iii) ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿನ | **28,760(22)** | **31,752(22)** | **35,895(22)** | **30,919(18)** | **21,694(14)** |

| | 2016–17 | 2017–18 | 2018–19 | 2019–20 | 2020–21 |
|---|---|---|---|---|---|
| ರಾಜ್ಯದ ಪಾಲು | | | | | |
| ವೃದ್ಧಿಯ ದರ | **19.92** | **10.40** | **13.05** | **(–)13.86** | **(–)129.84** |
| **iv)** ಭಾರತ ಸರ್ಕಾರದಿಂದ ಪಡೆದ ಸಹಾಯಾನುದಾನಗಳು | **15,703(12)** | **21,641(15)** | **25,481(15)** | **34,480(20)** | **30,076(19)** |
| ವೃದ್ಧಿಯ ದರ | **12.74** | **37.81** | **17.74** | **35.32** | **(–)12.77** |
| ಯೋಜನೇತರ ಅನುದಾನಗಳು | 7,045 | – | – | – | – |
| ರಾಜ್ಯ ಯೋಜನೆಗೆ ಅನುದಾನಗಳು | 8,102 | – | – | – | – |
| ಕೇಂದ್ರ ಯೋಜನೆಗಳಿಗೆ ಅನುದಾನಗಳು | 116 | – | – | – | – |
| ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನಗಳು | 440 | 11,617 | 10,393 | 12,214 | 9,852 |
| ಇತರೆ ವರ್ಗಾವಣೆಗಳು/ರಾಜ್ಯಗಳಿಗೆ ಅನುದಾನ | – | 7,316 | 11,714 | 17,593 | 14,667 |
| ಹಣಕಾಸು ಆಯೋಗದ ಅನುದಾನಗಳು | – | 2,708 | 3,374 | 4,673 | 5,557 |
| 2. ಬಂಡವಾಳ ಸ್ವೀಕೃತಿಗಳು | | | | | |
| **(i)** ಇತರೆ ಬಂಡವಾಳ ಸ್ವೀಕೃತಿಗಳು | **27** | **4** | **(–)6** | **45** | **45** |
| **(ii)** ಸಾಲ ಮತ್ತು ಮುಂಗಡಗಳ ವಸೂಲಾತಿ | **100** | **137** | **31** | **203** | **270** |
